ಗುರುವಾರ, ಮಾರ್ಚ್ 14, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 74 | ಪುಟ 22
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ರೈಲ್ವೆ ಇಲಾಖೆಯಲ್ಲಿ 9,144 ಟೆಕ್ನಿಷಿಯನ್ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಪ್ರಾರಂಭ.



ಆಳ-ಅಗಲ
ಎನ್‌ಡಿಎ- 'ಇಂಡಿಯಾ' ಮೈತ್ರಿ ಕಸರತ್ತು
ಅಸ್ಸಾಂ 'ಇಂಡಿಯಾ'ಗೆ ಆಘಾತ 12
ವಲಸಿಗರಲ್ಲಿ ಪೌರತ್ವ ಪಡೆಯುವ ತವಕ 15

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,761	21,997	₹67,500 (ಬೆಂಗಳೂರು)	₹74,200 (ಬೆಂಗಳೂರು)	82.81

ಹೊಸಮುಖಗಳಿಗೆ ಮಣೆ

ಬಿಜೆಪಿ ಪಟ್ಟಿ ಪ್ರಕಟ: ಕುಟುಂಬಕ್ಕೂ ಮನ್ನಣೆ, ಡಿ.ವಿ., ಕಟೀಲ್ ಸೇರಿ 9 ಹಾಲಿಗಳಿಗೆ ಕೊಕ್

ಪ್ರಜಾವಾಣಿ ವಾರ್ತೆ


ನವದೆಹಲಿ: ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ 72 ಅಭ್ಯರ್ಥಿಗಳ ಪಟ್ಟಿಯನ್ನು ಬಿಜೆಪಿ ಬುಧವಾರ ಪ್ರಕಟಿಸಿದ್ದು, ಕರ್ನಾಟಕದ 20 ಕ್ಷೇತ್ರಗಳಿಗೆ ಹುರಿಯಾಳುಗಳ ಹೆಸರನ್ನು ಅಖೈರುಗೊಳಿಸಿದೆ. ರಾಜ್ಯದ ಒಂಬತ್ತು ಹಾಲಿ ಸಂಸದರಿಗೆ ಟಿಕೆಟ್ ನಿರಾಕರಿಸಲಾಗಿದೆ. ಹೊಸ ಮುಖಗಳಿಗೆ ಮಣೆ ಹಾಕುವ ಜತೆಗೆ ಪಕ್ಷದ ಹಿರಿಯ ನಾಯಕರಿಗೂ ಮನ್ನಣೆ ನೀಡಲಾಗಿದೆ.

ಹಿಂದಿನ ಬಿಜೆಪಿ ಸರ್ಕಾರದಲ್ಲಿ ಎರಡು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರನ್ನು ರಾಷ್ಟ್ರ ರಾಜಕಾರಣದಲ್ಲಿ ಬಳಸಿಕೊಳ್ಳಲು ವರಿಷ್ಠರು ತೀರ್ಮಾನಿಸಿದ್ದಾರೆ. ಅವರು ಹಾವೇರಿ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಪಕ್ಷವು 2023ರ ವಿಧಾನಸಭಾ ಚುನಾವಣೆಯನ್ನು ಬೊಮ್ಮಾಯಿ ನೇತೃತ್ವದಲ್ಲಿ ಎದುರಿಸಿತ್ತು. ಚುನಾವಣೆಯಲ್ಲಿ 66 ಸ್ಥಾನಗಳಿಗೆ ತೃಪ್ತಿ ಪಟ್ಟಿತ್ತು. ಶಿಗ್ಗಾವಿಯಲ್ಲಿ ಗೆದ್ದಿದ್ದ ಅವರು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದರು. ಆದರೆ, ವರಿಷ್ಠರು ಅವರ ಹೆಸರನ್ನು ಆಗ ಪರಿಗಣಿಸಿರಲಿಲ್ಲ.

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಲ್ಲಿ ಹಾಲಿ ಸಂಸದರಾಗಿರುವ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಅವರಿಗೆ ಕೊಕ್ ನೀಡಲಾಗಿದೆ. ಅವರ ಬದಲು ಗೌಡರ ತಾಲ್ಲೂಕಿನವರೇ (ಪುತ್ತೂರು) ಆಗಿರುವ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಉತ್ತರದ ಅಭ್ಯರ್ಥಿಯನ್ನಾಗಿ ಮಾಡಲಾಗಿದೆ. ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರು ಹಾವೇರಿ ಅಥವಾ ಧಾರವಾಡ ಕ್ಷೇತ್ರದ ಮೇಲೆ ಕಣ್ಣಿಟ್ಟಿದ್ದರು. ಮೊದಲ ಪಟ್ಟಿಯಲ್ಲಿ ಅವರ ಹೆಸರಿಲ್ಲ. ಅವರು ಬೆಳಗಾವಿ ಕ್ಷೇತ್ರದ ಅಭ್ಯರ್ಥಿಯಾಗುವ ಸಂಭವ ಇದೆ. ಧಾರವಾಡ ಕ್ಷೇತ್ರದಿಂದ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಸ್ಪರ್ಧಿಸಲಿದ್ದಾರೆ. ಅವರು ಈ ಹಿಂದೆ ನಾಲ್ಕು ಸಲ ಗೆಲುವು ಸಾಧಿಸಿದ್ದರು.

ಪಕ್ಷವು ಅಚ್ಚರಿಯ ಅಭ್ಯರ್ಥಿಯ ರೂಪದಲ್ಲಿ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ ಅವರನ್ನು ಉಡುಪಿ-ಚಿಕ್ಕಮಗಳೂರಿಗೆ ಹುರಿಯಾಳುವನ್ನಾಗಿ ಮಾಡಿದೆ. ದಕ್ಷಿಣ ಕನ್ನಡ ಕ್ಷೇತ್ರದಲ್ಲಿ ರಾಜ್ಯ ಘಟಕದ ನಿಕಟಪೂರ್ವ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರಿಗೆ ಟಿಕೆಟ್ ನಿರಾಕರಿಸಲಾಗಿದೆ. ಅವರ ಬದಲು ನಿವೃತ್ತ ಸೇನಾಧಿಕಾರಿ ಕ್ಯಾಪ್ಟನ್ ಬೃಜೇಶ್ ಚೌಟ ಅವರಿಗೆ ಮಣೆ ಹಾಕಲಾಗಿದೆ. ಕಟೀಲ್ ಅವರಿಗೆ ಟಿಕೆಟ್ ನೀಡುವುದಕ್ಕೆ ಪಕ್ಷದ ವಲಯದಲ್ಲಿ ತೀವ್ರ ವಿರೋಧ ವ್ಯಕ್ತವಾಗಿತ್ತು.

12ನೇ ಪುಟ ನೋಡಿ



ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ — ರಾಜವಂಶಸ್ಥ
ಡಾ. ಸಿ.ಎನ್ ಮಂಜುನಾಥ್ — ಹೃದ್ರೋಗ ತಜ್ಞ
ಗಾಯತ್ರಿ ಸಿದ್ದೇಶ್ವರ — ಸಂಸದರ ಪತ್ನಿ
ಬಸವರಾಜ್ ಬೊಮ್ಮಾಯಿ — ಹಾಲಿ ಶಾಸಕ
ಕೋಟ ಶ್ರೀನಿವಾಸ ಪೂಜಾರಿ — ಪರಿಷತ್ ವಿಪಕ್ಷ ನಾಯಕ

ಬಿಜೆಪಿ ಅಭ್ಯರ್ಥಿಗಳ ಪಟ್ಟಿ

ಚಿಕ್ಕೋಡಿ	ಅಣ್ಣಾಸಾಹೇಬ ಜೊಲ್ಲೆ
ಬಾಗಲಕೋಟೆ	ಪಿ.ಸಿ. ಗದ್ದಿಗೌಡರ
ವಿಜಯಪುರ	ರಮೇಶ ಜಿಗಜಿಣಗಿ
ಕಲಬುರಗಿ	ಡಾ. ಉಮೇಶ ಜಾಧವ
ಬೀದರ್	ಭಗವಂತ ಖೂಬಾ
ಕೊಪ್ಪಳ	ಬಸವರಾಜ ಕ್ಯಾವಟರ್
ಬಳ್ಳಾರಿ	ಬಿ. ಶ್ರೀರಾಮುಲು
ಹಾವೇರಿ	ಬಸವರಾಜ ಬೊಮ್ಮಾಯಿ
ಧಾರವಾಡ	ಪ್ರಲ್ಹಾದ ಜೋಶಿ
ದಾವಣಗೆರೆ	ಗಾಯತ್ರಿ ಸಿದ್ದೇಶ್ವರ
ಶಿವಮೊಗ್ಗ	ಬಿ.ವೈ. ರಾಘವೇಂದ್ರ
ಉಡುಪಿ – ಚಿಕ್ಕಮಗಳೂರು	ಕೋಟ ಶ್ರೀನಿವಾಸ ಪೂಜಾರಿ
ದಕ್ಷಿಣ ಕನ್ನಡ	ಕ್ಯಾಪ್ಟನ್ ಬೃಜೇಶ್ ಚೌಟ
ತುಮಕೂರು	ವಿ. ಸೋಮಣ್ಣ
ಮೈಸೂರು	ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್
ಚಾಮರಾಜನಗರ	ಎಸ್. ಬಾಲರಾಜ್
ಬೆಂಗಳೂರು ಗ್ರಾಮಾಂತರ	ಡಾ. ಸಿ.ಎನ್ ಮಂಜುನಾಥ್
ಬೆಂಗಳೂರು ಉತ್ತರ	ಶೋಭಾ ಕರಂದ್ಲಾಜೆ
ಬೆಂಗಳೂರು ಕೇಂದ್ರ	ಪಿ.ಸಿ. ಮೋಹನ್
ಬೆಂಗಳೂರು ದಕ್ಷಿಣ	ತೇಜಸ್ವಿ ಸೂರ್ಯ

ಈಶ್ವರಪ್ಪ, ರೇಣುಕಾಚಾರ್ಯ ಬಂಡಾಯ

ಬೆಂಗಳೂರು: ಶಿವಮೊಗ್ಗ ಹಾಗೂ ದಾವಣಗೆರೆ ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿಯ ಹಿರಿಯ ನಾಯಕರೇ ಬಂಡಾಯದ ಕೂಗು ಎಬ್ಬಿಸಿದ್ದಾರೆ.

ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ ಬಂಡಾಯ ಎದ್ದಿದ್ದರು. ತಮ್ಮ ಪುತ್ರ ಕೆ.ಇ. ಕಾಂತೇಶ್‌ಗೆ ಹಾವೇರಿಯಿಂದ ಟಿಕೆಟ್ ನೀಡದೇ ಇದ್ದರೆ, ಯಡಿಯೂರಪ್ಪ ಪುತ್ರ ಬಿ.ವೈ. ರಾಘವೇಂದ್ರ ವಿರುದ್ಧ ಶಿವಮೊಗ್ಗದಿಂದ ಕಣಕ್ಕೆ ಇಳಿಯಬೇಕಾಗುತ್ತದೆ ಎಂದೂ ಬುಧವಾರ ಬೆಳಿಗ್ಗೆಯಷ್ಟೇ ಎಚ್ಚರಿಕೆ ನೀಡಿದ್ದರು.ಪಟ್ಟಿ ಪ್ರಕಟವಾದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ನನ್ನ ಕುಟುಂಬ ಸೇರಿದಂತೆ ಪ್ರಖರ ಹಿಂದುತ್ವವಾದಿಗಳಾದ ಸಿ.ಟಿ. ರವಿ, ನಳಿನ್‌ಕುಮಾರ್ ಕಟೀಲ್, ಪ್ರತಾಪ ಸಿಂಹ ಅವರಿಗೆ ಟಿಕೆಟ್ ತಪ್ಪಲು ಯಡಿಯೂರಪ್ಪ ಕಾರಣ. ಪಟ್ಟಿ ಪ್ರಕಟವಾದ ಬಳಿಕ ಕರೆ ಮಾಡಿದ್ದ ಪಕ್ಷದ ಚುನಾವಣಾ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರ್‌ವಾಲ್, ಕಾಂತೇಶ್‌ಗೆ ವಿಧಾನ ಪರಿಷತ್ತಿನ ಟಿಕೆಟ್ ನೀಡುವುದಾಗಿ ಹೇಳಿದ್ದಾರೆ. ನಾನು ಪ್ರತಿಕ್ರಿಯೆ ನೀಡಿಲ್ಲ. ಶುಕ್ರವಾರ (ಮಾ.15) ಆಪ್ತರ ಸಭೆ ಕರೆದಿದ್ದು, ಮುಂದಿನ ನಿರ್ಧಾರವನ್ನು ಅಲ್ಲಿಯೇ ತಿಳಿಸುವೆ' ಎಂದು ಹೇಳಿದ್ದಾರೆ. ಬೆಳಿಗ್ಗೆ ಜಿ.ಎಂ. ಸಿದ್ದೇಶ್ವರ ವಿರುದ್ಧ ಅಬ್ಬರಿಸಿದ್ದ ಎಂ.ಪಿ. ರೇಣುಕಾಚಾರ್ಯ ಸಂಜೆ ಮೌನಕ್ಕೆ ಶರಣಾದರು.

ಟಿಕೆಟ್ ದೊರೆಯದ ಸಂಸದರು

- ಕೊಪ್ಪಳ: ಸಂಗಣ್ಣ ಕರಡಿ
- ಬಳ್ಳಾರಿ: ವೈ.ದೇವೇಂದ್ರಪ್ಪ
- ಹಾವೇರಿ: ಶಿವಕುಮಾರ್ ಉದಾಸಿ (ರಾಜಕೀಯ ನಿವೃತ್ತಿ)
- ದಾವಣಗೆರೆ: ಜಿ.ಎಂ. ಸಿದ್ದೇಶ್ವರ (ಪತ್ನಿಗೆ ಟಿಕೆಟ್)
- ದಕ್ಷಿಣ ಕನ್ನಡ: ನಳಿನ್ ಕುಮಾರ್ ಕಟೀಲ್
- ಮೈಸೂರು: ಪ್ರತಾಪ ಸಿಂಹ
- ಚಾಮರಾಜನಗರ: ವಿ.ಶ್ರೀನಿವಾಸ ಪ್ರಸಾದ್ (ರಾಜಕೀಯ ನಿವೃತ್ತಿ)
- ಬೆಂಗಳೂರು ಉತ್ತರ: ಡಿ.ವಿ.ಸದಾನಂದ ಗೌಡ
- ತುಮಕೂರು: ಜಿ.ಎಸ್.ಬಸವರಾಜು

ಅಭ್ಯರ್ಥಿ ಪ್ರಕಟಕ್ಕೆ ಬಾಕಿ ಇರುವ ಕ್ಷೇತ್ರಗಳು

ಕೋಲಾರ
ಚಿಕ್ಕಬಳ್ಳಾಪುರ
ಚಿತ್ರದುರ್ಗ
ಮಂಡ್ಯ, ಹಾಸನ
ಉತ್ತರ ಕನ್ನಡ
ರಾಯಚೂರು
ಬೆಳಗಾವಿ

ಕಾಂಗ್ರೆಸ್‌ನಿಂದ ಬಡ ಮಹಿಳೆಗೆ ₹1 ಲಕ್ಷ ನೆರವಿನ ಭರವಸೆ

ಮಹಿಳೆಯರಿಗೆ 5 ಗ್ಯಾರಂಟಿ

ಪ್ರಜಾವಾಣಿ ವಾರ್ತೆ

ಮುಂಬೈ: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮತಸೆಳೆಯಲು ಕಾಂಗ್ರೆಸ್ ಪಕ್ಷವು ದೇಶದ ಬಡ ಮಹಿಳೆಯರಿಗೆ ವಾರ್ಷಿಕವಾಗಿ ತಲಾ ₹1 ಲಕ್ಷ ನೀಡುವುದು, ಕೇಂದ್ರ ಸರ್ಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ಶೇ 50 ಮೀಸಲು ಒದಗಿಸುವುದು ಸೇರಿದಂತೆ ಐದು ಗ್ಯಾರಂಟಿಗಳನ್ನು ಬುಧವಾರ ಘೋಷಿಸಿದೆ.



'ನಾರಿ ನ್ಯಾಯ ಗ್ಯಾರಂಟಿ' ಹೆಸರಿನಲ್ಲಿ ಬಡ ಮಹಿಳೆಯರಿಗೆ ಕಾಂಗ್ರೆಸ್ ಐದು ಭರವಸೆಗಳನ್ನು ನೀಡಿದೆ. 'ಮಹಾಲಕ್ಷ್ಮಿ', 'ಆಧಿ ಆಬಾದಿ-ಪೂರಾ ಹಕ್', 'ಶಕ್ತಿ ಕಾ ಸಮ್ಮಾನ್', 'ಅಧಿಕಾರ್ ಮೈತ್ರಿ' ಮತ್ತು 'ಸಾವಿತ್ರಿಬಾಯಿ ಫುಲೆ ಹಾಸ್ಟೆಲ್'-ಇವು ಕಾಂಗ್ರೆಸ್ ಘೋಷಿಸಿದ ಪಂಚ ಗ್ಯಾರಂಟಿಗಳಾಗಿವೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ದೆಹಲಿಯಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ಪಂಚ ಗ್ಯಾರಂಟಿಗಳನ್ನು ಘೋಷಿಸಿದರು. ಭಾರತ್ ಜೋಡೊ ನ್ಯಾಯ ಯಾತ್ರೆಯ ಅಂಗವಾಗಿ ಮಹಾರಾಷ್ಟ್ರದ ಧುಲೆಯಲ್ಲಿರುವ ಪಕ್ಷದ ನಾಯಕ ರಾಹುಲ್ ಗಾಂಧಿ 'ಮಹಿಳಾ ಮೇಳಾವ'ದಲ್ಲಿ ಗ್ಯಾರಂಟಿಗಳ ಬಗ್ಗೆ ಮಹಿಳೆಯರಿಗೆ ವಿವರಿಸಿದರು.

'ಇದಕ್ಕೂ ಮುನ್ನ ನಾವು ಸಹಭಾಗಿತ್ವ ನ್ಯಾಯ, ರೈತ ನ್ಯಾಯ ಮತ್ತು ಯುವ ನ್ಯಾಯ ಘೋಷಿಸಿದ್ದೆವು. ನಮ್ಮ ಗ್ಯಾರಂಟಿಗಳು ಖಾಲಿ ಘೋಷಣೆಗಳಲ್ಲ ಎನ್ನುವುದನ್ನು ನಾವು ಹೇಳಬೇಕಾಗಿಲ್ಲ. ನಮ್ಮ ಹೇಳಿಕೆಗಳಿಗೆ ನಾವು ಬದ್ಧರಾಗಿದ್ದೇವೆ. 1926ರಿಂದ ಇಂದಿನವರೆಗೂ ಈ ದಾಖಲೆ ನಮ್ಮದಾಗಿದೆ. ನಮ್ಮ ವಿರೋಧಿಗಳು ಇನ್ನೂ ಹುಟ್ಟದೇ ಇದ್ದ ಕಾಲದಿಂದಲೂ ನಾವು ಪ್ರಣಾಳಿಕೆ ರೂಪಿಸುತ್ತಿದ್ದೇವೆ, ಘೋಷಣೆಗಳನ್ನು ಜಾರಿ ಮಾಡುತ್ತಿದ್ದೇವೆ' ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

'ನಾರಿ ನ್ಯಾಯ ಗ್ಯಾರಂಟಿ'

ಮಹಾಲಕ್ಷ್ಮಿ: ಬಡ ಕುಟುಂಬದ ಮಹಿಳೆಗೆ ವಾರ್ಷಿಕ ₹1 ಲಕ್ಷ
ಆಧಿ ಆಬಾದಿ-ಪೂರಾ ಹಕ್: ಕೇಂದ್ರ ಸರ್ಕಾರದ ನೇಮಕಾತಿಗಳಲ್ಲಿ ಮಹಿಳೆಯರಿಗೆ ಶೇ 50 ಮೀಸಲು
ಶಕ್ತಿ ಕಾ ಸಮ್ಮಾನ್: ಅಂಗನವಾಡಿ, ಆಶಾ, ಮಧ್ಯಾಹ್ನದ ಬಿಸಿಯೂಟದ ಕಾರ್ಯಕರ್ತರಿಗೆ ಕೇಂದ್ರ ಸರ್ಕಾರದ ಕೊಡುಗೆ ದ್ವಿಗುಣ
ಅಧಿಕಾರ್ ಮೈತ್ರಿ: ಮಹಿಳೆಯರಿಗೆ ಹಕ್ಕುಗಳ ಅರಿವು ಮೂಡಿಸಲು ಪ್ರತಿ ಪಂಚಾಯಿತಿಯಲ್ಲಿ ಅರೆಕಾನೂನು/ಕಾನೂನು ಸಹಾಯಕರ ನೇಮಕ
ಸಾವಿತ್ರಿಬಾಯಿ ಫುಲೆ ಹಾಸ್ಟೆಲ್: ಉದ್ಯೋಗಸ್ಥ ಮಹಿಳೆಯರಿಗಾಗಿ ದೇಶದ ಪ್ರತಿ ಜಿಲ್ಲಾ ಕೇಂದ್ರದಲ್ಲೂ ಕನಿಷ್ಠ ಒಂದು ಹಾಸ್ಟೆಲ್ ಸ್ಥಾಪನೆ

'22 ಜನರ ಬಳಿ ದೇಶದ ಶೇ 50ರಷ್ಟು ಸಂಪತ್ತು'

ಧುಳೆ (ಪಿಟಿಐ): ನಿರುದ್ಯೋಗ, ಹಣದುಬ್ಬರ ಮತ್ತು 'ಭಾಗೀದಾರಿ' ದೇಶದ ಮುಖ್ಯ ಸಮಸ್ಯೆಗಳಾಗಿವೆ. ಆದರೆ, ಕೇಂದ್ರ ಸರ್ಕಾರವು ನೈಜ ಸಮಸ್ಯೆಗಳಿಂದ ಜನರ ಗಮನವನ್ನು ಬೇರೆಡೆ ತಿರುಗಿಸುತ್ತಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದರು.

ಮಹಾರಾಷ್ಟ್ರದ ಧುಲೆ ಜಿಲ್ಲೆಯಲ್ಲಿ ಭಾರತ್ ಜೋಡೊ ನ್ಯಾಯ ಯಾತ್ರೆ ವೇಳೆ ಅವರು ಜನರ ಜತೆ ಸಂವಾದ ನಡೆಸಿದರು. 'ದೇಶದ ಶೇ 50ರಷ್ಟು ಜನ ಶೇ 3ರಷ್ಟು ಸಂಪತ್ತು ಹೊಂದಿದ್ದರೆ, ಕೇವಲ 22 ಮಂದಿ ಶೇ 50ಕ್ಕೂ ಹೆಚ್ಚು ಸಂಪತ್ತು ಹೊಂದಿದ್ದಾರೆ. ನೀವು ಪ್ರಶ್ನಿಸದಿರುವುದರಿಂದ ನಿಮ್ಮ ಗಮನವನ್ನು ಸುಲಭವಾಗಿ ಬೇರೆಡೆ ತಿರುಗಿಸಬಹುದು' ಎಂದರು.

ಮೆಣಸಿನಕಾಯಿಗೆ ಎಂಎಸ್‌ಪಿ ಕೇಂದ್ರಕ್ಕೆ ಪ್ರಸ್ತಾವ: ಸಚಿವ 14

ಚಿನಕುರಳಿ
ಪ್ರಕಾಶ್ ಶೆಟ್ಟಿ



ಚಾಮರಾಜನಗರ: ಒಂದು ಕ್ವಿಂಟಲ್‌ಗೆ ₹19 ಸಾವಿರ ದಾಟಿದ ಬೆಲೆ

ಅರಿಸಿನ ಧಾರಣೆ: ಸಾರ್ವಕಾಲಿಕ ದಾಖಲೆ

• ಸೂರ್ಯನಾರಾಯಣ ವಿ.

ಚಾಮರಾಜನಗರ: ಜಿಲ್ಲೆಯಲ್ಲಿ ಅರಿಸಿನ ಧಾರಣೆಯು ಒಂದು ಕ್ವಿಂಟಲ್‌ಗೆ ₹19 ಸಾವಿರ ದಾಟಿದೆ. ನೆರೆಯ ತಮಿಳುನಾಡಿನ ಈರೋಡ್ ಮಾರುಕಟ್ಟೆಯಲ್ಲಿ ₹20 ಸಾವಿರಕ್ಕೆ ಖರೀದಿಸಲಾಗುತ್ತಿದೆ.

ಜಿಲ್ಲೆಯಲ್ಲಿ ಈ ತಿಂಗಳ ಆರಂಭದಲ್ಲಿ ₹13 ಸಾವಿರದಿಂದ ₹14,500ರವರೆಗೂ ದರ ಇತ್ತು. ಹತ್ತು ದಿನಗಳ ಅವಧಿಯಲ್ಲಿ ಕ್ವಿಂಟಲ್‌ಗೆ ₹5,000ದಿಂದ ₹6,500 ಏರಿಕೆಯಾಗಿದೆ.

ಜಿಲ್ಲೆಯಲ್ಲಿ ಕಳೆದ ವರ್ಷ 8,200 ಹೆಕ್ಟೇರ್ ಪ್ರದೇಶದಲ್ಲಿ ಅರಿಸಿನ ಬೆಳೆಯಲಾಗಿದೆ. ಈಗ ಕಟಾವು ಶುರುವಾಗಿದ್ದು, ರೈತರು ಮಾರಾಟ ಮಾಡಲು ಆರಂಭಿಸಿದ್ದಾರೆ.

ಕಳೆದ ಹಂಗಾಮಿನಲ್ಲಿ ಬೆಲೆ ತೀವ್ರವಾಗಿ ಕುಸಿದಿದ್ದರಿಂದ ರೈತರು ಹೆಚ್ಚು ಬಿತ್ತನೆ ಮಾಡಿಲ್ಲ. ಇಳುವರಿಯೂ ಕಡಿಮೆ ಬಂದಿದೆ. ಹೀಗಾಗಿ, ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿದೆ.

ಸ್ಥಳೀಯ ವ್ಯಾಪಾರಿಗಳು ಮಾತ್ರವಲ್ಲದೆ ತಮಿಳುನಾಡು, ಕೇರಳದ ವ್ಯಾಪಾರಿಗಳೂ ರೈತರ ಜಮೀನಿಗೆ ಬಂದು ಅರಿಸಿನ ಖರೀದಿಸುತ್ತಿದ್ದಾರೆ.

'ಮಾರ್ಚ್ ಮೊದಲ ವಾರಕ್ಕೆ ಹೋಲಿಸಿದರೆ ಬೆಲೆ ಮತ್ತಷ್ಟು ಹೆಚ್ಚಿದೆ. ಗುಣಮಟ್ಟದ ಅರಿಸಿನವನ್ನು ವ್ಯಾಪಾರಿಗಳು ₹19 ಸಾವಿರಕ್ಕೆ ಖರೀದಿಸುತ್ತಿದ್ದಾರೆ. ಉಂಡೆ ಅರಿಸಿನಕ್ಕೂ ಉತ್ತಮ ಬೆಲೆ ಇದ್ದು, ಸಾಮಾನ್ಯ ಅರಿಸಿನಕ್ಕಿಂತ ₹1,000ರಿಂದ ₹1,500 ಕಡಿಮೆ ಇದೆ' ಎಂದು ಚಾಮರಾಜನಗರ ತಾಲ್ಲೂಕಿನ ರೈತ ರವಿಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'2010ರಲ್ಲಿ ಒಂದು ಕ್ವಿಂಟಲ್‌ಗೆ ₹18 ಸಾವಿರ ಗರಿಷ್ಠ ಬೆಲೆ ಸಿಕ್ಕಿತ್ತು. 2011ರಲ್ಲಿ ಧಾರಣೆಯು ₹3,000ಕ್ಕೆ ಕುಸಿದಿತ್ತು. 2012ರಲ್ಲಿ ಕೇಂದ್ರ ಸರ್ಕಾರ ಮೊದಲ ಬಾರಿಗೆ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ (ಎಂಐಎಸ್) ಪ್ರತಿ ಕ್ವಿಂಟಲ್‌ಗೆ ₹5,000 ದರ ನಿಗದಿಪಡಿಸಿ ಅರಿಸಿನವನ್ನು ಖರೀದಿಸಿತ್ತು' ಎಂದು ಗುಂಡ್ಲುಪೇಟೆ ರೈತ ನಾಗಾರ್ಜುನ್ ಕುಮಾರ್ ಹೇಳಿದರು.



ಗುಂಡ್ಲುಪೇಟೆ ತಾಲ್ಲೂಕಿನ ರೈತರೊಬ್ಬರ ಜಮೀನಿನಲ್ಲಿ ಕಟಾವು ಮಾಡಿದ ಅರಿಸಿನವನ್ನು ಟ್ರ್ಯಾಕ್ಟರ್‌ನಿಂದ ಇಳಿಸಲಾಯಿತು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಫ್ಯಾಶನ್ ಸಪ್ತಾಹ ಮುಂಬೈನಲ್ಲಿ ನಡೆದ ಫ್ಯಾಶನ್ ಸಪ್ತಾಹದಲ್ಲಿ ಭಾಗವಹಿಸಿದ ರೂಪದರ್ಶಿ



277 ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿ ಅಧಿಸೂಚನೆ 2B

ಸಿದ್ದರಾಮಯ್ಯ ಆಯ್ಕೆ ಅನೂರ್ಜಿತ ಕೋರಿಕೆ ಅರ್ಜಿ ವಿಚಾರಣೆ

ಕರಡಿ ಕುಣಿತಕ್ಕೆ ಕರಗಿದ ಸಂಪತ್ತು 14

₹20 ಕೋಟಿ ವೆಚ್ಚಕ್ಕೆ ದಾಖಲೆ ಎಲ್ಲಿದೆ? 2B

ಪೇಟಿಎಂ ಫಾಸ್ಟ್ಯಾಗ್ ಬದಲಿಗೆ ಸೂಚನೆ

ನವದೆಹಲಿ (ಪಿಟಿಐ): ಪೇಟಿಎಂ ಬ್ಯಾಂಕ್‌ನಿಂದ ಫಾಸ್ಟ್ಯಾಗ್ ಖರೀದಿಸಿರುವ ಹೆದ್ದಾರಿ ಬಳಕೆದಾರರು ಮಾರ್ಚ್ 15ರೊಳಗೆ ಬೇರೆ ಬ್ಯಾಂಕ್‌ಗಳಿಂದ ಫಾಸ್ಟ್ಯಾಗ್ ಖರೀದಿಸುವುದು ಒಳಿತು. ಇದರಿಂದ ಟೋಲ್ ಪ್ಲಾಜಾಗಳಲ್ಲಿ ತೊಂದರೆ ಅನುಭವಿಸುವುದು ತಪ್ಪಲಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ತಿಳಿಸಿದೆ.

ಇತರೆ ಬ್ಯಾಂಕ್‌ಗಳಿಂದ ಫಾಸ್ಟ್ಯಾಗ್ ಖರೀದಿಸಿದರೆ ಹೆದ್ದಾರಿಗಳಲ್ಲಿ ಪ್ರಯಾಣಿಸುವ ವೇಳೆ ದಂಡ ಅಥವಾ ಎರಡು ಬಾರಿ ಹಣ ಪಾವತಿಯಂತಹ ಸಮಸ್ಯೆ ಎದುರಾಗುವ ಪ್ರಮೇಯವೇ ಉದ್ಭವಿಸುವುದಿಲ್ಲ ಎಂದು ಹೇಳಿದೆ.

ಮಾರ್ಚ್ 15ರ ಬಳಿಕ ಎಲ್ಲ ಬಗೆಯ ಸೇವೆಗಳನ್ನು ಸ್ಥಗಿತಗೊಳಿಸುವಂತೆ ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಲಿಮಿಟೆಡ್‌ಗೆ (ಪಿಪಿಬಿಎಲ್) ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿದೆ. ಈ ಗಡುವಿನ ಬಳಿಕ ಪೇಟಿಎಂ ಬಳಕೆದಾರರ ಖಾತೆಗಳು, ಪ್ರಿಪೇಯ್ಡ್ ಪೇಮೆಂಟ್, ವಾಲೆಟ್ ಮತ್ತು ಫಾಸ್ಟ್ಯಾಗ್‌ಗಳಿಗೆ ಯಾವುದೇ ಠೇವಣಿ ಅಥವಾ ಟಾಪ್ ಅಪ್‌ಗಳನ್ನು ಸ್ವೀಕರಿಸುವಂತಿಲ್ಲ ಎಂದು ಸೂಚಿಸಿದೆ.

ಚುನಾವಣಾ ಆಯುಕ್ತರ ನೇಮಕ ಪ್ರಕ್ರಿಯೆ: ಎಡಿಆರ್‌ನಿಂದ ಅರ್ಜಿ

‘ಸುಪ್ರೀಂ’ನಲ್ಲಿ ವಿಚಾರಣೆ ನಾಳೆ

ನವದೆಹಲಿ (ಪಿಟಿಐ): ಚುನಾವಣಾ ಆಯುಕ್ತರನ್ನು ನೇಮಕ ಮಾಡುವ ಸಮಿತಿಯಿಂದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯನ್ನು (ಸಿಜೆಐ) ಹೊರಗಿಟ್ಟಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಇದೇ 15ರಂದು ವಿಚಾರಣೆಗೆ ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್ ಬುಧವಾರ ಸಮ್ಮತಿಸಿದೆ.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಸ್ವಯಂ ಸೇವಾ ಸಂಸ್ಥೆಯು ಈ ಅರ್ಜಿ ಸಲ್ಲಿಸಿದ್ದು, ಆರೋಗ್ಯಕರ ಪ್ರಜಾಪ್ರಭುತ್ವಕ್ಕಾಗಿ ರಾಜಕೀಯ ಮತ್ತು ಆಡಳಿತಾತ್ಮಕ ಹಸ್ತಕ್ಷೇಪಗಳಿಂದ ಚುನಾವಣಾ ಆಯೋಗವನ್ನು ದೂರವಿರಿಸಬೇಕು ಎಂದು ಕೋರಿದೆ.

ಅರ್ಜಿಯನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕೆಂದು ಎಡಿಆರ್ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ಪ್ರಶಾಂತ್ ಭೂಷಣ್ ಅವರು, ನ್ಯಾಯಮೂರ್ತಿ ಸಂಜೀವ್ ಖನ್ನಾ ನೇತೃತ್ವದ ನ್ಯಾಯಪೀಠಕ್ಕೆ ಮನವಿ ಮಾಡಿದರು. ‘ಅರ್ಜಿಯನ್ನು ಇದೇ 15ರಂದು ವಿಚಾರಣೆಗೆ ಪಟ್ಟಿ ಮಾಡಲು ಮುಖ್ಯ ನ್ಯಾಯಮೂರ್ತಿಗಳಿಂದ ಸಂದೇಶ ಬಂದಿದೆ’ ಎಂದು ಖನ್ನಾ ಅವರು ತಿಳಿಸಿದರು.

ಮುಖ್ಯ ಚುನಾವಣಾ ಆಯುಕ್ತರು ಮತ್ತು ಚುನಾವಣಾ ಆಯುಕ್ತರನ್ನು ನೇಮಕ ಮಾಡುವ ಸಮಿತಿಯಿಂದ



ಸಿಜೆಐ ಅವರನ್ನು ಹೊರಗಿಟ್ಟಿರುವ 2023ರ ತಿದ್ದುಪಡಿ ಕಾಯ್ದೆಯ ಸಿಂಧುತ್ವವನ್ನೂ ಎಡಿಆರ್ ಅರ್ಜಿಯಲ್ಲಿ ಪ್ರಶ್ನಿಸಿದೆ.

ಹೊಸ ಕಾನೂನಿನ ಪ್ರಕಾರ ಆಯ್ಕೆ ಸಮಿತಿಯಲ್ಲಿ ಪ್ರಧಾನಿ, ವಿರೋಧ ಪಕ್ಷದ ನಾಯಕ ಹಾಗೂ ಪ್ರಧಾನಿ ನಾಮನಿರ್ದೇಶನ ಮಾಡಿರುವ ಕೇಂದ್ರ ಸಚಿವರೊಬ್ಬರು ಇರಲಿದ್ದಾರೆ.

ಚುನಾವಣಾ ಆಯುಕ್ತ ಅರುಣ್ ಗೋಯಲ್ ಅವರು ರಾಜೀನಾಮೆ ನೀಡಿದ ಬಳಿಕ ಎಡಿಆರ್ ಸಂಸ್ಥೆಯು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದೆ.

‘ಅನೂಪ್ ಬರನ್‌ವಾಲ್ ವರ್ಸಸ್ ಕೇಂದ್ರ ಸರ್ಕಾರದ ಪ್ರಕರಣದಲ್ಲಿ ಸುಪ್ರಿಂ ಕೋರ್ಟ್ ನೀಡಿರುವ ತೀರ್ಪಿನ ಅನುಸಾರವೇ ಆಯುಕ್ತರನ್ನು ನೇಮಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದೂ ಅರ್ಜಿಯಲ್ಲಿ ಕೋರಲಾಗಿದೆ.

ಚುನಾವಣಾ ಪ್ರಕ್ರಿಯೆಯು ನ್ಯಾಯಬದ್ಧವಾಗಿ ನಡೆಯಲು ಪ್ರಧಾನಿ, ಲೋಕಸಭೆಯ ವಿರೋಧ ಪಕ್ಷದ ನಾಯಕ ಮತ್ತು ಸಿಜೆಐ ಅವರನ್ನೊಳಗೊಂಡ ಸಮಿತಿಯ ಶಿಫಾರಸಿನಂತೆ ಮುಖ್ಯ ಚುನಾವಣಾ ಆಯುಕ್ತರು ಮತ್ತು ಚುನಾವಣಾ ಆಯುಕ್ತರನ್ನು ರಾಷ್ಟ್ರಪತಿ ನೇಮಕ ಮಾಡಬೇಕು ಎಂದು 2023 ಮಾರ್ಚ್ 2ರಂದು ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ಸಂವಿಧಾನ ಪೀಠವು ತೀರ್ಪು ನೀಡಿತ್ತು.

ಈ ತೀರ್ಪನ್ನು ಕೇಂದ್ರ ಸರ್ಕಾರವು ತಳ್ಳಿಹಾಕಿದೆ ಎಂದೂ ಎಡಿಆರ್ ಸಂಸ್ಥೆಯು ಅರ್ಜಿಯಲ್ಲಿ ಆರೋಪಿಸಿದೆ. ಚುನಾವಣಾ ಆಯುಕ್ತರ ನೇಮಕಕ್ಕೆ ಸಂಬಂಧಿಸಿರುವ ಹೊಸ ಕಾನೂನು 2024 ಜನವರಿ 2ರಿಂದ ಜಾರಿಗೆ ಬಂದಿದೆ.

ಕೇಂದ್ರ ಸರ್ಕಾರವು ಹೊಸ ಕಾನೂನಿನ ಪ್ರಕಾರ ನೂತನ ಚುನಾವಣಾ ಆಯುಕ್ತರನ್ನು ನೇಮಕ ಮಾಡದಂತೆ ತಡೆಯಬೇಕೆಂದು ಕೋರಿ ಮಧ್ಯಪ್ರದೇಶದ ಕಾಂಗ್ರೆಸ್ ನಾಯಕಿ ಜಯಾ ಠಾಕೂರ್ ಅವರು ಸುಪ್ರೀಂ ಕೋರ್ಟ್‌ಗೆ ಈಚೆಗೆ ಅರ್ಜಿ ಸಲ್ಲಿಸಿದ್ದರು.

ಇ.ಸಿ: ಮಾಹಿತಿ ಕೋರಿದ ಚೌಧರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಮಿತಿಯು ಇಬ್ಬರು ಚುನಾವಣಾ ಆಯುಕ್ತರ ನೇಮಕಕ್ಕಾಗಿ ಗುರುವಾರ ಸಭೆ ಸೇರಲಿದೆ. ಈ ನಡುವೆ, ಸಮಿತಿಯ ಸದಸ್ಯರಲ್ಲಿ ಒಬ್ಬರಾಗಿರುವ ಕಾಂಗ್ರೆಸ್ಸಿನ ಅಧೀರ್ ರಂಜನ್ ಚೌಧರಿ ಅವರು, ಚುನಾವಣಾ ಆಯುಕ್ತರ ಸ್ಥಾನಕ್ಕೆ ಶೋಧ ಸಮಿತಿಯು ಅಂತಿಮಗೊಳಿಸಿರುವವರ ವಿವರವನ್ನು ತಮಗೆ ನೀಡಬೇಕು ಎಂದು ಸರ್ಕಾರವನ್ನು ಕೋರಿದ್ದಾರೆ.

ಲೋಕಸಭೆಯ ಅತಿದೊಡ್ಡ ವಿರೋಧ ಪಕ್ಷದ ನಾಯಕ ಆಗಿರುವ ಕಾರಣದಿಂದಾಗಿ ಚೌಧರಿ ಅವರು ಸಮಿತಿಯ ಸದಸ್ಯರಾಗಿದ್ದಾರೆ. ಶಾಸನ ರಚನಾ ಇಲಾಖೆಯ ಕಾರ್ಯದರ್ಶಿ ರಾಜೀವ್ ಮಣಿ ಅವರಿಗೆ ಪತ್ರ ಬರೆದಿರುವ ಚೌಧರಿ ಅವರು, ಚುನಾವಣಾ ಆಯುಕ್ತರ ಹುದ್ದೆಗೆ ಪರಿಗಣಿಸಬೇಕಿರುವವರ ಕುರಿತು ವಿವರಗಳನ್ನು ಒದಗಿಸುವಂತೆ ಕೋರಿದ್ದಾರೆ ಎಂದು ಮೂಲಗಳು ಹೇಳಿವೆ.

ಮುಖ್ಯ ಮಾಹಿತಿ ಆಯುಕ್ತ, ಮಾಹಿತಿ ಆಯುಕ್ತರ ನೇಮಕದ ವಿಚಾರದಲ್ಲಿ ಪ್ರಕ್ರಿಯೆಗಳನ್ನು ಪಾಲಿಸಬೇಕು ಎಂದು ಕೂಡ ಅವರು ಕಾನೂನು ಸಚಿವಾಲಯವನ್ನು ಕೋರಿದ್ದಾರೆ.



ಆನೆಗೂ ಬಿಸಿಲ ಧಗೆ

ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಬನ್ನೇರುಘಟ್ಟ ಜೈವಿಕ ಉದ್ಯಾನದ ಕೆರೆಯಲ್ಲಿ ಆನೆಗಳು ಬುಧವಾರ ಚಿನ್ನಾಟವಾಡುತ್ತಾ ಬಿಸಿಲಿನ ಧಗೆ ನಿವಾರಿಸಿಕೊಂಡವು – ಪ್ರಜಾವಾಣಿ ಚಿತ್ರ/ ರಂಜು ಪಿ.

ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ ಎಸ್‌ಬಿಐ

22,217 ‘ಬಾಂಡ್’ ಖರೀದಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ರಾಜಕೀಯ ಪಕ್ಷಗಳು 2019ರ ಏಪ್ರಿಲ್ 1ರಿಂದ ಈ ವರ್ಷದ ಫೆಬ್ರುವರಿ 15ರ ನಡುವೆ ಒಟ್ಟು 22,217 ಚುನಾವಣಾ ಬಾಂಡ್‌ಗಳನ್ನು ಖರೀದಿಸಿದ್ದು, ಆ ಪೈಕಿ 22,030 ಬಾಂಡ್‌ಗಳನ್ನು ನಗದಾಗಿ ಪರಿವರ್ತಿಸಿಕೊಂಡಿವೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಬುಧವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ಪ್ರಮಾಣಪತ್ರ ಸಲ್ಲಿಸಿರುವ ಎಸ್‌ಬಿಐ, ನ್ಯಾಯಾಲಯದ ನಿರ್ದೇಶನದಂತೆ ಚುನಾವಣಾ ಬಾಂಡ್‌ಗಳ ವಿವರಗಳನ್ನು ಮಾರ್ಚ್ 12ರಂದು ಭಾರತೀಯ ಚುನಾವಣಾ ಆಯೋಗಕ್ಕೆ ಡಿಜಿಟಲ್ ರೂಪದಲ್ಲಿ ಸಲ್ಲಿಸಲಾಗಿದೆ ಎಂದು ಹೇಳಿದೆ.

ಪ್ರತಿ ಚುನಾವಣಾ ಬಾಂಡ್‌ನ ಖರೀದಿ ದಿನಾಂಕ, ಖರೀದಿದಾರರ ಹೆಸರು, ಖರೀದಿಸಿದ ಬಾಂಡ್‌ಗಳ ಮುಖಬೆಲೆ, ಅವುಗಳನ್ನು ನಗದೀಕರಿಸಿದ ದಿನಾಂಕ, ದೇಣಿಗೆ ಸ್ವೀಕರಿಸಿದ ರಾಜಕೀಯ ಪಕ್ಷಗಳ ಹೆಸರು ಸೇರಿದಂತೆ ವಿವರಗಳನ್ನು ಒದಗಿಸಲಾಗಿದೆ ಎಂದು ಎಸ್‌ಬಿಐ ಅಧ್ಯಕ್ಷ ದಿನೇಶ್ ಕುಮಾರ್ ಖಾರಾ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

7ನೇ ಪುಟ ನೋಡಿ

277 ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿ ಅಧಿಸೂಚನೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ (ಬಿಬಿಎಂಪಿ) ಸಹಾಯಕ ಎಂಜಿನಿಯರ್ (ಸಿವಿಲ್) 92, ಜಲ ಸಂಪನ್ಮೂಲ ಇಲಾಖೆಯ ಸಹಾಯಕ ಎಂಜಿನಿಯರ್ 90 (ಸಿವಿಲ್) ಸೇರಿ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಗ್ರೂಪ್ 'ಬಿ' ವೃಂದದ ಒಟ್ಟು 277 ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿ ಅಧಿಸೂಚನೆ ಹೊರಡಿಸಿದೆ. ಅರ್ಜಿ ಸಲ್ಲಿಸಲು ಏಪ್ರಿಲ್ 15ರಿಂದ ಮೇ 14ರವರೆಗೆ ಅವಕಾಶ ನೀಡಲಾಗಿದೆ. ಸ್ಪರ್ಧಾತ್ಮಕ ಪರೀಕ್ಷೆಯನ್ನು (ಕನ್ನಡ ಭಾಷಾ ಪರೀಕ್ಷೆ ಮತ್ತು ಸಾಮಾನ್ಯ ಜ್ಞಾನ ಪರೀಕ್ಷೆ) ಆಗಸ್ಟ್ 11ರಂದು ನಡೆಸಲು ತಾತ್ಕಾಲಿಕವಾಗಿ ದಿನಾಂಕ ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಕೆಪಿಎಸ್‌ಸಿ ವೆಬ್‌ಸೈಟ್ ನೋಡಬಹುದು.

₹20 ಕೋಟಿ ವೆಚ್ಚಕ್ಕೆ ದಾಖಲೆ ಎಲ್ಲಿದೆ?

ಸಿದ್ದರಾಮಯ್ಯ ಆಯ್ಕೆ ಅನೂರ್ಜಿತ ಕೋರಿಕೆ ಅರ್ಜಿ ವಿಚಾರಣೆ • ಸಿ.ಎಂ ಪರ ವಕೀಲರಿಂದ ಹೈಕೋರ್ಟ್‌ನಲ್ಲಿ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಚುನಾವಣಾ ವೆಚ್ಚದ ಮಿತಿ ₹40 ಲಕ್ಷದ ಮೊತ್ತವನ್ನು ಮೀರಿ ₹20 ಕೋಟಿವರೆಗೂ ವೆಚ್ಚ ಮಾಡಿದ್ದಾರೆ. ಚುನಾವಣೆಯಲ್ಲಿ ಭ್ರಷ್ಟಾಚಾರ ಎಸಗಿ ಗೆದ್ದು ಬಂದಿದ್ದಾರೆ ಎಂಬ ಆರೋಪಗಳೆಲ್ಲಾ ಸಂಪೂರ್ಣ ಸುಳ್ಳಿನ ಕಂತೆ' ಎಂದು ಸಿದ್ದರಾಮಯ್ಯ ಪರ ವಕೀಲರು ಹೈಕೋರ್ಟ್‌ಗೆ ಅರುಹಿದರು.

'ಚುನಾವಣಾ ಭ್ರಷ್ಟಾಚಾರ ಆರೋಪದಡಿ ಸಿದ್ದರಾಮಯ್ಯ ಆಯ್ಕೆಯನ್ನು ಅನೂರ್ಜಿತಗೊಳಿಸಬೇಕು' ಎಂದು ಕೋರಿ ಮೈಸೂರಿನ ವರುಣ ಹೋಬಳಿ ಕೂಡನಹಳ್ಳಿಯ ಕೆ.ಶಂಕರ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಿದ್ದರಾಮಯ್ಯ ಪರ ಹಿರಿಯ ವಕೀಲ ಕೆ.ರವಿವರ್ಮ ಕುಮಾರ್ ವಾದ ಮಂಡಿಸಿ, 'ಸಿದ್ದರಾಮಯ್ಯ ಕಾನೂನುಬದ್ಧವಾಗಿ ನಿಗದಿಗೊಳಿಸಲಾದ ಚುನಾವಣಾ ವೆಚ್ಚದ ಮಿತಿ ದಾಟಿ ₹20 ಕೋಟಿ ವೆಚ್ಚ ಮಾಡಿದ್ದರೆ ಅರ್ಜಿದಾರರು ಚುನಾವಣೆ ಸಮಯದಲ್ಲೇ ಸಕ್ಷಮ ಪ್ರಾಧಿಕಾರಕ್ಕೆ ಯಾಕೆ ದೂರು ನೀಡಲಿಲ್ಲ' ಎಂದು ಪ್ರಶ್ನಿಸಿದರು.

'ಸಿದ್ದರಾಮಯ್ಯ ಇಷ್ಟೊಂದು ಹಣವನ್ನು ತಮ್ಮ ವಾಹನಗಳಿಗೆ ವೆಚ್ಚ ಮಾಡಿದರೇ? ಕಾರಿಗೆ, ಭಿತ್ತಿಪತ್ರಗಳಿಗೆ, ಪೋಸ್ಟರ್‌ಗಳಿಗಾಗಿ ವೆಚ್ಚ ಮಾಡಿದರೆ? ಮಾಡಿದ್ದರೆ ಯಾವಾಗ ಮಾಡಿದರು ಎಂಬುದಕ್ಕೆಲ್ಲಾ ಉತ್ತರ ಬೇಕಾಗುತ್ತದೆ. ಈ ಅಂಶವನ್ನು ಜನ ಪ್ರಾತಿನಿಧ್ಯ ಕಾಯ್ದೆ 123 (6)ರ ಪ್ರಕಾರ ದಾವೆಯಲ್ಲಿ ಅಡಕ ಮಾಡಿರಬೇಕಿತ್ತು' ಎಂದು ಪ್ರತಿಪಾದಿಸಿದರು.

'ಸಿದ್ದರಾಮಯ್ಯನವರ ವಿಧಾನಸಭಾ ಕ್ಷೇತ್ರದಲ್ಲಿ ನೂರಾರು ಹಳ್ಳಿಗಳಿವೆ. ಮೈಸೂರು ನಗರ ಭಾಗವೂ ಕ್ಷೇತ್ರ ವ್ಯಾಪ್ತಿಗೇ ಬರುತ್ತದೆ. ಹೀಗಿರುವಾಗ ವೆಚ್ಚದ ವಿವರಗಳಲ್ಲಿ ಎಲ್ಲಾದರೂ ಕಾನೂನುಬಾಹಿರ ನಡವಳಿಕೆ ಕಂಡುಬಂದಿದ್ದರೆ ಅರ್ಜಿದಾರರು ಆವತ್ತೇ ದೂರು ಸಲ್ಲಿಸಬೇಕಿತ್ತು. ಇಲ್ಲಾ, ಹೈಕೋರ್ಟ್‌ಗೆ ಸಲ್ಲಿಸಿರುವ ಈ ಅರ್ಜಿಯಲ್ಲಾದರೂ ದತ್ತಾಂಶ ಒದಗಿಸಬೇಕಿತ್ತು' ಎಂದರು.

'ಇದ್ಯಾವುದನ್ನೂ ಮಾಡದೆ ಈಗ ಈ ತಕರಾರು ಹೂಡಿರುವುದು ಉದ್ದೇಶಪೂರ್ವಕ, ಲೆಕ್ಕಾಚಾರದ ಮತ್ತು ಕಿಡಿಗೇಡಿತನದ ನಡೆ. ಇಂತಹ ಅರ್ಜಿ ಸಲ್ಲಿಸುವ ಮೂಲಕ ಶಂಕರ್ ನ್ಯಾಯಾಲಯದ ದಾರಿಯನ್ನಷ್ಟೇ ಅಲ್ಲ, ಜಗತ್ತಿನ ದಾರಿಯನ್ನೇ ತಪ್ಪಿಸಿದ್ದಾರೆ' ಎಂದು ದೂರಿದರು.

ಕೋರಿಕೆ ಏನು?: 'ಚುನಾವಣೆಗೂ ಮುನ್ನ ಕಾಂಗ್ರೆಸ್ ಪಕ್ಷವು ಮತದಾರರಿಗೆ ಗ್ಯಾರಂಟಿ ಕಾರ್ಡ್ ಯೋಜನೆಗಳ ಮೂಲಕ ಆಮಿಷ ಒಡ್ಡಿದೆ. ಈ ಗ್ಯಾರಂಟಿ ಯೋಜನೆಗಳನ್ನು ಸಿದ್ದರಾಮಯ್ಯ ಅವರ ಸಮ್ಮತಿಯೊಂದಿಗೇ ಪ್ರಕಟಿಸಲಾಗಿದೆ. ಇದು ಲಂಚಕ್ಕೆ ಸಮನವಾಗಿದ್ದು, ವರುಣ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಮತಹಾಕಲು ಮತದಾರರಿಗೆ ಪ್ರೇರೇಪಣೆ ನೀಡಿದೆ' ಎಂದು ಅರ್ಜಿಯಲ್ಲಿ ದೂರಲಾಗಿದೆ.

'ಜನ ಪ್ರಾತಿನಿಧ್ಯ ಕಾಯ್ದೆ-1951ರ ಕಲಂ 123 (1), 123 (2), 123 (4), 123 (6) ಹಾಗೂ 100 (1), (ಬಿ), (1) (ಡಿ) (4) ಅನ್ನು ಉಲ್ಲಂಘಿಸಿರುವ ಸಿದ್ದರಾಮಯ್ಯ ಮತದಾರರಿಗೆ ಆಮಿಷವೊಡ್ಡಿ ಅಪರಾಧ ಎಸಗಿದ್ದಾರೆ. ಆದ್ದರಿಂದ, ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು. ಆರು ವರ್ಷ ಅವರನ್ನು ಚುನಾವಣೆಗೆ ಸ್ಪರ್ಧಿಸದಂತೆ ಅನರ್ಹಗೊಳಿಸಬೇಕು ಮತ್ತು ಚುನಾವಣಾ ಭ್ರಷ್ಟಾಚಾರ ಎಸಗಿರುವ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಕೋರಿದ್ದಾರೆ.

ಮುಖ್ಯಾಂಶಗಳು

- ವಿಚಾರಣೆ ಇದೇ 25ಕ್ಕೆ ಮುಂದೂಡಿಕೆ
- 6 ವರ್ಷಗಳ ಅನರ್ಹತೆಗೆ ಕೋರಿಕೆ

ಹಳಿ ಮೇಲೆ ರೈಲು ಬಿಡಬೇಕು...

'ಅಕ್ಕಿ ಬೆಂದಿದೆಯೇ ಎಂಬುದಕ್ಕೆ ಪೂರಾ ಪಾತ್ರೆಯಲ್ಲಿನ ಅಕ್ಕಿಯನ್ನೆಲ್ಲಾ ಪರಿಶೀಲಿಸಬೇಕಿಲ್ಲ. ಒಂದು ಕಾಳನ್ನು ನೋಡಿದರೆ ಸಾಕಾಗುತ್ತದೆ' ಎಂದು ಅರ್ಜಿದಾರರ ಬಗ್ಗೆ ವ್ಯಂಗ್ಯವಾಡಿದ ರವಿವರ್ಮ ಕುಮಾರ್, 'ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ಬಳಿಕ ಸಲ್ಲಿಸಲಾಗಿರುವ ಈ ಅರ್ಜಿ ದ್ವೇಷ ಮತ್ತು ಸುಳ್ಳು ಆರೋಪಗಳಿಂದ ಕೂಡಿದೆ' ಎಂದರು.

'ಹಳಿ ಮೇಲೆ ರೈಲು ಬಿಟ್ಟರೆ ಅದು ಗುರಿ ತಲುಪುತ್ತದೆ. ಹಾಗಾಗಿ, ರೈಲು ಬಿಡುವಾಗ ಹಳಿಯ ಮೇಲೆಯೇ ಬಿಡಬೇಕು' ಎಂದು ವ್ಯಂಗ್ಯವಾಡಿದರು. ಈ ಮಾತಿಗೆ ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ ಬಲವಾದ ಆಕ್ಷೇಪ ವ್ಯಕ್ತಪಡಿಸಿದರಾದರೂ ರವಿವರ್ಮ ಕುಮಾರ್ ಇದನ್ನು ಲೆಕ್ಕಿಸದೆ ಅರ್ಜಿದಾರರ ನಡೆಯನ್ನು ತೀಕ್ಷ್ಣ ಪದಗಳಿಂದ ವಾದದುದ್ದಕ್ಕೂ ಖಂಡಿಸಿದರು.



ಕೊಡಗು ಕೆಲವೆಡೆ ತುಂತುರು ಮಳೆ

ಮಡಿಕೇರಿ: ಕೊಡಗು ಜಿಲ್ಲೆಯ ಕೆಲವೆಡೆ ಬುಧವಾರ ತುಂತುರು ಮಳೆಯಾಗಿದ್ದು, ಜನರಲ್ಲಿ ನಿರೀಕ್ಷೆಗಳು ಗರಿಗೆದರಿವೆ.

ಇಲ್ಲಿನ ಮೂರ್ನಾಡು, ಕಾಕೋಟುಪರಂಬು ಹಾಗೂ ಇನ್ನಿತರ ಭಾಗಗಳಲ್ಲಿ ಕೆಲವೆಡೆ ತುಂತುರು ಮಳೆಯಾಗಿದೆ. ಮಡಿಕೇರಿ ಸೇರಿದಂತೆ ಹಲವೆಡೆ ದಟ್ಟ ಮೋಡ ಕವಿದ ವಾತಾವರಣವಿತ್ತು.

152 ಹುದ್ದೆಗಳಿಗೆ ನೇರ ನೇಮಕಾತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 152 ಹುದ್ದೆಗಳಿಗೆ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.

ಮಂಡಳಿಗೆ ಮಂಜೂರಾಗಿರುವ 253 ಹುದ್ದೆಗಳ ಪೈಕಿ 152 ಹುದ್ದೆಗಳು ತಾಂತ್ರಿಕ, ಪ್ರಯೋಗಶಾಲೆ ಮತ್ತು ಆಡಳಿತ ವಿಭಾಗಗಳಲ್ಲಿ ಖಾಲಿ ಇವೆ. ರಾಜ್ಯದಲ್ಲಿ 146 ವೃಂದ ಮತ್ತು ಸ್ಥಳೀಯ ವೃಂದದ 6 ಸೇರಿ 152 ಹುದ್ದೆಗಳ ಭರ್ತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನೇರ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲು ಸರ್ಕಾರ ಈಗಾಗಲೇ ಅನುಮತಿಸಿದೆ ಎಂದರು.

153 ಖಾಲಿ ಹುದ್ದೆಗಳ ಭರ್ತಿಗೆ 2010ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಕಾರಣಾಂತರದಿಂದ ಹಲವು ಹುದ್ದೆಗಳು ಭರ್ತಿ ಆಗಿಲ್ಲ. ಈ ಹುದ್ದೆಗಳೂ ಸೇರಿದಂತೆ ಪ್ರಸ್ತುತ ಮಂಡಳಿಯಲ್ಲಿ ರಾಜ್ಯವ್ಯಾಪಿ ಖಾಲಿಯಿರುವ ಹುದ್ದೆಗಳ ಬಹುತೇಕ ಭರ್ತಿಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

23 ಹುದ್ದೆಗಳನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಿದಲ್ಲಿ, 152 ಹುದ್ದೆಗಳೊಂದಿಗೆ 23 ಹುದ್ದೆಗಳನ್ನೂ ಸೇರಿಸಿ ಒಟ್ಟು 175 ಹುದ್ದೆಗಳನ್ನು ಭರ್ತಿ ಮಾಡಿದರೆ ಶೇಕಡ 69ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿದಂತಾಗುತ್ತದೆ ಎಂದೂ ಸಚಿವರು ಹೇಳಿದರು.

ಕಾಡಾನೆ ದಾಳಿ; ಮಹಿಳೆ ಸಾವು

ಮಡಿಕೇರಿ: ವಿರಾಜಪೇಟೆ ತಾಲ್ಲೂಕಿನ ಚೆನ್ನಂಗಿ ಬಳಿಯ ಅಬ್ಬೂರಿನ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಅಸ್ಸಾಂನ ಅಜಬಾನು (37) ಎಂಬವರು ಬುಧವಾರ ಮಧ್ಯಾಹ್ನ ಕಾಡಾನೆ ದಾಳಿಗೆ ಸಿಲುಕಿ ಮೃತಪಟ್ಟರು.

'ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಪಾಲಿಬೆಟ್ಟದ ಆಸ್ಪತ್ರೆಗೆ ದಾಖಲಿಸಿದರೂ ಪ್ರಯೋಜನವಾಗಲಿಲ್ಲ. ನಾಗರಹೊಳೆ ಅರಣ್ಯ ಇಲ್ಲಿಗೆ ಕೇವಲ 2 ಕಿ.ಮೀ ದೂರ ಇದೆ. ಅಲ್ಲಿಂದ ಬಂದಿರುವ ಆನೆಯನ್ನು ನಿರಂತರವಾಗಿ ಕಾಡಿಗೆ ಓಡಿಸಿದರೂ ಮತ್ತೆಮತ್ತೆ ವಾಪಸ್ ಬರುತ್ತಿದೆ' ಎಂದು ವಿರಾಜಪೇಟೆ ವಲಯದ ಡಿಸಿಎಫ್ ಶರಣ ಬಸಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ಓಕಳಿಪುರ ಜಂಕ್ಷನ್: ನಗರದ ಕೇಂದ್ರ ಭಾಗಕ್ಕೆ ಸಂಪರ್ಕ ಕಲ್ಪಿಸುವ ಯೋಜನೆ • ₹337 ಕೋಟಿ ವೆಚ್ಚದಲ್ಲಿ ನಿರ್ಮಾಣ

ಸಿಗ್ನಲ್ ಮುಕ್ತ ಅಷ್ಟಪಥ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೇಂದ್ರ ಭಾಗವಾದ ಗಾಂಧಿನಗರ, ಮೆಜೆಸ್ಟಿಕ್, ನಗರ ರೈಲು ನಿಲ್ದಾಣಕ್ಕೆ ಮಲ್ಲೇಶ್ವರ, ರಾಜಾಜಿನಗರ, ವಿಜಯನಗರ, ಬಸವೇಶ್ವರನಗರ ಹಾಗೂ ಮಾಗಡಿ ರಸ್ತೆಗೆ ಸಿಗ್ನಲ್ ಮುಕ್ತ ಸಂಪರ್ಕ ಕಲ್ಪಿಸುವ 'ರಾಜೀವ್ ಗಾಂಧಿ ಸಿಗ್ನಲ್ ಮುಕ್ತ ಅಷ್ಟಪಥ ಕಾರಿಡಾರ್' ಬುಧವಾರ ಅಧಿಕೃತವಾಗಿ ಲೋಕಾರ್ಪಣೆಗೊಂಡಿತು.

ಓಕಳಿಪುರದ ಜಂಕ್ಷನ್ ಕೇಂದ್ರೀಕೃತವಾಗಿರುವ ಈ ಕಾರಿಡಾರ್‌ನ, ಮಲ್ಲೇಶ್ವರದಿಂದ ಕೆಎಸ್‌ಆರ್ ರೈಲು ನಿಲ್ದಾಣ ಹಾಗೂ ರಾಜಾಜಿನಗರದಿಂದ ಕೆಎಸ್‌ಆರ್ ರೈಲು ನಿಲ್ದಾಣಕ್ಕೆ ಸಂಪರ್ಕಕಲ್ಪಿಸುವ ಎರಡು ಮಾರ್ಗಗಳ (ಲೂಪ್) ಅಭಿವೃದ್ಧಿಯಾಗಿದ್ದು, ಪೂರ್ಣ ಕಾರಿಡಾರ್‌ಗೆ ಇದೀಗ ಚಾಲನೆ ಸಿಕ್ಕಂತಾಗಿದೆ. 2013–14ರಲ್ಲಿ ಆರಂಭವಾಗಿದ್ದ ಓಕಳಿಪುರ ಸಿಗ್ನಲ್ ಮುಕ್ತ ಕಾರಿಡಾರ್ ಯೋಜನೆಗೆ ಭೂಸ್ವಾಧೀನವೂ ಸೇರಿದಂತೆ ₹337 ಕೋಟಿ ವೆಚ್ಚವಾಗಿದೆ.

'ರಾಜೀವ್ ಗಾಂಧಿ ಸಿಗ್ನಲ್ ಮುಕ್ತ ಅಷ್ಟಪಥ ಕಾರಿಡಾರ್' ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯಸಭೆ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಲೋಕಾರ್ಪಣೆ ಗೊಳಿಸಿದರು.

ಸಚಿವರಾದ ದಿನೇಶ್ ಗುಂಡೂರಾವ್, ರಾಮಲಿಂಗಾರೆಡ್ಡಿ, ಭೈರತಿ ಸುರೇಶ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದ ರಾಜು, ವಿಧಾನ ಪರಿಷತ್ ಸದಸ್ಯ ಯು.ಬಿ ವೆಂಕಟೇಶ್, ಮಾಜಿ ಸಚಿವ ಎಚ್.ಎಂ ರೇವಣ್ಣ, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಉಪಸ್ಥಿತರಿದ್ದರು.



ಓಕಳಿಪುರ ಜಂಕ್ಷನ್ ಬಳಿ 'ರಾಜೀವ್ ಗಾಂಧಿ ಸಿಗ್ನಲ್ ಮುಕ್ತ ಅಷ್ಟಪಥ ಕಾರಿಡಾರ್'ನ ನೋಟ ಪ್ರಜಾವಾಣಿ ಚಿತ್ರ/ ಎಂ.ಎಸ್. ಮಂಜುನಾಥ್

ಮೊದಲ ಹಂತದಲ್ಲಿ ವಾಹನ ಸಂಚಾರಕ್ಕೆ ಮುಕ್ತವಾದ ಸೌಲಭ್ಯ


- ರೈಲು ನಿಲ್ದಾಣದಿಂದ ಮಲ್ಲೇಶ್ವರ ಹಾಗೂ ಮೆಜೆಸ್ಟಿಕ್ ಕಡೆಗೆ ಮೇಲ್ಸೇತುವೆ.
- ಮಲ್ಲೇಶ್ವರದಿಂದ ರಾಜಾಜಿನಗರ ಕಡೆಗೆ ಸಂಚರಿಸಲು ಕೆಳಸೇತುವೆ.
- ಚೆನ್ನೈ ಹಾಗೂ ತುಮಕೂರು ಕಡೆಗೆ ಸಂಚರಿಸುವ ರೈಲ್ವೆ ಮಾರ್ಗದ ಹಳಿಗಳ ಕೆಳಗೆ ರೈಲ್ವೆ ಇಲಾಖೆವತಿಯಿಂದ ನಿರ್ಮಿಸಿದ ಐದು ಕೆಳಸೇತುವೆಗಳು.

ಬುಧವಾರ ಉದ್ಘಾಟನೆಗೊಂಡಿದ್ದು

- ರಾಜಾಜಿನಗರ ಹಾಗೂ ಮಲ್ಲೇಶ್ವರದಿಂದ ಕೆಎಸ್‌ಆರ್ ರೈಲು ನಿಲ್ದಾಣದ ಪ್ರವೇಶ ದ್ವಾರದ ಕಡೆಗೆ ಏಕಮುಖ ಸಂಚಾರದ ಎರಡು ಮೇಲ್ಸೇತುವೆ
- ರೈಲ್ವೆ ಇಲಾಖೆ ವತಿಯಿಂದ ಬೆಂಗಳೂರು - ತುಮಕೂರು ಮಾರ್ಗದ ಕೆಳಸೇತುವೆ

ಪ್ರಗತಿಯಲ್ಲಿರುವುದು..

- ರೈಲ್ವೆ ಇಲಾಖೆವತಿಯಿಂದ ನಡೆಯುತ್ತಿರುವ ಬೆಂಗಳೂರು ಚೆನ್ನೈ ರೈಲು ಮಾರ್ಗದ ಹಳಿಗಳ ಕೆಳಭಾಗದ ಎರಡು ಕೆಳ ಸೇತುವೆ ಕಾಮಗಾರಿಗಳು ಪ್ರಗತಿಯಲ್ಲಿವೆ. ಅದು ಪೂರ್ಣಗೊಂಡರೆ ಮೆಜೆಸ್ಟಿಕ್‌ನಿಂದ ರಾಜಾಜಿನಗರ ಮತ್ತು ರೈಲು ನಿಲ್ದಾಣದ ಪ್ರವೇಶ ದ್ವಾರದ ಕಡೆಗೆ ಸಂಚಾರಕ್ಕೆ ಅವಕಾಶ ಸಿಗಲಿದೆ.



ಸಂಪಿಗೆ ರಸ್ತೆ ಮೆಟ್ರೊ ನಿಲ್ದಾಣದ ಬಳಿ ಅನಾವರಣಗೊಂಡಿರುವ ರಾಜೀವ್ ಗಾಂಧಿ ಕಂಚಿನ ಪ್ರತಿಮೆ ಪ್ರಜಾವಾಣಿ ಚಿತ್ರ

ರಾಜೀವ್ ಗಾಂಧಿ ಕಂಚಿನ ಪ್ರತಿಮೆ ಅನಾವರಣ

ಶೇಷಾದ್ರಿಪುರ– ಮಲ್ಲೇಶ್ವರ ಜಂಕ್ಷನ್‌ನ ರಾಜೀವ್ ಗಾಂಧಿ ಸ್ಕ್ವೇರ್‌ನಲ್ಲಿ 'ರಾಜೀವ್ ಗಾಂಧಿಯವರ ಕಂಚಿನ ಪ್ರತಿಮೆ'ಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯಸಭೆ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಅನಾವರಣ ಗೊಳಿಸಿದರು.

15ನೇ ಹಣಕಾಸು ಆಯೋಗದಡಿಯಲ್ಲಿ ವಾಯು ಗುಣಮಟ್ಟದ ಸುಧಾರಣೆ ಅನುದಾನದಲ್ಲಿ ಜಂಕ್ಷನ್‌ಗಳ ಅಭಿವೃದ್ಧಿ ಹಾಗೂ ಉಪ ಮುಖ್ಯಮಂತ್ರಿಯವರ ಅನುದಾನದಲ್ಲಿ ರಾಜೀವ್ ಗಾಂಧಿಯವರ ಕಂಚಿನ ಪ್ರತಿಮೆಯನ್ನು ಒಟ್ಟು 2.65 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ರಾಜೀವ್ ಗಾಂಧಿಯವರ ಕಂಚಿನ ಪ್ರತಿಮೆ ಪೀಠ ಸೇರಿದಂತೆ 15 ಅಡಿ ಎತ್ತರವಿದೆ.

ಸುದ್ದಿ 2 ನಿಮಿಷ

ನಗರಗಳಲ್ಲಿ ಹವಾಮಾನ ವೈಪರೀತ್ಯ ತಡೆಗೆ ಕ್ರಮ

ಬೆಂಗಳೂರು: ಮುಂಬರುವ ದಿನಗಳಲ್ಲಿ ಹವಾಮಾನ ವೈಪರೀತ್ಯಗಳಿಂದ ಉಂಟಾಗುವ ಪರಿಣಾಮಗಳನ್ನು ತಡೆದು ಕರ್ನಾಟಕ ನಗರಗಳನ್ನು ಸುಸ್ಥಿರಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗ ಬದ್ಧವಾಗಿದೆ ಎಂದು ಆಯೋಗದ ಉಪಾಧ್ಯಕ್ಷ ಡಾ.ಎಂ. ವಿ.ರಾಜೀವ್‌ಗೌಡ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಈ ಸಂಬಂಧ ಕ್ಲೈಮೇಟ್ ರೈಸ್ ಅಲಯನ್ಸ್ ಸಂಘಟನೆಯ ಜತೆಗೆ ಅಧ್ಯಯನ ನಡೆಸುವ ಉದ್ದೇಶದಿಂದ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದರು.

ನಗರಗಳ ಪರಿಸರವನ್ನು ರಕ್ಷಿಸುವ ನಿಟ್ಟಿನಲ್ಲಿ ವಿವಿಧ ಸಂಸ್ಥೆಗಳ ಜ್ಞಾನ, ಸಂಶೋಧನೆ, ವಿಶ್ಲೇಷಣೆ ಮತ್ತು ಆಳವಾದ ಅನುಭವ ಸಹಕಾರಿಯಾಗಲಿದೆ. ಇದಕ್ಕೆ ಪೂರಕವಾಗಿ ಕಾರ್ಯಸೂಚಿಯೊಂದನ್ನು ರೂಪಿಸಲಾಗುವುದು ಎಂದರು.

ಕರ್ನಾಟಕದ ಎಲ್ಲ ನಗರಗಳಲ್ಲಿ ಸುಸ್ಥಿರ ಮತ್ತು ಏಕೀಕೃತ ನೀರಿನ ನಿರ್ವಹಣೆಯ ಮೂಲಕ ನೀರಿನ ಅಭಾವವನ್ನು ನೀಗಿಸಬಹುದು. ಮುಖ್ಯವಾಗಿ ಕೆರೆಗಳನ್ನು ರಕ್ಷಿಸುವುದು, ನೀರಿನ ಗುಣಮಟ್ಟ ಹೆಚ್ಚಿಸುವುದು, ಮಳೆ ನೀರಿನ ಸಂಗ್ರಹ, ಕೌಶಲ, ವೆಚ್ಚ ಮತ್ತು ಜ್ಞಾನದಲ್ಲಿ ಇನ್ನಷ್ಟು ಸುಧಾರಣೆಗಳನ್ನು ತರಬಹುದಾಗಿದೆ. ಎಲ್ಲರೂ ಈ ಪದ್ಧತಿಯನ್ನು ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

'ಗ್ಯಾರಂಟಿ' ಅರಿವಿಗೆ ಜಾಗೃತಿ ಜಾಥಾ



ಯಲಹಂಕ: ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಬ್ಯಾಟರಾಯನಪುರ ಕಾಂಗ್ರೆಸ್ ಸಮಿತಿ ವತಿಯಿಂದ ಕೆಂಪಾಪುರ ವಾರ್ಡ್ ವ್ಯಾಪ್ತಿಯ ಮರಿಯಣ್ಣ ಪಾಳ್ಯದಲ್ಲಿ ಆಯೋಜಿಸಿದ್ದ ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ 'ಮಹಿಳಾ ಶಕ್ತಿ' ಜಾಗೃತಿ ಜಾಥಾಕ್ಕೆ ಕಾಂಗ್ರೆಸ್ ಮುಖಂಡ ಎನ್.ಎನ್. ಶ್ರೀನಿವಾಸಯ್ಯ ಚಾಲನೆ ನೀಡಿದರು.

ಮರಿಯಣ್ಣಪಾಳ್ಯದ ಚರ್ಚ್ ಬಳಿ ಆರಂಭವಾದ ಜಾಗೃತಿ ಮೆರವಣಿಗೆಯು, ವಿವಿಧ ಬಡಾವಣೆಗಳಲ್ಲಿ ಸಂಚರಿಸಿತು. ರಾಜ್ಯ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿರುವ ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಹಾಗೂ ಯುವನಿಧಿ ಯೋಜನೆಗಳ ಕುರಿತ ಫಲಕಗಳನ್ನು ಹಿಡಿದು ನೂರಾರು ಮಹಿಳೆಯರು ಜನರಲ್ಲಿ ಜಾಗೃತಿ ಮೂಡಿಸಿದರು.

ಈ ವೇಳೆ ಮಾತನಾಡಿದ ಶ್ರೀನಿವಾಸಯ್ಯ, ಗ್ಯಾರಂಟಿ ಯೋಜನೆಗಳ ಬಗ್ಗೆ ಜನರಲ್ಲಿ ಜಗೃತಿ ಮೂಡಿಸಲು ಈ ಜಾಥಾ ಆಯೋಜಿಸಲಾಗಿದೆ. ಜಾಥಾದಲ್ಲಿ ಯೋಜನೆಗಳ ಸೌಲಭ್ಯ ಪಡೆಯುವ ಕುರಿತು ಅರಿವು ಮೂಡಿಸಲಾಗುತ್ತಿದೆ' ಎಂದು ಹೇಳಿದರು.

ಸಾಧಕರಿಗೆ ಸಣ್ಣಮ್ಮ, ಜಿ.ತಿಮ್ಮಯ್ಯ ಪ್ರಶಸ್ತಿ ಪ್ರದಾನ



ನಾಗದೇವನಹಳ್ಳಿ ಎನ್‌.ಸಿ.ಕೆ ವುಮೆನ್ಸ್ ಗ್ರೂಪ್‌ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಹಿಳೆಯರನ್ನು ಸನ್ಮಾನಿಸಲಾಯಿತು.

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಕ್ತಿ, ಶ್ರದ್ಧೆ, ನಂಬಿಕೆ, ಮಾನವೀಯ ಮೌಲ್ಯ, ಪ್ರೀತಿ, ವಾತ್ಸಲ್ಯ, ಎಲ್ಲರನ್ನು ಒಗ್ಗೂಡಿಸಿಕೊಂಡು ಹೋಗುವಂತಹ ಗುಣಗಳು ಮಹಿಳೆಯರಲ್ಲಿದೆ' ಎಂದು ನಿಮ್ಸ್ ಕಾಲೇಜಿನ ನಿರ್ದೇಶಕಿ, ಪ್ರಾಂಶುಪಾಲೆ ಡಾ.ಸುಕನ್ಯಾ ಹೆಗ್ಗಡೆ ಹೇಳಿದರು.

ನಾಗದೇವನಹಳ್ಳಿ ಎನ್.ಸಿ.ಕೆ ವುಮೆನ್ಸ್ ಗ್ರೂಪ್ ವತಿಯಿಂದ ಆಯೋಜಿಸಿದ್ದ 'ವಿಶ್ವ ಮಹಿಳಾ ದಿನಾಚರಣೆ'ಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಹಿಳಾ ಸಾಧಕರನ್ನು ಸನ್ಮಾನಿಸಿ ಅವರು ಮಾತನಾಡಿದರು. 'ಎಷ್ಟೇ ಸಂಪತ್ತಿದರೂ, ಬಡವರಿಗೆ ಸಣ್ಣ ಪ್ರಮಾಣದಲ್ಲಿ ಹಂಚುವ ಗುಣ ಹೆಣ್ಣಿನಲ್ಲಿದೆ' ಎಂದು ಶ್ಲಾಘಿಸಿದರು.

ಉಲ್ಲಾಳು ವಾರ್ಡ್ ಬಿಜೆಪಿ ಯುವ ಮೋರ್ಚಾ ಮಾಜಿ ಅಧ್ಯಕ್ಷ ಹಾಗೂ ಎನ್ ಸಿ ಕೆ ವುಮೆನ್ಸ್ ಗ್ರೂಪ್‌ನ ಎನ್. ಸಿ.ಕುಮಾರ್, 'ಎಷ್ಟೇ ಕಷ್ಟ ನೋವು, ಸಮಸ್ಯೆ ಎದುರಾದರೂ ಹೆಣ್ಣು ಮಕ್ಕಳು ಯಾವುದಕ್ಕೂ ಅಂಜುವುದಿಲ್ಲ. ಅಂಥ ಸಾಧಕ ಮಹಿಳೆಯರನ್ನು ಗುರುತಿಸಿ, ಸಣ್ಣಮ್ಮ ಮತ್ತು ಜಿ .ತಿಮ್ಮಯ್ಯ ಹೆಸರಿನಲ್ಲಿ ಪ್ರಶಸ್ತಿ ನೀಡಿ ಗೌರವಿಸುವ ಕೆಲಸವನ್ನು ಮಾಡಲಾಗುತ್ತಿದೆ' ಎಂದರು.

ಕಾರ್ಯಕ್ರಮದಲ್ಲಿ ರೋಟರಿ ಶಾಲೆ ಮುಖ್ಯ ಶಿಕ್ಷಕಿ ಟಿ.ಸುಧಾ, ವಕೀಲೆ ಶಾರದ, ಆಶಾ ಕಾರ್ಯಕರ್ತೆ ಚಿಕ್ಕಾಲಮ್ಮ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಾಗರತ್ನ, ನರ್ಸ್ ನಂದಿನಿ ಅವರಿಗೆ 'ಸಣ್ಣಮ್ಮ ಮತ್ತು ಜಿ.ತಿಮ್ಮಯ್ಯ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್‌ನ ಬಿ.ಜಿ.ಭಟ್, ಟಿ.ಗಿರಿಯಪ್ಪ ಮುಖಂಡರಾದ ಚಂದ್ರಕಲಾ ಇದ್ದರು.

ಪ್ರತಿನಿತ್ಯ 150– 200 ಟನ್ ತ್ಯಾಜ್ಯ ವಿಲೇವಾರಿ ಸಾಮರ್ಥ್ಯ

ಘನತ್ಯಾಜ್ಯ ವರ್ಗಾವಣೆ ಘಟಕ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದೇ ಸ್ಥಳದಲ್ಲಿ ಪ್ರತಿನಿತ್ಯ 150 ಟನ್‌ನಿಂದ 200 ಟನ್ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ 'ದ್ವಿತೀಯ ಹಂತದ ಘನತ್ಯಾಜ್ಯ ವರ್ಗಾವಣೆ ಘಟಕ'ಕ್ಕೆ(ಎಸ್‌ಟಿಎಸ್) ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬುಧವಾರ ಚಾಲನೆ ನೀಡಿದರು.

ಬಿಟಿಎಂ ವಿಭಾಗದ ಕೋರಮಂಗಲರ, ಚಾಮರಾಜಪೇಟೆ ವಿಭಾಗ ಬಿನ್ನಿಪೇಟೆ ಘಟಕ ಹಾಗೂ ಮಹದೇವಪುರ ವಿಭಾಗದ ದೊಡ್ಡನೆಕ್ಕುಂದಿಯಲ್ಲಿ 'ದ್ವಿತೀಯ ಹಂತದ ಘನತ್ಯಾಜ್ಯ ವರ್ಗಾವಣೆ'ಯ ಘಟಕಗಳನ್ನು ನಿರ್ಮಿಸಿ, ನಿರ್ವಹಿಸಲು ಪರಿಶುದ್ಧ ವೆಂಚರ್ಸ್‌ಗೆ ಕಾರ್ಯಾದೇಶ ನೀಡಲಾಗಿದೆ. ಇದರಲ್ಲಿ ಈಜೀಪುರ ಮುಖ್ಯ ರಸ್ತೆಯ ಕೋರಮಂಗಲದಲ್ಲಿ ನಿರ್ಮಿಸಿರುವ ಘಟಕ ಆರಂಭವಾಗಿದೆ.

ಏಳು ವಾರ್ಡ್‌ಗಳ ತ್ಯಾಜ್ಯ ಆಟೊಗಳ ಮೂಲಕ ನೇರವಾಗಿ ಘಟಕಕ್ಕೆ ಬರಲಿದೆ. ಸಿ.ಸಿ ಟಿ.ವಿ ಕ್ಯಾಮೆರಾ ನಿಗಾದಲ್ಲಿ ಆಟೊದ ಬರುವಿಕೆಯಿಂದ ಹಿಡಿದು, ಅದರ ರೂಟ್ ನಂಬರ್, ಸಂಖ್ಯಾಫಲಕ, ತ್ಯಾಜ್ಯದ ತೂಕ ಎಲ್ಲವೂ ವೆಬ್‌ಸೈಟ್‌ನಲ್ಲಿ ದಾಖಲಾಗಲಿದೆ. ಆಟೊದಿಂದ ನೇರವಾಗಿ 'ಇಂಧನ ಸಾಗಿಸುವ ಕಂಟೈನರ್'ಗಳ ಮಾದರಿಯಲ್ಲಿರುವ 'ಕ್ಯಾಪ್ಸೂಲ್'ಗಳಿಗೆ ತ್ಯಾಜ್ಯ ರವಾನೆಯಾಗುತ್ತದೆ. ದ್ರವ–ತ್ಯಾಜ್ಯವನ್ನು ಹೊರಹಾಕಿ, ಕಂಪ್ರೆಸ್ ಮಾಡಿ ತುಂಬಲಾಗುತ್ತದೆ.



ಈಜೀಪುರ ಮುಖ್ಯರಸ್ತೆಯ ಕೋರಮಂಗಲದಲ್ಲಿ 'ದ್ವಿತೀಯ ಹಂತದ ಘನತ್ಯಾಜ್ಯ ವರ್ಗಾವಣೆ' ಘಟಕಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬುಧವಾರ ಚಾಲನೆ ನೀಡಿದರು

'ಕ್ಯಾಪ್ಸೂಲ್'ಗಳ ತಳಭಾಗದಲ್ಲೂ ದ್ರವ–ತ್ಯಾಜ್ಯ ಹೆಚ್ಚಿನ ಸಂಗ್ರಹಕ್ಕೆ ಅವಕಾಶವಿದೆ. ಇದನ್ನು ಜಿಪಿಎಸ್ ನಿಯಂತ್ರಣದಲ್ಲಿರುವ ಟ್ರಕ್‌ಗಳ ಮೂಲಕ ಸಂಸ್ಕರಣೆ ಘಟಕಗಳಿಗೆ ರವಾನಿಸಲಾಗುತ್ತದೆ.

ಪ್ರತಿ ವಾರ್ಡ್‌ನಲ್ಲಿ ಈಗ 2 ಕಾಂಪ್ಯಾಕ್ಟರ್‌ಗಳು, ಹತ್ತಾರು ಆಟೊಗಳ ಮೂಲಕ ತ್ಯಾಜ್ಯ ಸಂಗ್ರಹ ನಡೆಯುತ್ತಿದೆ.

'ಸೆಕೆಂಡರಿ ಟ್ರಾನ್ಸ್‌ಫರ್ ಸ್ಟೇಷನ್'(ಎಸ್‌ಟಿಎಸ್) ಕಾರ್ಯನಿರ್ವಹಿಸಿದರೆ, ಸುಮಾರು 16 ಟನ್ ತ್ಯಾಜ್ಯ ಒಂದೇ 'ಕ್ಯಾಪ್ಸೂಲ್'ನಲ್ಲಿ ರವಾನೆಯಾಗುತ್ತದೆ. ಇದು ಯಾವುದೇ ರೀತಿಯ ದ್ರವ–ತ್ಯಾಜ್ಯ, ವಾಸನೆಯನ್ನೂ ಹೊರಹಾಕುವುದಿಲ್ಲ. ಅಲ್ಲದೆ, ಆಟೊದಿಂದ ತ್ಯಾಜ್ಯವನ್ನು 'ಕ್ಯಾಪ್ಸೂಲ್' ಒಳಗೆ ಸೇರಿಸುವ ಅವಧಿಯಲ್ಲೂ ವಾಸನೆ ಸ್ಟೇಷನ್‌ನಿಂದ ಹೊರಹೋಗದಂತೆ ಜೈವಿಕ ದ್ರವವನ್ನು ಸಿಂಪಡಿಸಲಾಗುತ್ತದೆ. ಒಣ ತ್ಯಾಜ್ಯ ಹಾಗೂ ಮಿಶ್ರ ತ್ಯಾಜ್ಯದ ವಿಂಗಡಣೆ, ಸಾಗಣೆಗೂ ಎಸ್‌ಟಿಎಸ್‌ನಲ್ಲಿ ಅವಕಾಶವಿದೆ.

ಒಂದು ಬಾರಿ ಆಟೊದಿಂದ ಕಸ ಎಸ್‌ಟಿಎಸ್‌ಗೆ ಬಂದರೆ ಅದನ್ನು ಸಂಸ್ಕರಣೆ ಘಟಕಕ್ಕೆ ವಿಲೇವಾರಿ ಮಾಡುವವರೆಗಿನ ಎಲ್ಲ ಜವಾಬ್ದಾರಿ ಗುತ್ತಿಗೆದಾರರದ್ದೇ ಆಗಿದೆ. ಅಲ್ಲದೆ, ಎಸ್‌ಟಿಎಸ್‌ನಲ್ಲಿರುವ ಎಲ್ಲ ಉಪಕರಣಗಳು, ಟ್ರಕ್‌ಗಳು ಬಿಬಿಎಂಪಿ ಮುಖ್ಯ ಆಯುಕ್ತರ ಹೆಸರಿನಲ್ಲೇ ಇವೆ. ಎಲ್ಲವೂ ಬಿಬಿಎಂಪಿಯ ಆಸ್ತಿಯೇ ಆಗಿರುತ್ತವೆ.

ಈ ಘಟಕಗಳು ಎರಡರಿಂದ ಮೂರು ಪಾಳಿಯಲ್ಲಿ ಕಾರ್ಯನಿರ್ವಹಿಸುವುದರಿಂದ, ಆಟೊಗಳು ಎಲ್ಲ ಸಮಯದಲ್ಲೂ ತ್ಯಾಜ್ಯವನ್ನು ತಂದು ವಿಲೇವಾರಿ ಮಾಡಬಹುದು. ಹಗಲು–ರಾತ್ರಿ ಆಟೊಗಳು ತ್ಯಾಜ್ಯ ತುಂಬಿಕೊಂಡು ರಸ್ತೆಯಲ್ಲಿ ನಿಲ್ಲುವುದು ತಪ್ಪುತ್ತದೆ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ನಿರ್ದೇಶನಗಳಂತೆಯೇ ಈ ಘಟಕವನ್ನು ನಿರ್ಮಿಸಲಾಗಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ವಿಶೇಷ ಆಯುಕ್ತ ಡಾ. ಹರೀಶ್ ಮಾಹಿತಿ ನೀಡಿದರು.

ಸ್ವಯಂಚಾಲಿತ ತ್ಯಾಜ್ಯ ವಿಂಗಡಣೆ ಘಟಕಕ್ಕೆ ಚಾಲನೆ

ರಾಜ್ಯ ಸರ್ಕಾರದ 'ಶುಭ್ರ ಬೆಂಗಳೂರು' ಅನುದಾನದಡಿಯಲ್ಲಿ ಈಜಿಪುರದಲ್ಲಿ ₹12.50 ಕೋಟಿ ವೆಚ್ಚದಲ್ಲಿನಿರ್ಮಿಸಲಾಗಿರುವ 'ಸ್ವಯಂಚಾಲಿತ ತ್ಯಾಜ್ಯ ವಿಂಗಡಣೆ ಘಟಕವೂ ಬುಧವಾರ ಆರಂಭಗೊಂಡಿತು.

40 ಟನ್ ಮಿಶ್ರ ತ್ಯಾಜ್ಯವನ್ನು ಯಾಂತ್ರೀಕೃತವಾಗಿ ಈ ಘಟಕದಲ್ಲಿ ವಿಂಗಡಿಸಲಾಗುತ್ತದೆ. ಪರಿಶುದ್ಧ ವೆಂಚರ್ಸ್ ಈ ಘಟಕವನ್ನು ನಿರ್ವಹಿಸಲಿದೆ. ಇದರಿಂದ, ಭೂಭರ್ತಿ ಪ್ರದೇಶಗಳ ಮೇಲೆ ಒತ್ತಡ ಕಡಿಮೆಯಾಗುತ್ತದೆ. ತ್ಯಾಜ್ಯ ಮರುಬಳಕೆಗೆ ಅವಕಾಶವಾಗಲಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ಅಧಿಕಾರಿಗಳು ತಿಳಿಸಿದರು.

16ಕ್ಕೆ ಕಲಬುರಗಿ, 18ಕ್ಕೆ ಶಿವಮೊಗ್ಗಕ್ಕೆ ಪ್ರಧಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ 16ರಂದು ಕಲಬುರಗಿ, 18ರಂದು ಶಿವಮೊಗ್ಗದಲ್ಲಿ ಹಮ್ಮಿಕೊಂಡಿರುವ ಸಾರ್ವಜನಿಕ ಕಾರ್ಯಕ್ರಮದಲ್ಲಿ ಭಾಗ ವಹಿಸುತ್ತಿದ್ದಾರೆ.

16 ಹಾಗೂ 18ರಂದು ಎರಡೂ ದಿನ ಮಧ್ಯಾಹ್ನ 2ಕ್ಕೆ ಕಾರ್ಯಕ್ರಮಗಳು ಆರಂಭವಾಗಲಿವೆ. ಕಲಬುರಗಿಯ ಎನ್‌ವಿ ಆಟದ ಮೈದಾನದಲ್ಲಿ ಹಾಗೂ ಶಿವಮೊಗ್ಗದ ಅಲ್ಲಮಪ್ರಭು ಮೈದಾನದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಎಲ್ಲ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಮಾಹಿತಿ ನೀಡಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕರ್ನಾಟಕದಲ್ಲಿ ಎರಡು ದಿನಗಳ ಪ್ರವಾಸ ಮಾಡಿದ ನಂತರ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಗೃಹ ಸಚಿವ ಅಮಿತ್ ಶಾ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸೇರಿದಂತೆ ಹಲವು ಗಣ್ಯರು ಬೇರೆ ಬೇರೆ ಲೋಕಸಭಾ ಕ್ಷೇತ್ರಗಳಿಗೆ ಭೇಟಿ ಕೊಡುವರು ಎಂದು ಹೇಳಿದರು.

ಮುಂಬೈ ರೇಸ್

ರೆಮಿನಿಸೆನ್ಸ್ ಗೆಲ್ಲುವ ನಿರೀಕ್ಷೆ

ದಿ ಹಿಂದು ಟ್ರೋಫಿ ಗುರುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರೆಮಿನಿಸೆನ್ಸ್ ಈ ರೇಸ್ ಗಲ್ಲುವ ನಿರೀಕ್ಷೆಯಿದೆ. ಸಂಜೆ5:00ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸ್ಟೋಲ್ ಮೈ ಹಾರ್ಟ್ 1, ಲಿಯೊ ದಿ ಲಯನ್ 5, ಗ್ಯಾಲಪಿಂಗ್ ಗ್ಲೋರಿ 2
2ನೇ ರೇಸ್: ಎಲ್ ಗ್ರೀಕೊ 1, ಎನ್‌ಡ್ಯೂರೆನ್ಸ್ 2, ರಷ್ 3
3ನೇ ರೇಸ್: ಏರೊಡೈನಾಮಿಕ್ 4, ಓಷನ್ 9, ಡೊರೊನ್ 2
4ನೇ ರೇಸ್: ರೆಮಿನಿಸೆನ್ಸ್ 2, ಪೋರ್ಟೊಫಿನೊ ಬೇ 4, ಔಟ್‌ಲ್ಯಾಂಡರ್ 3
5ನೇ ರೇಸ್: ಫಾಂಟಾನ 8, ಅಟೈನ್ಡ್ 3, ಬ್ಯಾಲೆನ್ಸಿಯಾಗ 2
6ನೇ ರೇಸ್: ಟಾಸ್ಕಾನ 1, ಮಿ ಏರಿಯಾನ್ 3. ಟಾರ್ಜಾನ್ 10

ಉತ್ತಮ ಬೆಟ್: ಫಾಂಟಾನ

ಜಾಕ್‌ಪಾಟ್	ಟ್ರಿಬಲ್
2,3,4,5,6	3,4,5

ಒಳ ಹೊಡೆತ ಆಗಲ್ಲ– ಬಸವರಾಜ ಬೊಮ್ಮಾಯಿ

ಬೆಂಗಳೂರು: 'ನನ್ನನ್ನು ಅತ್ಯಂತ ಹೆಚ್ಚು ಮತಗಳಿಂದ ಗೆಲ್ಲಿಸುತ್ತಾರೆ ಎಂಬ ವಿಶ್ವಾಸ ಇದೆ. ಪಕ್ಷದಲ್ಲಿ ಯಾವುದೇ ಒಳ ಹೊಡೆತ ಆಗುವುದಿಲ್ಲ' ಎಂದು ಹಾವೇರಿ-ಗದಗ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿಯಾಗಿ ಮಾಡಬೇಕೆಂಬ ಬಯಕೆ ಹಾವೇರಿ– ಗದಗ ಕ್ಷೇತ್ರದ ಜನರಲ್ಲಿಯೂ ಇದೆ' ಎಂದರು.

ಪುತ್ರನಿಗೆ ಟಿಕೆಟ್ ತಪ್ಪಿರುವುದರಿಂದ ಕೆ.ಎಸ್. ಈಶ್ವರಪ್ಪ ಅಸಮಾಧಾನಗೊಂಡಿರುವ ಬಗ್ಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, 'ಸುಮಾರು ಆರು ತಿಂಗಳಿಂದ ಆ ಕ್ಷೇತ್ರದಲ್ಲಿ ಅವರು ಓಡಾಡಿದ್ದಾರೆ. ಕಾಂತೇಶ್ ಅವರಿಗೆ ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಟಿಕೆಟ್ ಕೊಡಬೇಕೆಂದು ಸಂಸದೀಯ ಮಂಡಳಿಗೆ ನಾನು ಮನವಿ ಮಾಡಿದ್ದೆ' ಎಂದರು. 'ಪಕ್ಷದ ರಾಷ್ಟ್ರೀಯ ನಾಯಕರು ಗೆಲುವಿನ ಲೆಕ್ಕಾಚಾರ ಇಟ್ಟುಕೊಂಡು ನನ್ನನ್ನು ಆಯ್ಕೆ ಮಾಡಿದ್ದಾರೆ. ಈಶ್ವರಪ್ಪ ಅವರು ಹಿರಿಯರಿದ್ದಾರೆ. ಪಕ್ಷ ಅವರಿಗೆ ಸೂಕ್ತ ಗೌರವ ನೀಡುತ್ತದೆ ಎನ್ನುವ ವಿಶ್ವಾಸವಿದೆ. ಕುರುಬ ಸಮುದಾಯದೊಂದಿಗೆ ನನಗೆ ಉತ್ತಮ ಸಂಬಂಧ ಇದೆ' ಎಂದರು.

'ಬೆಂಗಳೂರು ಉತ್ತರ ಕ್ಷೇತ್ರದಲ್ಲಿ ಸದಾನಂದ ಗೌಡರು ಸ್ಪರ್ಧಿಸಬೇಕೆಂಬುದು ಅಲ್ಲಿನ ಕಾರ್ಯಕರ್ತರ ಅಭಿಪ್ರಾಯ ಇತ್ತು. ಅವರು ಮತ್ತು ಈಶ್ವರಪ್ಪ ಅವರಿಗೆ ಪಕ್ಷದ ರಾಷ್ಟ್ರೀಯ ನಾಯಕರು ಒಳ್ಳೆಯ ಅವಕಾಶ ನೀಡುವ ಸಾಧ್ಯತೆ ಇದೆ' ಎಂದರು.

ನಿರೀಕ್ಷೆಯಂತೆ ಕೆಲಸ ಮಾಡಿರುವೆ: ತೇಜಸ್ವಿ ಸೂರ್ಯ

ಬೆಂಗಳೂರು: 'ಅತ್ಯಂತ ಕಿರಿಯ ಅಭ್ಯರ್ಥಿಯಾಗಿದ್ದ ನನ್ನನ್ನು ಕಳೆದ ಲೋಕಸಭಾ ಚುನಾವಣೆಯಲ್ಲಿ ದಕ್ಷಿಣ ಲೋಕಸಭಾ ಕ್ಷೇತ್ರದ ಜನರು ಮನೆಯ ಮಗನಂತೆ ಆಶೀರ್ವದಿಸಿ, ಆಯ್ಕೆ ಮಾಡಿದ್ದರು. ಅವರ ನಿರೀಕ್ಷೆಯಂತೆ ಐದು ವರ್ಷ ಕೆಲಸ ಮಾಡಿದ್ದೇನೆ' ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದ್ದಾರೆ.

ಈ ಬಾರಿ ಪುನಃ ಸ್ಪರ್ಧಿಸಲು ಟಿಕೆಟ್ ಖಚಿತವಾಗುತ್ತಿದ್ದಂತೆ ಎಕ್ಸ್‌ನಲ್ಲಿ ಅಭಿಪ್ರಾಯ ಹಂಚಿಕೊಂಡಿರುವ ಅವರು, 'ಪಕ್ಷದ ಹಿರಿಯ ನಾಯಕರು, ಕ್ಷೇತ್ರದ ಕಾರ್ಯಕರ್ತರು, ಮತದಾರರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ನನ್ನಂಥ ಯುವಕನಿಗೆ ಕಳೆದ ಐದು ವರ್ಷ ಅತ್ಯಂತ ಮಹತ್ವದ್ದಾಗಿತ್ತು. ಅನೇಕ ಹೊಸ ಕಲಿಕೆಗಳಿಗೆ ಒಡ್ಡಿಕೊಂಡಿದ್ದೇನೆ' ಎಂದಿದ್ದಾರೆ.

'ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿತ್ತು. ಹಿಂದಿನ ಅನುಭವದ ಆಧಾರದಲ್ಲಿ ಮುಂದಿನ ವರ್ಷಗಳಲ್ಲಿ ಬೆಂಗಳೂರು ಹಾಗೂ ರಾಜ್ಯದ ಪ್ರಗತಿಗೆ ಶ್ರಮಿಸುತ್ತೇನೆ. ಭಾರತಕ್ಕೆ ನರೇಂದ್ರ ಮೋದಿ ಅವರಂತಹ ದೂರದರ್ಶಿ, ಸದೃಢ ನಾಯಕನ ಅಗತ್ಯ ಇದೆ. ಅಮೃತಕಾಲಕ್ಕೆ ಅಡಿ ಇಡುತ್ತಿರುವ ಈ ಸಮಯದಲ್ಲಿ ಮತ್ತೊಮ್ಮೆ ಮೋದಿ ಅವರನ್ನು ದೇಶದ ಜನರು ಬೆಂಬಲಿಸಬೇಕಿದೆ' ಎಂದಿದ್ದಾರೆ.

ಪರಿಸರ ಮಾಲಿನ್ಯ: ಡಾಂಬರು ಮಿಶ್ರಣ ಘಟಕಕ್ಕೆ ಆಕ್ಷೇಪ

ಮಾಲಿನ್ಯ ನಿಯಂತ್ರಣ ಮಂಡಳಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋಲಾರ ತಾಲ್ಲೂಕಿನ ಮೇಡಿಹಾಳದ ಬಳಿ ಸ್ಥಾಪಿಸಲಾಗಿರುವ ಡಾಂಬರು ಮಿಶ್ರಣ ಘಟಕದಿಂದ ಪರಿಸರ ಮಾಲಿನ್ಯ ಉಂಟಾಗುತ್ತಿದೆ' ಎಂದು ದೂರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಧನಮಂತನಹಳ್ಳಿಯ ಕೆ.ಮಂಜುನಾಥ್ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಪ್ರಕರಣದ ಎಲ್ಲಾ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ಅಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ಏಪ್ರಿಲ್ 1ಕ್ಕೆ ಮುಂದೂಡಿದೆ. ಅರ್ಜಿದಾರರ ಪರ ನರೇಶ್ ಸಂತೋಷ್ ವಾದ ಮಂಡಿಸಿದರು.

ಅರ್ಜಿಯಲ್ಲಿ ಏನಿದೆ?: 'ಕೋಲಾರ ತಾಲ್ಲೂಕಿನ ಮೇಡಿಹಾಳದ ಸರ್ವೆ ನಂಬರ್ 59 ರಲ್ಲಿ ಮೆಸರ್ಸ್ ಪ್ರಶಾಂತ್ ಕ್ರಶರ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ಸ್ಥಾಪಿಸಿರುವ ಹಾಟ್ ಮಿಕ್ಸ್ ಘಟಕದಿಂದ ಭಾರಿ ಮಾಲಿನ್ಯವಾಗುತ್ತಿದೆ. ಇದರಿಂದ ಸುತ್ತಮುತ್ತಲ ಗ್ರಾಮಸ್ಥರು ಮತ್ತು ಸನಿಹದಲ್ಲೇ ಇರುವ ಶಾಲಾ ಮಕ್ಕಳ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಕೃಷಿ ಬೆಳೆಗಳು ಹಾಳಾಗುತ್ತಿವೆ. ಈ ಬಗ್ಗೆ ಸ್ಥಳೀಯ ಶಾಲಾ ಮುಖ್ಯ ಶಿಕ್ಷಕರು ಮಾಲಿನ್ಯ ನಿಯಂತ್ರಣ ಮಂಡಳಿಗೆ ಪತ್ರ ಬರೆದಿದ್ದಾರೆ. ಆದರೆ, ಮಂಡಳಿ ಘಟಕಕ್ಕೆ ನೋಟಿಸ್ ನೀಡಿ ಮೌನವಾಗಿದೆಯೇ ಹೊರತು ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಅರ್ಜಿಯಲ್ಲಿ ಆಕ್ಷೇಪಿಸಲಾಗಿದೆ.

ತುಷಾರ್ ಗಿರಿನಾಥ್‌ಗೆ ಹೈಕೋರ್ಟ್ ನೋಟಿಸ್

ಬೆಂಗಳೂರು: 'ನಗರದ ಮಲ್ಲತ್ತಹಳ್ಳಿ ಕೆರೆ ಪ್ರದೇಶದಲ್ಲಿ ಯಾವುದೇ ನಿರ್ಮಾಣ ಚಟುವಟಿಕೆ ಕೈಗೊಳ್ಳದಂತೆ ಕೋರ್ಟ್ ಆದೇಶವಿದ್ದರೂ ಅದನ್ನು ಉಲ್ಲಂಘಿಸಿ ರಸ್ತೆ ನಿರ್ಮಿಸಲಾಗುತ್ತಿದೆ' ಎಂದು ಆರೋಪಿಸಲಾದ ನ್ಯಾಯಾಂಗ ನಿಂದನೆ ಅರ್ಜಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮುಖ್ಯ ಆಯುಕ್ತ ತುಷಾರ್ ಗಿರಿನಾಥ್‌ಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ವಕೀಲೆ ಗೀತಾ ಮಿಶ್ರಾ ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಜಿ.ಆರ್. ಮೋಹನ್, 'ಕೆರೆ ಪ್ರದೇಶದಲ್ಲಿ ಅಕ್ರಮ ನಿರ್ಮಾಣ ಚಟುವಟಿಕೆ ಆಕ್ಷೇಪಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ; ರಸ್ತೆ ಸೇರಿದಂತೆ ಯಾವುದೇ ಶಾಶ್ವತ ಅಥವಾ ತಾತ್ಕಾಲಿಕ ನಿರ್ಮಾಣ ಕಾರ್ಯ ಕೈಗೊಳ್ಳಬಾರದು. ಗಣೇಶ ಮೂರ್ತಿಗಳ ವಿಸರ್ಜನೆ ಸೇರಿದಂತೆ ಯಾವುದೇ ರೀತಿಯ ಉತ್ಸವಗಳಿಗೆ ಅವಕಾಶ ನೀಡಬಾರದು ಎಂದು ಹೈಕೋರ್ಟ್ 2023ರ ಮಾರ್ಚ್ 14ರಂದು ಆದೇಶಿಸಿತ್ತು. ಆದರೂ, ಈ ಆದೇಶವನ್ನು ಉಲ್ಲಂಘಿಸಿ ಅಲ್ಲಿ 80 ಅಡಿ ರಸ್ತೆ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದೆ. ಕೋರ್ಟ್ ಆದೇಶವನ್ನು ಬಿಬಿಎಂಪಿ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ' ಎಂದು ದೂರಿದರು.

'ಮಲ್ಲತ್ತಹಳ್ಳಿ ಕೆರೆ ಒಟ್ಟು 71.18 ಎಕರೆ ಪ್ರದೇಶ ವ್ಯಾಪ್ತಿಯಲ್ಲಿದ್ದು, ಅದರಲ್ಲಿ ಮೂರು ಎಕರೆಗೆ ಸಂಬಂಧಿಸಿದಂತೆ ವ್ಯಾಜ್ಯ ನಡೆಯುತ್ತಿದೆ. 42 ಎಕರೆ ಪ್ರದೇಶದಲ್ಲಿ ಜಲಮೂಲ ಇದ್ದು, ಅದನ್ನು 44 ಎಕರೆಗೆ ವಿಸ್ತರಿಸಿ ಅಭಿವೃದ್ಧಿಪಡಿಸಬೇಕಾಗಿದೆ. ಸದ್ಯ ಆ ಕೆರೆಯಲ್ಲಿ ನೀರಿಲ್ಲ. ಕೆರೆಯ ಪ್ರದೇಶದಲ್ಲಿಯೇ ಕೊಳಚೆ ನೀರು ಹರಿಯುವ ಮಾರ್ಗವಿದೆ' ಎಂದು ವಿವರಿಸಿದರು. ವಾದ ಆಲಿಸಿದ ನ್ಯಾಯಪೀಠ ಪ್ರತಿವಾದಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಸ್ಪರ್ಧಿಸುವುದಿಲ್ಲವೆಂದು ಹೇಳಿದ್ದೇನೆ: ಮಹದೇವಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಾಮರಾಜನಗರ ಲೋಕಸಭಾ ಕ್ಷೇತ್ರದ ಟಿಕೆಟ್ ಕುರಿತಂತೆ ಮೈಸೂರು, ಚಾಮರಾಜನಗರ ಜಿಲ್ಲೆಗಳ ಸಚಿವರು, ಶಾಸಕರ ಅಭಿಪ್ರಾಯವನ್ನು ವರಿಷ್ಠರು ಕೇಳಿದ್ದಾರೆ. ಸ್ಪರ್ಧಿಸುವಂತೆ ನನ್ನ ಮೇಲೆ ಪ್ರೀತಿಯಿಂದ ಹೇಳಿದ್ದಾರೆ. ಆದರೆ, ನಾನು ಸ್ಪರ್ಧಿಸುವುದಿಲ್ಲವೆಂದು ಹೇಳಿದ್ದೇನೆ' ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಚಾಮರಾಜನಗರ ಕ್ಷೇತ್ರಕ್ಕೆ ಆಯ್ಕೆ ಸಮಿತಿಯು ಹೆಸರುಗಳನ್ನು ಈಗಾಗಲೇ ಶಿಫಾರಸು ಮಾಡಿದೆ. ಆದರೆ, ಯಾರನ್ನು ಮಾಡಿದೆ ಎನ್ನುವುದು ಗೊತ್ತಿಲ್ಲ. ಅಂತಿಮವಾಗಿ ಕೇಂದ್ರ ಚುನಾವಣಾ ಸಮಿತಿ ನಿರ್ಧರಿಸುತ್ತದೆ' ಎಂದರು.

'ಮಗ ಸುನಿಲ್ ಬೋಸ್ ಕಾಂಗ್ರೆಸ್‌ನಲ್ಲಿ ನಿಷ್ಠೆಯಿಂದ ಕೆಲಸ ಮಾಡಿದ್ದಾನೆ. ಕಳೆದ ಮೂರು ಬಾರಿ ಟಿಕೆಟ್ ಸಿಗದೆ ವಂಚಿತನಾಗಿದ್ದಾನೆ. ಇದು ಮುಖ್ಯಮಂತ್ರಿಗೂ ಗೊತ್ತಿದೆ' ಎಂದರು.

ಮುಖ್ಯಮಂತ್ರಿ ಜೊತೆ ಭಿನ್ನಾಭಿಪ್ರಾಯವಿದೆ ಎಂಬ ವದಂತಿ ಬಗ್ಗೆ ಪ್ರತಿಕ್ರಿಯಿಸಿದ ಮಹದೇವಪ್ಪ, '40 ವರ್ಷಗಳಿಂದ ನಾವು ಜೊತೆಯಾಗಿಯೇ ಇದ್ದೇವೆ. ಒಟ್ಟಿಗೆ ಅಭಿವೃದ್ಧಿ ಕೆಲಸಗಳನ್ನು ಮಾಡಿಕೊಂಡು ಬಂದಿದ್ದೇವೆ. ಈಗ ಯಾಕೆ ದೂರ ಆಗೋಣ? ಅಷ್ಟಕ್ಕೂ ದೂರವಾಗುವಂತಹ ಕಾರಣವಾದರೂ ಏನಿದೆ? ಕೆಲವರು ನಮ್ಮಿಬ್ಬರ ನಡುವೆ ಗೊಂದಲ ಸೃಷ್ಟಿಸಬಹುದು. ಅದು ಸೃಷ್ಟಿ ಅಷ್ಟೆ' ಎಂದರು.

'ದಲಿತ ಮುಖ್ಯಮಂತ್ರಿ' ಹೇಳಿಕೆ ವಿಚಾರವಾಗಿ ಮಾತನಾಡಿದ ಅವರು, 'ದುಡಿಯುವ ವರ್ಗ ಆಳುವ ವರ್ಗ ಆಗಬೇಕು ಎಂದು ಹೇಳಿದ್ದೇನೆ. ಅಂಬೇಡ್ಕರ್ ಸಿದ್ಧಾಂತ ಗೊತ್ತಿರುವವರಿಗೆ ಈ ಮಾತು ಅರ್ಥವಾಗುತ್ತದೆ. ಆದರೆ, ಅಧಿಕಾರದ ಪಿತ್ಥ ನೆತ್ತಿಗೆ ಏರಿರುವವರು ತಮಗೆ ಬೇಕಾದಂತೆ ಮಾತನಾಡುತ್ತಿದ್ದಾರೆ. ಕಾಂಗ್ರೆಸ್‌ನಿಂದ ಹಲವು ರಾಜ್ಯಗಳಲ್ಲಿ ಈಗಾಗಲೇ ದಲಿತ ಮುಖ್ಯಮಂತ್ರಿ ಆಗಿದ್ದಾರೆ' ಎಂದರು.

'ಪ್ರಿಯಕೃಷ್ಣ ಸ್ಪರ್ಧಿಸುವುದಿಲ್ಲ'

'ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಪ್ರಿಯಕೃಷ್ಣ (ಗೋವಿಂದರಾಜನಗರ ಕ್ಷೇತ್ರದ ಶಾಸಕ) ಸ್ಪರ್ಧಿಸುವ ಯಾವುದೇ ಯೋಚನೆ ಇಲ್ಲ. ಆ ಯಾವ ಅನಿವಾರ್ಯವೂ ಇಲ್ಲ' ಎಂದು ಅವರ ತಂದೆ, ವಿಜಯನಗರ ಕ್ಷೇತ್ರದ ಶಾಸಕ ಎಂ. ಕೃಷ್ಣಪ್ಪ ಸ್ಪಷ್ಟಪಡಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸ್ಪರ್ಧೆಯ ಬಗ್ಗೆ ಪಕ್ಷದ ನಾಯಕರು ಅಭಿಪ್ರಾಯ ಕೇಳಿದ್ದಾರೆ. ನಮ್ಮ ಅಭಿಪ್ರಾಯವನ್ನು ಅವರಿಗೆ ಹೇಳಿದ್ದೇವೆ' ಎಂದರು.

ಸಿದ್ದರಾಮಯ್ಯ ಸಂಪುಟದಲ್ಲಿ ಸ್ಥಾನ ಸಿಗದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನನಗೆ ಏನು ಕಡಿಮೆ ಇದೆಯೊ, ಯಾಕೆ ಕೊಟ್ಟಿಲ್ಲವೊ? ಸಚಿವ ಸ್ಥಾನ ಕೊಡದೆ ತಪ್ಪು ಮಾಡಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

33 ಹಳ್ಳಿಗಳ ವ್ಯಾಪ್ತಿಯಲ್ಲಿ ಲೇಔಟ್ • ಸಾರ್ವಜನಿಕ– ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಾಣ

ಬಿಡಿಎ ಹೊಸ ಬಡಾವಣೆಗೆ 2,000 ಎಕರೆ

• ನವೀನ್ ಮಿನೇಜಸ್

ಬೆಂಗಳೂರು: ನಗರದ ಪೂರ್ವ ಹಾಗೂ ಉತ್ತರ ಭಾಗದ 33 ಹಳ್ಳಿಗಳ ವ್ಯಾಪ್ತಿಯ ಎರಡು ಸಾವಿರ ಎಕರೆ ಪ್ರದೇಶದಲ್ಲಿ ಸಾರ್ವಜನಿಕ– ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಹೊಸ ಬಡಾವಣೆಯನ್ನು ನಿರ್ಮಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮುಂದಾಗಿದೆ.

ಈ 33 ಹಳ್ಳಿಗಳಲ್ಲಿ ಕೆಲವು ಗ್ರಾಮಗಳ ಪ್ರದೇಶಗಳು ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ವ್ಯಾಪ್ತಿಯಲ್ಲಿವೆ. ಪ್ರಾಥಮಿಕ ಅಧಿಸೂಚನೆ ಹೊರಡಿಸುವ ಮುನ್ನ 22 ಸರ್ವೇಯರ್‌ಗಳ ತಂಡವನ್ನು ರಚಿಸಿರುವ ಬಿಡಿಎ, ವಾಸ್ತವ ನೆಲೆಗಟ್ಟಿನ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಿದೆ. ಖಾಲಿ ಇರುವ ಪ್ರದೇಶ ಎಷ್ಟಿದೆ ಎಂಬ ಮಾಹಿತಿ ಸೇರಿದಂತೆ ಕಂದಾಯ ದಾಖಲೆಗಳ ಪ್ರಕಾರ ಗ್ರಾಮ ನಕ್ಷೆ, ಗಡಿಯ ವಿವರಗಳನ್ನು ವರದಿ ಒಳಗೊಳ್ಳಲಿದೆ.

‘ಭೂಮಿ ಕಳೆದುಕೊಳ್ಳುವವರಿಗೆ ಪ್ರತಿ ಎಕರೆಗೆ ₹1.3 ಕೋಟಿ ನೀಡಲಾಗುತ್ತದೆ. ಇದು ಹೆಚ್ಚು ಆಕರ್ಷಕವಾಗಿಲ್ಲದ ಕಾರಣ, ಪಿಪಿಪಿ ಮಾದರಿ ಅನುಸರಿಸಲಾಗುತ್ತದೆ. ಹೀಗಾಗಿ, ಶೇ 40ರಷ್ಟು ಅಭಿವೃದ್ಧಿ ನಿವೇಶನಗಳನ್ನು (ಪ್ರತಿ ಒಂದು ಎಕರೆ ಭೂಮಿಗೆ 9,583 ಚದರ ಅಡಿ) ಭೂ ಮಾಲೀಕರಿಗೆ ನೀಡಲಾಗುತ್ತದೆ’ ಎಂದು ಬಿಡಿಎ ಆಯುಕ್ತ ಎನ್. ಜಯರಾಮ್ ತಿಳಿಸಿದರು.

‘ಅಭಿವೃದ್ಧಿ ನಿವೇಶನಗಳ ದರ ಪ್ರತಿ ಚದರ ಅಡಿಗೆ ₹5 ಸಾವಿರದಿಂದ ₹6 ಸಾವಿರವಾಗುತ್ತದೆ.ನಗದುಪರಿಹಾರದಲ್ಲಿ ಭೂಮಾಲೀಕರು ಪಡೆಯುವುದಕ್ಕಿಂತ ಐದು ಪಟ್ಟು ಹೆಚ್ಚನ್ನು ಈ ಮೂಲಕ ಗಳಿಸಲಿದ್ದಾರೆ’ ಎಂದರು.

ಡಾ. ಶಿವರಾಮಕಾರಂತ ಬಡಾವಣೆಯ ಪೂರ್ವ ಮತ್ತು ಉತ್ತರ ಭಾಗದಲ್ಲಿ ಬಡಾವಣೆಯನ್ನು ವಿಸ್ತರಿಸಲು ಅಧ್ಯಕ್ಷ ಎನ್.ಎ. ಹ್ಯಾರೀಸ್ ನೇತೃತ್ವದಲ್ಲಿ ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

‘ಬಿಡಿಎಯ ಈ ಯೋಜನೆ ಚುನಾವಣೆ ವರ್ಷದಲ್ಲಿ ಪ್ರಕಟವಾಗಿದ್ದು, ಇದು ಮತಗಳನ್ನು ಆಕರ್ಷಿಸುವ ತಂತ್ರವಾಗಿದೆ. ಬಿಡಿಎ ನೀಡುವ ಪರಿಹಾರ ಮಾರುಕಟ್ಟೆ ದರಕ್ಕಿಂತ ಸಾಕಷ್ಟು ಪಟ್ಟು ಹಿಂದಿದೆ. ಇದಲ್ಲದೆ, ಎರಡೂವರೆ ವರ್ಷದಿಂದ 2,500 ಎಕರೆ ಪ್ರದೇಶದ ಶಿವರಾಮ ಕಾರಂತ ಬಡಾವಣೆಗಾಗಿ ಭೂಹಕ್ಕು ಕಳೆದುಕೊಂಡಿರುವ ರೈತರಿಗೆ ಇನ್ನೂ ಪರಿಹಾರ ನೀಡಿಲ್ಲ. ಇನ್ನು ಹೊಸ ಬಡಾವಣೆ ನಿರ್ಮಾಣ ಮಾಡಲು ಹೇಗೆ ಸಾಧ್ಯ’ ಎಂಬ ಪ್ರಶ್ನೆ ಎದುರಾಗಿದೆ.

‘ಬಿಡಿಎ ಯೋಜನೆ ರೈತರು ಮತ್ತು ದಲಿತರ ಹಿತಾಸಕ್ತಿಯ ವಿರುದ್ಧವಾಗಿದೆ. ಶಿವರಾಮ ಕಾರಂತ ಬಡಾವಣೆಗೆ ಬಿಡಿಎ ಭೂಸ್ವಾಧೀನ ಮಾಡಿಕೊಂಡ ಮೇಲೆ ರೈತರ ಜೀವನ ದುಸ್ತರವಾಗಿದೆ. ಪರಿಹಾರ ನೀಡದ ಬಿಡಿಎ, ರೈತರ ನಿತ್ಯ-ಜೀವನವನ್ನು ಹಾಳು ಮಾಡಿದೆ’ ಎಂದು ಸಾಮಾಜಿಕ ಕಾರ್ಯಕರ್ತ ಮಾವಳ್ಳಿಪುರ ಶ್ರೀನಿವಾಸ್ ದೂರಿದರು.

ಪೂರ್ವದಲ್ಲಿನ 22 ಹಳ್ಳಿಗಳು

ಬೆಲ್ಲಹಳ್ಳಿ, ಕನ್ನೂರು, ಬಿದರಹಳ್ಳಿ, ಹಿರಂದಹಳ್ಳಿ, ಚಿಮ್ಮಸಂದ್ರ, ಬಿಳಿಶಿವಾಲೆ, ಅನಗಪುರ, ವಡೇರಹಳ್ಳಿ, ರಾಮಪುರ, ಗೊರವಿಗೆರೆ, ಕೋಟಂ ನಲ್ಲೂರು, ಅಮಾನಿ ದೊಡ್ಡಕೆರೆ, ಸಾರಕ್ಕಿ ಗೊಟ್ಟಹಳ್ಳಿ, ದೊಡ್ಡಗುಂಟೇನಬ್ಬೆ, ಕಾಜಿಸೊಣ್ಣೇನಹಳ್ಳಿ, ಕನ್ನಮಂಗಲ, ಪೂಜೇನ ಅಗ್ರಹಾರ, ಭಕ್ತರಹಳ್ಳಿ, ಮಲ್ಲಸಂದ್ರ, ಕಾಡುಗೋಡಿ, ಶೀಗೇಹಳ್ಳಿ, ಕೊರಳೂರು, ಬೈಲಕೆರೆ.

ಉತ್ತರದಲ್ಲಿನ 12 ಹಳ್ಳಿಗಳು


ಕೊಂಡ ಶೆಟ್ಟಿಹಳ್ಳಿ, ಲಿಂಗರಾಜ ಸಾಗರ, ಸೋಲದೇವನಹಳ್ಳಿ, ಚಿಕ್ಕಬಾಣಾವರ, ಕೆಂಪಾಪುರ, ಕಸಘಟ್ಟಪುರ, ಕುಂಬಾರಹಳ್ಳಿ, ಆವಲಹಳ್ಳಿ, ಮಾವಳ್ಳಿಪುರ, ಜೆ.ಬಿ. ಕಾವಲ್, ಲಿಂಗರಾಜಪುರ, ಮೈಲಪ್ಪನಹಳ್ಳಿ, ದೊಡ್ಡಬೈಲಕೆರೆ.

‘808 ನಕಲಿ ಖಾತೆ, ₹20 ಕೋಟಿ ವಂಚನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜರಾಜೇಶ್ವರಿನಗರ ಉಪವಿಭಾಗದ ಸಹಾಯಕ ಕಂದಾಯ ಅಧಿಕಾರಿಗಳ ಕಚೇರಿಯಲ್ಲಿ 808 ನಕಲಿ ಖಾತೆಗಳನ್ನು ಮಾಡಲಾಗಿದ್ದು, ₹20 ಕೋಟಿಗೂ ಹೆಚ್ಚು ಹಣ ಬಿಬಿಎಂಪಿಗೆ ವಂಚಿಸಲಾಗಿದೆ’ ಎಂದು ಬಿಜೆಪಿ ಮುಖಂಡ ರಮೇಶ್ ಎನ್.ಆರ್. ಆರೋಪಿಸಿದ್ದಾರೆ.

ಬಿಬಿಎಂಪಿ ಮುಖ್ಯ ಆಯುಕ್ತರಿಗೆ 122 ಪುಟಗಳ ದಾಖಲೆ ಸಹಿತ ದೂರು ಸಲ್ಲಿಸಿರುವ ಅವರು, ‘ಚನ್ನಸಂದ್ರ, ಹಲಗೆವಡೇರಹಳ್ಳಿ ಮತ್ತು ಹೊಸಕೆರೆಹಳ್ಳಿ ಪ್ರದೇಶಗಳಿಗೆ ಸಂಬಂಧಿಸಿದಂತೆ ಒಟ್ಟು 808 ಖಾತೆಗಳನ್ನು ಎ ವಹಿಯಲ್ಲಿ ಸೃಷ್ಟಿಸಲಾಗಿದೆ. ಪ್ರಥಮ ದರ್ಜೆ ನೌಕರ ಓಂಕಾರಮೂರ್ತಿ ಅವರದ್ದೇ ದೊಡ್ಡ ಪಾತ್ರ ಇದರಲ್ಲಿದೆ’ ಎಂದು ಹೇಳಿದ್ದಾರೆ.



808 ನಕಲಿ ಖಾತೆಗಳ ದಾಖಲೆಗಳನ್ನು ರಮೇಶ್ ಎನ್‌ಆರ್ ಪ್ರದರ್ಶಿಸಿದರು

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಮೇಶ್, ‘ರಾಜರಾಜೇಶ್ವರಿನಗರ ಉಪ ವಿಭಾಗದ ಸಹಾಯಕ ಕಂದಾಯ ಅಧಿಕಾರಿಗಳ ಕಚೇರಿಯಲ್ಲಿ ಅಧಿಕಾರಿ, ನೌಕರರಿಗಿಂತಲೂ ಮಧ್ಯವರ್ತಿಗಳ ಹಾವಳಿಯೇ ಹೆಚ್ಚಾಗಿದೆ. ಯಶವಂತ ಕುಮಾರ್, ವಿಜಯಕುಮಾರ್, ಮುತ್ತುರಾಜ್ ಎಂಬ ಮಧ್ಯವರ್ತಿಗಳು ಕಂದಾಯ ಪರಿವೀಕ್ಷಕರು ಮತ್ತು ಕಂದಾಯ ವಸೂಲಿಗಾರರ ಆಸನಗಳಲ್ಲಿ ಕುಳಿತು ತಮಗಿಷ್ಟ ಬಂದಂತೆ ದಾಖಲೆಗಳಲ್ಲಿ ಎಂಟ್ರಿ ಮಾಡುತ್ತಿದ್ದಾರೆ’ ಎಂದು ಆರೋಪಿಸಿದರು.

‘ಮಧ್ಯವರ್ತಿಗಳು ಸೃಷ್ಟಿಸಿದ ದಾಖಲೆಗಳಿಗೆ ಕಂದಾಯ ಪರಿವೀಕ್ಷಕರಾದ ಗಣೇಶ್, ಸಹಾಯಕ ಕಂದಾಯ ಅಧಿಕಾರಿ ಅರುಣ್ ಕುಮಾರ್ ಸಹಿ ಹಾಕಿಕೊಟ್ಟಿದ್ದಾರೆ. ಈ ಎಲ್ಲ 808 ಖಾತೆಗಳನ್ನು ಸೃಷ್ಟಿಸಿರುವ ಅಧಿಕಾರಿಗಳ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು. ಉಪ ಆಯುಕ್ತರನ್ನು ಅಮಾನತು ಮಾಡಬೇಕು’ ಎಂದು ಅವರು ಆಗ್ರಹಿಸಿದರು.

ಸಂಕ್ಷಿಪ್ತ ಸುದ್ದಿ

‘ನಾರಿ ಸಮ್ಮಾನ್’ ಪ್ರಶಸ್ತಿಗೆ ಅರ್ಜಿ

ಬೆಂಗಳೂರು: ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ‘ಮೀಡಿಯಾ ವಿಷನ್’ ಸಂಸ್ಥೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಹಿಳೆಯರಿಗೆ ‘ನಾರಿ ಸಮ್ಮಾನ್-2024’ ರಾಷ್ಟ್ರ ಪ್ರಶಸ್ತಿ ನೀಡಲಿದೆ. ಈ ಪ್ರಶಸ್ತಿಗೆ ರಾಜ್ಯದ ಸಾಧಕ ಮಹಿಳೆಯರಿಂದ ಅರ್ಜಿ ಆಹ್ವಾನಿಸಿದೆ.

ಕಲೆ, ಸಾಹಿತ್ಯ, ಕ್ರೀಡೆ, ವೈದ್ಯಕೀಯ, ಪರಿಸರ, ಸಾಮಾಜಿಕ, ಕೃಷಿ ಮುಂತಾದ ಕ್ಷೇತ್ರಗಳ ಸಾಧಕ ಮಹಿಳೆಯರು ಸ್ವ ವಿವರ ಹಾಗೂ ಸೇವಾ ದಾಖಲೆಗಳೊಂದಿಗೆ ಮಾರ್ಚ್ 30ರ ಒಳಗೆ ಅಧ್ಯಕ್ಷ, ಬಸವ ಪರಿಷತ್, ಗಣೇಶ ಮಹಲ್, ಫ್ಲಾಟ್ ನಂ.53, ಎರಡನೇ ಮಹಡಿ, ನಂ. 267, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಂಗಳೂರು –03 ಇಲ್ಲಿಗೆ ಅರ್ಜಿ ಸಲ್ಲಿಸಬೇಕು. ಮಾಹಿತಿಗಾಗಿ ಮೊಬೈಲ್: 7259456555, 9880052914 ಸಂಪರ್ಕಿಸಬಹುದು. ಏ. 20ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ಬಸವ ಪರಿಷತ್ ಪ್ರಧಾನ ಕಾರ್ಯದರ್ಶಿ ಮಹಾತೇಶ ಎಸ್. ಹಿರೇಮಠ ತಿಳಿಸಿದ್ದಾರೆ.


24ಕ್ಕೆ ‘ಬಿಂಬ ಬಿಂಬನ’ ಬಿಡುಗಡೆ

ಬೆಂಗಳೂರು: ಚಲನಚಿತ್ರ ನಿರ್ದೇಶಕರಾದ ಗಿರೀಶ್ ಕಾಸರವಳ್ಳಿ ಮತ್ತು ಗೋಪಾಲಕೃಷ್ಣ ಪೈ ಅವರ ‘ಬಿಂಬ ಬಿಂಬನ’ ಕೃತಿ ಮಾರ್ಚ್ 24ರಂದು ಬೆಳಿಗ್ಗೆ 10ಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಕೃಷ್ಣರಾಜ ಪರಿಷತ್ ಮಂದಿರದಲ್ಲಿ ಬಿಡುಗಡೆಗೊಳ್ಳಲಿದೆ.

‘ವೀರಲೋಕ’ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ನಿರ್ಮಾಪಕಿ ಜಯಮಾಲಾ ಕೃತಿ ಬಿಡುಗಡೆ ಮಾಡುವರು. ನಿರ್ದೇಶಕ ಪಿ. ಶೇಷಾದ್ರಿ ಉದ್ಘಾಟಿಸುವರು. ಕೃತಿ ಕುರಿತು ಸಿನಿಮಾ ಪತ್ರಕರ್ತ ಕೆ. ಪುಟ್ಟಸ್ವಾಮಿ, ‘ಸುಧಾ’ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ. ಮಾತನಾಡುವರು. ನಿರ್ದೇಶಕ ಬಿ.ಎಸ್. ಲಿಂಗದೇವರು ಅತಿಥಿಯಾಗಿರುವರು. ವೀರಲೋಕ ಬುಕ್ಸ್ ಪ್ರಕಾಶಕ ವೀರಕಪುತ್ರ ಶ್ರೀನಿವಾಸ ಆಶಯ ನುಡಿಗಳನ್ನಾಡುವರು.

ನಿಧನ ವಾರ್ತೆ

ಎಸ್.ಆರ್. ಬಸವರಾಜು



ಹೆಸರಘಟ್ಟ: ಸೊಣ್ಣೇನಹಳ್ಳಿ ಗ್ರಾಮದ ಸ್ವಾತಂತ್ರ್ಯ ಹೋರಾಟಗಾರ ಎಸ್.ಆರ್. ಬಸವರಾಜು (89) ಬುಧವಾರ ನಿಧನರಾದರು. ಅವರಿಗೆ ಪತ್ನಿ, ನಾಲ್ವರು ಪುತ್ರರು, ಮೂವರು ಪುತ್ರಿಯರು ಇದ್ದಾರೆ. ಸ್ವಗ್ರಾಮದಲ್ಲಿ ಮೃತರ ಅಂತ್ಯಕ್ರಿಯೆ ನಡೆಯಿತು.

ಸ್ಪರ್ಧಾ ವಾಣಿ



ಕಂಡಕ್ಟರ್ ಹುದ್ದೆಗೆ ನೇಮಕಾತಿ

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ 2,500 ಕಂಡಕ್ಟರ್ ಹುದ್ದೆಗಳ ಭರ್ತಿಗೆ ನೇಮಕಾತಿ ಪ್ರಕ್ರಿಯೆ ಪ್ರಾರಂಭ: ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಈ ನೇಮಕಾತಿ ಪ್ರಕ್ರಿಯೆಯ ಹೊಣೆ ಹೊತ್ತಿದೆ.

ಮಂಜುನಾಥ್ ಭದ್ರಶೆಟ್ಟಿ

ಉದ್ಯೋಗ ಅವಕಾಶ

ರಾಜಧಾನಿಯ ಜನಸಮಾನ್ಯರ ಒಡನಾಡಿ ಆಗಿರುವ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ 2,500 ನಿರ್ವಾಹಕ (ಕಂಡಕ್ಟರ್) ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗಿದ್ದು, ಬಿಎಂಟಿಸಿಯಲ್ಲಿ ಕೆಲಸ ಮಾಡಬೇಕು ಎನ್ನುವ ನಾಡಿನ ತರುಣರಿಗೆ ಸದಾವಕಾಶ ಒದಗಿ ಬಂದಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಈ ನೇಮಕಾತಿ ಪ್ರಕ್ರಿಯೆಯ ಹೊಣೆ ಹೊತ್ತಿದ್ದು, ಈ ಕುರಿತು ಇತ್ತೀಚೆಗೆ ವಿವರವಾದ ಅಧಿಸೂಚನೆ ಹೊರಡಿಸಿದೆ. ಅರ್ಹ ಪುರುಷ-ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಬಿಎಂಟಿಸಿ ಮಿಕ್ಕುಳಿದ ವೃಂದದಲ್ಲಿ 2,286 (ಆರ್‌ಪಿಸಿ) ಹಾಗೂ ಸ್ಥಳೀಯ ವೃಂದ (ಹೈ-ಕ) 214 ಹುದ್ದೆಗಳಿದ್ದು ಒಟ್ಟಾರೆಯಾಗಿ ಮಹಿಳೆಯರಿಗೂ 825 ಹುದ್ದೆಗಳು ಮೀಸಲಿವೆ. ಮಾರ್ಚ್ 10ರಿಂದ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಪ್ರಾರಂಭವಾಗಿದ್ದು ಏಪ್ರಿಲ್ 10ರಂದು ಮುಕ್ತಾಯವಾಗಲಿದೆ. ಕೆಇಎನ ಅಧಿಕೃತ cetonline.karnataka.gov.in ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬೇಕು.

ಶೈಕ್ಷಣಿಕ ವಿದ್ಯಾರ್ಹತೆ: ಪಿಯುಸಿ (ಕಲಾ, ವಿಜ್ಞಾನ, ಕಾಮರ್ಸ್) ಅಥವಾ ಸಿಬಿಎಸ್‌ಸಿ 10 + 2 ಅಥವಾ ಮೂರು ವರ್ಷದ ಡಿಪ್ಲೊಮಾ ಅಥವಾ ಅದಕ್ಕೆ ಸಮಾನವಾದ ಶೈಕ್ಷಣಿಕ ಅರ್ಹತೆ ಜೊತೆಗೆ 'ಮಾನ್ಯತೆ ಹೊಂದಿರುವ ಮೋಟಾರು ವಾಹನ ನಿರ್ವಾಹಕ ಪರವಾನಗಿ ಮತ್ತು ಬ್ಯಾಡ್ಜ್' ಅನ್ನು ಹೊಂದಿದವರು ಅರ್ಜಿ ಸಲ್ಲಿಸಬಹುದು. ಬಾಹ್ಯ ಕೋರ್ಸ್ ಮತ್ತು ಜೆಒಸಿ ಕೋರ್ಸ್ ಮುಗಿಸಿದವರು ಅರ್ಹರಲ್ಲ ಮತ್ತು ಪರೀಕ್ಷೆ ಬರೆದು ಈಗಾಗಲೇ ಫಲಿತಾಂಶಕ್ಕೆ ಕಾಯುತ್ತಿರುವವರು ಅರ್ಜಿ ಸಲ್ಲಿಸಲು ಅರ್ಹರಲ್ಲ.

ವಯೋಮಿತಿ: ಅರ್ಜಿ ಸಲ್ಲಿಸಲು ಕನಿಷ್ಠ 18 ವರ್ಷ ಪೂರ್ಣಗೊಂಡಿರಬೇಕು. ಸಾಮಾನ್ಯ ವರ್ಗದವರಿಗೆ ಗರಿಷ್ಠ 35 ವರ್ಷಗಳು, 2ಎ, 2ಬಿ, 3ಎ, 3ಬಿ ಗಳಿಗೆ 38 ವರ್ಷಗಳು, ಎಸ್‌ಸಿ, ಎಸ್‌ಟಿ, ಪ್ರವರ್ಗ-1 ದವರಿಗೆ 40 ಹಾಗೂ ಮಾಜಿ ಸೈನಿಕರಿಗೆ 45 ವರ್ಷದವರೆಗೆ ಮಿತಿ ಇದೆ. **ಅರ್ಜಿ ಶುಲ್ಕ:** ಸಾಮಾನ್ಯ ವರ್ಗ, 2ಎ, 2ಬಿ, 3ಎ, 3ಬಿ ವರ್ಗದವರಿಗೆ ₹700 ಮತ್ತು ಎಸ್‌ಸಿ, ಎಸ್‌ಟಿ, ಪ್ರವರ್ಗ-1, ಮಾಜಿ ಸೈನಿಕ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ₹500. ಫೋನ್ ಪೇ, ಗೂಗಲ್ ಪೇ ಅಂಥ ಯುಪಿಐ ಮೂಲಕ ಪಾವತಿಸಬಹುದು.

ಪರೀಕ್ಷಾ ವಿಧಾನ			
ಪೇಪರ್	ವಿಷಯ	ಅಂಕಗಳು	ಅವಧಿ
ಪೇಪರ್ 1	ಪಿಯುಸಿ ಮಟ್ಟದ ಸಾಮಾನ್ಯ ಜ್ಞಾನ	100	2 ಗಂಟೆ
ಪೇಪರ್ 2	ಸಾಮಾನ್ಯ ಕನ್ನಡ (ಬಿ) ಸಾಮಾನ್ಯ ಇಂಗ್ಲೀಷ್ (ಸಿ) ಕಂಪ್ಯೂಟರ್ ಜ್ಞಾನ	100	2 ಗಂಟೆ

ಕಂಡಕ್ಟರ್ ಲೈಸನ್ಸ್ ಪಡೆಯುವುದು ಹೇಗೆ?

ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಕಡ್ಡಾಯವಾಗಿ 'ಮಾನ್ಯತೆ ಹೊಂದಿರುವ ಮೋಟಾರು ವಾಹನ ನಿರ್ವಾಹಕ ಪರವಾನಗಿ ಮತ್ತು ಬ್ಯಾಡ್ಜ್' ಅನ್ನು ಅಭ್ಯರ್ಥಿಗಳು ಹೊಂದಿರಬೇಕು. ಇದನ್ನು ಸಂಕ್ಷಿಪ್ತವಾಗಿ ಕಂಡಕ್ಟರ್ ಲೈಸನ್ಸ್ ಎನ್ನುವರು. ಇದನ್ನು ಪೂರಕ ದಾಖಲೆಗಳನ್ನು ಒದಗಿಸಿ ನಿಮ್ಮ ಸನಿಹದ ಆರ್‌ಟಿಒ ಕಚೇರಿಯಲ್ಲಿ ಪಡೆಯಬಹುದು.

ನೇಮಕಾತಿ ಪ್ರಕ್ರಿಯೆ ಹೇಗೆ ನಡೆಯಲಿದೆ?

ಕಂಡಕ್ಟರ್ ಹುದ್ದೆಗಳಿಗೆ ನೇಮಕಾತಿ ಎರಡು ಹಂತಗಳಲ್ಲಿ ನಡೆಯಲಿದೆ. ಮೊದಲಿಗೆ ಬಹುಆಯ್ಕೆ ಮಾದರಿಯ 'ಸಾಮಾನ್ಯ ಸಾಮರ್ಥ್ಯ ಪರೀಕ್ಷೆ' (ಆಪ್ಟಿಟ್ಯೂಡ್ ಟೆಸ್ಟ್) ಇರಲಿದೆ. ಇದು ತಲಾ 100 ಅಂಕಗಳಿಗೆ ಎರಡು ಪತ್ರಿಕೆಗಳನ್ನು ಒಳಗೊಂಡಿರುತ್ತದೆ. ನಾಲ್ಕು ತಪ್ಪು ಉತ್ತರಗಳಿಗೆ ಒಂದು ಅಂಕ ಕಳೆಯಲಾಗುತ್ತದೆ. ಹಾಗಾಗಿ ಸ್ಪರ್ಧಾಳುಗಳು ಸರಿಯಾಗಿ ಯೋಚಿಸಿ ಉತ್ತರಿಸಬೇಕು. ಮುಂದಿನ ಹಂತಕ್ಕೆ ಹೋಗಬೇಕಾದರೆ ಇದರಲ್ಲಿ ಕನಿಷ್ಠ ಶೇ 30 ರಷ್ಟು ಅಂಕಗಳನ್ನು ಪಡೆಯುವುದು ಕಡ್ಡಾಯ. ಆಪ್ಟಿಟ್ಯೂಡ್ ಟೆಸ್ಟ್‌ನಲ್ಲಿ ಗಳಿಸಿದ ಶೇ 75 ರಷ್ಟು ಅಂಕಗಳೊಡನೆ ಪಿಯುಸಿಯಲ್ಲಿ ಗಳಿಸಿರುವ (ಸಂಬಂಧಿತ ಕೋರ್ಸ್) ಅಂಕಗಳ ಶೇ 25 ಅಂಕಗಳೊಡನೆ ಮೆರಿಟ್ ಪಟ್ಟಿ ಪ್ರಕಟಿಸಲಾಗುತ್ತದೆ.

ದೇಹದಾರ್ಢ್ಯ ಪರೀಕ್ಷೆ ಮತ್ತು ದಾಖಲೆಗಳ ತಪಾಸಣೆ: ಮೆರಿಟ್ ಪಟ್ಟಿಯ ಅನ್ವಯ 1:5ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ದೇಹದಾರ್ಢ್ಯ ಪರೀಕ್ಷೆ ಮತ್ತು ದಾಖಲೆಗಳ ತಪಾಸಣೆಗೆ ಕರೆಯಲಾಗುತ್ತದೆ. ಇದು ಎರಡನೇ ಹಾಗೂ ಕೊನೆಯ ಹಂತ. ದೇಹದಾರ್ಢ್ಯ ಪರೀಕ್ಷೆಯಲ್ಲಿ ಪುರುಷ ಅಭ್ಯರ್ಥಿಗಳು ಕನಿಷ್ಠ 160 ಸೆಂಟಿ ಮೀಟರ್ ಹಾಗೂ ಮಹಿಳಾ ಅಭ್ಯರ್ಥಿಗಳು 150 ಸೆಂಟಿ ಮೀಟರ್ ಎತ್ತರವಿರಬೇಕು. ಈ ಹಂತವನ್ನು ಯಶಸ್ವಿಯಾಗಿ ಪೂರೈಸಿದವರು ಮೆರಿಟ್ ಅನ್ವಯ ಹಾಗೂ ಮೀಸಲಾತಿ ಅನ್ವಯ ಹುದ್ದೆಗಳಿಗೆ ನೇಮಕವಾಗುತ್ತಾರೆ. ಬಿಎಂಟಿಸಿ ಕಂಡಕ್ಟರ್ ಹುದ್ದೆಗಳಿಗೆ ಸಂದರ್ಶನ ಇರುವುದಿಲ್ಲ. ಆಯ್ಕೆಯಾದವರು ಒಂದು ವರ್ಷ ಮಾಸಿಕ ₹9,100 ಜೊತೆ ಸಂಸ್ಥೆಯಲ್ಲಿ ಟ್ರೈನಿಯಾಗಿ ಕೆಲಸ ಮಾಡಬೇಕು. ಟ್ರೈನಿಯನ್ನು ಯಶಸ್ವಿಗೊಳಿಸಿದವರು ಎರಡು ವರ್ಷ ಮಾಸಿಕ ₹25,300 ಜೊತೆ ಪ್ರೊಬೇಷನರಿ ಅವಧಿ ಮುಗಿಸಬೇಕು. ಆ ನಂತರ ಅವರು ಬಿಎಂಟಿಸಿಯ ನೌಕರರಾಗಿ ಕೆಲಸ ಮಾಡುತ್ತಾರೆ.

9,144 ಟೆಕ್ನಿಷಿಯನ್ ಹುದ್ದೆಗಳಿಗೆ ಅರ್ಜಿ ಆಹ್ವಾನ

ರೈಲ್ವೆ ಇಲಾಖೆಯಲ್ಲಿ ಒಟ್ಟು 9,144 ಟೆಕ್ನಿಷಿಯನ್ ಹುದ್ದೆಗಳ ಭರ್ತಿಗೆ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದೆ. ಏಪ್ರಿಲ್ 8 ಅರ್ಜಿ ಸಲ್ಲಿಸಲು ಕಡೆಯ ದಿನ. ಈ ಕುರಿತು ರೈಲ್ವೆ ಇಲಾಖೆ ಅಧಿಸೂಚನೆ ಹೊರಡಿಸಿದೆ.

'ಟೆಕ್ನಿಷಿಯನ್ ಗ್ರೇಡ್-1' (ಸಿಗ್ನಲ್) 1092 ಹಾಗೂ 'ಟೆಕ್ನಿಷಿಯನ್ ಗ್ರೇಡ್-3' 8052 ಹುದ್ದೆಗಳಿದ್ದು ಅರ್ಹ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು, ಲಿಂಗತ್ವ ಅಲ್ಪಸಂಖ್ಯಾತರು ಅರ್ಜಿ ಸಲ್ಲಿಸಬಹುದು.

ಟೆಕ್ನಿಷಿಯನ್ ಗ್ರೇಡ್-1 ಹುದ್ದೆಗಳಿಗೆ ವಯೋಮಿತಿ ಕನಿಷ್ಠ 18ರಿಂದ 36, ಟೆಕ್ನಿಷಿಯನ್ ಗ್ರೇಡ್-3 ಹುದ್ದೆಗಳಿಗೆ ವಯೋಮಿತಿ ಕನಿಷ್ಠ 18ರಿಂದ 33 ಇದೆ. ಮೀಸಲು ವರ್ಗಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ಇದೆ. ಅರ್ಜಿ ಶುಲ್ಕ ಸಾಮಾನ್ಯ ಅಭ್ಯರ್ಥಿಗಳಿಗೆ ₹500, ಎಸ್,ಸಿ/ ಎಸ್‌ಟಿ, ಇತರೆ ವರ್ಗದವರಿಗೆ ₹250.

ಟೆಕ್ನಿಷಿಯನ್ ಗ್ರೇಡ್-1 ಹುದ್ದೆಗಳಿಗೆ ನಿಗದಿತ ವಿಷಯದೊಂದಿಗೆ ಬಿ.ಎಸ್ಸಿ ಅಥವಾ ಮೂರು ವರ್ಷದ ಡಿಪ್ಲೊಮಾ ಇನ್ ಎಂಜಿನಿಯರಿಂಗ್ ಅಥವಾ ನಿಗದಿತ ವಿಷಯದಲ್ಲಿ ಎಂಜನಿಯರಿಂಗ್ ಪದವಿ ಹೊಂದಿರಬೇಕು.

ಟೆಕ್ನಿಷಿಯನ್ ಗ್ರೇಡ್-3 (ಬ್ಲ್ಯಾಕ್‌ಸ್ಮಿತ್, ಬ್ರಿಡ್ಜ್, ಕ್ಯಾರೇಜ್ ಆ್ಯಂಡ್ ವ್ಯಾಗನ್, ಕ್ರೇನ್ ಡ್ರೈವರ್, ಎಲೆಕ್ಟ್ರಿಷಿಯನ್) ಹುದ್ದೆಗಳಿಗೆ ಎಸ್ಸೆಸ್ಸೆಲ್ಸಿ ಜೊತೆಗೆ ನಿಗದಿತ ವಿಷಯಗಳೊಂದಿಗೆ ಐಟಿಐ ಪಾಸಾಗಿರಬೇಕು. ಕೋರ್ಸ್‌ನ ಫಲಿತಾಂಶಕ್ಕಾಗಿ ಕಾಯುತ್ತಿರುವವರು ಅರ್ಜಿ ಸಲ್ಲಿಸಲು ಅರ್ಹರಲ್ಲ.

ನೇಮಕಾತಿ ಪ್ರಕ್ರಿಯೆಯು ಮೂರು ಹಂತಗಳಲ್ಲಿ ನಡೆಯಲಿದೆ. ಮೊದಲಿಗೆ ಕಂಪ್ಯೂಟರ್ ಆಧಾರಿತ ಪರೀಕ್ಷೆ (ಸಿಬಿಟಿ), ನಂತರ ದಾಖಲೆಗಳ ತಪಾಸಣೆ ಹಾಗೂ ಕೊನೆಯದಾಗಿ ಮೆಡಿಕಲ್ ಟೆಸ್ಟ್ ಇರಲಿದೆ. ರೈಲ್ವೆ ನೇಮಕಾತಿ ಮಂಡಳಿಗಳಿಂದ ಈ ನೇಮಕಾತಿ ಪ್ರಕ್ರಿಯೆ ನಡೆಯಲಿದೆ. ಆಯಾ ರಾಜ್ಯಗಳ ಅಭ್ಯರ್ಥಿಗಳು ಸಂಬಂಧಿಸಿದ ರೈಲ್ವೆ ನೇಮಕಾತಿ ಮಂಡಳಿಯ ವೆಬ್‌ಸೈಟಿಗೆ ಹೋಗಿ (ಬೆಂಗಳೂರು-www.rrbbnc.gov.in) ಹುದ್ದೆಗಳ ವರ್ಗೀಕರಣ, ಪರೀಕ್ಷೆ ವಿಧಾನ, ಪರೀಕ್ಷೆ ಪಠ್ಯಕ್ರಮ, ಅರ್ಜಿ ಸಲ್ಲಿಕೆಗಾಗಿ ಹಾಗೂ ಇತರೆ ಹೆಚ್ಚಿನ ಮಾಹಿತಿಗಳಿಗಾಗಿ ವಿವರವಾದ ಅಧಿಸೂಚನೆ (ಸಿಇಎನ್) ನೋಡಿಕೊಂಡು ಅರ್ಜಿ ಸಲ್ಲಿಸಬೇಕು.

ಬ್ಯಾಟರಿ ವಿನಿಮಯ ನೀತಿ


ಯು.ಟಿ.ಆಯಿಶ ಫರ್ಝಾನ

2070ರ ವೇಳೆಗೆ ಶೂನ್ಯ ಹೊರಸೂಸುವಿಕೆಯ ಗುರಿ ಸಾಧಿಸಲು ಪಳೆಯುಳಿಕೆಯೇತರ ಇಂಧನಗಳ ಬಳಕೆ ಅವಶ್ಯಕ. ಈ ನಿಟ್ಟಿನಲ್ಲಿ ವಿದ್ಯುತ್ ಚಾಲಿತ ವಾಹನಗಳ ಬಳಕೆಯನ್ನು ಮತ್ತಷ್ಟು ಗ್ರಾಹಕಸ್ನೇಹಿಯಾಗಿಸಲು ಕೇಂದ್ರಸರಕಾರವು ಬ್ಯಾಟರಿ ವಿನಿಮಯ ಹೊಸ ನೀತಿ ತಂದಿದೆ.

ಏನಿದು ಹೊಸ ನೀತಿ?

ಈ ಬ್ಯಾಟರಿ ವಿನಿಮಯ ನೀತಿಯ ಉಪಕ್ರಮವು ಫೆಬ್ರುವರಿ 2022ರಲ್ಲಿ ನೀತಿ (NITI) ಆಯೋಗದಲ್ಲಿ ನಡೆದ ಚರ್ಚೆಯ ಫಲಶ್ರುತಿಯಾಗಿದ್ದು, ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳಿಗೆ ಬ್ಯಾಟರಿ ವಿನಿಮಯ ವ್ಯವಸ್ಥೆಯನ್ನು ಅಳವಡಿಸುವ ಮೂಲಕ ಭಾರತದಲ್ಲಿ ವಿದ್ಯುತ್ ಚಾಲಿತ ವಾಹನಗಳ (ಇವಿ) ಕಡೆಗೆ ಜನರ ಒಲವು ಹೆಚ್ಚಿಸುವ ಗುರಿಯನ್ನು ಹೊಂದಿದೆ.

- **ಬ್ಯಾಟರಿ ವಿನಿಮಯ ಅಥವಾ ಬ್ಯಾಟರಿ ಸ್ವಾಪಿಂಗ್ ಎಂದರೇನು? ಮತ್ತು ಅದು ಸಾಂಪ್ರದಾಯಿಕವಾದ ಇವಿ ಬ್ಯಾಟರಿ ಚಾರ್ಜ್ ಮಾಡುವುದಕ್ಕಿಂತ ಹೇಗೆ ಭಿನ್ನ?**
ಬ್ಯಾಟರಿ ವಿನಿಮಯವು ಸಾಂಪ್ರದಾಯಿಕ ಇವಿ ಬ್ಯಾಟರಿ ಚಾರ್ಜ್ ಮಾಡುವ ಪದ್ಧತಿಗಿಂತ ಹೆಚ್ಚು ಅನುಕೂಲಕರವಾಗಿದ್ದು ಶಕ್ತಿ ಮುಗಿದಿರುವ ಅಂದರೆ, ಡಿಸ್ಚಾರ್ಜ್ ಆಗಿರುವ ಬ್ಯಾಟರಿಯನ್ನು ಕೊಟ್ಟು ಚಾರ್ಜ್ ಆಗಿರುವ ಬ್ಯಾಟರಿಯನ್ನು ಪಡೆದುಕೊಳ್ಳುವುದೇ ಈ ವ್ಯವಸ್ಥೆಯ ಪ್ರಧಾನಅಂಶ.
- **ಈ ಹೊಸ ವ್ಯವಸ್ಥೆಯಿಂದ ಯಾವೆಲ್ಲಾ ವಾಹನಗಳು ಅನುಕೂಲ ಪಡೆಯಲಿವೆ?**
ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳಂತಹ ಚಿಕ್ಕ ಬ್ಯಾಟರಿ ಹೊಂದಿರುವ ವಾಹನಗಳು ಈ ಪದ್ಧತಿಯಿಂದ ಲಾಭ ಪಡೆಯುವ ನಿರೀಕ್ಷೆಯಿದೆ. ಯಾಕೆಂದರೆ ಈ ಬ್ಯಾಟರಿಗಳು ಹೆಚ್ಚು ದಕ್ಷವಾಗಿದ್ದು, ಅನುಕೂಲಕರವಾಗಿದೆ.
- **ಭಾರತದಲ್ಲಿ ಬ್ಯಾಟರಿ ವಿನಿಮಯ ಪದ್ಧತಿ ಮತ್ತು ವ್ಯವಸ್ಥೆಗೆ ಉತ್ತೇಜನ ನೀಡಲು ನೀತಿ ಆಯೋಗವು ಯಾವೆಲ್ಲಾ ಕ್ರಮಗಳನ್ನು ಕೈಗೊಂಡಿದೆ ?**
ನೀತಿ ಆಯೋಗವು ಈಗಿರುವ 'ಫೇಮ್' (FAME-Faster Adoption and Manufacturing of Hybrid and Electric Vehicles) ಅಂದರೆ, ಹೈಬ್ರಿಡ್ ಮತ್ತು ವಿದ್ಯುತ್ ಚಾಲಿತ ವಾಹನಗಳ ತ್ವರಿತ ಹೊಂದಾಣಿಕೆ ಮತ್ತು ಉತ್ಪಾದನೆಗೆ ಸಂಬಂಧಿಸಿದ ಉಪಕ್ರಮ ಹಾಗೂ ಪಿಎಲ್‌ಐ (Production-Linked Incentive) ಅಂದರೆ, ಉತ್ಪಾದನೆ ಆಧರಿತ ಉತ್ತೇಜಕದಂಥ ಉಪಕ್ರಮಗಳನ್ನು ಒಳಗೊಂಡಿರುವ ಹೊಸ ರೂಪುರೇಷೆಗಳ ಚೌಕಟ್ಟನ್ನು ರೂಪಿಸಿದೆ.
- **ಯಾವೆಲ್ಲಾ ಹೆಚ್ಚಿನ ಅನುಕೂಲತೆಗಳು ಇವೆ ?**
ಭಾರತದಲ್ಲಿ ಬ್ಯಾಟರಿ ವಿನಿಮಯ ಕೇಂದ್ರಗಳ (battery swapping stations) ವಿಸ್ತರಣೆಯಿಂದ ಸಾಂಪ್ರದಾಯಿಕ ಚಾರ್ಜಿಂಗ್ ಪದ್ಧತಿಗೆ ಹೋಲಿಸಿದಾಗ ಅನೇಕ ಲಾಭಗಳಿವೆ. ಇದು ಸಮಯದ ಉಳಿತಾಯ ಮತ್ತು ಸ್ಥಳಾವಕಾಶವನ್ನು ಕಡಿಮೆ ಮಾಡುತ್ತದೆ, ಅಗ್ಗವೂ ಆಗಿದೆ. 'ಸೇವೆಯಾಗಿ ಬ್ಯಾಟರಿ' (Battery As a Service) ಮುಂತಾದ ಪರಿಕಲ್ಪನೆಯೊಂದಿಗೆ ವಿನೂತನ ಉದ್ಯೋಗಶೀಲತೆಗೂ ಇದು ಉತ್ತೇಜನ ನೀಡುತ್ತದೆ. ಹೆಚ್ಚುವರಿಯಾಗಿ ದೂರದ ಪ್ರಯಾಣದ ಸಂದರ್ಭದಲ್ಲಿ ದಾರಿಯ ಮಧ್ಯೆ ಬ್ಯಾಟರಿ ಮುಗಿಯುವ ಆತಂಕವನ್ನು ದೂರಮಾಡುತ್ತದೆ. ಮಾತ್ರವಲ್ಲ, ವಿದ್ಯುತ್ ಚಾಲಿತ ವಾಣಿಜ್ಯ ವ್ಯವಹಾರಗಳ ವಾಹನಗಳು ಮತ್ತು ಗುಂಪು ವಾಹನಗಳಿಗೆ (pool) ಹೆಚ್ಚು ಕಾರ್ಯಸಾಧುವಾದ ಮತ್ತು ವಾಸ್ತವಿಕವಾದ ಬದಲಿ ವ್ಯವಸ್ಥೆಯನ್ನು ಒದಗಿಸುತ್ತದೆ.
ಸರಳವಾಗಿಹೇಳಬೇಕೆಂದರೆ, ನೀವು ಬ್ಯಾಟರಿ ಚಾರ್ಜ್ ಮಾಡಲು ಕಾಯಬೇಕೆಂದಿಲ್ಲ ಮತ್ತು ಯಾವಾಗ ಚಾರ್ಜ್ ಮುಗಿಯುತ್ತದೆ ಎಂದು ಆತಂಕದಿಂದ ಪ್ರಯಾಣಿಸಬೇಕೆಂದಿಲ್ಲ. ಪೆಟ್ರೋಲ್ ಪಂಪಿಗೆ ಹೋಗುವಂತೆಯೇ ಬ್ಯಾಟರಿ ವಿನಿಮಯ ಕೇಂದ್ರಗಳಿಗೆ ಹೋಗಿ ಚಾರ್ಜ್ ಮುಗಿದ ಬ್ಯಾಟರಿ ನೀಡಿ, ಚಾರ್ಜ್ ಆದ ಬ್ಯಾಟರಿ ಸಿಕ್ಕಿಸಿಕೊಂಡು ಬರಬಹುದು. ಇದಕ್ಕೆ ನಿಗದಿತ ಸೇವಾಶುಲ್ಕ ನೀಡಬೇಕು ಅಷ್ಟೇ.
- **ನೀತಿಯ ಮುಖ್ಯ ಗುರಿಗಳೇನು? ಅದು ವಿದ್ಯುತ್ ಚಾಲಿತ ವಾಹನಗಳ ಉದ್ಯಮ ಮತ್ತು ಬಳಕೆಯನ್ನು ಹೇಗೆ ಪ್ರೋತ್ಸಾಹಿಸುತ್ತದೆ?**
ಭಾರತದಲ್ಲಿ ಬ್ಯಾಟರಿ ವಿನಿಮಯ ನೀತಿಯು ಬ್ಯಾಟರಿ ಚಾರ್ಜ್ ಮಾಡುವ ಹಳೆಯ ಪದ್ಧತಿಯಲ್ಲಿ ಇರುವ ಆರಂಭಿಕ ವೆಚ್ಚಗಳು, ತಗಲುವ ಸಮಯ, ಚಾರ್ಜ್ ಮಾಡಲು ಬೇಕಾದ ಜಾಗ, ಪ್ರಯಾಣದ ವೇಳೆಯ ಆತಂಕಗಳು ಇತ್ಯಾದಿ ಆತಂಕಗಳನ್ನು ಕಡಿಮೆ ಮಾಡಬಲ್ಲ ವಿವಿಧ ತಂತ್ರಜ್ಞಾನಗಳು ಮತ್ತು ಹೊಸ ವ್ಯವಹಾರದ ಮಾದರಿಗಳ ಆನ್ವೇಷಣೆಗೆ ಉತ್ತೇಜನ ನೀಡುವ ಗುರಿಯನ್ನು ಹೊಂದಿದೆ. ದೇಶದಲ್ಲಿ ವಿದ್ಯುತ್ ಚಾಲಿತ ವಾಹನಗಳ ಬೆಳವಣಿಗೆಯಲ್ಲಿ ಇದು ನಿರ್ಣಾಯಕ ಪಾತ್ರ ವಹಿಸಲಿದೆ.
ಬ್ಯಾಟರಿ ವಿನಿಮಯ ನೀತಿ ಮತ್ತು ಬ್ಯಾಟರಿ ವಿನಿಮಯ ಕೇಂದ್ರಗಳ ಬಗ್ಗೆ ಸರಕಾರದ ಧೋರಣೆಯು ಹೆಚ್ಚಿನ ಚರ್ಚೆಗಳಿಗೆ ಒಳಗಾಗುತ್ತಿದ್ದು, ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್ (ಬಿಐಎಸ್- BIS- ಇದು ಗುಣಮಟ್ಟಗಳ ISI ಮಾನದಂಡಕ್ಕೆ ಬದಲಿ) ಅಂದರೆ ಭಾರತೀಯ ಗುಣಮಟ್ಟಗಳ ನಿರ್ಧಾರಕ ಸಂಸ್ಥೆ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಮತ್ತು ಉಳಿದ ಹಿತಾಸಕ್ತಿದಾರರು ಈ ಬಗ್ಗೆ ಹೆಚ್ಚಿನ ಚರ್ಚೆಯನ್ನು ನಡೆಸುತ್ತಿದ್ದಾರೆ. ❖



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

In the poem 'I am the, land' the speaker is patient, yet assertive. Substantiate in your own words.

Ans:- (…..Contd)

The farmer ploughs the land and grow the plants, trees crops, etc., The children would come and dance on the earth. Someone comes and sings, The soldiers come with guns and put the fence it makes the earth to suffocate. The earth felt it very bad though she is suffocated but she patiently waits. Though the mother earth suffers a lot, she can patiently tolerate and challenged the man that he cannot put a fence around the planet earth. Earth as a whole planet is very big and the man cannot put a fence and it is impossible for him. She can wait because she is the land (mother).

Write an essay on any one of the following:

a) Population explosion in cities.

Population explosions can have negative impacts on the area's growth and can lead to resource scarcity. They can also harm nature.

The main cause of population explosion of our country is the result of prevailing high birth rate and large decline in the death rate due to the advancement of science and technology especially in medical field.

Now-a-days the cities are main attraction for the employment. Many Industries, Offices, many public sectors, Banks, Hospitals, IT-BT Companies etc., are located in cities.Hence the cities are flooded with people. Day by day the people coming to cities has increased. Once they came and settle here, their families also join them and settle along with them.

In cities the people get all the facilities and resources very easily attracting a lot of peole towards it. This occurs on yearly basis and hence becoming the spur of population explosion.

Some effects of population explosions include:

As populations increase, people need more space to live, which can lead to deforestation. This can leads to the extinction of species and other resources.

Rising populations can lead to unemployment and underemployment. It can also lead to the exploitation of natural resources and excessive wastage of water.It leads to global warming.

Rapid urbanization can lead to urban overcrowding and poor urban planning. This can create problems such as slums, traffic congestion, and the lack of access to basic amenities.

b) Mobile Phones

Often Mobile Phone is also called "cellular phone". It is a device mainly used for a voice call. Presently technological advancements have made our life easy.

In today's era, there are only a hand full of people that do not have a mobile or are not using mobile phones. Nowadays, mobile's have become a priority in everyone's life, and every person uses it in their daily life for communication, business purposes, and for other activities.

In today's world, it is difficult to get going on with your life without using a mobile phone.

Advantages of mobile phones

Mobile phones have changed the way of communication. Before mobiles, landlines or letters were used for communicating with a people who lives far from us.

Mobile phone is not limited to communication, it has various other benefits and limitations too. Mostly people are aware with the advantages of mobile phones.

The benefits of mobile phones are discussed as follows -

Easy Communication

The main benefit of using the mobile phone is that they make the mode of communication easier and cheap. Because of the lower price, mobile is affordable and has been a revolution in the telecom industry where approximately 95% of people use mobile phones for communication.

Mobile made communication easier, as just by pressing some keys on mobile, we can contact our friends, family members or colleagues, and others at any time. It also gives us a facility to contact our fellow person with voice calls, video calls, text messages, recorded calls, and many more.

Education

It is another major advantage of mobile phones. Mobile phones can be used to acquire knowledge or information on various topics. For convenience; nowadays, most colleges, institutions, and schools are offering online education with the proper study material that can be in the form of images, photos, text, pdf, etc. During the corona pandemic, we have seen that the students have taken online classes provided by their respective institutions to ensure the safety and health of students.

Social media:-

In today's era, mobile phones are not only used for calling purposes. Smartphones are said to be a gift for social media lovers. Social media apps like Twitter, Instagram, snap chat, Facebook, etc., are at our fingertips at any time. We can edit and share our pictures and posts on social media directly from our mobile phones. Mobile gives us the facility to access social media at all times.

Most people use their mobile phones to scroll through their timeline of social media platforms in their free time.

Promoting business:-

Mobile phones can be used for promoting a business. They are the best tools for entrepreneurs or businessmen to promote their business via online or offline sources. In online sources, one can use social media websites and messaging applications such as telegram, Instagram, WhatsApp, *(Contd)*

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CET PHYSICS

10. A car moves from A to B with a speed of 30 kmph and from B to A with a speed of 20 kmph. What is the average speed of the car?

(a) 50 kmph (b) 25 kmph
(c) 10 kmph (d) 24 kmph

Soln: (d): let S be distance between A and B.

Let t_1 be time taken by the car to move from A to B with speed v_1 and

t_2 be time taken by the car to move from B to A with speed v_2. Then

$$t_1 = \frac{S}{v_1} \text{ and } t_2 = \frac{S}{v_2}$$

Average speed of the car

$$v_{av} = \frac{\text{Total distance travelled}}{\text{Total time taken}} = \frac{2S}{t_1 + t_2}$$

$$= \frac{2S}{\frac{S}{v_1} + \frac{S}{v_2}} = \frac{2v_1v_2}{v_1 + v_2}$$

Here, $v_1 = 30$ kmph, $v_2 = 20$ kmph

$$\therefore v_{av} = \frac{2 \times 30 \times 20}{30 + 20} = 24 \text{ kmph}$$

11. The output of a step-down transformer is measured to be 24 V when connected to a 12 watt light bulb. The value of the peak current is

a) $1\sqrt{2}$ A b) $\sqrt{2}$ A
c) 2 A d) $2\sqrt{2}$ A

Ans:-a

12. One requires 11 eV of energy to dissociate a carbon monoxide molecule into carbon and oxygen atoms. The minimum frequency of the appropriate electromagnetic radiation to achieve the dissociation lies in.

a) visible region b) infrared region
c) ultraviolet region d) microwave region

Ans:C

13. A linearly polarised electromagnetic wave given as $E = E_0 \hat{i} \cos(kz - \omega t)$ **is incident normally on a perfectly reflecting infinite wall at z= a. Assuming that the material of the wall is optically inactive, the reflected wave will be given as-**

a) $E_r = -E_0 \hat{i} \cos(kz - \omega t)$
b) $E_r = E_0 \hat{i} \cos(kz + \omega t)$
c) $E_r = -E_0 \hat{i} \cos(kz + \omega t)$
d) $E_r = E_0 \hat{i} \sin(kz - \omega t)$

Ans :b

14. Light with an energy flux of 20 W/cm^2 falls on a non-reflecting surface at normal incidence. If the surface has an area of 30 cm^2. The total momentum delivered (for complete absorption) during 30 minutes is

a) 36×10^{-5} kg m/s b) 36×10^{-4} kg m/s
c) 108×10^{4} kg m/s d) 1.08×10^{7} kg m/s

Ans:- b

15. A body starts from rest and moves with constant acceleration for t s. It travels a distance x_1 in first half time and x_2 in next half of time, then

(a) $x_2 = 3x_1$ (b) $x_2 = x_1$
(c) $x_2 = 4x_1$ (d) $x_2 = 2x_1$

Soln: (a): As the body starts from rest,

$\therefore u = 0$

Let a be constant acceleration of the body.

Distance travelled by the body in(t /2)s is

$$x_1 = \frac{1}{2}a\left(\frac{t}{2}\right)^2 = \frac{1}{8}at^2 \text{ ....(i)}$$

Distance travelled by the body in t s is

$$x_1 + x_2 = \frac{1}{2}at^2 = 4x_1 \qquad (\text{Using (i)})$$

$$\therefore x_2 = 4x_1 - x_1 = 3x_1$$

16. A person is driving a vehicle at uniform speed of 5 m s^{-1} on a level curved track of radius 5m. The coefficient of static friction between tyres and road is 0.1. Will the person slip while taking the turn with the same speed? (Take g = 10 m s^{-2}.)

Choose the correct statement.

(a) A person will slip if $v^2 < 5$ m s^{-1}.
(b) A person will slip if $v^2 = 5$ m s^{-1}.
(c) A person will slip if $v^2 > 10$ m s^{-1}.
(d) A person will slip if $v^2 > 5$ m^2 s^{-2}.

Soln: (d): the person will not slip if

$$V^2 \leq \mu_s Rg$$

Here, $\mu_s = 0.1$, $R = 5$ m, $g = 10$ m s^{-2}

$\mu_s Rg = 0.1 \times 5\text{m} \times 10\text{m s}^{-2}$

Or $v^2 \leq 5$ m^2 s^{-2}

Therefore the person will slip if $v^2 > 5$m^2 s^{-2}.

17. The electric field intensity produced by the radiations coming from 100 W bulb at a 3 m distance is E. The electric field intensity produced by the radiations coming from 50 W bulb at the same distance is……………

(Contd)

22,217 'ಚುನಾವಣಾ ಬಾಂಡ್' ಖರೀದಿ

ಎರಡನೇ ಮುಖಪುಟದಿಂದ...



2019ರ ಏಪ್ರಿಲ್ 1ರಿಂದ 2019ರ ಏಪ್ರಿಲ್ 11ರವರೆಗೆ ಒಟ್ಟು 3,346 ಚುನಾವಣಾ ಬಾಂಡ್‌ಗಳನ್ನು ಖರೀದಿಸಲಾಗಿದ್ದು, 1,609 ಅನ್ನು ನಗದೀಕರಿಸಲಾಗಿದೆ. 2019ರ ಏಪ್ರಿಲ್ 12ರಿಂದ ಈ ವರ್ಷದ ಫೆಬ್ರುವರಿ 15ರವರೆಗೆ ಒಟ್ಟು 18,871 ಬಾಂಡ್‌ಗಳನ್ನು ಖರೀದಿಸಲಾಗಿದ್ದು, 20,421 ಅನ್ನು ನಗದೀಕರಿಸಲಾಗಿದೆ ಎಂದು ಅಫಿಡವಿಟ್‌ನಲ್ಲಿ ಮಾಹಿತಿ ನೀಡಲಾಗಿದೆ.

ಈ ಕುರಿತ ಮಾಹಿತಿಯನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಪತ್ರದ ಪ್ರತಿಯನ್ನೂ ಅಫಿಡವಿಟ್‌ನಲ್ಲಿ ಲಗತ್ತಿಸಲಾಗಿದೆ.

15 ದಿನಗಳ ಸಿಂಧುತ್ವದ ಅವಧಿಯೊಳಗೆ ರಾಜಕೀಯ ಪಕ್ಷಗಳು ನಗದೀಕರಿಸಿಕೊಳ್ಳದ ಬಾಂಡ್‌ಗಳ ಮೊತ್ತವನ್ನು, 2018 ಜನವರಿ 2ರ ಅಧಿಸೂಚನೆ ಪ್ರಕಾರ ಪ್ರಧಾನ ಮಂತ್ರಿಯವರ ರಾಷ್ಟ್ರೀಯ ಪರಿಹಾರ ನಿಧಿಗೆ ವರ್ಗಾಯಿಸಲಾಗಿದೆ ಎಂದು ಎಸ್‌ಬಿಐ ಚುನಾವಣಾ ಆಯೋಗಕ್ಕೆ ತಿಳಿಸಿದೆ.

ಚುನಾವಣಾ ಬಾಂಡ್‌ಗಳ ವಿವರಗಳನ್ನು ಮಾರ್ಚ್ 12ರಂದು ಕಚೇರಿ ಅವಧಿಯೊಳಗೆ ಆಯೋಗಕ್ಕೆ ಸಲ್ಲಿಸಬೇಕು ಎಂದು ಸುಪ್ರೀಂ ಕೋರ್ಟ್ ಮಾರ್ಚ್ 11ರಂದು ಎಸ್‌ಬಿಐಗೆ ತಾಕೀತು ಮಾಡಿತ್ತು. ಬ್ಯಾಂಕ್ ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ಹಂಚಿಕೊಂಡ ವಿವರಗಳನ್ನು ಮಾರ್ಚ್ 15ರ ಸಂಜೆ 5 ಗಂಟೆಯೊಳಗೆ ಚುನಾವಣಾ ಆಯೋಗ ಪ್ರಕಟಿಸಬೇಕು ಎಂದು ಸುಪ್ರೀಂ ಕೋರ್ಟ್ ಸೂಚಿಸಿತ್ತು.

'ಗಡುವಿನೊಳಗೆ ಹಂಚಿಕೊಳ್ಳುತ್ತೇವೆ'

ಜಮ್ಮು (ಪಿಟಿಐ): ಚುನಾವಣಾ ಬಾಂಡ್‌ಗಳ ಕುರಿತ ವಿವರಗಳನ್ನು ನಿಗದಿತ ಗಡುವಿನ ಒಳಗೆ ಹಂಚಿಕೊಳ್ಳುವುದಾಗಿ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ತಿಳಿಸಿದರು.

ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿದ್ದ ಅವರು ಸುದ್ದಿಗಾರರ ಜತೆ ಮಾತನಾಡಿ, ಆಯೋಗವು ಸಂಪೂರ್ಣ ಪಾರದರ್ಶಕತೆಯಲ್ಲಿ ನಂಬಿಕೆಯಿಟ್ಟಿದೆ ಎಂದರು.

'ಎಸ್‌ಬಿಐ ಮಾರ್ಚ್ 12ರೊಳಗೆ ದತ್ತಾಂಶ ಸಲ್ಲಿಸಬೇಕಿತ್ತು. ಅದರಂತೆ ಅವರು ಗಡುವಿನೊಳಗೆ ವಿವರಗಳನ್ನು ನಮಗೆ ನೀಡಿದ್ದಾರೆ. ನಾನು ಹಿಂತಿರುಗಿದ ಬಳಿಕ ಅದನ್ನು ಗಮನಿಸಿ, ನಿಗದಿತ ಗಡುವಿನೊಳಗೆ ಬಹಿರಂಗ ಪಡಿಸುತ್ತೇನೆ' ಎಂದು ಅವರು ತಿಳಿಸಿದರು.

'ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಆಯೋಗವು ಮಾಹಿತಿ ಬಹಿರಂಗಪಡಿಸುವಿಕೆಯಲ್ಲಿ ನಂಬಿಕೆ ಹೊಂದಿದೆ' ಎಂದು ಉತ್ತರಿಸಿದರು. ಕೇಂದ್ರಾಡಳಿತ ಪ್ರದೇಶದಲ್ಲಿ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳನ್ನು ನಡೆಸಲು ಆಯೋಗ ಸಿದ್ಧವಾಗಿದೆ ಎಂದು ಅವರು ಪ್ರತಿಕ್ರಿಯಿಸಿದರು.

'ಪ್ರಧಾನಿಗೆ ಭಯ ಯಾಕೆ?'

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್‌ಗಳ ಮೂಲಕ ಯಾವ ಪಕ್ಷಗಳು ಎಷ್ಟು ದೇಣಿಗೆ ಪಡೆದಿವೆ ಎಂಬ ಮಾಹಿತಿಯನ್ನು ಬಹಿರಂಗಪಡಿಸುವುದನ್ನು ವಿಳಂಬ ಮಾಡಲು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮೂಲಕ ಕೇಂದ್ರ ಸರ್ಕಾರವು ಸತತವಾಗಿ ಪ್ರಯತ್ನಿಸುತ್ತಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಬುಧವಾರ ದೂರಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇಷ್ಟು ಭಯ ಯಾಕೆ ಎಂದು ಎಕ್ಸ್ ಮಾಧ್ಯಮದಲ್ಲಿ ಪ್ರಶ್ನಿಸಿದ್ದಾರೆ.

ಸಾರಿಗೆ ಸಿಬ್ಬಂದಿ ಕಣ್ಣಿನ ಆರೈಕೆಗೆ 'ಆಶಾಕಿರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಸಾರಿಗೆ ಸಿಬ್ಬಂದಿಯ ಕಣ್ಣಿನ ಹಾರೈಕೆಗಾಗಿ 'ಸಾರಿಗೆ ಆಶಾಕಿರಣ' ಯೋಜನೆ ಜಾರಿಗೊಳಿಸಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ವಿಧಾನಸೌಧದಲ್ಲಿ ಬುಧವಾರ ರಾಜ್ಯ ಸರ್ಕಾರದ ಸಮಗ್ರ ನೇತ್ರ ಆರೈಕೆ-ಆಶಾಕಿರಣ ಯೋಜನೆ ಬಲಿಷ್ಠಗೊಳಿಸಲು 'ಸಿ-ಕ್ಯಾಂಪ್' ಹಾಗೂ 'ಆ್ಯಕ್ಟ್ ಫಾರ್ ಹೆಲ್ತ್' ಸಂಸ್ಥೆಯ ಜತೆ ಒಪ್ಪಂದ ಮಾಡಿಕೊಂಡ ನಂತರ ಅವರು ಮಾತನಾಡಿದರು.

ಸಿಬ್ಬಂದಿಯ ಕಣ್ಣಿನ ಆರೋಗ್ಯದ ಮೇಲೆ ನಿಗಾ ಇಡಲಾಗುತ್ತದೆ. ನಿರಂತರ ತಪಾಸಣೆಗಳ ಮೂಲಕ ಕಣ್ಣಿನ ಸಮಸ್ಯೆ ಪತ್ತೆ ಹಚ್ಚಲಾಗುತ್ತದೆ. ಬಸ್ ಡಿಪೊಗಳಿಗೆ ತೆರಳಿ ತಪಾಸಣೆ ನಡೆಸಿ, ಅಗತ್ಯವಿದ್ದವರಿಗೆ ಶಸ್ತ್ರಚಿಕಿತ್ಸೆ, ಉಚಿತ ಕನ್ನಡ ನೀಡಲಾಗುತ್ತದೆ. ಸಾರಿಗೆ ಸಿಬ್ಬಂದಿಯ ಕಣ್ಣಿನ ಆರೋಗ್ಯ ಉತ್ತಮವಾಗಿದ್ದರೆ ಬಸ್‌ಗಳಲ್ಲಿ ನಿತ್ಯ ಪ್ರಯಾಣಿಸುವ 1.10 ಕೋಟಿ ಪ್ರಯಾಣಿಕರ ಸುರಕ್ಷತೆಯನ್ನೂ ಖಾತ್ರಿಗೊಳಿಸಬಹುದು ಎಂದರು.

ಬಿಜೆಪಿ ಟಿಕೆಟ್ ಘೋಷಣೆ: ವಂಚಿತರಿಗೆ ಅತೃಪ್ತಿ

ಲೋಕಸಭಾ ಚುನಾವಣೆಯ ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಬಿಜೆಪಿ ಬಿಡುಗಡೆ ಮಾಡುವ ಮುನ್ನ ಮತ್ತು ನಂತರ ಟಿಕೆಟ್ ಆಕಾಂಕ್ಷಿಗಳು ಮತ್ತು ಅವರ ಬೆಂಬಲಿಗರ ಆಕ್ರೋಶ ವ್ಯಕ್ತವಾಗಿದೆ. ಮುಖಂಡರು ಅಸಮಾಧಾನ ವ್ಯಕ್ತಪಡಿಸಿದರೆ, ಬೆಂಬಲಿಗರು ಪ್ರತಿಭಟನೆ ನಡೆಸಿ ತಮ್ಮ ಪಕ್ಷದ ನಾಯಕರ ವಿರುದ್ಧವೇ ಕಿಡಿಕಾರಿದ್ದಾರೆ. ಹಾಲಿ ಸಂಸದ ಡಿ.ವಿ. ಸದಾನಂದಗೌಡ ರಾಜಕೀಯಕ್ಕೆ ವಿದಾಯ ಹೇಳುವ ರೀತಿಯ ಮಾತುಗಳನ್ನಾಡಿದ್ದಾರೆ. ಹಾವೇರಿ ಕ್ಷೇತ್ರದಲ್ಲಿ ತಮ್ಮ ಪುತ್ರನಿಗೆ ಟಿಕೆಟ್ ಸಿಗದ ಬಗ್ಗೆ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಬೇಸರ ಹೊರಹಾಕಿದ್ದಾರೆ

ಸದಾನಂದಗೌಡ ವಿದಾಯ


ಸದಾನಂದಗೌಡ

ಬೆಂಗಳೂರು: ಹತ್ತು ವರ್ಷ ಕೆಲಸ ಮಾಡಲು ಅವಕಾಶ ಕೊಟ್ಟ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಜನರಿಗೆ ಧನ್ಯವಾದ ಹೇಳುವ ಮೂಲಕ, ಹಾಲಿ ಸಂಸದ ಡಿ.ವಿ. ಸದಾನಂದಗೌಡ ಅವರು ವಿದಾಯದ ಮಾತುಗಳನ್ನು ಆಡಿದ್ದಾರೆ.

ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಹೊರಬೀಳುವ ಮೊದಲೇ 'ಎಕ್ಸ್'ನಲ್ಲಿ ತಮ್ಮ ಅಭಿಪ್ರಾಯ ಹಂಚಿಕೊಂಡ ಸದಾನಂದಗೌಡ ಅವರು, ಟಿಕೆಟ್ ಕೈತಪ್ಪುವುದನ್ನು ಖಚಿತಪಡಿಸಿದ್ದರು.

'ಕ್ಷೇತ್ರದ ಲೋಕಸಭಾ ಸದಸ್ಯನಾಗಿ, ನಿಮ್ಮ ಕೆಲಸ ಮಾಡುವ ಅವಕಾಶ ಮಾಡಿಕೊಟ್ಟು ಆಶೀರ್ವಾದ ಮಾಡಿದ್ದೀರಿ. ನಾನು ಶಕ್ತಿಮೀರಿ ನಿಮ್ಮ ಸೇವೆ ಮಾಡುವ ಪ್ರಯತ್ನ ಮಾಡಿದ್ದೇನೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಜೊತೆ ಏಳು ವರ್ಷ ಸಚಿವನಾಗಿ ಕೆಲಸ ಮಾಡುವ ಅವಕಾಶವನ್ನು ನೀವು ಕೊಟ್ಟಿದ್ದೀರಿ. ನಿಮ್ಮ ಜೊತೆಗೆ ಇನ್ನು ಮುಂದೆಯೂ ಇರುತ್ತೇನೆ. ಎಲ್ಲರಿಗೂ ನನ್ನ ಅಂತರಾಳದ ಹೃದಯ ತುಂಬಿದ ಧನ್ಯವಾದಗಳು' ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

ರಾಜ್ಯ ಘಟಕದ ಅಧ್ಯಕ್ಷರಾಗಿ ಕೆಲಸ ಮಾಡಿದವರು.1994ರಿಂದ 2004ರವರೆಗೆ ವಿಧಾನಸಭೆ ಸದಸ್ಯರಾಗಿದ್ದರು. 2004ರಲ್ಲಿ ದಕ್ಷಿಣ ಕನ್ನಡ, 2009ರಲ್ಲಿ ಚಿಕ್ಕಮಗಳೂರು–ಉಡುಪಿ ಕ್ಷೇತ್ರದ ಸಂಸದರೂ ಆಗಿದ್ದರು. 2011 ರಿಂದ 2012 ಅವಧಿಯಲ್ಲಿ ಸುಮಾರು ಒಂದು ವರ್ಷ ಮುಖ್ಯಮಂತ್ರಿಯಾಗಿದ್ದರು. ಬಳಿಕ, ವಿಧಾನಪರಿಷತ್ತಿನ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು. 2014 ಹಾಗೂ 2019ರಲ್ಲಿ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಪ್ರಧಾನಿ ನರೇಂದ್ರಮೋದಿ ಸರ್ಕಾರದಲ್ಲಿ ಕಾನೂನು, ರಾಸಾಯನಿಕ ಮತ್ತು ರಸಗೊಬ್ಬರ ಸಚಿವರಾಗಿಯೂ ಕೆಲಸ ಮಾಡಿದ್ದರು.

ಸಿದ್ದೇಶ್ವರ ವಿರುದ್ಧ ರೇಣುಕಾಚಾರ್ಯ ಬಂಡಾಯ


ಎಂ.ಪಿ. ರೇಣುಕಾಚಾರ್ಯ

ಬೆಂಗಳೂರು: ಹಾಲಿ ಸಂಸದ ಜಿ.ಎಂ.ಸಿದ್ದೇಶ್ವರ ಅಥವಾ ಅವರ ಕುಟುಂಬದ ಸದಸ್ಯರಿಗೆ ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ನೀಡುವುದನ್ನು ಅವರದೇ ಪಕ್ಷದ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಆಕ್ಷೇಪ ಎತ್ತಿದ್ದಾರೆ.

ಬಿಜೆಪಿಯ ಅಭ್ಯರ್ಥಿ ಪಟ್ಟಿ ಬಿಡುಗಡೆಗೆ ಮುನ್ನ ಪಕ್ಷದ ರಾಜ್ಯ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ವಿರೋಧ ಲೆಕ್ಕಿಸದೇ ಒಂದು ವೇಳೆ ಟಿಕೆಟ್ ನೀಡಿದರೆ ಬಂಡಾಯ ಎದುರಿಸಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನೂ ನೀಡಿದರು. ಅಭ್ಯರ್ಥಿ ಹೆಸರು ಘೋಷಣೆ ಯಾದ ಬಳಿಕ, ಅವರು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ; ಲಭ್ಯರೂ ಆಗಲಿಲ್ಲ. 'ಸಿದ್ದೇಶ್ವರ ಅವರಿಗೆ ಬಿಜೆಪಿ ಟಿಕೆಟ್ ನೀಡಲು ಕ್ಷೇತ್ರದ ಕಾರ್ಯಕರ್ತರು, ಮುಖಂಡರ ವಿರೋಧವಿದೆ. ಅವರಿಗೆ ಟಿಕೆಟ್ ನೀಡಿದರೆ ಬಂಡಾಯ ಎದುರಿಸಬೇಕಾಗುತ್ತದೆ. ಜಿಲ್ಲೆಯ ಜನರ ಅಪೇಕ್ಷೆಯಂತೆ ನನಗೆ ಇಲ್ಲವೇ, ಜಗಳೂರು ಮಾಜಿ ಶಾಸಕ ಗುರುಸಿದ್ದನಗೌಡ ಅವರ ಪುತ್ರ ಡಾ.ರವಿಕುಮಾರ್ ಅವರಿಗೆ ಟಿಕೆಟ್ ನೀಡಬೇಕು' ಎಂದು ಒತ್ತಾಯಿಸಿದರು.

'ಸಿದ್ದೇಶ್ವರ ಅವರ ತಂದೆ ಮಲ್ಲಿಕಾರ್ಜುನಪ್ಪ ಸಜ್ಜನ ರಾಜಕಾರಣಿ, ಅಜಾತಶತ್ರು. ಎರಡು ಬಾರಿ ಸಂಸದರಾಗಿದ್ದರು. ನಾಲ್ಕು ಬಾರಿ ಆಯ್ಕೆಯಾಗಿರುವ ಈಗಿನ ಸಂಸದರಿಗೆ ಅಹಂಕಾರ ನೆತ್ತಿಗೇರಿದೆ. ಕಾಂಗ್ರೆಸ್‌ನ ಶಾಮನೂರು ಕುಟುಂಬದ ಮುಂದೆ ಸ್ಪರ್ಧಿಸುವ ಗಂಡಸರು ಬಿಜೆಪಿಯಲ್ಲಿ ಯಾರಿದ್ದಾರೆ ಎಂದು ಪ್ರಶ್ನಿಸುವ ಮೂಲಕ ಪಕ್ಷವನ್ನೇ ಗೌಣ ಮಾಡಿದ್ದಾರೆ' ಎಂದು ದೂರಿದರು.

'ತಮಗೆ ಟಿಕೆಟ್ ಸಿಗದಿದ್ದರೂ, ಪತ್ನಿ, ಸಹೋದರ, ಪುತ್ರನಿಗೆ ಟಿಕೆಟ್ ನೀಡಲು ಪಟ್ಟು ಹಿಡಿದಿದ್ದಾರೆ. ಅವರ ಕುಟುಂಬದ ಸದಸ್ಯರು ಒಮ್ಮೆಯೂ ಪಕ್ಷದ ಬಾವುಟ ಹಿಡಿದಿಲ್ಲ. ಘೋಷಣೆ ಕೂಗಿಲ್ಲ. ಅಂಥವರಿಗೆ ಟಿಕೆಟ್ ನೀಡಲು ಹೇಗೆ ಸಾಧ್ಯ? ವೈದ್ಯರ ಮಕ್ಕಳು ವೈದ್ಯರಾಗಲು ಅವರ ಅಪ್ಪನ ಅರ್ಹತೆ ಸಾಕೇ? ಮಕ್ಕಳು ವೈದ್ಯಕೀಯ ಶಿಕ್ಷಣ ಪಡೆಯಬೇಕಲ್ಲವೇ' ಎಂದು ಪ್ರಶ್ನಿಸಿದರು.

'ನನಗೆ ಟಿಕೆಟ್ ನೀಡಬೇಕು ಎನ್ನುವುದು ಇಡೀ ಜಿಲ್ಲೆಯ ಪಕ್ಷದ ಮುಖಂಡರು, ಕಾರ್ಯಕರ್ತರ ಒತ್ತಾಯ. ನನಗೆ ಜಾತಿ ಇಲ್ಲದೆ ಇರಬಹುದು, ಅವರಿಗಿಂತ ಹೆಚ್ಚಿನ ನೀತಿ ಇದೆ. ಜನರ ಪ್ರೀತಿ ಇದೆ. ಜಾತ್ಯತೀತವಾಗಿ ಜನರು ಬೆಂಬಲಿಸುತ್ತಾರೆ' ಎಂದರು.

'ಹಿಂದೆ ಜಿಲ್ಲೆಯ 7 ಸ್ಥಾನಗಳಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಿದ್ದೆ ಎನ್ನುವ ಸಿದ್ದೇಶ್ವರ ಅವರನ್ನೇ 2023ರ ವಿಧಾನಸಭಾ ಚುನಾವಣೆಯ ಸೋಲಿಗೂ ಹೊಣೆ ಮಾಡಬೇಕು. ಪ್ರಧಾನಿ ನರೇಂದ್ರ ಮೋದಿ ಅವರು ಮೂರನೇ ಬಾರಿ ದೇಶದ ಪ್ರಧಾನಿಯಾಗಬೇಕು ಎನ್ನುವುದು ಎಲ್ಲರ ಇಚ್ಛೆ. ಮೋದಿ ಅವರ ಅಪೇಕ್ಷೆಯಂತೆ ಜಿಲ್ಲೆಯ ಕುಟುಂಬ ರಾಜಕಾರಣಕ್ಕೂ ಇತಿಶ್ರೀ ಹಾಡಬೇಕು' ಎಂದು ಒತ್ತಾಯಿಸಿದರು.

ಬಿಎಸ್‌ವೈ ವಿರುದ್ಧ ಈಶ್ವರಪ್ಪ ಆಕ್ರೋಶ


ಕೆ.ಎಸ್. ಈಶ್ವರಪ್ಪ

ಶಿವಮೊಗ್ಗ: 'ಶೋಭಾ ಕರಂದ್ಲಾಜೆಗೆ ಹಠ ಹಿಡಿದು ಟಿಕೆಟ್ ಕೊಡಿಸಿದ ಯಡಿಯೂರಪ್ಪ, ನನ್ನ ಪುತ್ರ ಕಾಂತೇಶಗೆ ಹಾವೇರಿ ಕ್ಷೇತ್ರದಿಂದ ಟಿಕೆಟ್ ಕೊಡಿಸಲಿಲ್ಲ. ಬೇಡ ಎಂದರೂ ಬಸವರಾಜ ಬೊಮ್ಮಾಯಿ ಅವರಿಗೆ ಟಿಕೆಟ್ ಕೊಡಲಾಗಿದೆ' ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಮಾತನಾಡಿದ ಅವರು, 'ಶೋಭಾ ಅವರು ದೆಹಲಿಗೆ ಹೋಗಿ ಟಿಕೆಟ್ ಕೇಳಲಿಲ್ಲ. ಯಡಿಯೂರಪ್ಪ ಅವರೇ ಹೈಕಮಾಂಡ್ ಜೊತೆ ಮಾತನಾಡಿ ಟಿಕೆಟ್ ಕೊಡಿಸಿದ್ದಾರೆ' ಎಂದು ದೂರಿದರು.

'ಹಿಂದುತ್ವದ ಪರ ಹಾಗೂ ಸಂಘನಿಷ್ಠ ಬಿಜೆಪಿ ಮುಖಂಡರನ್ನು ಯಡಿಯೂರಪ್ಪ ಬದಿಗೆ ಸರಿಸುವ ಕೆಲಸ ಮಾಡಿದ್ದಾರೆ. ಅದಕ್ಕೆ ನಾನು, ನಳಿನ್ ಕುಮಾರ್ ಕಟೀಲ್, ಪ್ರತಾಪ ಸಿಂಹ, ಸಿ.ಟಿ. ರವಿ, ಡಿ.ವಿ. ಸದಾನಂದಗೌಡ, ಬಸನಗೌಡ ಪಾಟೀಲ ಯತ್ನಾಳ ಸಾಕ್ಷಿ' ಎಂದು ವಾಗ್ದಾಳಿ ನಡೆಸಿದರು. ' ಪಕ್ಷದ ನಿಷ್ಠಾವಂತ ಕಾರ್ಯಕರ್ತರನ್ನು ಕಡೆಗಣಿಸುತ್ತಿದ್ದಾರೆ. ಯಡಿಯೂರಪ್ಪ ವೈಯಕ್ತಿಕ ಹಿತಾಸಕ್ತಿಯಿಂದ ತಾಯಿಯ ಕತ್ತು ಹಿಸುಕುತ್ತಿದ್ದಾರೆ. ಪಕ್ಷ ಉಳಿಸಬೇಕಿದೆ. ಹೀಗಾಗಿ ಅದರ ವಿರುದ್ಧ ನಾನು ಧ್ವನಿ ಎತ್ತಲಿದ್ದೇನೆ' ಎಂದರು.

'ಕಾಂತೇಶ್‌ಗೆ ಪದವೀಧರ ಕ್ಷೇತ್ರದ ಟಿಕೆಟ್ ಕೊಡಿಸುತ್ತೇವೆ ಎಂದು ಕರ್ನಾಟಕ ಚುನಾವಣೆ ಉಸ್ತುವಾರಿ ರಾಧಾಮೋಹನ್ ಹೇಳಿದ್ದಾರೆ. ನಾವು ಇನ್ನೂ ಆ ಬಗ್ಗೆ ಯಾವುದೇ ತೀರ್ಮಾನ ಕೈಗೊಂಡಿಲ್ಲ. ನಾನು ಸದಾ ಮೋದಿ ಪರವಾಗಿಯೇ ಇರುತ್ತೇನೆ. ಪಕ್ಷೇತರನಾಗಿ ಸ್ಪರ್ಧೆ ಮಾಡಿದರೂ ನನ್ನ ಬೆಂಬಲ ಅವರಿಗೇ ಇರಲಿದೆ' ಎಂದು ತಿಳಿಸುವ ಮೂಲಕ ಬಂಡಾಯದ ಮುನ್ಸೂಚನೆ ನೀಡಿದರು. 'ಶಿವಮೊಗ್ಗ ಕ್ಷೇತ್ರದಿಂದ ಸ್ವತಂತ್ರವಾಗಿ ಸ್ಪರ್ಧಿಸುವಂತೆ ಬೆಂಬಲಿಗರು ಒತ್ತಾಯಿಸುತ್ತಿದ್ದಾರೆ. ಆ ಬಗ್ಗೆ ಹಿತೈಷಿಗಳ ಸಲಹೆ ಪಡೆದು ನಿರ್ಧಾರ ಕೈಗೊಳ್ಳುವೆ. ಬೆಂಬಲಿಗರು ಶುಕ್ರವಾರ ಈ ಸಂಬಂಧ ಸಭೆ ಆಯೋಜಿಸಿದ್ದಾರೆ' ಎಂದು ಅವರು ಬೆಳಿಗ್ಗೆ ತಿಳಿಸಿದ್ದರು.

ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಲ್ಲ: ಪ್ರತಾಪ ಸಿಂಹ

ಮೈಸೂರು: 'ಬಿಜೆಪಿ ಟಿಕೆಟ್ ಸಿಕ್ಕಿಲ್ಲ, ಆದರೂ ಬಂಡಾಯ ಅಥವಾ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಿಲ್ಲ' ಎಂದು ಮೈಸೂರು–ಕೊಡಗು ಕ್ಷೇತ್ರದ ಸಂಸದ ಪ್ರತಾಪ ಸಿಂಹ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ರಾಜವಂಶಸ್ಥ ಅಥವಾ ಯಾರೇ ಅಭ್ಯರ್ಥಿಯಾದರೂ ಗೆಲ್ಲಿಸುವುದು ನನ್ನ ಜವಾಬ್ದಾರಿ. ಪಕ್ಷದಿಂದ ಟಿಕೆಟ್ ದೊರೆಯದಿದ್ದರೆ ಬೇಸರವೇನಿಲ್ಲ. ಪ್ರಾಣ ಇರುವವರೆಗೂ ನಾನು ಮೋದಿ ಭಕ್ತ. ಅವರಿಲ್ಲದಿದ್ದರೆ ನಾನು ಶೂನ್ಯ. ಬಿಜೆಪಿ ಕಾರ್ಯಕರ್ತನಾಗಿಯೇ ಸಾಯುತ್ತೇನೆ' ಎಂದರು.

'ಬಿ.ಎಸ್. ಯಡಿಯೂರಪ್ಪ ರಾಜ್ಯದಲ್ಲಿ ಪ್ರಶ್ನಾತೀತ ನಾಯಕರು. ನನ್ನ ಟಿಕೆಟ್ ವಿಚಾರದಲ್ಲಿ ಅವರನ್ನು ಎಳೆದುತರುವ ಅಗತ್ಯವಿಲ್ಲ. ಅವರು ಪಕ್ಷ ಕಟ್ಟಿ ಬೆಳೆಸದಿದ್ದರೆ ನನ್ನಂಥವರು ಸಂಸದರಾಗಲು ಸಾಧ್ಯವಾಗುತ್ತಿರಲಿಲ್ಲ' ಎಂದು ಹೇಳಿದರು. 'ಹೆಸರು ಕೆಡಿಸಿಕೊಂಡಿದ್ದಕ್ಕೆ ಪ್ರತಾಪಗೆ ಟಿಕೆಟ್ ಕೈತಪ್ಪಿರಬಹುದು' ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿ, 'ಅದು ಅವರ ಹಿರಿತನಕ್ಕೆ ಸೂಕ್ತವಾದ ಹೇಳಿಕೆಯಲ್ಲ. ರಾಜ್ಯದ ಯಾವುದೇ ಕ್ಷೇತ್ರದಲ್ಲಿ ಹಾಲಿ ಸಂಸದರಿಗೆ ಟಿಕೆಟ್ ನೀಡುವಂತೆ ಪ್ರತಿಭಟನೆಗಳು ನಡೆಯುತ್ತಿಲ್ಲ. ಇಲ್ಲಿ ನಡೆದಿದೆ ಎಂದರೆ ನನ್ನ ಕೆಲಸವನ್ನು ಜನ ಮೆಚ್ಚಿದ್ದಾರೆ ಎಂದರ್ಥ. ಹೆಸರು ಕೆಡಿಸಿಕೊಂಡಿದ್ದರಿಂದ ಚಾಮುಂಡೇಶ್ವರಿಯಲ್ಲಿ ಸೋತು ಬಾದಾಮಿಗೆ ಹೋಗಿದ್ರಾ, ಅದೇ ಕಾರಣಕ್ಕೆ ಅಲ್ಲಿಂದ ವಾಪಸಾದರಾ, ಅವರೆಷ್ಟು ಚುನಾವಣೆಯಲ್ಲಿ ಸೋತಿಲ್ಲ?' ಎಂದು ತಿರುಗೇಟು ನೀಡಿದರು.



ಸಂಸದ ಪ್ರತಾಪ ಸಿಂಹ ಪರವಾಗಿ ಅಭಿಮಾನಿಗಳು ಮೈಸೂರಿನ ಹಿನಕಲ್ ಫ್ಲೈಓವರ್ ಬಳಿ ಬುಧವಾರ ಬಲ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

ಪ್ರತಾಪ ಪರ ಬಲ ಪ್ರದರ್ಶನ

ಪ್ರತಾಪ ಸಿಂಹ ಪರವಾಗಿ ಅಭಿಮಾನಿಗಳು ಹಾಗೂ ಜೆಡಿಎಸ್ ಕಾರ್ಯಕರ್ತರು ಹಿನಕಲ್ ಫ್ಲೈಓವರ್ ಬಳಿ ಬುಧವಾರ ಬಲ ಪ್ರದರ್ಶಿಸಿದರು. 'ಮತ್ತೊಮ್ಮೆ ದೇಶಕ್ಕಾಗಿ ಮೋದಿ, ಮೈಸೂರಿಗಾಗಿ ಪ್ರತಾಪ ಸಿಂಹ', 'ಬಡವರ ಮನೆ ಮಕ್ಕಳು ಬೆಳೆಯಬಾರದಾ?', 'ರಾಜಕೀಯದಲ್ಲಿ ಒಳ್ಳೆಯವರಿಗೆ ಬೆಲೆ ಇಲ್ಲವೇ?' ಎಂಬ ಫಲಕಗಳನ್ನು ಹಿಡಿದು ಆಕ್ರೋಶ ವ್ಯಕ್ತಪಡಿಸಿದರು.

'ಗೋ ಬ್ಯಾಕ್ ಶೆಟ್ಟರ್' ಅಭಿಯಾನ




ಜಗದೀಶ ಶೆಟ್ಟರ್ ಹಾಗೂ ಮಹಾಂತೇಶ ಕವಟಗಿಮಠ ಅವರ ಭಾವಚಿತ್ರಗಳನ್ನು 'ಗೋ ಬ್ಯಾಕ್ ಶೆಟ್ಟರ್' ಅಭಿಯಾನಕ್ಕೆ ಬಳಸಲಾಗಿದೆ

ಬೆಳಗಾವಿ: ಜಗದೀಶ ಶೆಟ್ಟರ್ ಅವರಿಗೆ ಬೆಳಗಾವಿ ಲೋಕಸಭೆ ಟಿಕೆಟ್ ಸಿಗಲಿದೆ ಎಂಬ ಸುದ್ದಿ ದಟ್ಟವಾಗಿರುವ ಹಿನ್ನೆಲೆಯಲ್ಲಿ ಟಿಕೆಟ್ ಆಕಾಂಕ್ಷಿ ಯಾಗಿದ್ದ ಮಹಾಂತೇಶ ಕವಟಗಿಮಠ ಬೆಂಬಲಿಗರು ಸಾಮಾಜಿಕ ಜಾಲತಾಣಗಳಲ್ಲಿ 'ಗೋ ಬ್ಯಾಕ್ ಶೆಟ್ಟರ್' ಅಭಿಯಾನ ಆರಂಭಿಸಿದ್ದಾರೆ.

'ಪಕ್ಷದಿಂದ ಪಕ್ಷಕ್ಕೆ ಹಾರುವ ಶೆಟ್ಟರ್ ನಮಗೆ ಬ್ಯಾಡ; ಮಹಾಂತೇಶ ಕವಟಗಿಮಠ ಅವರೇ ನಮ್ಮ ನಾಯಕ ನೋಡ', 'ಸ್ಥಳೀಯ ನಾಯಕರೇ ನಮಗೆ ಹಿತ; ಅವರಿಗೇ ನಮ್ಮ ಮತ' ಮತ್ತು 'ಅಧಿಕಾರಕ್ಕಾಗಿ ಪಕ್ಷ ಬಿಟ್ಟವರಿಗೆ ಕ್ಷೇತ್ರ ಬಿಡುವುದು ದೊಡ್ಡದಲ್ಲ' ಎಂಬ ಅಡಿಬರಹಗಳನ್ನು ಫೇಸ್‌ಬುಕ್, ಇನ್‌ಸ್ಟಾಗ್ರಾಂ ಹಾಗೂ ವಾಟ್ಸ್‌ಆ್ಯಪ್ ಮೂಲಕ ಹರಿಬಿಟ್ಟಿದ್ದಾರೆ. ಶೆಟ್ಟರ್ ಅವರು 'ಹಸ್ತ'ದ ಪೇಂಟಿಂಗ್ ಮಾಡುತ್ತಿರುವ ವ್ಯಂಗ್ಯಚಿತ್ರಗಳನ್ನೂ ಜಾಲತಾಣಗಳಲ್ಲಿ ಹರಿಬಿಡಲಾಗಿದೆ.

ಕರಡಿ ಸಂಗಣ್ಣಗೆ ತಪ್ಪಿದ ಟಿಕೆಟ್ ಕಾರ್ಯಕರ್ತರ ಆಕ್ರೋಶ


ಕರಡಿ ಸಂಗಣ್ಣ

ಕೊಪ್ಪಳ: ಹಾಲಿ ಸಂಸದ ಕರಡಿ ಸಂಗಣ್ಣ ಅವರಿಗೆ ಟಿಕೆಟ್ ತಪ್ಪಿದ್ದಕ್ಕೆ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು. ಸಂಗಣ್ಣ ಅವರ ಮುಂದೆ ಕಣ್ಣೀರಿಟ್ಟರು.

'ಆರೆಸ್ಸೆಸ್ ಕುತಂತ್ರ ಮತ್ತು ಪಕ್ಷದ ಕೆಲ ನಾಯಕರ ಕುಮ್ಮಕ್ಕಿನಿಂದ ಸಂಗಣ್ಣ ಅವರಿಗೆ ಟಿಕೆಟ್ ಕೈ ತಪ್ಪಿದೆ. ಯಾರಿಗೂ ಗೊತ್ತೇ ಇಲ್ಲದ, ಪಕ್ಷಕ್ಕಾಗಿ ದುಡಿಯದ ವ್ಯಕ್ತಿಗೆ ಟಿಕೆಟ್ ನೀಡಿದ್ದು ಸರಿಯಲ್ಲ. ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಅನುಕೂಲ ಮಾಡಿಕೊಡಲೆಂದು ನಮ್ಮವರೇ ಸಂಚು ರೂಪಿಸಿ ದುರ್ಬಲ ಅಭ್ಯರ್ಥಿಗೆ ಟಿಕೆಟ್ ಸಿಗುವಂತೆ ಮಾಡಿದ್ದಾರೆ. ಇದರಲ್ಲಿ ಆರೆಸ್ಸೆಸ್ ನಾಯಕರ ಕೈವಾಡವಿದೆ' ಎಂದು ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಯಕರ್ತರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಸಂಗಣ್ಣ, 'ಪಕ್ಷದ ತೀರ್ಮಾನಕ್ಕೆ ಬದ್ಧನಾಗಿದ್ದೇನೆ. ಹೊಸಬರಿಗೆ ಅವಕಾಶ ಮಾಡಿಕೊಡುವ ಕಾರಣಕ್ಕೆ ಬಸವರಾಜಗೆ ಟಿಕೆಟ್ ಕೊಟ್ಟಿರಬಹುದು. ಪಕ್ಷದ ನಿರ್ಧಾರವನ್ನು ಗೌರವಿಸುತ್ತೇನೆ. ಕಾರ್ಯಕರ್ತರಿಗೆ ಸಾಕಷ್ಟು ನೋವಾಗಿದೆ' ಎಂದು ಭಾವುಕರಾದರು.

ಹೊಸಬರಿಗೆ ಮಣೆ

ಡಾ.ಸಿ.ಎನ್. ಮಂಜುನಾಥ್



ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಬೆಳವಣಿಗೆಗೆ ಶ್ರಮಿಸಿದವರು ಡಾ.ಸಿ.ಎನ್. ಮಂಜುನಾಥ್. ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನವರಾದ ಅವರು, ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರ ಅಳಿಯ. ಶ್ರವಣಬೆಳಗೊಳದ ಶಾಸಕ ಸಿ.ಎನ್. ಬಾಲಕೃಷ್ಣ ಅವರ ಸಹೋದರ. ಹೃದ್ರೋಗ ವಿಜ್ಞಾನದಲ್ಲಿ ಡಿಎಂ ಪದವೀಧರರಾದ ಅವರು, 1988ರಲ್ಲಿ ಜಯದೇವ ಸಂಸ್ಥೆಗೆ ಉಪನ್ಯಾಸಕರಾಗಿ ಸೇರಿಕೊಂಡರು. 2006-07ರಲ್ಲಿ ಸಂಸ್ಥೆಯ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿದ್ದರು. 2024ರ ಜ.31ರಂದು ಅವರ ಅಧಿಕಾರಾವಧಿ ಮುಕ್ತಾಯಗೊಂಡಿತ್ತು. 17 ವರ್ಷಗಳು ಸಂಸ್ಥೆಯ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಅವರ ನೇತೃತ್ವದಲ್ಲಿ ಜಯದೇವ ಸಂಸ್ಥೆಯು ಇಡೀ ದಕ್ಷಿಣ ಏಷ್ಯಾದಲ್ಲಿ ಅತಿ ದೊಡ್ಡ ಹೃದ್ರೋಗ ಸಂಸ್ಥೆಯಾಗಿ ಹೊರಹೊಮ್ಮಿದೆ. ಅವರು ಸಂಸ್ಥೆಯಲ್ಲಿ 'ಚಿಕಿತ್ಸೆ ಮೊದಲು ಹಣ ಪಾವತಿ ನಂತರ', 'ಮಾನವೀಯತೆಗೆ ಮೊದಲ ಆದ್ಯತೆ' ಎಂಬ ಪರಿಕಲ್ಪನೆಯನ್ನು ಜಾರಿಗೆ ತಂದಿದ್ದರು. ಅವರಿಗೆ ಕರ್ನಾಟಕ ಸರ್ಕಾರವು 'ರಾಜ್ಯೋತ್ಸವ ಪ್ರಶಸ್ತಿ', ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ವೈದ್ಯಕೀಯ ಕ್ಷೇತ್ರದಲ್ಲಿನ ಸೇವೆಗೆ ದೇಶದ ಅತ್ಯುನ್ನತ ಪ್ರಶಸ್ತಿಗಳಲ್ಲಿ ಒಂದಾದ 'ಪದ್ಮಶ್ರೀ ಪ್ರಶಸ್ತಿ'ಯು ಸಂದಿದೆ.

ರಾಜಕೀಯದತ್ತ ಯದುವೀರ್ ಮೊದಲ ಹೆಜ್ಜೆ



ಮೈಸೂರು: ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಪಡೆದಿರುವ 32 ವರ್ಷ ವಯಸ್ಸಿನ, ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮೊದಲ ಬಾರಿಗೆ ಚುನಾವಣೆ ಎದುರಿಸುತ್ತಿದ್ದಾರೆ.

ಮಾಜಿ ಸಂಸದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಹಿರಿಯ ಸಹೋದರಿ ಗಾಯತ್ರಿದೇವಿ ಅವರ ಮೊಮ್ಮಗ. 1992ರ ಮಾರ್ಚ್ 24ರಂದು ಸ್ವರೂಪ್ ಆನಂದ್ ಗೋಪಾಲ್‌ರಾಜ್ ಅರಸ್–ತ್ರಿಪುರಸುಂದರಿ ದೇವಿ ದಂಪತಿಯ ಮಗನಾಗಿ ಜನಿಸಿದ ಅವರ ಮೂಲ ಹೆಸರು ಯದುವೀರ್ ಗೋಪಾಲ್‌ರಾಜ್ ಅರಸ್. 23 ವರ್ಷ ವಯಸ್ಸಿನಲ್ಲಿದ್ದಾಗ ಅವರನ್ನು ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪತ್ನಿ ಪ್ರಮೋದಾದೇವಿ ಒಡೆಯರ್ 2015ರ ಫೆ.23ರಂದು ದತ್ತು ಸ್ವೀಕರಿಸಿದ್ದರು. ಅದೇ ವರ್ಷ ಪಟ್ಟಾಭಿಷೇಕವೂ ನಡೆದಿತ್ತು. ನಂತರ ಮರುನಾಮಕರಣವಾಗಿತ್ತು. ಯದುವಂಶದ 27ನೇ ಸಂತತಿಯ ಅರಸರಾದ ಅವರು ಮೈಸೂರು ದಸರಾ ವೇಳೆ ಅರಮನೆಯಲ್ಲಿ 'ಖಾಸಗಿ ದರ್ಬಾರ್' ನಡೆಸುತ್ತಾರೆ.

ಅವರ ಬೆಟ್ಟದಕೋಟೆ ಮನೆತನ ಹಾಗೂ ಮೈಸೂರಿನ ಒಡೆಯರ್ ಮನೆತನದ ಒಡನಾಟಕ್ಕೆ 200 ವರ್ಷಕ್ಕೂ ಮಿಗಿಲಾದ ಇತಿಹಾಸವಿದೆ. ಮಹಾರಾಣಿಯಾಗಿದ್ದ ಲಕ್ಷ್ಮಮ್ಮಣ್ಣಿ ಅವರು ಇದೇ ಮನೆತನದವರು. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಗೆ ರಾಜ್ಯಭಾರ ಮರಳಿ ಲಭಿಸುವಂತೆ ಮಾಡುವಲ್ಲಿ ಅವರ ಪಾತ್ರ ಅವಿಸ್ಮರಣೀಯ. ಮುಮ್ಮಡಿ ಒಡೆಯರ್ ಅವರ ದತ್ತು ಪುತ್ರ 10ನೇ ಚಾಮರಾಜ ಒಡೆಯರ್ (ಲಕ್ಷ್ಮಮ್ಮಣ್ಣಿ ಅವರ ಅಣ್ಣನ ಮಗ) ಅವರೂ ಇದೇ ಮನೆತನದವರು. ಈ ಕಾರಣದಿಂದ ಯದುವೀರ್ ಅವರನ್ನು ರಾಜಮನೆತನದ ಉತ್ತರಾಧಿಕಾರಿಯಾಗಿ ಆಯ್ಕೆ ಮಾಡಿಕೊಳ್ಳಲಾಗಿತ್ತು.

ಯದುವೀರ್ ಬೆಂಗಳೂರಿನ ವಿದ್ಯಾನಿಕೇತನ್ ಶಾಲೆಯಲ್ಲಿ 10ನೇ ತರಗತಿವರೆಗೆ ಓದಿ, ಕೆನಡಿಯನ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ 12ನೇ ತರಗತಿ ಮುಗಿಸಿದ್ದರು. ಅಮೆರಿಕದ ಬೋಸ್ಟನ್ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ– ಇಂಗ್ಲಿಷ್ ಸಂಯೋಜನೆಯಲ್ಲಿ ಬಿಎ ಪದವಿ ಪಡೆದಿದ್ದಾರೆ.

ಹಿಂದಿನ ಮೈಸೂರು ರಾಜ್ಯದ 625 ವರ್ಷಗಳ ಯದುವಂಶದ ಪರಿವಾರದವರು. ಪಟ್ಟಾಭಿಷೇಕದ ನಂತರ, ಯುವಜನರನ್ನು ತಮ್ಮತ್ತ ಸೆಳೆದುಕೊಳ್ಳುವಲ್ಲಿ ಪ್ರಭಾವಶಾಲಿಯಾಗಿ ಹೊರಹೊಮ್ಮಿದ್ದಾರೆ.

ಅವರು ವೀಣೆ ಮತ್ತು ಗಿಟಾರ್ ನುಡಿಸುತ್ತಾರೆ. ವನ್ಯಜೀವಿಗಳ ಸಂರಕ್ಷಣೆಯ ಕಾಳಜಿಯುಳ್ಳ ಅವರು ಆಗಾಗ ಸಫಾರಿಗೂ ಹೋಗುತ್ತಾರೆ. ಕ್ರಿಕೆಟ್, ಓದುವುದು ಮತ್ತು ಬರವಣಿಗೆ ಇತರ ಆಸಕ್ತಿಗಳು. ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುತ್ತಾರೆ. ಅರಸು ಶಿಕ್ಷಣ ಸಂಸ್ಥೆ ಮೂಲಕ ಶಾಲಾ–ಕಾಲೇಜುಗಳನ್ನೂ ನಡೆಸುತ್ತಿದ್ದಾರೆ. ಚಾಮರಾಜ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಕೂಡ ನಡೆಸುತ್ತಿದ್ದಾರೆ.

2016ರ ಜೂನ್ 28ರಂದು ರಾಜಸ್ಥಾನದ ಡುಂಗರಪುರದ ಹರ್ಷವರ್ಧನ್ ಸಿಂಗ್– ಮಹೇಶ್ರಿ ಕುಮಾರಿ ದಂಪತಿಯ ಪುತ್ರಿ ತ್ರಿಷಿಕಾ ಕುಮಾರಿ ಸಿಂಗ್ ಅವರನ್ನು ವಿವಾಹವಾದರು. ಈ ದಂಪತಿಗೆ ಆದ್ಯವೀರ್ ಎಂಬ ಮಗನಿದ್ದಾನೆ.

'ಭೇರುಂಡ ಫೌಂಡೇಶನ್' ಮೂಲಕ ಪರಂಪರೆ, ಸಂಸ್ಕೃತಿ, ಪರಿಸರ, ಉದ್ಯಮ ಮತ್ತು ಸಾಮಾಜಿಕ ಕಲ್ಯಾಣಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಮೈಸೂರು ಮಹಾನಗರಪಾಲಿಕೆಯಿಂದ 2016 ಮತ್ತು 2017ರಲ್ಲಿ ಕೈಗೊಂಡಿದ್ದ ಸ್ವಚ್ಛತಾ ಅಭಿಯಾನದಲ್ಲಿ ತಾಯಿ ಪ್ರಮೋದಾದೇವಿ ಒಡೆಯರ್ ಅವರೊಂದಿಗೆ ರಾಯಭಾರಿಗಳಲ್ಲಿ ಒಬ್ಬರಾಗಿದ್ದರು. 2018ರಲ್ಲಿ ಅವರನ್ನು ಹಳೆಯ ಮೈಸೂರು ಪ್ರದೇಶದ ಪ್ರವಾಸೋದ್ಯಮ ರಾಯಭಾರಿಯನ್ನಾಗಿ ಮಾಡಲಾಗಿತ್ತು.

ದಾವಣಗೆರೆ: ಸಿದ್ದೇಶ್ವರ ಬದಲು ಪತ್ನಿಗೆ ಟಿಕೆಟ್


ಗಾಯತ್ರಿ ಸಿದ್ದೇಶ್ವರ

ದಾವಣಗೆರೆ: ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿಯು ಅಚ್ಚರಿಯ ಅಭ್ಯರ್ಥಿಯನ್ನು ಘೋಷಿಸಿದೆ. ಸಂಸದ ಜಿ.ಎಂ. ಸಿದ್ದೇಶ್ವರ ಅವರ ಪತ್ನಿ ಗಾಯತ್ರಿ ಸಿದ್ದೇಶ್ವರಗೆ ಹೈಕಮಾಂಡ್ ಟಿಕೆಟ್ ನೀಡಿದೆ.

ಶಿವಮೊಗ್ಗ ನಗರದಲ್ಲಿ 1955ರ ಏಪ್ರಿಲ್ 16ರಂದು ಜನಿಸಿರುವ ಗಾಯತ್ರಿ ಸಿದ್ದೇಶ್ವರ, ಪಿಯುಸಿವರೆಗೆ ಓದಿದ್ದಾರೆ. 1976ರಲ್ಲಿ ಜಿ.ಎಂ. ಸಿದ್ದೇಶ್ವರ ಜೊತೆ ವಿವಾಹವಾಗಿದ್ದ ಇವರು ಚುನಾವಣೆ ವೇಳೆ ಮಾವ ಮಲ್ಲಿಕಾರ್ಜುನಪ್ಪ ಹಾಗೂ ಪತಿಯ ಪರವಾಗಿ ಪ್ರಚಾರ ನಡೆಸಿದ್ದು ಬಿಟ್ಟರೆ, ರಾಜಕೀಯದಲ್ಲಿ ಪರಿಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡಿಲ್ಲ.

ಜಿ.ಎಂ.ಹಾಲಮ್ಮ ಚಾರಿಟಬಲ್ ಟ್ರಸ್ಟ್ ಮೂಲಕ ಉದ್ಯೋಗ ಮೇಳ, ಆರೋಗ್ಯ ಶಿಬಿರ ಹಾಗೂ ಮಹಿಳಾ ಸಂಘಗಳಿಗೆ ಸ್ಯಾನಿಟರಿ ಪ್ಯಾಡ್‌ಗಳನ್ನು ವಿತರಿಸುವ ಮೂಲಕ ಸಾಮಾಜಿಕ ಕಾರ್ಯದಲ್ಲಿ ಸಕ್ರಿಯರಾಗಿದ್ದಾರೆ. ಮನೆ ಹಾಗೂ ತೋಟದ ನಿರ್ವಹಣೆಯ ಜವಾಬ್ದಾರಿಯನ್ನು ಇವರು ನೋಡಿಕೊಳ್ಳುತ್ತಿದ್ದರು.

ವಯಸ್ಸಿನ ಕಾರಣ ಈ ಬಾರಿ ಸಿದ್ದೇಶ್ವರ ಅವರಿಗೆ ಟಿಕೆಟ್ ಕೈತಪ್ಪಲಿದೆ ಎಂದು ಹೇಳಲಾಗಿತ್ತು. ನನಗೆ ಟಿಕೆಟ್ ಸಿಗದಿದ್ದರೂ ಕುಟುಂಬದ ಯಾರಿಗಾದರೂ ಟಿಕೆಟ್ ತರುತ್ತೇನೆ ಎಂದು ಸಿದ್ದೇಶ್ವರ ಪದೇ ಪದೇ ಹೇಳುತ್ತಿದ್ದರು. ಅವರ ಪುತ್ರ ಜಿ.ಎಸ್. ಅನಿತ್‌ಕುಮಾರ್ ಆಗಾಗ್ಗೆ ಸಭೆ ಸಮಾರಂಭಗಳಲ್ಲಿ ಕಾಣಿಸಿಕೊಳ್ಳುತ್ತಿದ್ದುದರಿಂದ ಅವರು ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿಯಬಹುದೆಂಬ ನಿರೀಕ್ಷೆ ಗರಿಗೆದರಿತ್ತು. ಕೊನೆ ಕ್ಷಣದಲ್ಲಿ ಸಿದ್ದೇಶ್ವರ ಅವರ ಸಹೋದರ ಜಿ.ಎಂ. ಲಿಂಗರಾಜು ಅವರ ಹೆಸರೂ ಮುನ್ನೆಲೆಗೆ ಬಂದಿತ್ತು. ಆದರೆ ಹೈಕಮಾಂಡ್ ಗಾಯತ್ರಿ ಅವರಿಗೆ ಟಿಕೆಟ್ ಘೋಷಿಸಿ ಎಲ್ಲಾ ಊಹಾಪೋಹಗಳಿಗೆ ತೆರೆ ಎಳೆದಿದೆ.

'ಅವಕಾಶ ನೀಡಿದರೆ ಲೋಕಸಭಾ ಚುನಾವಣೆಗೆ ಸ್ಪರ್ಧಿಸುತ್ತೇನೆ. ದೇಶ ಸೇವೆಯ ಅವಕಾಶ ಸಿಕ್ಕರೆ, ಯಾರು ಬೇಡವೆನ್ನುತ್ತಾರೆ. ಪತಿ ಜಿ.ಎಂ.ಸಿದ್ದೇಶ್ವರ ಅವರಿಗೆ ಅಪಾರ ಅನುಭವ ಇದೆ. ಅವರ ಮಾರ್ಗದರ್ಶನದಲ್ಲಿ ಕೆಲಸ ನಿರ್ವಹಿಸುತ್ತೇನೆ' ಎಂದು ಮಂಗಳವಾರ ಗಾಯತ್ರಿ ಅವರು ಹೇಳಿಕೆ ನೀಡಿ ಅಚ್ಚರಿ ಮೂಡಿಸಿದ್ದರು.

'ಮಾಧ್ಯಮಗಳಲ್ಲಿ ನೋಡಿದ ಮೇಲೆಯೇ ಟಿಕೆಟ್ ಸಿಕ್ಕಿರುವ ವಿಚಾರ ಗೊತ್ತಾಯಿತು. ನಾಲ್ಕು ಸಲ ಸಂಸದರಾಗಿರುವ ಪತಿ ಜೊತೆಗಿದ್ದಾರೆ. ನನಗೆ ಯಾರೂ ರಾಜಕಾರಣ ಹೇಳಿಕೊಡುವುದು ಬೇಡ. ಪತಿ ಹಾಕಿಕೊಟ್ಟ ದಾರಿಯಲ್ಲೇ ನಡೆಯುತ್ತೇನೆ. ಮನೆ, ತೋಟದ ಜವಾಬ್ದಾರಿಯನ್ನೂ ನಿಭಾಯಿಸುತ್ತೇನೆ' ಎಂದು ಗಾಯತ್ರಿ ಸಿದ್ದೇಶ್ವರ 'ಪ್ರಜಾವಾಣಿ'ಗೆ ತಿಳಿಸಿದರು.

ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಅವರು ಬಿಜೆಪಿ ಟಿಕೆಟ್ ಪಡೆಯಲು ದೆಹಲಿಮಟ್ಟದಲ್ಲಿ ಲಾಬಿ ನಡೆಸಿದರೂ ಹೈಕಮಾಂಡ್ ಅವರಿಗೆ ಮಣೆ ಹಾಕಿಲ್ಲ.

ಚಾಮರಾಜನಗರ: ಬಾಲರಾಜ್ ಬಿಜೆಪಿಯ ಹೊಸ ಮುಖ



ಚಾಮರಾಜನಗರ: ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಲ್ಲಿ ಕೊಳ್ಳೇಗಾಲದ ಮಾಜಿ ಶಾಸಕ ಎಸ್.ಬಾಲರಾಜ್ ಅವರಿಗೆ ಬಿಜೆಪಿ ಟಿಕೆಟ್ ನೀಡಿದೆ.

2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಕೈತಪ್ಪಿದ ನಂತರ, ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹಾಗೂ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಪ್ರಯತ್ನದಿಂದಾಗಿ ಬಿಜೆಪಿ ಸೇರಿದ್ದರು. ಬಳಿಕ ಬಿಜೆಪಿ ಅಭ್ಯರ್ಥಿ ಎನ್.ಮಹೇಶ್ ಪರವಾಗಿ ಕೆಲಸ ಮಾಡಿದ್ದರು.

59 ವರ್ಷ ವಯಸ್ಸಿನ ಅವರು ಕೇಂದ್ರದ ಮಾಜಿ ಸಚಿವ ರಾಜಶೇಖರ ಮೂರ್ತಿಯವರ ಶಿಷ್ಯರು. ರಾಜಕೀಯ ಜೀವನ 1994ರಲ್ಲಿ ಕಾಂಗ್ರೆಸ್‌ನಿಂದ ಆರಂಭವಾಯಿತು. 1999ರಿಂದ ಚುನಾವಣಾ ರಾಜಕೀಯದಲ್ಲಿದ್ದಾರೆ. ಲೋಕಸಭೆಗೆ ಸ್ಪರ್ಧಿಸುತ್ತಿರುವುದು ಇದೇ ಮೊದಲು.

ಕೊಳ್ಳೇಗಾಲ ಕ್ಷೇತ್ರದಿಂದ 1999ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಸೋತಿದ್ದರು. 2004ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಗೆದ್ದಿದ್ದರು. 2008ರ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸೋತಿದ್ದರು. 2009ರ ಉಪಚುನಾವಣೆಯಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿ ಸೋತಿದ್ದರು. 2013ರಲ್ಲಿ ಯಡಿಯೂರಪ್ಪ ನೇತೃತ್ವದ ಕೆಜೆಪಿಯಿಂದ ಸ್ಪರ್ಧಿಸಿ ಸೋಲುಂಡಿದ್ದರು. ಕೆಜೆಪಿಯು ಬಿಜೆಪಿಯೊಂದಿಗೆ ವಿಲೀನಗೊಂಡ ನಂತರ ಕಾಂಗ್ರೆಸ್ ಸೇರಿದ್ದರು.

ಮಾಜಿ ಸಂಸದ ದಿವಂಗತ ಆರ್.ಧ್ರುವನಾರಾಯಣ ಅವರ ಆಪ್ತರಾಗಿದ್ದ ಬಾಲರಾಜ್, 2023ರ ವಿಧಾನಸಭಾ ಚುನಾವಣೆವರೆಗೂ ಕಾಂಗ್ರೆಸ್‌ನಲ್ಲಿದ್ದರು.

ಎಸ್.ಸಂಜೀವಯ್ಯ– ಲಕ್ಷ್ಮಮ್ಮ ದಂಪತಿಯ ನಾಲ್ವರು ಮಕ್ಕಳ ಪೈಕಿ ಕೊನೆಯ ಮಗನಾಗಿ 1965ರಲ್ಲಿ ಯಳಂದೂರು ತಾಲ್ಲೂಕಿನ ಮದ್ದೂರಿನಲ್ಲಿ ಜನಿಸಿದ ಅವರು ಎಂಜಿನಿಯರಿಂಗ್ ಪದವೀಧರರು. ಪತ್ನಿ ಹಾಗೂ ಇಬ್ಬರು ಪುತ್ರರಿದ್ದಾರೆ.

ಸಂಸದ ಸಂಗಣ್ಣ ಬದಲು ವೈದ್ಯ ಬಸವರಾಜಗೆ ಬಿಜೆಪಿ ಟಿಕೆಟ್

ಪ್ರಜಾವಾಣಿ ವಾರ್ತೆ



ಕೊಪ್ಪಳ: ಇಲ್ಲಿನ ಲೋಕಸಭಾ ಕ್ಷೇತ್ರದಿಂದ ಸತತ ಎರಡು ಬಾರಿ ಬಿಜೆಪಿಯಿಂದ ಸಂಸದರಾಗಿರುವ ಸಂಗಣ್ಣ ಕರಡಿ ಅವರಿಗೆ ಈ ಬಾರಿ ಟಿಕೆಟ್ ಲಭಿಸಿಲ್ಲ. ಅವರ ಬದಲು ವೃತ್ತಿಯಲ್ಲಿ ವೈದ್ಯರಾಗಿರುವ ಡಾ.ಬಸವರಾಜ ಕ್ಯಾವಟರ ಅವರಿಗೆ ಅವಕಾಶ ನೀಡಲಾಗಿದೆ.

ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯರೂ ಆದ ಬಸವರಾಜ ಪಕ್ಷದ ಕಾರ್ಯಕ್ರಮಗಳಲ್ಲಿ ನಿರಂತರವಾಗಿ ಪಾಲ್ಗೊಂಡಿದ್ದು ಕಡಿಮೆಯಾದರೂ ಹೈಕಮಾಂಡ್ ಅವರಿಗೆ ಮೊದಲ ಬಾರಿಗೆ ಮಣೆ ಹಾಕಿದೆ. ಕಳೆದ ಲೋಕಸಭಾ ಚುನಾವಣೆ ವೇಳೆಯೂ ಬಿಜೆಪಿಯಿಂದ ಬಸವರಾಜ ಅವರ ಹೆಸರು ಕೇಳಿಬಂದಿತ್ತು.

ಜಿಲ್ಲೆಯ ಕುಷ್ಟಗಿ ವಿಧಾನಸಭಾ ಕ್ಷೇತ್ರದಿಂದ 1994ರಲ್ಲಿ ಜೆಡಿಎಸ್‌ನಿಂದ ಗೆದ್ದು ಶಾಸಕರಾಗಿದ್ದ ಕೆ. ಶರಣಪ್ಪ ಅವರ ಪುತ್ರ ಬಸವರಾಜ ಅವರಿಗೆ ನೇರವಾಗಿ ರಾಜಕೀಯ ನಂಟು ಇದ್ದಿದ್ದು ಇತ್ತೀಚೆಗಿನ ವರ್ಷಗಳಲ್ಲಿ ಮಾತ್ರ. ಶರಣಪ್ಪ ಒಂದು ಸಲ ಶಾಸಕರಾಗಿ ಬಳಿಕ ಮೂರು ಬಾರಿ ಸ್ಪರ್ಧಿಸಿ ವಿಧಾನಸಭಾ ಚುನಾವಣೆಗಳಲ್ಲಿ ಸೋಲು ಕಂಡಿದ್ದರು. ಹಿಂದಿನ ಲೋಕಸಭಾ ಚುನಾವಣೆ ವೇಳೆ ಶರಣಪ್ಪ ಜೆಡಿಎಸ್ ತೊರೆದು ಬಿಜೆಪಿ ಸೇರಿದ್ದರು. ಆಗ ಬಸವರಾಜ ಕೂಡ ಅಪ್ಪನ ಹಾದಿಯಲ್ಲಿ ಸಾಗಿದ್ದರು.

ತಂದೆಯ ರಾಜಕೀಯ ನೆರಳಿನಲ್ಲಿ ಸಾಗಿದ್ದ ಬಸವರಾಜ ನೇರವಾಗಿ ರಾಜಕೀಯದಲ್ಲಿ ಪಾಲ್ಗೊಂಡಿದ್ದು ಈಚಿನ ವರ್ಷಗಳಲ್ಲಿ ಮಾತ್ರ. ಆದರೆ, ಎಲ್ಲ ಪಕ್ಷಗಳ ಮುಖಂಡರ ಜೊತೆಗೆ ಉತ್ತಮ ಬಾಂಧವ್ಯ ಹೊಂದಿದ್ದರು. ತಂದೆಯ ಪ್ರಭಾವದಿಂದ ಮಗನ ವರ್ಚಸ್ಸು ಕೂಡ ಹಂತ ಹಂತವಾಗಿ ಬೆಳೆಯಿತು. ಬಸವರಾಜ ಅವರ ಸಹೋದರ ಕೆ.ಮಹೇಶ ಬಿಜೆಪಿಯಿಂದಲೇ ಕುಷ್ಟಗಿ ತಾಲ್ಲೂಕಿನ ಹಿರೇಮನ್ನಾಪುರ ಜಿಲ್ಲಾ ಪಂಚಾಯಿತಿ ಸದಸ್ಯರಾಗಿದ್ದರು. ಹೀಗಾಗಿ ಇವರ ಕುಟುಂಬಕ್ಕೆ ಮೊದಲಿನಿಂದಲೂ ರಾಜಕೀಯ ನಂಟು ಇತ್ತು.

> **ಪಕ್ಷ ಯಾರಿಗೇ ಟಿಕೆಟ್ ಕೊಟ್ಟರೂ ಅವರ ಪರವಾಗಿ ಕೆಲಸ ಮಾಡುತ್ತೇನೆ ಎಂದು ಸಂಗಣ್ಣ ಕರಡಿ ಹೇಳಿದ್ದಾರೆ. ಅವರ ನಾಯಕತ್ವದಲ್ಲಿಯೇ ಚುನಾವಣೆ ಎದುರಿಸುತ್ತೇವೆ**
> **ಬಸವರಾಜ ಕ್ಯಾವಟರ,** ಕೊಪ್ಪಳ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ

ಟಿಕೆಟ್ ಲಭಿಸಿದ ಖುಷಿಯನ್ನು ಹಂಚಿಕೊಂಡ ಬಸವರಾಜ, 'ಟಿಕೆಟ್‌ಗಾಗಿ ಸಾಕಷ್ಟು ಪ್ರಯತ್ನ ಮಾಡಿದ್ದೆ. ಈಗ ಫಲ ಲಭಿಸಿದೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಂಘಟನಾತ್ಮಕವಾಗಿ ಚುನಾವಣೆ ಎದುರಿಸುತ್ತೇನೆ. ಮೊದಲ ಬಾರಿಗೆ ಟಿಕೆಟ್ ಲಭಿಸಿದ್ದಕ್ಕೆ ಖುಷಿಯಾಗಿದೆ' ಎಂದು ಹರ್ಷ ವ್ಯಕ್ತಪಡಿಸಿದರು.

ನಳಿನ್‌ಗೆ ಕೊಕ್: ನಿವೃತ್ತ ಸೇನಾಧಿಕಾರಿಗೆ ಬಿಜೆಪಿ ಟಿಕೆಟ್



ಮಂಗಳೂರು: ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರಕ್ಕೆ ಹಾಲಿ ಸಂಸದ ನಳಿನ್‌ಕುಮಾರ್ ಕಟೀಲ್ ಅವರನ್ನು ಕೈಬಿಟ್ಟ ಬಿಜೆಪಿ, ನಿವೃತ್ತ ಸೇನಾಧಿಕಾರಿ ಕ್ಯಾಪ್ಟನ್ ಬೃಜೇಶ್ ಚೌಟ (42) ಅವರನ್ನು ಅಭ್ಯರ್ಥಿಯಾಗಿ ಆಯ್ಕೆ ಮಾಡಿದೆ.

ಬಾಲ್ಯದಿಂದ ಆರ್‌ಎಸ್‌ಎಸ್ ನಂಟು ಹೊಂದಿರುವ ಚೌಟ, ನಂತರ ಭೂಸೇನೆಗೆ ಸೇರಿ, ಎಂಟನೇ ಗೋರ್ಖಾ ರೈಫಲ್ಸ್ 7ನೇ ಬೆಟಾಲಿಯನ್‌ನಲ್ಲಿ ಉತ್ತರ ಭಾರತ ಮತ್ತು ಈಶಾನ್ಯ ರಾಜ್ಯಗಳಲ್ಲಿ ಸೇವೆ ಸಲ್ಲಿಸಿ ಕ್ಯಾಪ್ಟನ್ ಹುದ್ದೆಗೇರಿದ್ದರು.

8 ವರ್ಷದ ಸೇವೆ ಬಳಿಕ ಸ್ವಯಂ ನಿವೃತ್ತಿಯ ಬಳಿಕ ಮಂಗಳೂರಿಗೆ ಬಂದು ಸಂಘ ಪರಿವಾರದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಬಿಜೆಪಿ ಯುವಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಸಂಸದ ನಳಿನ್ ಕುಮಾರ್ ಜೊತೆ ಪಕ್ಷದ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು.

ಮಂಗಳೂರಿನ ರಥಬೀದಿಯ ನಿವಾಸಿ ಬೃಜೇಶ್ ಚೌಟ, ಕಾಲೇಜು ದಿನಗಳಲ್ಲಿಯೇ ಎನ್‌ಸಿಸಿಯಲ್ಲಿದ್ದು, ಮಂಗಳೂರು ವಿವಿಯಲ್ಲಿ ಅತ್ಯುತ್ತಮ ಕೆಡೆಟ್ ಎಂಬ ಹೆಗ್ಗಳಿಕೆ ಪಡೆದಿದ್ದರು. ಮಂಗಳೂರಿನ ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ಬಿಎಸ್ಸಿ ಪದವಿ ಪೂರೈಸಿ, ನಂತರ ಮಧ್ಯಪ್ರದೇಶದ ಇಂದೋರ್ ಐಐಎಂನಲ್ಲಿ ಉನ್ನತ ಶಿಕ್ಷಣ ಪಡೆದಿದ್ದಾರೆ.

ಕರಾವಳಿಯ ಜನಪದ ಕ್ರೀಡೆ ಕಂಬಳ ನಿಷೇಧಕ್ಕೊಳಗಾದ ಸಂದರ್ಭದಲ್ಲಿ ಅದರ ವಿರುದ್ಧ ಹೋರಾಟ ಸಂಘಟಿಸಿದವರಲ್ಲಿ ಬೃಜೇಶ್ ಚೌಟ ಕೂಡ ಒಬ್ಬರು. ಏಳು ವರ್ಷಗಳಿಂದ 'ಮಂಗಳೂರು ಕಂಬಳ' ಸಂಘಟಿಸುತ್ತ ಬಂದಿದ್ದಾರೆ.

ಪ್ರಸ್ತುತ ಬಿಜೆಪಿ ಘಟಕದ ಕಾರ್ಯದರ್ಶಿಯಾಗಿರುವ ಬೃಜೇಶ್ ಚೌಟ, ಬಂಟ ಸಮುದಾಯದ ಗುತ್ತಿನ ಮನೆ ಕುಟುಂಬಕ್ಕೆ ಸೇರಿದವರು, ಅವಿವಾಹಿತರು.

'ಹಿಂದುತ್ವವೇ ನನ್ನ ಬದ್ಧತೆ, ಅಭಿವೃದ್ಧಿಯೇ ನನ್ನ ಆದ್ಯತೆ. ಹಿರಿಯರ ಆಶೀರ್ವಾದ, ಸಹಕಾರ ಪಡೆದು, ಕಾರ್ಯಕರ್ತರ ಪ್ರೀತಿ ಪಡೆದು ನರೇಂದ್ರ ಮೋದಿ ಅವರನ್ನು ಮತ್ತೆ ಪ್ರಧಾನಿಯನ್ನಾಗಿ ಮಾಡುವ ಸಂಕಲ್ಪ ಮಾಡಿದ್ದೇನೆ' ಎಂದು ಬೃಜೇಶ್ ಚೌಟ ಹೇಳಿದರು.

'ದಕ್ಷಿಣ ಕನ್ನಡದಂತಹ ಪ್ರತಿಷ್ಠಿತ ಲೋಕಸಭಾ ಕ್ಷೇತ್ರಕ್ಕೆ ವಿಶ್ವದ ಅತಿದೊಡ್ಡ ಪಕ್ಷವಾದ ಬಿಜೆಪಿಯ ಅಭ್ಯರ್ಥಿಯಾಗಿ ಪ್ರಧಾನಿ ಮಂತ್ರಿ ನರೇಂದ್ರ ಮೋದಿ ಆಶೀರ್ವಾದದಿಂದ ನನ್ನ ಆಯ್ಕೆಯಾಗಿದೆ. ಎಲ್ಲ ಕಾರ್ಯಕರ್ತರ ಸಹಕಾರ ಪಡೆದು, ಸಂಘಟನೆ ಆಧಾರವಾಗಿಟ್ಟು ಕೊಂಡು ಜವಾಬ್ದಾರಿಯನ್ನು ನಿಭಾಯಿಸುತ್ತೇನೆ' ಎಂದರು.

'ನಾವು ತುಳುನಾಡಿನ ಮಣ್ಣಿನ ದೈವ ದೇವರ ಆರಾಧನೆ ಮಾಡಿಕೊಂಡು ಬಂದವರು. ದೈವದೇವರು ಈ ಮಣ್ಣಿನ ಶಕ್ತಿ. ಮಣ್ಣಿಗೆ ವಿಶೇಷ ಗೌರವ ಕೊಡುವ ವ್ಯಕ್ತಿ ನಾನು. ಹಾಗಾಗಿ ಟಿಕೆಟ್ ಘೋಷಣೆ ಆದ ಕೂಡಲೇ ತಂದೆ ತಾಯಿಯ ಹಾಗೂ ಶರವು ಮಹಾಗಣಪತಿಯ ಆಶೀರ್ವಾದ ಪಡೆದೆ. ಸೇನೆ ಕೆಲಸ ಮಾಡಿದ ಸಂದರ್ಭ ತಾಯ್ನೆಲಕ್ಕಾಗಿ ಹಾಗೂ ಮಣ್ಣಿಗಾಗಿ ಪ್ರಾಣಾರ್ಪಣೆ ಮಾಡಿದ ವೀರಯೋಧರ ಸ್ಮಾರಕಕ್ಕೆ ತೆರಳಿ ಸರ್ವೋಚ್ಚ ಬಲಿದಾನ ಮಾಡಿದ ಮಣ್ಣಿನ ಮಕ್ಕಳಿಗೆ ಗೌರವ ನೀಡಿದ್ದೇನೆ' ಎಂದರು.

'ಸೈನ್ಯದ ಗೂರ್ಖಾ ರೆಜಿಮೆಂಟ್‌ನಲ್ಲಿ ಎಂಟು ವರ್ಷ ಕೆಲಸ ಮಾಡಿದ್ದೆ. ದೇಶದ ಬೇರೆ ಬೇರೆ ಭಾಗಗಳನ್ನು, ದೇಶದ ವೈಶಿಷ್ಟ್ಯಗಳನ್ನು, ಸಾಂಸ್ಕೃತಿಕ ಹಿರಿಮೆಯನ್ನು ಹಾಗೂ ಮಣ್ಣಿನ ಮಕ್ಕಳ ಸಾಮರ್ಥ್ಯವನ್ನು ನೋಡುವ ಅವಕಾಶ ಸೇನೆಯಲ್ಲಿ ಸಿಕ್ಕಿತ್ತು. ತದನಂತರ ಇಲ್ಲಿಗೆ ಬಂದು ಬಿಜೆಪಿಯಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿದೆ' ಎಂದರು.

ಐಟಿಐ: ವಿದ್ಯಾರ್ಥಿಗಳು ಅತಂತ್ರ • ಆರು ಹೊಸ ಕೋರ್ಸ್; ₹4,600 ಕೋಟಿ ಅನುದಾನದ ಯೋಜನೆ

ಅಪ್ರೆಂಟಿಸ್‌ಶಿಪ್‌ಗೆ ಸಿಗದ ಅನುಮತಿ

• ಇನಾಯತ್ ಉಲ್ಲಾ ಟಿ.



ಹರಿಹರದ ಸರ್ಕಾರಿ ಐಟಿಐ ಸಂಸ್ಥೆಯಲ್ಲಿ, ಟಾಟಾ ಟೆಕ್ನಾಲಜೀಸ್ ಸಹಯೋಗದಲ್ಲಿ ಆರಂಭಿಸಿರುವ ಉದ್ಯೋಗಾಧಾರಿತ ಕೋರ್ಸ್‌ನಲ್ಲಿ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳು ತರಬೇತಿ ಪಡೆದಿದ್ದಾರೆ

ಹರಿಹರ (ದಾವಣಗೆರೆ): ರಾಜ್ಯದಲ್ಲಿನ 150 ಉನ್ನತೀಕರಿಸಿದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ (ಐಟಿಐ) ಉದ್ಯೋಗಾಧಾರಿತ ಹೊಸ ಕೋರ್ಸ್ ಅಭ್ಯಸಿಸಿರುವ ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗಿದೆ.

ಕೋರ್ಸ್ ನಂತರ ವಿದ್ಯಾರ್ಥಿಗಳು ಪ್ರಾಯೋಗಿಕ ತರಬೇತಿ (ಅಪ್ರೆಂಟಿಸ್‌ಶಿಪ್) ಪಡೆಯಬೇಕಾಗುವುದು ಕಡ್ಡಾಯ. ಆದರೆ ಈವರೆಗೂ ಅಪ್ರೆಂಟಿಸ್‌ಶಿಪ್‌ಗೆ ಅನುಮೋದನೆ ಸಿಗದೇ ಇರುವುದು ಅವರನ್ನು ಚಿಂತೆಗೀಡುಮಾಡಿದೆ.

2021ರಲ್ಲಿ ರಾಜ್ಯದ 258 ಸರ್ಕಾರಿ ಐಟಿಐಗಳ ಪೈಕಿ 150 ಐಟಿಐಗಳಲ್ಲಿ ಟಾಟಾ ಟೆಕ್ನಾಲಜೀಸ್ ಸಂಸ್ಥೆ ಸಹಯೋಗದಲ್ಲಿ ಪ್ರಚಲಿತ ಉದ್ಯೋಗಾಧಾರಿತವಾದ 'ಅಡ್ವಾನ್ಸ್ ಸಿಎನ್‌ಸಿ', 'ಮೋಟಾರ್ ಎಲೆಕ್ಟ್ರಿಕಲ್ ವೆಹಿಕಲ್', 'ಇಂಡಸ್ಟ್ರಿಯಲ್ ರೋಬೊಟಿಕ್ಸ್', 'ಮ್ಯಾನ್ಯುಫ್ಯಾಕ್ಚರಿಂಗ್ ಪ್ರೊಸೆಸ್ ಕಂಟ್ರೋಲ್', 'ಬೇಸಿಕ್ ಡಿಸೈನ್', 'ಆರ್ಟಿಜನ್ ವೈರಿಂಗ್' ಎಂಬ ಕೋರ್ಸ್‌ಗಳನ್ನು ಹೊಸದಾಗಿ ಆರಂಭಿಸಲಾಗಿತ್ತು. ಸಾಂಪ್ರದಾಯಿಕ ಕೋರ್ಸ್‌ಗಳೊಂದಿಗೆ ಈ ಹೊಸ ಕೋರ್ಸ್‌ಗಳಿಗೆ 2021ನೇ ಸಾಲಿನಿಂದ ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ.

ಸಾಮಾನ್ಯವಾಗಿ ಬಹುತೇಕ ಐಟಿಐ ಕೋರ್ಸ್ ಪಾಸಾದ ವಿದ್ಯಾರ್ಥಿಗಳಿಗೆ ಕನಿಷ್ಠ ಒಂದು ವರ್ಷ ಅಪ್ರೆಂಟಿಸ್‌ಶಿಪ್‌ಗಾಗಿ ವಿವಿಧ ಕಂಪನಿಗಳಲ್ಲಿ ಶಿಷ್ಯವೇತನದೊಂದಿಗೆ ಪ್ರಾಯೋಗಿಕ ತರಬೇತಿ ನೀಡಲಾಗುತ್ತದೆ. ಅಪ್ರೆಂಟಿಸ್‌ಶಿಪ್ ನಂತರವೇ ಐಟಿಐ ಕೋರ್ಸ್ ಪರಿಪೂರ್ಣವಾಗಲಿದೆ.

ಅಪ್ರೆಂಟಿಸ್‌ಶಿಪ್ ಪೂರೈಸಿದ ವಿದ್ಯಾರ್ಥಿ ಆಸಕ್ತಿ ಇದ್ದರೆ ಪಾಲಿಟೆಕ್ನಿಕ್‌ನಲ್ಲಿ ಶಿಕ್ಷಣ ಮುಂದುವರಿಸಬಹುದು. ಅಥವಾ ಉದ್ಯೋಗಕ್ಕೆ ಸೇರಬಹುದಾಗಿದೆ. ಆದರೆ, ಸರ್ಕಾರ ಆರಂಭಿಸಿರುವ ಈ ಆರು ಕೋರ್ಸ್‌ಗಳಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಅಪ್ರೆಂಟಿಸ್‌ಶಿಪ್ ಮಾಡಲಾಗದೆ ಮುಂದಿನ ಶಿಕ್ಷಣ ಅಥವಾ ಉದ್ಯೋಗಕ್ಕೆ ಹೋಗಲಾಗದ ಸ್ಥಿತಿಗೆ ಸಿಲುಕಿದ್ದಾರೆ. ಈ ಕೋರ್ಸ್‌ಗಳಲ್ಲಿ ಕಲವು ಒಂದು ವರ್ಷ, ಇನ್ನೂ ಕೆಲವು ಎರಡು ವರ್ಷದ ಅವಧಿಯವಾಗಿವೆ.

ಈಚೆಗಷ್ಟೇ ರಾಜ್ಯದ ಒಟ್ಟು 150 ಸರ್ಕಾರಿ ಐಟಿಐ ಕಾಲೇಜುಗಳಲ್ಲಿ 4,500 ವಿದ್ಯಾರ್ಥಿಗಳ ಮೊದಲ ಬ್ಯಾಚ್ ಹೊರ ಬಂದಿದೆ. ಅವರು ಅಪ್ರೆಂಟಿಸ್‌ಶಿಪ್‌ಗೆ ಸೇರಿಕೊಳ್ಳಲು ಸಿದ್ಧರಿದ್ದಾರೆ. ಆದರೆ, ದೆಹಲಿಯಲ್ಲಿರುವ ಅಪ್ರೆಂಟಿಸ್‌ಶಿಪ್ ಆಯುಕ್ತಾಲಯದ ಆದೇಶವಿಲ್ಲದ್ದರಿಂದ ವಿವಿಧ ಕೈಗಾರಿಕೆಗಳಲ್ಲಿ ತರಬೇತಿ ಅವಕಾಶ ದೊರೆಯುತ್ತಿಲ್ಲ ಎಂದು ಅನೇಕ ವಿದ್ಯಾರ್ಥಿಗಳು ಅಳಲು ತೋಡಿಕೊಂಡಿದ್ದಾರೆ.

ಭವಿಷ್ಯದಲ್ಲಿ ಯುವಜನತೆಗೆ ಮತ್ತಷ್ಟು ಉದ್ಯೋಗ ಅವಕಾಶ ನೀಡುವ ನಿಟ್ಟಿನಲ್ಲಿ ಐಟಿಐ ಸಂಸ್ಥೆಗಳನ್ನು ಬಲಪಡಿಸಿ, ನಿಪುಣ ತಂತ್ರಜ್ಞರನ್ನು ರೂಪಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು ಟಾಟಾ ಟೆಕ್ನಾಲಜೀಸ್ ಸಂಸ್ಥೆಯ ಸಹಯೋಗದೊಂದಿಗೆ ಒಟ್ಟು ₹4,600 ಕೋಟಿ ಅನುದಾನದಲ್ಲಿ ಹೊಸ ಕೋರ್ಸ್ ಆರಂಭಿಸಿದೆ. ಈ ಅನುದಾನದ ಉದ್ದೇಶ ಈಡೇರಬೇಕೆಂದರೆ ಕೂಡಲೇ ಈ ಕೋರ್ಸ್ ಪೂರೈಸಿದ ವಿದ್ಯಾರ್ಥಿಗಳಿಗೆ ಅಪ್ರೆಂಟಿಸ್‌ಶಿಪ್ ಪಡೆಯಲು ಸಂಬಂಧಿತ 'ಇಲಾಖೆಯಿಂದ ಆದೇಶ ಹೊರಡಿಸಬೇಕು' ಎಂಬ ಆಗ್ರಹ ವಿದ್ಯಾರ್ಥಿ ವಲಯದಿಂದ ಕೇಳಿಬಂದಿದೆ.

> ದೆಹಲಿಯಲ್ಲಿರುವ ಆಯುಕ್ತಾಲಯಕ್ಕೆ ಅಪ್ರೆಂಟಿಸ್‌ಶಿಪ್‌ಗೆ ಅನುಮತಿ ನೀಡುವಂತೆ ಪತ್ರ ಬರೆಯಲಾಗಿದ್ದು, ಅನುಮತಿ ಶೀಘ್ರವೇ ಸಿಗುವ ಸಾಧ್ಯತೆ ಇದೆ
> **ಲಕ್ಷ್ಮಿನಾರಾಯಣ ರಾಮ,** ಸಹಾಯಕ ನಿರ್ದೇಶಕ, ಕೈಗಾರಿಕ ಮತ್ತು ತರಬೇತಿ ಇಲಾಖೆ

> ಹೊಸ ಕೋರ್ಸ್ ಅಭ್ಯಸಿಸುವ ವಿದ್ಯಾರ್ಥಿಗಳಿಗೆ ಅಪ್ರೆಂಟಿಸ್‌ಶಿಪ್ ಪಡೆಯಲು ಅನುವು ಮಾಡಿಕೊಡುವ ಮೂಲಕ ವಿದ್ಯಾರ್ಥಿಗಳ ಆತಂಕ ದೂರ ಮಾಡಬೇಕಿದೆ
> **ಐಯಪ್ಪ ಎಂ.,** ಪ್ರಾಚಾರ್ಯರು, ಸರ್ಕಾರಿ ಐಟಿಐ, ಹರಿಹರ

> ಕೆಲವೇ ದಿನದಲ್ಲಿ 2 ವರ್ಷ ಅವಧಿಯ ಅಡ್ವಾನ್ಸ್ ಸಿಎನ್‌ಸಿ ಕೋರ್ಸ್ ಮುಗಿಸಲಿದ್ದೇನೆ. ಅಪ್ರೆಂಟಿಸ್‌ಶಿಪ್ ಪಡೆಯಲು ಆದೇಶ ಹೊರಡಿಸಿಲ್ಲದಿರುವುದು ಚಿಂತೆಯನ್ನು ಹೆಚ್ಚಿಸಿದೆ
> **ಗಣೇಶ್,** ಅಡ್ವಾನ್ಸ್ ಸಿಎನ್‌ಸಿ, 2ನೇ ವರ್ಷದ ಐಟಿಐ ವಿದ್ಯಾರ್ಥಿ, ಹರಿಹರ

ರೈಲಿನಲ್ಲಿ ಅಂಗವಿಕಲರಿಗೆ ಸೀಟು

ಬೆಂಗಳೂರು: ರೈಲುಗಳಲ್ಲಿ ಅಂಗವಿಕಲರಿಗಾಗಿ ಆಸನಗಳನ್ನು ಮೀಸಲಿಡಲು ರೈಲ್ವೆ ಮಂಡಳಿ ನಿರ್ಧರಿಸಿದೆ.

ರಾಜಧಾನಿ, ದುರಂತೊ, ವಂದೇ ಭಾರತ್, ಹಮ್‌ಸಫರ್, ಗತಿಮಾನ್, ವಿಶೇಷ ರೈಲುಗಳು ಸೇರಿದಂತೆ ಎಲ್ಲಾ ಕಾಯ್ದಿರಿಸಿದ ಮೇಲ್/ಎಕ್ಸ್‌ಪ್ರೆಸ್ ರೈಲುಗಳಲ್ಲಿ ಸೀಟುಗಳನ್ನು ನಿಗದಿ ಮಾಡಲಾಗಿದೆ.

ಸ್ಲೀಪರ್ ಕ್ಲಾಸ್‌ನಲ್ಲಿ ಎರಡು ಕೆಳ ಮತ್ತು ಎರಡು ಮಧ್ಯಮ ಬರ್ತ್‌ಗಳು (3ಇ ಅಥವಾ 3ಎ) ಅಂಗವಿಕಲರಿಗೆ ಮೀಸಲಾಗಿರುತ್ತವೆ. ಗರೀಬ್ ರಥ್ ಎಕ್ಸ್‌ಪ್ರೆಸ್ ರೈಲಿನ ಎಸ್‌ಎಲ್‌ಆರ್‌ಡಿ ಬೋಗಿಯಲ್ಲಿ ನಾಲ್ಕು ಬರ್ತ್‌ಗಳು, ಎರಡಕ್ಕಿಂತ ಹೆಚ್ಚು ಬೋಗಿಗಳನ್ನು ಹೊಂದಿರುವ ರೈಲುಗಳಲ್ಲಿ ಕಾಯ್ದಿರಿಸಿದ ಎರಡನೇ ದರ್ಜೆ (2ಎಸ್) / ಹವಾನಿಯಂತ್ರಿತ ಚೇರ್ ಕಾರ್‌ನಲ್ಲಿ (ಸಿಸಿ) ನಾಲ್ಕು ಆಸನಗಳನ್ನು ನಿಗದಿಪಡಿಸಲಾಗಿದೆ. 'ವಂದೇ ಭಾರತ್'ನಲ್ಲಿ ಎರಡು ಬೋಗಿ ಇದ್ದಾಗ ಬೋಗಿ ಸಂಖ್ಯೆ 1 ಮತ್ತು 8ರಲ್ಲಿ ವಿಶೇಷವಾಗಿ ವಿನ್ಯಾಸಗೊಳಿಸಲಾದ ಆಸನ ಸಂಖ್ಯೆ 40 ಹಾಗೂ 16 ಬೋಗಿ ಹೊಂದಿರುವ ರೈಲುಗಳಲ್ಲಿ ಬೋಗಿ ಸಂಖ್ಯೆ 1 ಮತ್ತು 14ಗಳಲ್ಲಿ ವಿಶೇಷವಾಗಿ ವಿನ್ಯಾಸಗೊಳಿಸಲಾದ ಆಸನ ಸಂಖ್ಯೆ 40 ಮತ್ತು ಅದರ ಪಕ್ಕದಲ್ಲಿ ತಲಾ ಒಂದು ಆಸನವನ್ನು ವಿನ್ಯಾಸಗೊಳಿಸಲಾಗಿದೆ.

ವಿಶಿಷ್ಟ ಗುರುತಿನ ಚೀಟಿ ಪಡೆದ ಅಂಗವಿಕಲರಷ್ಟೇ ಈ ಸೌಲಭ್ಯವನ್ನು ಬಳಸಬಹುದು ಎಂದು ರೈಲ್ವೆ ಮಂಡಳಿ ಪ್ರಕಟಣೆ ತಿಳಿಸಿದೆ.

ಪರೀಕ್ಷಾ ಕಾರ್ಯಕ್ಕೆ ಪ್ರೌಢಶಾಲಾ ಶಿಕ್ಷಕರು: ಸಮ್ಮತಿ



> ಎಸ್ಎಸ್ಎಲ್‌ಸಿ ಪರೀಕ್ಷಾ ಕಾರ್ಯಕ್ಕೆ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಿಸುವ ಅವೈಜ್ಞಾನಿಕ ಕ್ರಮ ಕೈಬಿಡಬೇಕೆಂದು ಮನವಿ ಮಾಡಿದ್ದೆವು ಮತ್ತು ನಾನು ಸರ್ಕಾರಕ್ಕೆ ಕೋರಿದ್ದೆವು. ಇದಕ್ಕೆ ಸಿ.ಎಂ, ಡಿಸಿಎಂ ಸ್ಪಂದಿಸಿದ್ದಾರೆ
> **ಪುಟ್ಟಣ್ಣ** ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ

ಬೆಂಗಳೂರು: ಎಸ್ಎಸ್ಎಲ್‌ಸಿ ಪರೀಕ್ಷಾ ಕಾರ್ಯಕ್ಕೆ ಪ್ರೌಢಶಾಲಾ ಸಹ ಶಿಕ್ಷಕರನ್ನು ನೇಮಿಸಿಕೊಳ್ಳಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಅನುಮತಿ ನೀಡಿದೆ.

ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿರುವ ಕ್ಲಸ್ಟರ್ ಹೊರತಾದ ಕೇಂದ್ರಗಳಿಗೆ ಕೊಠಡಿ ಮೇಲ್ವಿಚಾರಕರಾಗಿ ಹಾಗೂ ಪರೀಕ್ಷೆಯ ಇತರ ಕಾರ್ಯಗಳಿಗೆ ನಿಯೋಜಿಸಬೇಕು. ಆಯಾ ವಿಷಯಗಳ ಶಿಕ್ಷಕರನ್ನು ಅದೇ ವಿಷಯದ ದಿನ ಪರೀಕ್ಷಾ ಕಾರ್ಯಕ್ಕೆ ಬಳಸಿಕೊಳ್ಳಬಾರದು ಎಂದು ಸೂಚಿಸಿದೆ.

ಪ್ರೌಢಶಾಲಾ ಶಿಕ್ಷಕರ ಕೊರತೆ ಇದ್ದ ಕೇಂದ್ರಗಳಲ್ಲಿ ಮಾತ್ರ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಬಳಸಿಕೊಳ್ಳಲು ಸಮ್ಮತಿ ನೀಡಿದೆ.

2023ರ ಮಾರ್ಚ್–ಏಪ್ರಿಲ್‌ನಲ್ಲಿ ನಡೆದ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ನಕಲು ಮಾಡಲು ವಿದ್ಯಾರ್ಥಿಗಳಿಗೆ ಸಹಕರಿಸಿದ ಆರೋಪದ ಮೇಲೆ 38 ಶಿಕ್ಷಕರನ್ನು ಅಮಾನತು ಮಾಡಲಾಗಿತ್ತು. ಹಾಗಾಗಿ, 2024ರ ಪರೀಕ್ಷೆಯಲ್ಲಿ ನಕಲು, ವ್ಯವಹಾರಕ್ಕೆ ಸಂಪೂರ್ಣ ಕಡಿವಾಣ ಹಾಕಲು ಪರೀಕ್ಷಾ ಕಾರ್ಯಕ್ಕೆ ಪ್ರೌಢಶಾಲಾ ಸಹ ಶಿಕ್ಷಕರ ಬದಲು ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಿಸಲು ಈಚೆಗೆ ಸುತ್ತೋಲೆ ಹೊರಡಿಸಲಾಗಿತ್ತು.

ಈ ಕ್ರಮಕ್ಕೆ ಶಿಕ್ಷಕರು ವಿರೋಧ ವ್ಯಕ್ತಪಡಿಸಿದ್ದರು. ಸರ್ಕಾರದ ಕ್ರಮ ಸರಿಯಲ್ಲ; ಮರುಪರಿಶೀಲಿಸಬೇಕು ಎಂದು ವಿಧಾನಪರಿಷತ್ತಿನ ಸದಸ್ಯರಾದ ಪುಟ್ಟಣ್ಣ ಹಾಗೂ ಮರಿತಿಬ್ಬೇಗೌಡ ಅವರು ಸರ್ಕಾರಕ್ಕೆ ಪತ್ರ ಬರೆದಿದ್ದರು.

ರಾಜ್ಯ ಸರ್ಕಾರದ ವಕ್ತಾರರಾಗಿ ಐದು ಸಚಿವರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಸಾಧನೆ, ಕಾರ್ಯವೈಖರಿ ಮತ್ತು ಯೋಜನೆಗಳನ್ನು ಜನರಿಗೆ ತಿಳಿಸಲು ಐವರು ಪ್ರಭಾವಿ ಸಚಿವರನ್ನು ವಕ್ತಾರರನ್ನಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇಮಿಸಿದ್ದಾರೆ.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ಅರಣ್ಯ ಸಚಿವ ಈಶ್ವರ ಖಂಡ್ರೆ ಮತ್ತು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರನ್ನು ರಾಜ್ಯ ಸರ್ಕಾರದ ವಕ್ತಾರರಾಗಿ ನೇಮಿಸಲಾಗಿದೆ.

ಈ ಕುರಿತು ಮುಖ್ಯ ಕಾರ್ಯದರ್ಶಿಗೆ ಟಿಪ್ಪಣಿ ಕಳುಹಿಸಿರುವ ಮುಖ್ಯಮಂತ್ರಿ, 'ಈ ಸಚಿವರಿಗೆ ದಾಖಲೆಗಳು ಮತ್ತು ಮಾಹಿತಿಗಳನ್ನು ಕಾಲ ಕಾಲಕ್ಕೆ ಒದಗಿಸುವಂತೆ ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಸೂಚಿಸಬೇಕು' ಎಂದೂ ನಿರ್ದೇಶನ ನೀಡಿದ್ದಾರೆ.

ಉಡುಪಿ: ಗ್ಯಾರಂಟಿ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

'ಸಿಎಎ: ಸಂಪುಟದಲ್ಲಿ ಚರ್ಚಿಸಿ ನಿರ್ಧಾರ'

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಉಡುಪಿ: 'ರಾಜ್ಯದಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಜಾರಿ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಗ್ಯಾರಂಟಿ ಸಮಾವೇಶದಲ್ಲಿ ಪಾಲ್ಗೊಳ್ಳಲು ಇಲ್ಲಿಗೆ ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಲೋಕಸಭಾ ಚುನಾವಣೆಯಲ್ಲಿ ಸೋಲಿನ ಭಯದಿಂದ ಕೇಂದ್ರ ಸರ್ಕಾರ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಜಾರಿಮಾಡಿದೆ. ಇದು ಚುನಾವಣಾ ಗಿಮಿಕ್ ಅಷ್ಟೆ ಎಂದರು.

'ನನ್ನ ಹೆಸರಿನಲ್ಲೇ ರಾಮ ಇದ್ದಾನೆ': 'ರಾಮನ ಮಂದಿರದಲ್ಲಿ ರಾಮನ ಜತೆಗೆ ಸೀತೆ, ಲಕ್ಷ್ಮಣ, ಹನುಮಂತ ಇರುತ್ತಾನೆ. ಆದರೆ, ಬಿಜೆಪಿ ನಾಯಕರು ರಾಜಕೀಯಕ್ಕಾಗಿ ರಾಮನಿಂದ ಸೀತೆ, ಲಕ್ಷ್ಮಣ, ಹನುಮಂತನನ್ನು ಬೇರ್ಪಡಿಸಿ ಕೇವಲ ಜೈ ಶ್ರೀರಾಮ್ ಘೋಷಣೆ ಕೂಗುತ್ತಾರೆ. ನಾವೆಲ್ಲರೂ 'ಜೈ ಸೀತಾರಾಮ್' ಘೋಷಣೆ ಕೂಗೋಣ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

'ನನ್ನ ಹೆಸರಿನಲ್ಲೇ ರಾಮ ಇದ್ದು ಹಿಂದುತ್ವದ ಬಗ್ಗೆ ಬಿಜೆಪಿಯಿಂದ ಪಾಠ ಹೇಳಿಸಿಕೊಳ್ಳುವ ಅಗತ್ಯವಿಲ್ಲ. ನಮ್ಮೂರಿನಲ್ಲಿ ಎರಡು ರಾಮಮಂದಿರ ಕಟ್ಟಿಸಿದ್ದೇನೆ, ಅಯೋಧ್ಯೆಯಲ್ಲಿ ಪ್ರಾಣ ಪ್ರತಿಷ್ಠೆ ನಡೆದ ದಿನವೇ ಆಂಜನೇಯನ ಮೂರ್ತಿ ಉದ್ಘಾಟಿಸಿದ್ದೇನೆ. ಹನುಮಂತ ಹುಟ್ಟಿದ ಅಂಜನಾದ್ರಿ ಬೆಟ್ಟದ ಅಭಿವೃದ್ಧಿಗೆ ಬಜೆಟ್‌ನಲ್ಲಿ ₹100 ಕೋಟಿ ಅನುದಾನ ಮೀಸಲಿರಿಸಿದ್ದೇನೆ. ರಾಮನ ಭಕ್ತರು ಎಂದು ಹೇಳಿಕೊಳ್ಳುವ ಬಿಜೆಪಿ ಅಂಜನಾದ್ರಿ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಿಲ್ಲ' ಎಂದು ಲೇವಡಿ ಮಾಡಿದರು.

'ಬಿಜೆಪಿ ಅಧಿಕಾರಕ್ಕೆ ಬಂದಿರುವುದೇ ಸಂವಿಧಾನ ಬದಲಾವಣೆ ಮಾಡಲು' ಎಂದು ಸಂಸದ ಅನಂತಕುಮಾರ ಹೆಗಡೆ ಹೇಳುತ್ತಾರೆ. ಸಂವಿಧಾನ ಬದಲಾವಣೆಯಾದರೆ ಬಡವರು, ಹಿಂದುಳಿದವರು, ರೈತರು, ಮಹಿಳೆಯರು, ದಲಿತರು, ಅಲ್ಪಸಂಖ್ಯಾತರು ಬದುಕಲು ಸಾಧ್ಯವಿಲ್ಲ. ಮತ್ತೆ ಮನುಸ್ಮೃತಿ ಜಾರಿಗೆ ಬರಲಿದೆ. ಜಾತಿ ವ್ಯವಸ್ಥೆ, ಅಸಮಾನತೆ ಅನುಭವಿಸಬೇಕಾಗುತ್ತದೆ. ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ಉಳಿಯಬೇಕಾದರೆ ಸಂವಿಧಾನ ಉಳಿಯಲೇಬೇಕು ಎಂದರು.

ಕೋಮುಭಾವನೆ ಕೆರಳಿಸಲು ಸಿಎಎ ಬಳಕೆ: ಅಶೋಕ ಆರೋಪ

ಬೆಂಗಳೂರು: ಕಾಂಗ್ರೆಸ್ ನಾಯಕರು ಕೋಮುಭಾವನೆ ಕೆರಳಿಸಲು ಸಿಎಎ ಬಳಸಿಕೊಳ್ಳುತ್ತಿದ್ದಾರೆ. ಪೌರತ್ವದ ವಿಷಯವನ್ನು ಕೇಂದ್ರ ಸರ್ಕಾರ ನಿರ್ಧರಿಸುತ್ತದೆ ಎನ್ನುವ ಸಾಮಾನ್ಯ ಜ್ಞಾನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗಿಲ್ಲ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ ಟೀಕಿಸಿದರು.

ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ದೇಶದ ಅಲ್ಪಸಂಖ್ಯಾತರಿಗೂ ಈ ಕಾಯ್ದೆಗೂ ಯಾವ ಸಂಬಂಧವೂ ಇಲ್ಲ. ಬೇರೆ ದೇಶಗಳಿಂದ ಬಂದ ಅಲ್ಲಿನ ಅಲ್ಪಸಂಖ್ಯಾತರು ಪಾದಚಾರಿ ಮಾರ್ಗದಲ್ಲಿ ಬದುಕುತ್ತಿದ್ದಾರೆ. ಆಶ್ರಯ ಕಳೆದುಕೊಂಡಿದ್ದಾರೆ. ಮಾನವೀಯತೆ ಇಲ್ಲದ ಕಾಂಗ್ರೆಸ್ ಎಲ್ಲವನ್ನೂ ಕಾಮಾಲೆ ಕಣ್ಣಿನಿಂದ ನೋಡುತ್ತಿದೆ ಎಂದರು.

ರಾಜ್ಯದಲ್ಲಿ ಜನರಿಗೆ ಕುಡಿಯಲು ನೀರಿಲ್ಲ. ಸಣ್ಣ ಸಮಸ್ಯೆ ಪರಿಹರಿಸುವಲ್ಲೂ ಸರ್ಕಾರ ವಿಫಲವಾಗಿದೆ. ಕಾವೇರಿ ನ್ಯಾಯಮಂಡಳಿಯ ಮುಂದೆ ಸರಿಯಾಗಿ ವಾದಿಸಿದ್ದರೆ ಇಂತಹ ಸ್ಥಿತಿ ಬರುತ್ತಿರಲಿಲ್ಲ. ತಮಿಳುನಾಡಿನ ಮುಖ್ಯಮಂತ್ರಿ ಸ್ಟಾಲಿನ್ ಅವರಿಗಾಗಿ ಕಾವೇರಿ ನೀರು ಹರಿಸಿದ್ದಾರೆ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರಿನ ಹೆಸರಿಗೆ ಕಳಂಕ ಬರಲು ಕಾಂಗ್ರೆಸ್ ಸರ್ಕಾರವೇ ಕಾರಣ ಎಂದು ದೂರಿದರು.

ಕೇಂದ್ರ ಸರ್ಕಾರದ ಯೋಜನೆಗಳನ್ನು ತಮ್ಮದು ಎಂಬಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಂಬಿಸಿಕೊಳ್ಳುತ್ತಿದ್ದಾರೆ. ಕೇಂದ್ರದ ಅನುದಾನ ಪಡೆದ ಯೋಜನೆಗಳ ಜಾಹೀರಾತಿಗೆ ಪ್ರಧಾನಿ ಚಿತ್ರವನ್ನೂ ಹಾಕಬೇಕು ಎಂದು ಆಗ್ರಹಿಸಿದರು.

ಸ್ಫೋಟ: ಎನ್‌ಐಎಯಿಂದ ವ್ಯಕ್ತಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬೆಂಗಳೂರಿನ ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಶಬ್ಬೀರ್ ಹುಸೇನ್ (44) ಎಂಬುವರನ್ನು ಬುಧವಾರ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಅಧಿಕಾರಿಗಳು ವಶಕ್ಕೆ ಪಡೆದು, ವಿಚಾರಣೆ ನಡೆಸಿದರು.

'ವಿಚಾರಣೆ ಪೂರ್ಣಗೊಂಡ ಹಿನ್ನೆಲೆಯಲ್ಲಿ ಅವರನ್ನು ಸಂಜೆ ಬಿಡುಗಡೆ ಮಾಡಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಸುದ್ದಿಗಾರರಿಗೆ ತಿಳಿಸಿದರು.

'ಬಳ್ಳಾರಿಯ ಟ್ಯಾಂಕ್ ಬಾಂಡ್ ರಸ್ತೆಯ ನಿವಾಸಿ ಶಬ್ಬೀರ್ ಕುಡುತಿನಿಯ ಖಾಸಗಿ ಕಾರ್ಖಾನೆಯಲ್ಲಿ ಎಲೆಕ್ಟ್ರಿಷಿಯನ್ ಆಗಿದ್ದು, ಕೆಫೆ ಸ್ಫೋಟದ ಬಳಿಕ ಬಳ್ಳಾರಿಗೆ ಬಂದಿದ್ದ ಆರೋಪಿಯನ್ನು ಬೇರೆಡೆ ತೆರಳಲು ನೆರವಾದ ಬಗ್ಗೆ ಅನುಮಾನವಿದೆ' ಎಂದು ಮೂಲಗಳು ತಿಳಿಸಿವೆ. ಆದರೆ, ಪೊಲೀಸರು ಖಚಿತಪಡಿಸಿಲ್ಲ.

'ಕಳೆದ ವರ್ಷ ಡಿಸೆಂಬರ್‌ನಲ್ಲಿ ಎನ್‌ಐಎ ಅಧಿಕಾರಿಗಳು ಬಂಧಿಸಿದ್ದ ಬಳ್ಳಾರಿಯ ಮಿನಾಜ್ ಅಲಿಯಾಸ್ ಸುಲೇಮಾನ್ ಮತ್ತು ಸೈಯದ್ ಸಮೀರ್ ಎಂಬುವರ ಜೊತೆ ಶಬ್ಬೀರ್‌ಗೆ ಸಂಪರ್ಕವಿತ್ತು. ದೂರವಾಣಿ ಕರೆಗಳ ಆಧಾರದ ಮೇಲೆ ಎನ್‌ಐಎ ತಂಡ ತನಿಖೆ ನಡೆಸಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಹೈದರಾಬಾದ್‌ನಲ್ಲಿ ಶಂಕಿತನಿಗೆ ಶೋಧ

ಬೆಂಗಳೂರು: 'ದಿ ರಾಮೇಶ್ವರಂ ಕೆಫೆ'ಯಲ್ಲಿ ಸಂಭವಿಸಿದ್ದ ಬಾಂಬ್ ಸ್ಫೋಟ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಪೊಲೀಸರು, ಹೈದರಾಬಾದ್‌ನಲ್ಲಿ ಶಂಕಿತನಿಗಾಗಿ ಶೋಧ ಮುಂದುವರಿಸಿದ್ದಾರೆ.

'ಮಾರ್ಚ್ 1ರಂದು ಬಾಂಬ್ ಸ್ಫೋಟಿಸಿದ್ದ ಬಳಿಕ ಶಂಕಿತ ಬಳ್ಳಾರಿಯತ್ತ ಪ್ರಯಾಣ ಬೆಳೆಸಿದ್ದ. ಅಂದೇ ರಾತ್ರಿ 9 ಗಂಟೆ ಸುಮಾರಿಗೆ ಬಳ್ಳಾರಿ ಬಸ್ ನಿಲ್ದಾಣದಲ್ಲಿ ಕಾಣಿಸಿಕೊಂಡಿದ್ದ. ಆತನ ಚಲನವಲನ ನಿಲ್ದಾಣದ ಸಿ.ಸಿ ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಬಳ್ಳಾರಿಯಲ್ಲಿ ಶಂಕಿತ ತನ್ನ ಸಹಚರರನ್ನು ಸಂಪರ್ಕಿಸಿ, ಅಲ್ಲಿಂದ ಹೈದರಾಬಾದ್‌ನತ್ತ ಪ್ರಯಾಣ ಬೆಳೆಸಿರುವ ಶಂಕೆಯಿದೆ. ಹೀಗಾಗಿ ಅಲ್ಲಿ ಕಾರ್ಯಾಚರಣೆ ನಡೆಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

'ಇದೇ ಪ್ರಕರಣದಲ್ಲಿ ಬಂಧಿಸಿ ಕಸ್ಟಡಿಗೆ ಪಡೆದಿರುವ ಆರೋಪಿಗಳ ವಿಚಾರಣೆ ಮುಂದುವರಿಸಲಾಗಿದೆ. ಆರೋಪಿಗಳು ನೀಡಿದ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.



ಬರ–ಬರೆ ಮಳೆ ಕೊರತೆಯಿಂದ ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ ನಲ್ಲೂರಹಳ್ಳಿ ಕೆರೆಯು ಬತ್ತಿಹೋಗಿದ್ದು, ಮೀನೊಂದು ಸತ್ತಿರುವುದು ಬುಧವಾರ ಕಂಡುಬಂತು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ

ರಾಣಿ ಚೆನ್ನಮ್ಮ ಎಕ್ಸ್‌ಪ್ರೆಸ್ ಸಾಂಗ್ಲಿವರೆಗೆ ವಿಸ್ತರಣೆ

ಬೆಂಗಳೂರು: ಇಲ್ಲಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ಮತ್ತು ಮಹಾರಾಷ್ಟ್ರದ ಮೀರಜ್ ನಿಲ್ದಾಣಗಳ ನಡುವೆ ಪ್ರತಿದಿನ ಸಂಚರಿಸುತ್ತಿದ್ದ ರಾಣಿ ಚೆನ್ನಮ್ಮ ಎಕ್ಸ್‌ಪ್ರೆಸ್ ರೈಲನ್ನು ಸಾಂಗ್ಲಿ ನಿಲ್ದಾಣವರೆಗೆ ವಿಸ್ತರಿಸಲು ರೈಲ್ವೆ ಸಚಿವಾಲಯ ಅನುಮೋದನೆ ನೀಡಿದೆ.

ಪ್ರಮುಖ ನಗರಗಳ ಸಂಪರ್ಕ ಹೆಚ್ಚಿಸುವ ಮತ್ತು ಆ ಪ್ರದೇಶದ ಜನರಿಗೆ ಪ್ರಯಾಣ ಸುಲಭಗೊಳಿಸುವ ಯೋಜನೆಯು ಈ ಮೂಲಕ ಜಾರಿಯಾಗಿದೆ ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

'ಕಾರ್ಯಕರ್ತನಾಗಿ ದುಡಿಯುವೆ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ನಾನು ಪಕ್ಷದ ಕಟ್ಟಾಳು. ಪಕ್ಷ ಏನು ಹೇಳುತ್ತದೆಯೋ ಅದನ್ನು ಮಾಡುವ ಜವಾಬ್ದಾರಿ ನನ್ನದು. ಪಕ್ಷವು ನನಗೆ 15 ವರ್ಷ ನೀಡಿದ ಅವಕಾಶವೇ ದೊಡ್ಡದು ಎಂದು ತಿಳಿದಿದ್ದೇನೆ. ಇನ್ನು ಮುಂದೆ ಪಕ್ಷದ ಕಾರ್ಯಕರ್ತನಾಗಿ ದುಡಿಯುತ್ತೇನೆ' ಎಂದು ಸಂಸದ ನಳಿನ್ ಕುಮಾರ್ ಕಟೀಲ್ ತಿಳಿಸಿದರು.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಅಭ್ಯರ್ಥಿಯನ್ನಾಗಿ ಬ್ರಿಜೇಶ್ ಚೌಟ ಅವರ ಹೆಸರು ಘೋಷಣೆಯಾದ ಬಳಿಕ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

'ನಮ್ಮ ನಾಯಕ ಅಟಲ್ ಬಿಹಾರಿ ವಾಜಪೇಯಿ ಅವರು ಹೇಳಿದಂತೆ ಕಾರ್ಯಕರ್ತ ಹುದ್ದೆ ಸಾಯುವವರೆಗೆ ಇರುತ್ತದೆ. ನನಗೆ ಕಾರ್ಯಕರ್ತ ಹುದ್ದೆಯೇ ದೊಡ್ಡದು' ಎಂದರು.

'ಜಿಲ್ಲೆಯಲ್ಲಿ ಯಾರೂ ನಿರಂತರ 15 ವರ್ಷ ಲೋಕಸಭಾ ಸದಸ್ಯರಾಗಿರಲಿಲ್ಲ. ಧನಂಜಯ ಕುಮಾರ್ 12.5 ವರ್ಷ, ಜನಾರ್ಧನ ಪೂಜಾರಿ 14 ವರ್ಷ ಸಂಸದರಾಗಿದ್ದರು. ನಾನು 15 ವರ್ಷ ಸಂಸದನಾಗಿ ಜವಾಬ್ದಾರಿ ನಿರ್ವಹಿಸಿದ್ದೇನೆ' ಎಂದರು.

'ಸಹಜವಾಗಿ ಎಲ್ಲರ ಜೊತೆಗೂ ವರಿಷ್ಠರು ಮಾತನಾಡಿದ್ದಾರೆ. ಆರು ತಿಂಗಳ ಹಿಂದೆಯೇ ವರಿಷ್ಠರು ಕೇಳಿದ್ದು, ಆಗಲೇ ಜಿಲ್ಲೆಯಲ್ಲಿ ಪರಿವರ್ತನೆ ಮಾಡುವುದಾದರೆ ಅವಕಾಶಗಳಿವೆ. ಹೊಸಬರಿಗೆ ಅವಕಾಶ ಕೊಡುವುದಕ್ಕೆ ನನ್ನಿಂದ ಅಡ್ಡಿ ಇಲ್ಲ. ಅವರಿಗೂ ಸಂಪೂರ್ಣ ಸಹಕಾರ ನೀಡುತ್ತೇನೆ ಎಂದು ತಿಳಿಸಿದ್ದೆ' ಎಂದು ಅವರು ಹೇಳಿದರು.

ತಂದೆಯ ಹಾದಿಯಲ್ಲಿ ಪುತ್ರ ಬಸವರಾಜ ಬೊಮ್ಮಾಯಿ

• ಸಿದ್ದು ಆರ್.ಜಿ.ಹಳ್ಳಿ


ಹಾವೇರಿ: ಶಿಗ್ಗಾವಿ ಕ್ಷೇತ್ರದ ಶಾಸಕ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಹಾವೇರಿ–ಗದಗ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಒಲಿದಿದೆ.

ಎರಡು ಬಾರಿ ವಿಧಾನ ಪರಿಷತ್ ಸದಸ್ಯರಾಗಿ (1997 ಮತ್ತು 2003) ಹಾಗೂ ಶಿಗ್ಗಾವಿ ಕ್ಷೇತ್ರದಿಂದ (2008ರಿಂದ 2023) ಸತತ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾದ ಬಸವರಾಜ ಬೊಮ್ಮಾಯಿ ಅವರು ಜಲಸಂಪನ್ಮೂಲ ಮತ್ತು ಗೃಹ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. 2021ರ ಜುಲೈ 29ರಂದು ರಾಜ್ಯದ ಮುಖ್ಯಮಂತ್ರಿಯಾಗಿ, 2023ರ ಮೇ 13ರವರೆಗೆ ಕಾರ್ಯನಿರ್ವಹಿಸಿದರು.

ಅಪ್ಪ– ಮಗ ಸಿಎಂ: ಬಸವರಾಜ ಬೊಮ್ಮಾಯಿ ಅವರ ತಂದೆ ಎಸ್.ಆರ್. ಬೊಮ್ಮಾಯಿ ಅವರು 1988ರಲ್ಲಿ ರಾಜ್ಯದ ಮುಖ್ಯಮಂತ್ರಿ ಆಗಿದ್ದರು. ನಂತರ, ರಾಷ್ಟ್ರ ರಾಜಕಾರಣದತ್ತ ಮುಖ ಮಾಡಿದ ಅವರು 1992 ಮತ್ತು 1998ರಲ್ಲಿ ಎರಡು ಬಾರಿ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾದರು. 1996ರಿಂದ 1998ರವರೆಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರಾಗಿ ರಾಷ್ಟ್ರ ರಾಜಕಾರಣದಲ್ಲಿ ಹೆಸರು ಮಾಡಿದರು.

ತಂದೆಯಂತೆ ಪುತ್ರ ಬಸವರಾಜ ಬೊಮ್ಮಾಯಿ ಅವರು ಕೂಡ ರಾಜ್ಯದ ಮುಖ್ಯಮಂತ್ರಿಯಾದರು. ರಾಜ್ಯದಲ್ಲಿ ಅಪ್ಪ–ಮಗ ಇಬ್ಬರೂ ಮುಖ್ಯಮಂತ್ರಿ ಹುದ್ದೆ ಅಲಂಕರಿಸಿದವರಲ್ಲಿ ಬೊಮ್ಮಾಯಿ ಅವರ ಜೋಡಿ ಎರಡನೆಯದ್ದು. ಮೊದಲನೇ ಜೋಡಿಯೆಂದರೆ ಎಚ್.ಡಿ.ದೇವೇಗೌಡ ಮತ್ತು ಎಚ್.ಡಿ.ಕುಮಾರಸ್ವಾಮಿ. ತಂದೆ ಎಸ್.ಆರ್. ಬೊಮ್ಮಾಯಿ ಅವರಂತೆ ಈಗ ಪುತ್ರ ಬಸವರಾಜ ಬೊಮ್ಮಾಯಿ ಕೂಡ ರಾಷ್ಟ್ರ ರಾಜಕಾರಣದತ್ತ ಮುಖ ಮಾಡಿದ್ದಾರೆ.

ನಾನು ಆಕಾಂಕ್ಷಿಯಲ್ಲ: 'ನಾನು ಲೋಕಸಭಾ ಚುನಾವಣೆಯ ಟಿಕೆಟ್ ಆಕಾಂಕ್ಷಿಯಲ್ಲ' ಎಂದು ಮೊದಲಿನಿಂದ ಹೇಳಿಕೊಂಡೇ ಬಂದ ಬಸವರಾಜ ಬೊಮ್ಮಾಯಿ ಅವರು, ಸದ್ದಿಲ್ಲದೇ ಚುನಾವಣೆಗೆ ತಾಲೀಮು ನಡೆಸಿದ್ದು ಗುಟ್ಟಾಗಿ ಉಳಿದಿರಲಿಲ್ಲ. ಅವರ ಜನ್ಮದಿನದ ಪ್ರಯುಕ್ತ ಶಿಗ್ಗಾವಿ–ಸವಣೂರು ಕ್ಷೇತ್ರದಲ್ಲಿ ಆರೋಗ್ಯ ಶಿಬಿರ, ನೇತ್ರದಾನ ಶಿಬಿರ, 'ಶ್ರೇಷ್ಠ ಕನ್ನಡಿಗ' ಪ್ರಶಸ್ತಿ ಪ್ರದಾನ ಕಾರ್ಯಕ್ರಮಗಳನ್ನು ಬಹು ಆಸಕ್ತಿಯಿಂದ ಆಯೋಜಿಸಿದರು. ಹಾನಗಲ್‌ನಲ್ಲಿ ದಿವಂಗತ ಸಿ.ಎಂ. ಉದಾಸಿ ಅವರ ಜನ್ಮದಿನ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಹೀಗೆ ನಿರಂತರವಾಗಿ ಜನಸಂಪರ್ಕದಲ್ಲಿರುವ ಪ್ರಯತ್ನ ಮಾಡಿದರು.



> **ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿಯಾಗಿಸಿ, ದೇಶವನ್ನು ಇನ್ನಷ್ಟು ಬಲಿಷ್ಠಗೊಳಿಸಬೇಕು ಎಂಬ ಬಯಕೆ ಶಿಗ್ಗಾವಿ ಕ್ಷೇತ್ರದ ಜನರದ್ದು. ಹೆಚ್ಚು ಮತಗಳಿಂದ ಗೆಲ್ಲಿಸುವ ಭರವಸೆ ಇದೆ**
> **ಬಸವರಾಜ ಬೊಮ್ಮಾಯಿ,** ಶಾಸಕ

ಹಿಂದುತ್ವ, ರಾಷ್ಟ್ರೀಯತೆ, ಅಭಿವೃದ್ಧಿ ಮಂತ್ರ: ಕೋಟ ಶ್ರೀನಿವಾಸ ಪೂಜಾರಿ

ಪ್ರಜಾವಾಣಿ ವಾರ್ತೆ

ಉಡುಪಿ: 'ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರು, ರಾಜ್ಯ ಘಟಕದ ಅಧ್ಯಕ್ಷರು ನನ್ನ ಮೇಲೆ ವಿಶ್ವಾಸವಿಟ್ಟು ಲೋಕಸಭೆ ಚುನಾವಣೆಗೆ ಟಿಕೆಟ್ ನೀಡಿದ್ದಾರೆ. ಉಡುಪಿ–ಚಿಕ್ಕಮಗಳೂರು ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುವ ಸಂಕಲ್ಪ ಮಾಡಿದ್ದೇನೆ' ಎಂದು ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

'ಹಿಂದುತ್ವ, ರಾಷ್ಟ್ರೀಯತೆ ಹಾಗೂ ಬಿಜೆಪಿ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಮತದಾರರ ಮುಂದಿಟ್ಟು ಮತಯಾಚನೆ ಮಾಡುತ್ತೇನೆ. ಮೋದಿ ಅವರ 10 ವರ್ಷಗಳ ಆಡಳಿತ ವಿಶ್ವದ ಮೆಚ್ಚುಗೆ ಪಡೆದಿದ್ದು ಉಡುಪಿ ಚಿಕ್ಕಮಗಳೂರು ಕ್ಷೇತ್ರದ ಮತದಾರರ ವಿಶ್ವಾಸ ಪಡೆಯುವಲ್ಲಿ ಸಂಶಯವಿಲ್ಲ' ಎಂದರು.

ಜಾತಿ ಲೆಕ್ಕಾಚಾರ: ಕೋಟ ಶ್ರೀನಿವಾಸ ಪೂಜಾರಿ ಕರಾವಳಿಯ ಪ್ರಬಲ ಬಿಲ್ಲವ ಸಮುದಾಯಕ್ಕೆ ಸೇರಿದವರು. ಜಿಲ್ಲೆಯಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ಬಿಲ್ಲವ ಮತದಾರರನ್ನು ದೃಷ್ಟಿಯಲ್ಲಿಟ್ಟುಕೊಂಡು ಪೂಜಾರಿ ಅವರಿಗೆ ಮಣೆ ಹಾಕಿರಬಹುದು ಎನ್ನುತ್ತಾರೆ ಪಕ್ಷದ ಹಿರಿಯರು.

ಕೋಟ ರಾಜಕೀಯ ಹಾದಿ: 1992ರಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಾಗಿ ರಾಜಕೀಯ ಜೀವನ ಆರಂಭಿಸಿದ ಕೋಟ, 1996ರಲ್ಲಿ ತಾಲ್ಲೂಕು ಪಂಚಾಯಿತಿ ಸದಸ್ಯರಾಗಿ ಗೆದ್ದರು. 2005ರಲ್ಲಿ ಜಿಲ್ಲಾ ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾದರು.

2009ರಿಂದ ನಾಲ್ಕು ಬಾರಿ ವಿಧಾನ ಪರಿಷತ್ ಸದಸ್ಯರಾಗಿದ್ದಾರೆ. ಸಚಿವರಾಗಿಯೂ ಸೇವೆ ಸಲ್ಲಿಸಿದ್ದು, ಸದ್ಯ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾಗಿದ್ದಾರೆ.

ರಾಜಕೀಯ ಕ್ಷೇತ್ರಕ್ಕೆ ಕಾಲಿಡುವ ಮುನ್ನ ಛಾಯಾಗ್ರಾಹಕರಾಗಿದ್ದ ಕೋಟ ಸ್ವಂತ ಸ್ಟುಡಿಯೋವನ್ನೂ ಹೊಂದಿದ್ದರು. ಆರಂಭದಲ್ಲಿ ಪತ್ರಿಕೆಗಳಿಗೆ ಛಾಯಾಚಿತ್ರ ಕಳಿಸುತ್ತಿದ್ದರು. ಬಳಿಕ ಪತ್ರಿಕೆಗಳಿಗೆ ಅಂಕಣ ಬರೆಯುವ ಮೂಲಕ ಗುರುತಿಸಿಕೊಂಡಿದ್ದರು. 7ನೇ ತರಗತಿ ಓದಿದ್ದಾರೆ.

ಕಲಬುರಗಿಯಲ್ಲಿ ಮಲ್ಲಿಕಾರ್ಜುನ ಖರ್ಗೆ ಭರವಸೆ • ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ

'ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 30 ಲಕ್ಷ ಹುದ್ದೆಗಳ ಭರ್ತಿ'

ಪ್ರಜಾವಾಣಿ ವಾರ್ತೆ

ಕಲಬುರಗಿ: ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದರೆ ಖಾಲಿ ಇರುವ 30 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ನಿರುದ್ಯೋಗಿಗಳಿಗೆ ತಲಾ ₹ 1 ಲಕ್ಷ ಖರ್ಚು ಮಾಡಿ ತರಬೇತಿ ನೀಡಲಾಗುವುದು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭರವಸೆ ನೀಡಿದರು.

ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯಿತಿಯಿಂದ ಬುಧವಾರ ಇಲ್ಲಿ ಆಯೋಜಿಸಿದ್ದ ಗ್ಯಾರಂಟಿ ಫಲಾನುಭವಿಗಳ ಸಮಾವೇಶ ಹಾಗೂ ₹ 1,460 ಕೋಟಿ ಮೊತ್ತದ ವಿವಿಧ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕು ಸ್ಥಾಪನೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಅವರು, ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ಪರವಾಗಿ ರಣಕಹಳೆ ಮೊಳಗಿಸಿದರು.


'ರಾಜ್ಯ ವಿಧಾನಸಭೆ ಚುನಾವಣೆಗೆ ಮುನ್ನ ನೀಡಿದ್ದ ಐದು ಗ್ಯಾರಂಟಿಗಳನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತಂದಿದ್ದೇವೆ. ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು, ಉದ್ಯೋಗ ಭದ್ರತೆಯಿಲ್ಲದ ಆಶಾ, ಅಂಗನವಾಡಿ ಕಾರ್ಯಕರ್ತೆಯರ ವೇತನವನ್ನು ದುಪ್ಪಟ್ಟುಗೊಳಿಸಲಾಗುವುದು. ಆದಿವಾಸಿಗಳಿಗೆ ಆರ್ಥಿಕ ನೆರವು ನೀಡುವ ಮೂಲಕ ಮುಖ್ಯವಾಹಿನಿಗೆ ತರಲಾಗುವುದು. ಜನಗಣತಿಯ ಅಂಕಿ–ಅಂಶಗಳನ್ನು ಆಧರಿಸಿ ಆರ್ಥಿಕವಾಗಿ ಹಿಂದುಳಿದವರಿಗೆ ಆರ್ಥಿಕ ನೆರವು ನೀಡಲಾಗುವುದು' ಎಂದು ಆಶ್ವಾಸನೆ ನೀಡಿದರು.

ಮೋದಿ ವಿರುದ್ಧ ವಾಗ್ದಾಳಿ: ಮಾರ್ಚ್ 16ರಂದು ಕಲಬುರಗಿಗೆ ಭೇಟಿ ನೀಡಲಿರುವ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಮಲ್ಲಿಕಾರ್ಜುನ ಖರ್ಗೆ ಅವರು, ಇತ್ತೀಚೆಗೆ ಪ್ರಧಾನಿ ಮೋದಿ ಅವರು ಕಲಬುರಗಿಯನ್ನು ಕೇಂದ್ರವಾಗಿಸಿಕೊಂಡಿದ್ದು, ಆಗಾಗ ಭೇಟಿ ಕೊಡುತ್ತಲೇ ಇದ್ದಾರೆ. ದೆಹಲಿಯಲ್ಲಿ ಭೇಟಿ ಮಾಡಿದಾಗ, 'ಮೋದಿ ಅವರೇ ಆಗಾಗ ಐದಾರು ವಿಮಾನಗಳನ್ನು ತೆಗೆದುಕೊಂಡು ಕಡು ಬಿಸಿಲಿನ ಕಲಬುರಗಿಗೆ ಬರುತ್ತೀರಿ. ಕಲಬುರಗಿಗೆ ಬನ್ನಿ, ಸಂತೋಷ. ಆದರೆ, ಬಂದಾಗ ನಮ್ಮ ಜನರಿಗೆ ಏನನ್ನಾದರೂ (ಯೋಜನೆ) ಕೊಟ್ಟು ಹೋಗಿ. ಖಾಲಿ ಕೈಯಿಂದ ಹೋದರೆ ಹೇಗೆ' ಎಂದು ಪ್ರಶ್ನಿಸಿದ್ದೆ ಎಂದು ಸ್ಮರಿಸಿದರು.

'ಮೋದಿ ಅವರು ಪ್ರತಿ ವರ್ಷ ಎರಡು ಕೋಟಿ ಉದ್ಯೋಗ ಸೃಷ್ಟಿ ಮಾಡುವುದಾಗಿ ಹೇಳಿದ್ದರು. ಪ್ರತಿಯೊಬ್ಬರ ಖಾತೆಗೆ ₹ 15 ಲಕ್ಷ ಹಣ ಹಾಕುವುದಾಗಿ ತಿಳಿಸಿದ್ದರು. ಮೋದಿಯವರೇ, ಇವೆರಡು ಘೋಷಣೆಗಳನ್ನು ಈಡೇರಿಸಿದ್ದೀರಾ' ಎಂದು ಖರ್ಗೆ ಪ್ರಶ್ನಿಸಿದರು.

> **ಸಂವಿಧಾನ ಬದಲಾಯಿಸುವ ಹೇಳಿಕೆ ನೀಡಿದ ವ್ಯಕ್ತಿಗೆ ಬಿ ಫಾರಂ ಕೊಟ್ಟವರೂ ನೀವೇ (ಬಿಜೆಪಿ), ಗೆಲ್ಲಿಸಿಕೊಂಡು ಬಂದವರೂ ನೀವೇ. ಈಗ ಅವರ ಹೇಳಿಕೆಗೂ ನಿಮಗೂ ಸಂಬಂಧವಿಲ್ಲ ಎಂದರೆ ಹೇಗೆ?**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ಪ್ರಜಾ ಮತ ಜನತಂತ್ರದ ಹಬ್ಬ
ಲೋಕಸಭಾ ಚುನಾವಣೆ - 2024



ಕಲಬುರಗಿಯಲ್ಲಿ ಆಯೋಜಿಸಿದ್ದ ಗ್ಯಾರಂಟಿ ಫಲಾನುಭವಿಗಳ ಸಮಾವೇಶ, ವಿವಿಧ ಕಾಮಗಾರಿಗಳ ಚಾಲನೆ ಸಂದರ್ಭದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು 'ಕಲಬುರಗಿ ರೊಟ್ಟಿ' ಬ್ರ್ಯಾಂಡ್‌ಗೆ ಚಾಲನೆ ನೀಡಿದರು. ಸಚಿವ ಪ್ರಿಯಾಂಕ್ ಖರ್ಗೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಡಾ.ಶರಣಪ್ರಕಾಶ್ ಪಾಟೀಲ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

'ಮೋದಿ ಕಾಟ ತಾಳದೇ ರಾಜೀನಾಮೆ'

ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಅವರು ಕಾನೂನು ಬಾಹಿರ ಚಟುವಟಿಕೆಗಳನ್ನು ಮಾಡುವಂತೆ ಒತ್ತಡ ಹೇರುತ್ತಿದ್ದಾರೆ. ಇದನ್ನು ಮಾಡುವುದಕ್ಕೆ ಮನಸ್ಸು ಒಪ್ಪದೇ ಅಧಿಕಾರಿಗಳು ರಾಜೀನಾಮೆ ನೀಡುತ್ತಿದ್ದಾರೆ. ಚುನಾವಣಾ ಆಯುಕ್ತ ಅರುಣ್ ಗೋಯಲ್ ಅವರು ಇವರ ಒತ್ತಡ ತಾಳದೇ ರಾಜೀನಾಮೆ ನೀಡಿರಬಹುದು ಎಂದು ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು.

ದೇಶದಲ್ಲಿ ಇನ್ನೂ ಪ್ರಾಮಾಣಿಕವಾಗಿ ಕೆಲಸ ಮಾಡುವ ಅಧಿಕಾರಿಗಳು ಇದ್ದಾರೆ. ಅಕ್ರಮಗಳನ್ನು ಮಾಡುವಂತೆ ಅಂಥವರ ಮೇಲೆ ಮೋದಿ, ಶಾ ಒತ್ತಡ ಹೇರುತ್ತಿದ್ದಾರೆ ಎಂದರು.

'ಮೋದಿ ಸರ್ಕಾರ ವಿರೋಧ ಪಕ್ಷಗಳ ವಿರುದ್ಧ ದ್ವೇಷದ ರಾಜಕಾರಣ ಮಾಡುತ್ತಿದೆ. ಕಾಂಗ್ರೆಸ್ ಪಕ್ಷದ ಖಾತೆಯಲ್ಲಿದ್ದ ಜನರು ದೇಣಿಗೆ ನೀಡಿದ ಹಣ ₹ 300 ಕೋಟಿ, ₹ 400 ಕೋಟಿಯನ್ನು ಐಟಿ ಇಲಾಖೆಯ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ಒಂದು ಪೈಸೆಯನ್ನೂ ಖರ್ಚು ಮಾಡಲು ನಮಗೆ ಆಗುತ್ತಿಲ್ಲ. ಇದೇ ಸಂದರ್ಭದಲ್ಲಿ ಒಂದೇ ದಿನ ಬಿಜೆಪಿಗೆ ₹ 335 ಕೋಟಿ ದೇಣಿಗೆ ಹರಿದು ಬಂದಿದೆ. ಚುನಾವಣಾ ಬಾಂಡ್ ಮೂಲಕ ತನಗೆ ಹಣ ನೀಡಿದವರಿಗೆ ಬಿಜೆಪಿ ಯೋಜನೆಗಳನ್ನು ಗುತ್ತಿಗೆ ನೀಡಿದೆ. ಸರ್ಕಾರಿ ಜಾಗಗಳನ್ನು ಲೀಸ್ ಮೇಲೆ ನೀಡಿದೆ. ಬಾಂಡ್ ಖರೀದಿಸಿದವರ ಹೆಸರು ಹೊರಗೆ ಬಂದರೆ ತನ್ನ ಕಳ್ಳತನ ಬಯಲಾಗುತ್ತದೆ ಎಂದು ಕೇಂದ್ರ ಸರ್ಕಾರ ಎಸ್‌ಬಿಐ ಮೇಲೆ ಒತ್ತಡ ತಂದು ಮಾಹಿತಿ ನೀಡಲು ಗಡುವನ್ನು ವಿಸ್ತರಿಸುವಂತೆ ಸುಪ್ರೀಂಕೋರ್ಟ್‌ಗೆ ಮನವಿ ಸಲ್ಲಿಸಲು ಹೇಳಿತ್ತು' ಎಂದು ಆಪಾದಿಸಿದರು.

ನಾಳೆಯಿಂದ ಕರ್ನಾಟಕ ಇತಿಹಾಸ ಪರಿಷತ್ತಿನ ಅಧಿವೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ತು ಹಾಗೂ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಸಹಯೋಗದಲ್ಲಿ ಸರ್ಕಾರಿ ಕಲಾ ಕಾಲೇಜಿನ ಇದೇ 15ರಿಂದ 17ರವರೆಗೆ ಕರ್ನಾಟಕ ಇತಿಹಾಸ ಪರಿಷತ್ತಿನ 34ನೇ ವಾರ್ಷಿಕ ಮಹಾ ಅಧಿವೇಶನ ಹಮ್ಮಿಕೊಂಡಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಪಿ.ಟಿ. ಶ್ರೀನಿವಾಸ ನಾಯಕ, 'ಅಧಿವೇಶನವು ಕಾಲೇಜಿನಲ್ಲಿ ನಡೆಯಲಿದ್ದು, ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಅಧಿವೇಶನ ಉದ್ಘಾಟಿಸುತ್ತಾರೆ. ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಅಶ್ವತ್ಥನಾರಾಯಣ ಅವರು ಸಮ್ಮೇಳನಾಧ್ಯಕ್ಷತೆ ವಹಿಸಲಿದ್ದಾರೆ' ಎಂದರು.

'ಅಧಿವೇಶನದಲ್ಲಿ ರಾಷ್ಟ್ರಮಟ್ಟದ ವಿದ್ವಾಂಸರು, ಸಂಶೋಧಕರು, ಇತಿಹಾಸ ತಜ್ಞರು ಪ್ರಬಂಧಗಳನ್ನು ಮಂಡಿಸುತ್ತಾರೆ.

ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ವಿಶ್ರಾಂತ ಸಮ ಕುಲಪತಿ ಎಸ್. ಚಂದ್ರಶೇಖರ್ ಅವರು ಸಮಾರೋಪ ಭಾಷಣ ಮಾಡುತ್ತಾರೆ' ಎಂದು ಅವರು ಹೇಳಿದರು.

ಸುಧಾ, ಮಯೂರ ಓದಿರಿ

ಯಲಹಂಕ ಸಂಯೋಜಿತ ಆವರ್ತ ವಿದ್ಯುತ್ ಸ್ಥಾವರ • ಸ್ಥಳೀಯ ನಿವಾಸಿಗಳ ವಿರೋಧದ ನಡುವೆ ಘಟಕ ಆರಂಭ

370 ಮೆ.ವಾ ವಿದ್ಯುತ್ ಉತ್ಪಾದನೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ಅನುಮತಿಯೊಂದಿಗೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ನಿಗಾದಲ್ಲಿ ಯಲಹಂಕದಲ್ಲಿ ಪ್ರಾಯೋಗಿಕವಾಗಿ ಕಾರ್ಯಾರಂಭ ಮಾಡಿರುವ ಯಲಹಂಕ ಸಂಯೋಜಿತ ಆವರ್ತ ವಿದ್ಯುತ್ ಸ್ಥಾವರ (ವೈಸಿಸಿಪಿ) ಮೇ ತಿಂಗಳಿನಿಂದ ನಿತ್ಯ 370 ಮೆಗಾವಾಟ್ ವಿದ್ಯುತ್ ಉತ್ಪಾದಿಸಲು ಸಜ್ಜಾಗುತ್ತಿದೆ.

ಸುತ್ತಮುತ್ತಲಿನ ಸ್ಥಳೀಯ ನಿವಾಸಿಗಳ ವಿರೋಧದ ನಡುವೆ ಘಟಕ ಕಾರ್ಯಾರಂಭ ಮಾಡಿದೆ. ಕರ್ನಾಟಕ ವಿದ್ಯುತ್ ನಿಗಮ ಸ್ಥಾಪಿಸಿರುವ ಈ ವೈಸಿಸಿಪಿ ಘಟಕದಲ್ಲಿ ಅನಿಲ ಹಾಗೂ ಹಬೆಯಿಂದ ವಿದ್ಯುತ್ ಉತ್ಪಾದಿಸಲಾಗುತ್ತದೆ. ಇವೆರಡೂ ಸಂಯೋಜಿತಗೊಂಡು ಕೆಪಿಟಿಸಿಎಲ್ ಗ್ರಿಡ್‌ಗೆ ಪೂರೈಕೆಯಾಗುತ್ತದೆ.

ಘಟಕದ ಕಾರ್ಯಾಚರಣೆ ಕುರಿತು ಮಂಗಳವಾರ ಘಟಕಕ್ಕೆ ಭೇಟಿ ನೀಡಿದ ಸುದ್ದಿಗಾರರಿಗೆ ವಿವರಿಸಿದ ಕೆಪಿಸಿಎಲ್ ಅಧಿಕಾರಿಗಳು,'ಸದ್ಯ ನೈಸರ್ಗಿಕ ಅನಿಲ ಆಧಾರಿತ ವಿದ್ಯುತ್ ಘಟಕ ಮಾತ್ರ ಚಾಲನೆಯಲ್ಲಿದೆ' ಎಂದರು. ಘಟಕದ ಕಾರ್ಯಾಚರಣೆ, ಸ್ಥಾವರದ ಅನಿಲ ಟರ್ಬೈನ್, ಬಾಯ್ಲರ್ ಟರ್ಬೈನ್, ಘಟಕ ನಿಯಂತ್ರಣ ಕೊಠಡಿ, ಕೂಲಿಂಗ್ ಟವರ್, 60 ಮೀಟರ್ ಎತ್ತರದ ಚಿಮಣಿ, ಸಂಸ್ಕರಿಸಿದ ತ್ಯಾಜ್ಯ ನೀರು ಸಂಗ್ರಹಣೆಯ ಹೊಂಡ ಮತ್ತಿತರ ಭಾಗಗಳನ್ನು ಕಾರ್ಯಪಾಲಕ ಎಂಜಿನಿಯರ್ ಮಹಾದೇವಪ್ರಸಾದ್ ಪರಿಚಯಿಸಿದರು.

'ಸುಪ್ರೀಂ ಕೋರ್ಟ್ ಆದೇಶದಂತೆ ಘಟಕವು ಎಲ್ಲ ರೀತಿಯಲ್ಲೂ ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಪರಿಸರ ಮಾಲಿನ್ಯ ಮತ್ತು ಶಬ್ದ ಮಾಲಿನ್ಯ ತಡೆಗಟ್ಟಲು ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಶಬ್ದ ಮಾಲಿನ್ಯದ ಮೇಲೆ ನಿಗಾ ಇಡಲು ಘಟಕದಲ್ಲಿ ಮೂರು ಕಡೆ 'ಶಬ್ದ ಮಾಪಕ' ಗಳನ್ನು ಅಳವಡಿಸಲಾಗಿದ್ದು, ವಾಸ್ತವಿಕ ಸಮಯದ ಮಾಪನ ದಾಖಲಾಗುತ್ತಿದೆ. ಎಲ್ಲವೂ ಮಾಲಿನ್ಯ ನಿಯಂತ್ರಣ ಮಂಡಳಿಗೆ ನೇರವಾಗಿ ರವಾನೆಯಾಗುತ್ತದೆ. ಜೊತೆಗೆ, ಕೆಎಸ್‌ಪಿಸಿಬಿ, ತನ್ನದೇ ಸಂಚಾರಿ ವಾಹನದ ಮೂಲಕ ಘಟಕದ ಸುತ್ತಲಿನ ವಾತಾವರಣದ ಮಾಹಿತಿಯನ್ನೂ ಸಂಗ್ರಹಿಸುತ್ತಿದೆ' ಎಂದು ಕೆಪಿಸಿಎಲ್‌ನ ಎಂಜಿನಿಯರ್‌ಗಳು ವಿವರಿಸಿದರು.

'ಸುಪ್ರೀಂ ಕೋರ್ಟ್ 2023ರ ನವೆಂಬರ್ 8ರಂದು ಘಟಕದ ಪ್ರಾರಂಭಕ್ಕೆ ಅನುಮತಿ ನೀಡಿದೆ. ನಂತರದ ಐದೂವರೆ ತಿಂಗಳು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಎಲ್ಲ ಮಾಹಿತಿ ಸಂಗ್ರಹಿಸಿ, ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಲಿದೆ. ಜುಲೈ 2024ರಿಂದ ನ್ಯಾಯಾಲಯ ಇದನ್ನು ಪರಿಶೀಲಿಸಲಿದೆ' ಎಂದು ಅವರು ವಿವರಿಸಿದರು.

ಹಿಂದೆ ಡೀಸೆಲ್ ಆಧರಿತ ವಿದ್ಯುತ್ ಉತ್ಪಾದನಾ ಘಟಕವಾಗಿತ್ತು. ಮಾಲಿನ್ಯದ ಕಾರಣದಿಂದ ಆಗ ಸ್ಥಳೀಯರು ಪ್ರತಿಭಟಿಸಿದ್ದರು. ಇದರಿಂದ ಘಟಕ ಸ್ಥಗಿತಗೊಂಡಿತ್ತು. 'ಈಗ ಗೃಹ ಬಳಕೆಯ ಅನಿಲಕ್ಕೆ ಪರ್ಯಾಯವಾದ ಆರ್‌ಎಲ್‌ಎನ್‌ಜಿ (ರಿಗ್ಯಾಸಿಫೈಡ್ ಲಿಕ್ವಿಫೈಡ್ ನ್ಯಾಚುರಲ್ ಗ್ಯಾಸ್) ಬಳಸಿ ವಿದ್ಯುತ್ ಉತ್ಪಾದಿಸುತ್ತಿದೆ' ಎಂದು ತಿಳಿಸಿದರು.

ಗಣನೀಯವಾಗಿ ಸುಧಾರಣೆ: 'ಘಟಕದಿಂದ ಹೊಮ್ಮುತ್ತಿರುವ ಹೊಗೆ ಮತ್ತು ಶಬ್ದದ ಬಗ್ಗೆ ಇತ್ತೀಚೆಗೆ ಸ್ಥಳೀಯರು ಆಕ್ಷೇಪಿಸಿದ್ದರು. ಈ ಸಮಸ್ಯೆ ತಾತ್ಕಾಲಿಕ. ಪ್ರಾಯೋಗಿಕ ಹಂತದ ನಂತರ ಪರಿಸ್ಥಿತಿ ಗಣನೀಯವಾಗಿ ಸುಧಾರಿಸಲಿದೆ. ಶಬ್ದದ ಪ್ರಮಾಣ ಕಡಿಮೆಯಾಗಲಿದೆ' ಎಂದು ಕೆಪಿಸಿಎಲ್ ಅಧಿಕಾರಿಗಳು ಸ್ಪಷ್ಟಪಡಿಸಿದರು.

'ಸದ್ಯ ಗ್ಯಾಸ್ ಟರ್ಬೈನ್ ಚಾಲನೆಯಲ್ಲಿದೆ. ಇದರಿಂದ ಶಬ್ದ ಹೆಚ್ಚು. 30ರಿಂದ 45 ದಿನಗಳು ಮಾತ್ರ ಪರಿಸ್ಥಿತಿ ಹೀಗಿರಲಿದೆ. ಇದು ಸಂಯೋಜಿತ ಆವರ್ತ ಸ್ಥಾವರವಾಗಿರುವುದರಿಂದ ಒಮ್ಮೆ ಸ್ಟೀಮ್ ಟರ್ಬೈನ್ ಆರಂಭವಾದರೆ, ಶಬ್ದ ಕಡಿಮೆಯಾಗುತ್ತದೆ' ಎಂದು ಕೆಪಿಸಿಎಲ್ ತಾಂತ್ರಿಕ ನಿರ್ದೇಶಕ ದಿವಾಕರ್ ಹೇಳಿದರು.

ಅಂಕಿ ಅಂಶ

- **2,755** ದಶಲಕ್ಷ ಯೂನಿಟ್ ವಾರ್ಷಿಕ ವಿದ್ಯುತ್ ಉತ್ಪಾದನೆ
- **₹7.50**ರಿಂದ **₹8** ಪ್ರತಿ ಯೂನಿಟ್‌ಗೆ ವಿದ್ಯುತ್ ಉತ್ಪಾದನಾ ವೆಚ್ಚ
- ನಿತ್ಯ **15** ದಶಲಕ್ಷ ಲೀಟರ್ ಸಂಸ್ಕರಿತ ತ್ಯಾಜ್ಯ ನೀರು ಬಳಕೆ
- **₹150** ಕೋಟಿ ವೆಚ್ಚ ಪರಿಸರ ಸಂರಕ್ಷಣೆಗೆ ಅಂದಾಜು
- **₹2,298** ಕೋಟಿ ಯೋಜನಾ ವೆಚ್ಚ
- **370** ಮೆಗಾವಾಟ್ ವಿದ್ಯುತ್ ಉತ್ಪಾದನೆ. ಘಟಕಕ್ಕೆ **12.86** ಮೆಗಾವಾಟ್ ಬಳಕೆ.
- ನೈಸರ್ಗಿಕ ಅನಿಲದಿಂದ **236.82** ಮತ್ತು ಹಬೆಯಿಂದ **133.25** ಮೆಗಾವಾಟ್ ವಿದ್ಯುತ್ ಉತ್ಪಾದನೆ ಸಾಮರ್ಥ್ಯ



ಯಲಹಂಕದಲ್ಲಿರುವ ಸಂಯೋಜಿತ ಆವರ್ತ ವಿದ್ಯುತ್ ಸ್ಥಾವರ

ಗೀತಂ ವಿ.ವಿಯಲ್ಲಿ ವಿದ್ಯಾರ್ಥಿ ಸಾವು: ದೂರು ದಾಖಲು

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ನಾಗದೇನಹಳ್ಳಿ ಸಮೀಪದ ಗೀತಂ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ರಾತ್ರಿ ವಿದ್ಯಾರ್ಥಿಯೊಬ್ಬರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದಾರೆ.

ಆಂಧ್ರಪ್ರದೇಶದ ಕರ್ನೂಲ್ ಮೂಲದ ದಾಸರಿಬ್ರಹ್ಮಸಾಯಿರೆಡ್ಡಿ (18) ಪ್ರಥಮ ವರ್ಷದ ಬಿಟೆಕ್ ವ್ಯಾಸಂಗ ಮಾಡುತ್ತಿದ್ದ. ಮಂಗಳವಾರ ರಾತ್ರಿ ಊಟ ಮಾಡಿದ ನಂತರ ಮಹಡಿ ಮೇಲಿಂದ ಬಿದ್ದು ಮೃತಪಟ್ಟಿದ್ದಾನೆ.

ಮಗನ ಸಾವಿನ ಕುರಿತಂತೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುವ ಮೃತ ವಿದ್ಯಾರ್ಥಿ ತಂದೆ ವೆಂಕಟಶಿವರೆಡ್ಡಿ, ಹಾಸ್ಟೆಲ್‌ನ 6ನೇ ಮಹಡಿಯಲ್ಲಿ ಈಗಷ್ಟೇ ಕಾಮಗಾರಿ ನಡೆಯುತ್ತಿದೆ. ಇಲ್ಲಿ ಯಾವುದೇ ರೀತಿಯ ಮುಂಜಾಗೃತ ಕ್ರಮ ಕೈಗೊಂಡಿಲ್ಲ. ಕಾಲೇಜಿನ ಆಡಳಿತ ಮಂಡಳಿ ಹಾಗೂ ಕಟ್ಟಡ ಗುತ್ತಿಗೆದಾರರ ನಿರ್ಲಕ್ಷ್ಯವೇ ಮಗನ ಸಾವಿಗೆ ಕಾರಣ. ನಿರ್ಲಕ್ಷ್ಯ ವಹಿಸಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದ್ದಾರೆ. ಮೃತ ವಿದ್ಯಾರ್ಥಿಯ ತಂದೆ ನೀಡಿರುವ ದೂರಿನ ಮೇರೆಗೆ ಗ್ರಾಮಾಂತರ ಠಾಣೆ ಪೊಲೀಸರು ಗೀತಂ ವಿ.ವಿ ಕುಲಪತಿ ಸೇರಿದಂತೆ 7 ಜನರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ನೀರಿನ ಸಮಸ್ಯೆ: ಶಾಶ್ವತ ಪರಿಹಾರಕ್ಕೆ ಆಗ್ರಹ



ನೀರಿನ ಕೊರತೆ ನೀಗಿಸುವಂತೆ ಆಗ್ರಹಿಸಿ ನಗರದಲ್ಲಿ ಬುಧವಾರ ಎಸ್‌ಯುಸಿಐ ಸದಸ್ಯರು ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆರೆ ಒತ್ತುವರಿ, ಕಾಡು ನಾಶ, ಅಸಮರ್ಪಕ ನಿರ್ವಹಣೆಯಿಂದ ನಗರದಾದ್ಯಂತ ನೀರಿನ ಸಮಸ್ಯೆ ಉಂಟಾಗಿದೆ. ಅಧಿಕಾರಿಗಳು, ಜನ ಪ್ರತಿನಿಧಿಗಳು, ತಜ್ಞರು ಸೇರಿ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಎಂದು ಆಗ್ರಹಿಸಿ ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಸದಸ್ಯರು ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

ಎಸ್‌ಯುಸಿಐ ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ ವಿ. ಜ್ಞಾನಮೂರ್ತಿ ಮಾತನಾಡಿ, 'ಮಾರ್ಚ್ ಆರಂಭದಲ್ಲಿ ನೀರಿನ ಸಮಸ್ಯೆ ಉಂಟಾಗುತ್ತಿರಲಿಲ್ಲ. ಕಳೆದ ವರ್ಷ ಮಳೆ ಕಡಿಮೆಯಾಗಿರುವುದು ಮೇಲ್ನೋಟಕ್ಕೆ ಕಾಣುವ ಕಾರಣವಾದರೆ, ರಾಜಕಾರಣಿಗಳ ಮತ್ತು ರಿಯಲ್ ಎಸ್ಟೇಟ್ ದಂಧೆಕೋರರ ದುರಾಸೆಯಿಂದಾಗಿ ಆಗುತ್ತಿರುವ ಅತಿಯಾದ ನಗರೀಕರಣವೇ ಸಮಸ್ಯೆಗೆ ಮೂಲ ಕಾರಣ. ಕೆರೆಗಳನ್ನು ಒತ್ತುವರಿ ಮಾಡಿಕೊಂಡು ಅಂತರ್ಜಲವನ್ನು ನಾಶ ಮಾಡಲಾಗಿದೆ' ಎಂದು ಆರೋಪಿಸಿದರು.

ಟ್ಯಾಂಕರ್‌ಗಳನ್ನು ನೋಂದಣಿ ಮಾಡಿಕೊಂಡು ನಿಗದಿತ ಶುಲ್ಕವನ್ನಷ್ಟೇ ಪಡೆದು ನೀರು ಸರಬರಾಜು ಮಾಡಬೇಕು ಎಂದು ಜಲಮಂಡಳಿ ಆದೇಶಿಸಿದ್ದರೂ ಟ್ಯಾಂಕರ್ ದಂಧೆ ಜೋರಾಗಿ ನಡೆಯುತ್ತಿದೆ. ಕೃತಕ ಅಭಾವ ಸೃಷ್ಟಿಸಲಾಗಿದೆ. ಇಂಥ ಸಮಸ್ಯೆಗಳನ್ನು ಸರಿಪಡಿಸಬೇಕು. ಬೇಸಿಗೆಯಲ್ಲಿ ನೀರಿನ ಸಮಸ್ಯೆ ಉಂಟಾಗದಂತೆ ಶಾಶ್ವತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಸಮಿತಿ ಸದಸ್ಯೆ ಶೋಭಾ ಎಸ್. ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಎಂ.ಎನ್. ಶ್ರೀರಾಮ್, ಸದಸ್ಯರಾದ ಎನ್.ರವಿ, ಎಚ್.ಪಿ. ಶಿವಪ್ರಕಾಶ್, ಕೃಷ್ಣ, ಜಯಣ್ಣ ಅವರು ಪ್ರತಿಭಟನೆ ಸಂದರ್ಭದಲ್ಲಿ ಹಾಜರಿದ್ದರು.

ಅಂತರ್ಜಲ ಮಟ್ಟ ಕುಸಿತ • ಬತ್ತುತ್ತಿರುವ ಕೊಳವೆ ಬಾವಿಗಳು • ಕಾರ್ಮಿಕರಿಗಿಲ್ಲ ಕೆಲಸ

ಧೋಬಿ ಘಾಟ್: ನೀರಿನ ಕೊರತೆ ತೀವ್ರ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: 'ದಿನಕ್ಕೆ ₹1,500ದಿಂದ ₹2,000 ದುಡಿಯುತ್ತಿದ್ದ ಜಾಗದಲ್ಲಿ, ಇದೀಗ ₹500 ಸಹ ಕೈಗೆ ಸಿಗುತ್ತಿಲ್ಲ. ಕೊಳವೆ ಬಾವಿಗಳು ಬತ್ತುತ್ತಿದ್ದು, ಹೆಚ್ಚು ಬಟ್ಟೆಗಳಿದ್ದರೂ ಸ್ವಚ್ಛಗೊಳಿಸಲು ಅಗತ್ಯವಿರುವಷ್ಟು ನೀರಿಲ್ಲ. ಸದಾ ನೀರಿನಿಂದ ಹಸಿಯಾಗಿರುತ್ತಿದ್ದ ನಮ್ಮ ಸ್ಥಳ, ಇದೀಗ ಕ್ರಮೇಣ ಒಣಗುತ್ತಿದೆ. ಬೇಸಿಗೆ ಮುಗಿಯುವವರೆಗೂ ನಮಗೆ ಕಷ್ಟಗಳು ತಪ್ಪಿದ್ದಲ್ಲ'

ನಗರದಲ್ಲಿ ಧೋಬಿಘಾಟ್‌ಗಳನ್ನೇ ನಂಬಿಕೊಂಡು ಜೀವನ ನಡೆಸುತ್ತಿರುವ ಕಾರ್ಮಿಕರ ಮಾತುಗಳಿವು.

ಬೇಸಿಗೆ ಆರಂಭವಾಗುತ್ತಿದ್ದಂತೆ ಧೋಬಿಘಾಟ್‌ಗಳಲ್ಲಿ ನೀರಿನ ಅಭಾವ ಸೃಷ್ಟಿಯಾಗಿದ್ದು, ಬಟ್ಟೆಗಳ ಕೊಳೆ ತೊಳೆಯುವ ಕಾರ್ಮಿಕರ ದುಡಿಮೆಗೂ ಪೆಟ್ಟು ಬಿದ್ದಿದೆ. ರಾಜಾಜಿನಗರ, ಮಲ್ಲೇಶ್ವರ, ಶ್ರೀನಗರ, ನಾಗರಭಾವಿ, ಕುಮಾರಸ್ವಾಮಿ ಲೇಔಟ್, ಹಲಸೂರು, ದೊಡ್ಡ ಬಿದರಕಲ್ಲು ಹಾಗೂ ಲಗ್ಗೆರೆ ಸೇರಿದಂತೆ ನಗರದ 30ಕ್ಕೂ ಹೆಚ್ಚು ಕಡೆಗಳಲ್ಲಿ ಧೋಬಿಘಾಟ್‌ಗಳಿವೆ. ಎಲ್ಲ ಕಡೆಯೂ ನೀರಿನ ಕೊರತೆ ಎದುರಾಗಿದೆ.

ಬಹುತೇಕ ಧೋಬಿ ಘಾಟ್‌ಗಳಲ್ಲಿರುವ ಕೊಳವೆಬಾವಿಗಳಲ್ಲಿ ನೀರು ಕಡಿಮೆಯಾಗುತ್ತಿದೆ. ಬಟ್ಟೆ ಸ್ವಚ್ಛಗೊಳಿಸುವ ಪ್ರಮಾಣವೂ ದಿನದಿಂದ ದಿನಕ್ಕೆ ತಗ್ಗುತ್ತಿದೆ. ಮಾರ್ಚ್ ಅಂತ್ಯದಿಂದ ಲಭ್ಯವಾಗುವ ನೀರಿನ ಪ್ರಮಾಣ ಕ್ಷೀಣಿಸುವ ಸಾಧ್ಯತೆ ಇದ್ದು, ಕೆಲ ಧೋಬಿ ಘಾಟ್‌ಗಳು ಬಾಗಿಲು ಬಂದ್ ಮಾಡುವ ಪರಿಸ್ಥಿತಿಯೂ ಬರಬಹುದು ಎಂದು ಅಂದಾಜಿಸಲಾಗುತ್ತಿದೆ.

ಕೆಲವು ಕಡೆ ವಾಷಿಂಗ್ ಮಷಿನ್ ತರಹದ ದೊಡ್ಡ ಯಂತ್ರಗಳನ್ನು ಬಳಸಿ ಬಟ್ಟೆ ಸ್ವಚ್ಛಗೊಳಿಸುತ್ತಿದ್ದರೆ, ಇನ್ನೂ ಕೆಲವು ಕಡೆ ಕೈಯಿಂದಲೂ ಕಾರ್ಮಿಕರು ಬಟ್ಟೆ ತೊಳೆಯುತ್ತಿದ್ದಾರೆ. ಇದೀಗ, ಎರಡೂ ರೀತಿಯ ಕೆಲಸಕ್ಕೆ ನೀರಿನ ಕೊರತೆ ಎದುರಾಗಿದೆ. ಟ್ಯಾಂಕರ್ ನೀರು ಖರೀದಿಸಿ ಕೆಲಸ ಮಾಡುವಷ್ಟು ಆರ್ಥಿಕ ಶಕ್ತಿ ಕಾರ್ಮಿಕರಲ್ಲಿಲ್ಲ.

ಕೊಳವೆ ಬಾವಿಗಳೇ ಆಧಾರ: ನಗರದ ಬಹುತೇಕ ಧೋಬಿ ಘಾಟ್‌ಗಳು ಕೊಳವೆ ಬಾವಿ ನೀರು ನಂಬಿಕೊಂಡು ಕಾರ್ಯನಿರ್ವಹಿಸುತ್ತಿವೆ. ಕೆಲ ಧೋಬಿ ಘಾಟ್‌ಗಳಲ್ಲಿ ತೆರೆದ ಬಾವಿಗಳಿದ್ದು, ಅಲ್ಲಿ ನೀರಿನ ಲಭ್ಯತೆ ತೀರಾ ಕಡಿಮೆ. ಅಂತರ್ಜಲ ಮಟ್ಟ ಕುಸಿಯುತ್ತಿದ್ದು, ಕೊಳವೆ ಬಾವಿಗಳಲ್ಲೂ ನೀರಿನ ಪ್ರಮಾಣ ಕ್ರಮೇಣ ಕಡಿಮೆಯಾಗುತ್ತಿದೆ.

'ಧೋಬಿ ಘಾಟ್ ಕೆಲಸಗಳಿಗಾಗಿಯೇ ನಾಲ್ಕು ಕೊಳವೆ ಬಾವಿಗಳನ್ನು ಕೊರೆಸಲಾಗಿತ್ತು. ಅದರಲ್ಲಿ ಮೂರು ಬಂದ್ ಆಗಿವೆ. ಒಂದರಲ್ಲಿ ಮಾತ್ರ ನೀರು ಇದೆ. ಅದರಲ್ಲೂ ಕಡಿಮೆಯಾಗಿದೆ. ಇರುವ ನೀರನ್ನೇ ಮಿತವಾಗಿ ಬಳಸಿ, ಬಟ್ಟೆಗಳನ್ನು ಸ್ವಚ್ಛಗೊಳಿಸುತ್ತಿದ್ದೇವೆ. ಪರಿಸ್ಥಿತಿ ಹೀಗೆ ಮುಂದುವರಿದರೆ, ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಸಮಸ್ಯೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ' ಎಂದು ರಾಜಾಜಿನಗರ ಧೋಬಿಘಾಟ್ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಮಹೇಶ್ ಹೇಳಿದರು.

ಕಾರ್ಮಿಕರ ಸಂಖ್ಯೆ ಇಳಿಕೆ: ನೀರಿನ ಕೊರತೆ ಆರಂಭವಾದಾಗಿನಿಂದ, ಬಟ್ಟೆ ತೊಳೆಯುವ ಪ್ರಮಾಣವೂ ಕಡಿಮೆಯಾಗಿದೆ. ಕಾರ್ಮಿಕರಿಗೂ ಕೆಲಸವಿಲ್ಲದಂತಾಗಿದೆ.

'ನಮ್ಮ ಧೋಬಿಘಾಟ್‌ನಲ್ಲಿ 35ರಿಂದ 40 ಕಾರ್ಮಿಕರಿದ್ದರು. ನೀರಿನ ಕೊರತೆ ಇರುವುದರಿಂದ, ಬಟ್ಟೆ ಸ್ವಚ್ಛತೆ ಕೆಲಸ ಕಡಿಮೆಯಾಗಿದೆ. ಹೀಗಾಗಿ, ಸದ್ಯ 10 ಮಂದಿ ಕಾರ್ಮಿಕರು ಇಲ್ಲಿದ್ದಾರೆ. ನೀರಿನ ಲಭ್ಯತೆ ನೋಡಿಕೊಂಡು ಪಾಳಿ ಪ್ರಕಾರ ಕೆಲಸ ಮಾಡುತ್ತಿದ್ದಾರೆ' ಎಂದು ಮಹೇಶ್ ಹೇಳಿದರು.

'ಧೋಬಿ ಘಾಟ್‌ನಿಂದಲೇ ನಾವು ಒಂದು ಹೊತ್ತು ಊಟ ಮಾಡುತ್ತಿದ್ದೇವೆ. ಇದೇ ನಮ್ಮ ಬದುಕಿಗೆ ಆಸರೆ. ನೀರಿನ ಕೊರತೆ ಇರುವುದರಿಂದ ಕಾರ್ಮಿಕರು ಕೆಲಸವಿಲ್ಲದೇ ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ಅಳಲು ತೋಡಿಕೊಂಡರು.

ಕೊಳವೆ ಬಾವಿ ಕೊರೆಸಲು ಮನವಿ: 'ಎಲ್ಲ ಧೋಬಿ ಘಾಟ್‌ಗಳಲ್ಲಿ ಪ್ರತಿ ಬೇಸಿಗೆಯಲ್ಲೂ ನೀರಿನ ಸಮಸ್ಯೆ ಉಂಟಾಗಿದೆ. ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕೊಳವೆ ಬಾವಿಗಳನ್ನು ಕೊರೆಸಲು ಸಂಬಂಧಪಟ್ಟವರು ಕ್ರಮ ಕೈಗೊಳ್ಳಬೇಕು' ಎಂದು ಕಾರ್ಮಿಕರು ಮನವಿ ಮಾಡುತ್ತಿದ್ದಾರೆ.

'ಧೋಬಿ ಘಾಟ್ ಸಮಸ್ಯೆಗಳ ಬಗ್ಗೆ ಪ್ರತಿ ವರ್ಷವೂ ಅಧಿಕಾರಿಗಳು ಹಾಗೂ ಜನ ಪ್ರತಿನಿಧಿಗಳಿಗೆ ಮನವಿ ಸಲ್ಲಿಸಲಾಗುತ್ತಿದೆ. ಕೆಲ ಬೇಡಿಕೆಗಳು ಈಡೇರುತ್ತಿವೆ. ಉಳಿದ ಬೇಡಿಕೆ ಈಡೇರಿಕೆಗೆ ಯಾವುದೇ ಕ್ರಮ ಜರುಗಿಸುತ್ತಿಲ್ಲ' ಎಂದು ಕಾರ್ಮಿಕರು ದೂರಿದರು.



ರಾಜಾಜಿನಗರ ಧೋಬಿ ಘಾಟ್‌ನಲ್ಲಿ ನೀರಿನ ಕೊರತೆಯಿಂದಾಗಿ ಒಬ್ಬ ಕಾರ್ಮಿಕ ಮಾತ್ರ ಮಂಗಳವಾರ ಕೆಲಸಕ್ಕೆ ಬಂದಿದ್ದರು — ಪ್ರಜಾವಾಣಿ ಚಿತ್ರಗಳು/ಕೃಷ್ಣಕುಮಾರ್ ಪಿ.ಎಸ್.



ಜಲ ಜಂಜಾಟ

ಮುಖ್ಯಾಂಶಗಳು

- ನಗರದಲ್ಲಿವೆ 30ಕ್ಕೂ ಹೆಚ್ಚು ಧೋಬಿ ಘಾಟ್‌ಗಳು
- ನೀರಿಗೆ ಕೊಳವೆ ಬಾವಿಗಳೇ ಆಧಾರ
- ಏಪ್ರಿಲ್, ಮೇನಲ್ಲಿ ಮತ್ತಷ್ಟು ಸಮಸ್ಯೆ

'ಆಸ್ಪತ್ರೆ, ವಸತಿಗೃಹ, ಟೆಂಟ್ ಹೌಸ್‌ಗೂ ತಟ್ಟಿದ ಬಿಸಿ'

ನಗರದ ಹಲವು ಆಸ್ಪತ್ರೆಗಳು, ವಸತಿಗೃಹಗಳು, ಹೋಟೆಲ್‌ಗಳು, ಟೆಂಟ್‌ಹೌಸ್‌ಗಳ ಬಟ್ಟೆಗಳನ್ನು ಧೋಬಿಘಾಟ್‌ನಲ್ಲಿ ಸ್ವಚ್ಛಗೊಳಿಸಲಾಗುತ್ತಿದೆ. ಲಾಂಡ್ರಿ ಬಟ್ಟೆಗಳ ಸ್ವಚ್ಛತೆಗೂ ಧೋಬಿ ಘಾಟ್ ಅವಲಂಬಿಸಲಾಗುತ್ತಿದೆ. ಈಗ ನೀರಿನ ಕೊರತೆಯಿಂದಾಗಿ, ಇವರೆಲ್ಲರಿಗೂ ತೊಂದರೆಯಾಗಿದೆ.

'ಈ ಹಿಂದೆ ಬೆಳಿಗ್ಗೆ ಬಟ್ಟೆಗಳನ್ನು ತಂದುಕೊಟ್ಟರೆ, ಸ್ವಚ್ಛಗೊಳಿಸಿ ಮಧ್ಯಾಹ್ನ ವಾಪಸು ಕೊಡುತ್ತಿದ್ದರು. ಆದರೆ, ಈಗ ನೀರಿಲ್ಲ. ಲಭ್ಯವಿರುವ ನೀರಿನಲ್ಲಿ ಸ್ವಲ್ಪ ಸ್ವಲ್ಪ ಬಟ್ಟೆ ಸ್ವಚ್ಛಗೊಳಿಸುತ್ತಿದ್ದಾರೆ. ಎರಡು ಅಥವಾ ಮೂರು ದಿನ ಬಿಟ್ಟು ಬಟ್ಟೆ ಸಿಗುತ್ತಿದೆ. ಇದು ನಮ್ಮ ದುಡಿಮೆ ಮೇಲೂ ಪರಿಣಾಮ ಬೀರಿದೆ' ಎಂದು ಮೆಜೆಸ್ಟಿಕ್‌ನ ವಸತಿಗೃಹವೊಂದರ ಕೆಲಸಗಾರ ಗಂಗಾಧರ ಹೇಳಿದರು.

ಧೋಬಿ ಘಾಟ್‌ನಲ್ಲಿ ದುಡಿಯುವವರು ಏನಂತಾರೆ?



ಈ ಹಿಂದೆ ಇಡೀ ದಿನ ಕೆಲಸ ಇರುತ್ತಿತ್ತು. ಈಗ ನೀರು ಇಲ್ಲ. ಕೆಲಸವೂ ಇಲ್ಲ. ಆಸ್ಪತ್ರೆ, ವಸತಿಗೃಹಗಳಿಂದ ಹಲವರು ಹೆಚ್ಚು ಬಟ್ಟೆಗಳನ್ನು ತಂದು ಕೊಡುತ್ತಿದ್ದಾರೆ. ಆದರೆ, ಅವುಗಳನ್ನು ಸ್ವಚ್ಛಗೊಳಿಸಲು ನೀರು ಕಡಿಮೆ ಇದೆ. ಲಭ್ಯವಿರುವ ನೀರಿನಲ್ಲಿ ಸರದಿ ಪ್ರಕಾರ ಸ್ವಲ್ಪ ಬಟ್ಟೆಗಳನ್ನಷ್ಟೇ ಸ್ವಚ್ಛಗೊಳಿಸಲಾಗುತ್ತಿದ್ದು, ದುಡಿಮೆ ತೀರಾ ಕಡಿಮೆಯಾಗಿದೆ.

ಸಿದ್ದರಾಜು, ರಾಜಾಜಿನಗರ ಧೋಬಿ ಘಾಟ್ ಕಾರ್ಮಿಕ



ಪ್ರತಿ ಬೇಸಿಗೆಯಲ್ಲೂ ನೀರಿನ ಸಮಸ್ಯೆ ಎದುರಾಗುತ್ತಿದೆ. ಈ ಬಾರಿ ಸ್ವಲ್ಪ ಹೆಚ್ಚಿದೆ. ನಾವೆಲ್ಲರೂ ಈ ವೃತ್ತಿಯನ್ನೇ ನಂಬಿ ಜೀವನ ಕಟ್ಟಿಕೊಂಡಿದ್ದೇವೆ. ನೀರಿಲ್ಲದೇ ಧೋಬಿ ಘಾಟ್ ಬಂದ್ ಆಗುತ್ತದೆ. ಜೀವನ ಕಷ್ಟವಾಗುತ್ತದೆ. ಕಾರ್ಮಿಕರ ಬದುಕು ಬೀದಿಗೆ ಬರುತ್ತದೆ. ನೀರಿನ ಕೊರತೆ ನೀಗಿಸಲು ಶಾಶ್ವತ ಪರಿಹಾರ ಕಂಡುಕೊಳ್ಳಬೇಕಿದೆ

ಮಹೇಶ್, ರಾಜಾಜಿನಗರ ಧೋಬಿ ಘಾಟ್ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ

ನೀರಿನ ಬವಣೆ..

ಬೆಂಗಳೂರಿನಲ್ಲಿ ನೀರಿಗೆ ಹಾಹಾಕಾರ ಉಂಟಾಗಿದೆ. ನಿಮ್ಮ ಪ್ರದೇಶದಲ್ಲಿಯೂ ನೀರಿನ ಬವಣೆ ಇದ್ದರೆ ಬರೆದು ಕಳುಹಿಸಿ

9606038256

'ಕೆರೆ ಒತ್ತುವರಿ ತೆರವಿಗೆ ನಿರ್ದಾಕ್ಷಿಣ್ಯ ಕ್ರಮ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಚಿಕ್ಕಬಾಣಾವರ ಕೆರೆ ಒತ್ತುವರಿಯನ್ನು ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಚಿಕ್ಕಬಾಣಾವರ ಕೆರೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, 'ಪ್ರಾಥಮಿಕ ಹಂತವಾಗಿ ₹2 ಕೋಟಿ ವೆಚ್ಚದಲ್ಲಿ ಕೆರೆಯ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ. ಮುಂದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದಲೂ ಸುಮಾರು ₹12.60 ಕೋಟಿ ವೆಚ್ಚದಲ್ಲಿ ಕೆರೆ ಅಭಿವೃದ್ಧಿ ಮಾಡಲಾಗುತ್ತದೆ' ಎಂದರು.

'ಕೆರೆಯ ಹೂಳು ತೆಗೆಸಿ, ನೀರನ್ನು ಶುದ್ಧಗೊಳಿಸಲಾಗುತ್ತದೆ. ಕೆರೆಗೆ ಕೊಳಚೆ ನೀರು ಹೋಗದಂತೆ ತಡೆಯಲಾಗುತ್ತದೆ. ಕೆರೆಯ ಸುತ್ತ ವಾಕಿಂಗ್ ಪಾತ್ ನಿರ್ಮಾಣ ಮಾಡಲಾಗುತ್ತದೆ' ಎಂದು ವಿವರಿಸಿದರು.

'ಅನುದಾನವಿಲ್ಲದೇ 105 ಎಕರೆ ವಿಸ್ತೀರ್ಣವುಳ್ಳ ಕೆರೆ ಅಭಿವೃದ್ಧಿ ಕಂಡಿರಲಿಲ್ಲ. ಈಗ ಎಲ್ಲರ ಪರಿಶ್ರಮದ ಫಲವಾಗಿ ಕೆರೆಯ ಅಭಿವೃದ್ಧಿಗೆ ಕಾಲ ಕೂಡಿಬಂದಿದೆ. ಈ ಕೆರೆಯನ್ನು ಸ್ವಚ್ಛ, ಸುಂದರ ಮತ್ತು ಜನಸ್ನೇಹಿಯನ್ನಾಗಿ ಅಭಿವೃದ್ಧಿಪಡಿಸಲಾಗುತ್ತದೆ' ಎಂದು ಭರವಸೆ ನೀಡಿದರು.

ಮುಖ್ಯ ಅಧಿಕಾರಿ ಎಚ್.ಎ. ಕುಮಾರ್ 'ಪುರಸಭೆ ಅನುದಾನದಲ್ಲಿ ಐದು ಹಂತಗಳಲ್ಲಿ ಕೆರೆ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದೆ. ಮೊದಲನೇ ಮತ್ತು ಎರಡನೇ ಹಂತದಲ್ಲಿ ₹2 ಕೋಟಿ ಮೊತ್ತದ ಕಾಮಗಾರಿ ಪ್ರಾರಂಭಿಸಲಾಗಿದೆ' ಎಂದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ. ಮರಿಸ್ವಾಮಿ, ಪುರಸಭೆಯ ಎಇ ಸುಮತಿ, ಪರಿಸರ ಎಂಜಿನಿಯರ್ ಹರೀಶ್, ಸ್ಥಳೀಯರಾದ ಬಿ.ಎಂ. ಚಿಕ್ಕಣ್ಣ, ಭಾಗ್ಯಮ್ಮ, ನವೀನ್, ದಿಲೀಪ್ ಸಿಂಹ, ಅಭಿಲಾಶ್ ಮರಿಸ್ವಾಮಿ ಮುಂತಾದವರು ಈ ಸಂದರ್ಭದಲ್ಲಿ ಸ್ಥಳದಲ್ಲಿ ಹಾಜರಿದ್ದರು.



ಚಿಕ್ಕಬಾಣಾವರ ಕೆರೆಯ ನೀಲನಕ್ಷೆಯನ್ನು ಶಾಸಕ ಎಸ್. ಮುನಿರಾಜು, ಜಿ. ಮರಿಸ್ವಾಮಿ ವೀಕ್ಷಿಸಿದರು



ನೀರಿಗಾಗಿ... ಬೆಂಗಳೂರಿನ ಬಂಗಾರಪ್ಪ ನಗರದಲ್ಲಿ ಟ್ಯಾಂಕರ್ ಮೂಲಕ ಸರಬರಾಜು ಮಾಡುತ್ತಿದ್ದ ನೀರನ್ನು ಕೊಡಗಳಲ್ಲಿ ತುಂಬಿ ಮನೆಗೆ ಒಯ್ಯುವ ಧಾವಂತದಲ್ಲಿರುವ ಮಹಿಳೆಯರು —ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

ಎಸ್‌ಸಿಎಸ್‌ಪಿ–ಟಿಎಸ್‌ಪಿ ಹಣ ಅನ್ಯ ಉದ್ದೇಶಕ್ಕೆ ಬೇಡ: ಆಂಜನೇಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗಾಗಿ ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆ ಜಾರಿಗೆ ತರಲಾಯಿತು. ಈ ಯೋಜನೆಯ ಹಣ ಸಮುದಾಯಗಳ ಅಭಿವೃದ್ಧಿಗಲ್ಲದೇ, ಬೇರೆಯದಕ್ಕೆ ಬಳಕೆ ಮಾಡಬಾರದು' ಎಂದು ಮಾಜಿ ಸಚಿವ ಎಚ್. ಆಂಜನೇಯ ಹೇಳಿದರು.

ಕರ್ನಾಟಕ ರಾಜ್ಯ ಎಸ್‌ಸಿ, ಎಸ್‌ಟಿ ಗುತ್ತಿಗೆದಾರರ ಸಂಘವು ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈ ಯೋಜನೆಯ ಹಣವನ್ನು ಯಾವುದೋ ರಸ್ತೆ ಅಭಿವೃದ್ಧಿಗೆ, ಚರಂಡಿ ನಿರ್ಮಾಣಕ್ಕೆ ಬಳಕೆ ಮಾಡಿದ್ದಾರೆ. ಸಮುದಾಯದ ಮನೆಗಳು ಇರುವಲ್ಲಿ ಬಳಕೆಯಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಹಿಂದಿನ ಸರ್ಕಾರ ಪ್ಯಾಕೇಜ್ ಟೆಂಡರ್ ಪದ್ಧತಿ ಜಾರಿಗೆ ತಂದು ಶ್ರೀಮಂತರನ್ನು ಇನ್ನಷ್ಟು ಶ್ರೀಮಂತಗೊಳಿಸಿತ್ತು. ಎಸ್‌ಸಿ, ಎಸ್‌ಟಿ ಗುತ್ತಿಗೆದಾರರಿಗೆ ₹ 50 ಲಕ್ಷವರೆಗಿನ ಗುತ್ತಿಗೆ ನೀಡುವ ಯೋಜನೆಯನ್ನು ಸಿದ್ದರಾಮಯ್ಯ ಅವರು ಹಿಂದಿನ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಜಾರಿಗೆ ತಂದಿದ್ದರು. ಈ ಬಾರಿ ₹1 ಕೋಟಿವರೆಗೆ ಹೆಚ್ಚಳ ಮಾಡಿದ್ದಾರೆ. ₹2 ಕೋಟಿಗೆ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

'ನಾವೆಲ್ಲ ಶೋಷಣೆಗೆ ಒಳಗಾದ ಸಮುದಾಯದವರು. ಈಗ ನಮ್ಮಲ್ಲೇ ಕೆಲವು ಶೋಷಕರು ಹುಟ್ಟಿಕೊಳ್ಳುತ್ತಿದ್ದಾರೆ. ಹೀಗಾಗಬಾರದು' ಎಂದು ಎಚ್ಚರಿಸಿದರು.

ಸಂಘದ ರಾಜ್ಯಾಧ್ಯಕ್ಷ ಎನ್. ಮಹದೇವಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ವಿಧಾನ ಪರಿಷತ್ ಸದಸ್ಯ ನಸೀರ್ ಅಹ್ಮದ್, ಕೌಶಲ ಅಭಿವೃದ್ಧಿ ನಿಗಮ ಅಧ್ಯಕ್ಷೆ ಕಾಂತ ನಾಯಕ್, ಸಹ ಪ್ರಾಧ್ಯಾಪಕ ಪ್ರದೀಪ್ ರಾಮಾವತ್, ಸುಪ್ರೀಂ ಕೋರ್ಟ್ ವಕೀಲೆ ಜೈನಾ ಕೊಠಾರಿ, ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಭಾಗವಹಿಸಿದ್ದರು.



ಕರ್ನಾಟಕ ರಾಜ್ಯ ಎಸ್‌ಸಿ., ಎಸ್‌ಟಿ. ಗುತ್ತಿಗೆದಾರರ ಸಂಘ ಆಯೋಜಿಸಿದ್ದ ಸಮಾರಂಭದಲ್ಲಿ ಮಾಜಿ ಸಚಿವ ಎಚ್. ಆಂಜನೇಯ ಅವರು ಡಾ. ಬಿ.ಆರ್. ಅಂಬೇಡ್ಕರ್ ಭಾವಚಿತ್ರಕ್ಕೆ ಮತ್ತು ಬುದ್ಧನ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಿದರು. ಮಾಯಕೊಂಡ ಶಾಸಕ ಕೆ.ಎಸ್ . ಬಸವಂತಪ್ಪ, ಗುತ್ತಿಗೆದಾರರ ರಾಜ್ಯಾಧ್ಯಕ್ಷ ಎನ್. ಮಹದೇವಸ್ವಾಮಿ, ಸಹ ಪ್ರಾಧ್ಯಾಪಕ ಪ್ರದೀಪ್ ರಾಮಾವತ್ ಉಪಸ್ಥಿತರಿದ್ದರು. —ಪ್ರಜಾವಾಣಿ ಚಿತ್ರ

ಇಂದು 'ರೈತರ ಮಹಾಪಂಚಾಯತ್'

ನವದೆಹಲಿ(ಪಿಟಿಐ): ಕೆಲವು ನಿಬಂಧನೆಗಳಿಗೆ ಒಳಪಟ್ಟು, ಇಲ್ಲಿನ ರಾಮಲೀಲಾ ಮೈದಾನದಲ್ಲಿ ಗುರುವಾರ 'ಕಿಸಾನ್ ಮಜದೂರ್ ಮಹಾಪಂಚಾಯತ್' ಆಯೋಜನೆಗೆ ದೆಹಲಿ ಪೊಲೀಸರು ರೈತರಿಗೆ ಅನುಮತಿ ನೀಡಿದ್ದಾರೆ.

ರೈತ ಸಂಘಟನೆಗಳ ಒಕ್ಕೂಟ 'ಸಂಯುಕ್ತ ಕಿಸಾನ್ ಮೋರ್ಚಾ' ಈ 'ಮಹಾಪಂಚಾಯತ್' ಆಯೋಜನೆ ಮಾಡಿದೆ. 'ಸಮಾವೇಶದಲ್ಲಿ 5 ಸಾವಿರಕ್ಕಿಂತ ಹೆಚ್ಚು ಜನ ಸೇರಬಾರದು. ಟ್ರ್ಯಾಕ್ಟರ್ ಟ್ರಾಲಿಗಳ ರ್‍ಯಾಲಿ ನಡೆಸಬಾರದು ಹಾಗೂ ರಾಮಲೀಲಾ ಮೈದಾನದಲ್ಲಿ ಮೆರವಣಿಗೆ ನಡೆಸಬಾರದು ಎಂಬುದು ಸೇರಿದಂತೆ ಹಲವು ನಿಬಂಧನೆಗಳನ್ನು ವಿಧಿಸಿ, ಅನುಮತಿ ನೀಡಲಾಗಿದೆ' ಎಂದು ಡಿಸಿಪಿ (ಕೇಂದ್ರೀಯ) ಎಂ. ಹರ್ಷವರ್ಧನ್ ತಿಳಿಸಿದ್ದಾರೆ.

'ಮಹಾಪಂಚಾಯತ್ ನಡೆಯಲಿರುವ ಸ್ಥಳಕ್ಕೆ ಆಯುಧಗಳನ್ನು ಮತ್ತು ಟ್ರ್ಯಾಕ್ಟರ್‌ಗಳನ್ನು ತೆಗೆದುಕೊಂಡು ಬರುವುದಿಲ್ಲ. ನಗರದಲ್ಲಿ ಯಾವುದೇ ಮೆರವಣಿಗೆ ನಡೆಸುವುದಿಲ್ಲ ಎಂಬುದಾಗಿ ರೈತರು ಮುಚ್ಚಳಿಕೆ ಬರೆದುಕೊಟ್ಟಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

'ಕಾರ್ಯಕ್ರಮ ಮುಕ್ತಾಯಗೊಂಡ ಬಳಿಕ, 2.30 ನಂತರ ಮೈದಾನ ತೊರೆಯುವಂತೆ ಸೂಚಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 'ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿ ವಿರೋಧಿಸಿ ನಡೆಸುತ್ತಿರುವ ಹೋರಾಟವನ್ನು ತೀವ್ರಗೊಳಿಸುವ ಸಂಬಂಧ ಈ ಮಹಾಪಂಚಾಯತ್‌ನಲ್ಲಿ ನಿರ್ಣಯ ಅಂಗೀಕರಿಸಲಾಗುವುದು' ಎಂದು ಸಂಯುಕ್ತ ಕಿಸಾನ್ ಮೋರ್ಚಾ ತಿಳಿಸಿದೆ.

ನಾಯಿ: 23 ತಳಿಗಳ ನಿಷೇಧ

ನವದೆಹಲಿ (ಪಿಟಿಐ): 'ಅತ್ಯಂತ ಕ್ರೂರ' ಹಾಗೂ 'ಮನುಷ್ಯನ ಜೀವಕ್ಕೆ ಅಪಾಯ' ಎಂದು ಪರಿಗಣಿಸಲಾದ 23 ನಾಯಿ ತಳಿಗಳನ್ನು ವಿದೇಶಗಳಿಂದ ತರಿಸಿಕೊಳ್ಳುವುದು, ಅವುಗಳ ಮಾರಾಟ ಹಾಗೂ ಸಂತಾನಾಭಿವೃದ್ಧಿ ಮೇಲೆ ಕೇಂದ್ರ ಸರ್ಕಾರ ನಿಷೇಧ ಹೇರಿದೆ.

ಪ್ರಾಣಿದಯಾ ಸಂಘ 'ಪೇಟಾ'ದ ಮನವಿ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ. ಪಿಟ್‌ಬುಲ್ ಟೆರಿಯರ್, ಟೋಸಾ ಇನು, ಅಮೆರಿಕನ್ ಸ್ಟಾಫೋರ್ಡ್‌ಶೈರ್ ಟೆರಿಯರ್, ಡೋಗೊ ಅರ್ಜೆಂಟಿನೊ, ರಷ್ಯನ್ ಶೆಫರ್ಡ್, ರೋಡೆಷಿಯನ್ ರಿಜ್‌ಬ್ಯಾಕ್, ವೋಲ್ಫ್ ಡಾಗ್ಸ್, ಮಾಸ್ಕೊ ಗಾರ್ಡ್ ಡಾಗ್ ನಿಷೇಧಿಸಲಾಗಿರುವ ಪ್ರಮುಖ ನಾಯಿ ತಳಿಗಳು.

ಬಿಜೆಪಿ ಅಭ್ಯರ್ಥಿ ವಿರುದ್ಧ ವೇಣುಗೋಪಾಲ್ ದೂರು

ಅಲಪ್ಪುಳ (ಕೇರಳ) (ಪಿಟಿಐ): ಗಣಿಗಾರಿಕೆ ಮಾಫಿಯಾದೊಂದಿಗೆ ಶಾಮೀಲಾಗಿ, ಭಾರಿ ಪ್ರಮಾಣದ ಸಂಪತ್ತು ಗಳಿಸಿದ್ದಾಗಿ ಆರೋಪಿಸಿರುವ ಬಿಜೆಪಿ ಅಭ್ಯರ್ಥಿ ಶೋಭಾ ಸುರೇಂದ್ರನ್ ವಿರುದ್ಧ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ.

ವೇಣುಗೋಪಾಲ್ ಅವರು ಅಲಪ್ಪುಳ ದಕ್ಷಿಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಶೋಭಾ ಅವರು ಅಲಪ್ಪುಳ ಲೋಕಸಭಾ ಕ್ಷೇತ್ರದ ಅಭ್ಯರ್ಥಿ. ಇತ್ತೀಚೆಗೆ ಟಿ.ವಿ. ವಾಹಿನಿಯೊಂದರಲ್ಲಿ ಪ್ರಸಾರವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅವರು, ವೇಣುಗೋಪಾಲ್ ವಿರುದ್ಧ ಈ ಆರೋಪ ಮಾಡಿದ್ದರು.

ತಮ್ಮ ವಿರುದ್ಧದ ದೂರಿಗೆ ಪ್ರತಿಕ್ರಿಯಿಸಿರುವ ಶೋಭಾ, 'ಕಾನೂನು ಕ್ರಮಕ್ಕೆ ಮುಂದಾಗಿರುವ ವೇಣುಗೋಪಾಲ್ ನಡೆಯನ್ನು ಸ್ವಾಗತಿಸುತ್ತೇನೆ. ಸಾಕ್ಷ್ಯಗಳ ಆಧಾರದ ಮೇಲೆಯೇ ಅವರ ವಿರುದ್ಧ ಆರೋಪ ಮಾಡಿರುವೆ' ಎಂದಿದ್ದಾರೆ.

ಬಂಜಾರರಿಗೆ ಪ್ರಾತಿನಿಧ್ಯಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಬಂಜಾರ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಬೇಕು ಎಂದು ಕರ್ನಾಟಕ ಪ್ರದೇಶ ಬಂಜಾರ ಸೇವಾ ಸಂಘ ಆಗ್ರಹಿಸಿದೆ.

ರಾಜ್ಯದಲ್ಲಿ 45 ಲಕ್ಷಕ್ಕೂ ಅಧಿಕ ಜನಸಂಖ್ಯೆಯನ್ನು ಬಂಜಾರ ಸಮುದಾಯ ಹೊಂದಿದೆ. 14 ಲೋಕಸಭಾ ಕ್ಷೇತ್ರಗಳಲ್ಲಿ ಈ ಸಮುದಾಯ ನಿರ್ಣಾಯಕವಾಗಿದೆ ಎಂದು ಸಂಘದ ಅಧ್ಯಕ್ಷೆ ಬಿ.ಟಿ. ಲಲಿತಾ ನಾಯಕ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ನಗರದಲ್ಲಿ ಇಂದು

ಬೌದ್ಧಿಕ ಆಸ್ತಿ ಹಕ್ಕು ಸಮಾವೇಶ ಉದ್ಘಾಟನೆ: ಮುಖ್ಯ ಅತಿಥಿ: ರಾಜ್ ಸಿಂಗ್, ಗೌರವ ಅತಿಥಿ: ರಮೇಶ್ ಚಂದ್ರ ಪಾಂಡಾ, ಅಧ್ಯಕ್ಷತೆ: ನಾರಾಯಣ ರಾವ್ ಆರ್., ಆಯೋಜನೆ ಹಾಗೂ ಸ್ಥಳ: ಬಿಎನ್‌ಎಂ ತಾಂತ್ರಿಕ ವಿದ್ಯಾಲಯ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10

ಶಾಂತವೇರಿ ಗೋಪಾಲಗೌಡ ಸಂಸ್ಕೃತಿ ಪ್ರಶಸ್ತಿ ಪ್ರದಾನ: ನ್ಯಾ.ಎನ್. ಸಂತೋಷ್ ಹೆಗ್ಡೆ, ಪ್ರಶಸ್ತಿ ಪುರಸ್ಕೃತರು: ಬಿ.ಆರ್. ಪಾಟೀಲ, ಅಧ್ಯಕ್ಷತೆ: ಹಿ.ಚಿ. ಬೋರಲಿಂಗಯ್ಯ, ಮುಖ್ಯ ಅತಿಥಿಗಳು: ನಟರಾಜ್ ಹುಳಿಯಾರ್, ಕೆ. ದಿವಾಕರ್, ರಾಮಮನೋಹರ್, ಉಪಸ್ಥಿತಿ: ಪಿ. ಮಲ್ಲಿಕಾರ್ಜುನಪ್ಪ, ಸಿ.ಕೆ. ರಾಮೇಗೌಡ, ಸಾಂಸ್ಕೃತಿಕ ಕಾರ್ಯಕ್ರಮ: ವೇಮಗಲ್ ನಾರಾಯಣಸ್ವಾಮಿ ಮತ್ತು ತಂಡ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3.45



ಬಿ.ಆರ್. ಪಾಟೀಲ

'ಅಭಿವೃದ್ಧಿಶೀಲ ಆರ್ಥಿಕತೆಯಲ್ಲಿ ಬಡತನದ ಅರ್ಥೈಸುವಿಕೆ' ವಿಷಯದ ಬಗ್ಗೆ ಉಪನ್ಯಾಸ: ಜೀನ್-ಲೂಯಿಸ್ ಅರ್ಕಾಂಡ್, ಆಯೋಜನೆ: ಚಾಣಕ್ಯ ವಿಶ್ವವಿದ್ಯಾಲಯ, ಸ್ಥಳ: ವಿವೇಕ ಸಭಾಂಗಣ, ಯುವಪಥ, ಜಯನಗರ 4ನೇ ಹಂತ, ಸಂಜೆ 4

ಸಂತ ನಿಳೋಬ ಮಹಾರಾಜರವರ ಸಪ್ತಾಹ ಮಹೋತ್ಸವ: ಹರಿಪಾಠ ಭಜನೆ, ಪ್ರವಚನ, ಭಜನೆ, ಆಯೋಜನೆ ಹಾಗೂ ಸ್ಥಳ: ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್, ಸುಭೇದಾರ್ ಛತ್ರಂ ರಸ್ತೆ ಕ್ರಾಸ್, ಗಾಂಧಿನಗರ, ಸಂಜೆ 4.30

ಉಪ್ಪಂಗಳ ರಾಮಭಟ್ಟ ದತ್ತಿ ಉಪನ್ಯಾಸ: 'ಮಹಾಭಾರತದ ಕರ್ಣ' ವಿಷಯದ ಬಗ್ಗೆ ಉಪನ್ಯಾಸ: ವಾಸುದೇವರಾವ್ ಹಳದೀಪುರ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಅತ್ಯುತ್ತಮ ಕಾದಂಬರಿ ಪ್ರಶಸ್ತಿ ಪ್ರದಾನ: ಎಸ್.ಆರ್. ವಿಜಯಶಂಕರ್, ಅಧ್ಯಕ್ಷತೆ: ಬಿ.ಎಂ. ಹನೀಫ್, ಮುಖ್ಯ ಅತಿಥಿ: ವೂಡೇ ಪಿ. ಕೃಷ್ಣ, ಪ್ರಶಸ್ತಿ ಪುರಸ್ಕೃತರು: ಆರ್. ಸುನಂದಮ್ಮ, ಉಪಸ್ಥಿತಿ: ಕಾ.ತ. ಚಿಕ್ಕಣ್ಣ, ದ್ವಾರನಕುಂಟೆ ಪಾತಣ್ಣ, ಲತಾಗುತ್ತಿ, ಆಯೋಜನೆ: ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ, ಸ್ಥಳ: ಶಿಕ್ಷಣ ದತ್ತಿಯ ಸಭಾಂಗಣ, ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಸಂಜೆ 5.30



ಆರ್. ಸುನಂದಮ್ಮ

ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಅವರಿಗೆ ಭವ್ಯ ಸ್ವಾಗತ ಮತ್ತು ಅಭಿನಂದನಾ ಸಮಾರಂಭ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು: ರಾಮಲಿಂಗಾರೆಡ್ಡಿ, ಎಚ್.ಡಿ. ಕುಮಾರಸ್ವಾಮಿ, ಬಿ.ವೈ. ವಿಜಯೇಂದ್ರ, ಅರವಿಂದ ಲಿಂಬಾವಳಿ, ನ್ಯಾ.ದಿನೇಶ್ ಕುಮಾರ್, ಆಯೋಜನೆ: ಅಯೋಧ್ಯಾ ಬಾಲರಾಮ ಮಂಡಲೋತ್ಸವ ನೇತಾರ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥರ ಅಭಿನಂದನಾ ಸಮಿತಿ, ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಸಂಜೆ 6



ವಿಶ್ವಪ್ರಸನ್ನತೀರ್ಥ ಸ್ವಾಮೀಜಿ

'ಇತಿಹಾಸ ಪ್ರಜ್ಞೆ' ಕುರಿತು ಉಪನ್ಯಾಸ: ಆಗುಂಬೆ ನಟರಾಜ್, ಮುಖ್ಯ ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಹಾಗೂ ಸ್ಥಳ: ಕನ್ನಡ ಯುವಜನ ಸಂಘ, ಎಚ್.ಸಿದ್ದಯ್ಯ ರಸ್ತೆ, ಹೊಂಬೇಗೌಡನಗರ, ಸಂಜೆ 6.30

ಹರಿನಾಮ ಘೋಷ: ಗಾಯನ: ಸುಷ್ಮಾ ಜೋಯಿಸ್ ಸಿಂಧನೂರು, ಕೀ-ಬೋರ್ಡ್: ಟಿ.ಎಸ್. ರಮೇಶ್, ತಬಲಾ: ಸರ್ವೋತ್ತಮ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಸೀತಾಪತಿ ಅಗ್ರಹಾರ, ಚಾಮರಾಜಪೇಟೆ, ಸಂಜೆ 6.30

'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕ ಪ್ರದರ್ಶನ: ನಿರ್ದೇಶನ: ಅಶೋಕ ನೀನಾಸಂ, ಆಯೋಜನೆ: ಸ್ಟೇಜ್ ಬೆಂಗಳೂರು, ಸ್ಥಳ: ಬಿ.ಪಿ. ವಾಡಿಯಾ ಹಾಲ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಸಂಜೆ 7.20

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ **nagaradalli_indu@prajavani.co.in**

ಸಮಾನ ಮನಸ್ಕರ ವೇದಿಕೆಯಿಂದ ಜಾಗೃತಿ ಜಾಥಾ

ವಚನ ಸಂವಿಧಾನ ಪ್ರಣಾಳಿಕೆ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾನ ಮನಸ್ಕರ ವೇದಿಕೆಯು ಚಾಮರಾಜನಗರದಿಂದ ಬೀದರ್ ಜಿಲ್ಲೆಯವರೆಗೆ ಮತದಾರ ಜಾಗೃತಿ ಜಾಥಾ ಹಮ್ಮಿಕೊಳ್ಳಲು ನಿರ್ಧರಿಸಿದ್ದು, ಇದರ ಭಾಗವಾಗಿ 'ವಚನ ಸಂವಿಧಾನ ಜನಸಾಮಾನ್ಯರ ಪ್ರಣಾಳಿಕೆ' ಬಿಡುಗಡೆ ಮಾಡಿತು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ಸಂಯೋಜಕ ಜಗನ್ ಸಿ.ಕೆ., 'ಇದೇ ತಿಂಗಳು ಜಾಥಾ ಪ್ರಾರಂಭ ಮಾಡಲಾಗುತ್ತದೆ. ಸರ್ವರಿಗೂ ಸಮಪಾಲು, ಸಮಬಾಳು ಎಂಬ ಧ್ಯೇಯವನ್ನು ಎತ್ತಿ ಹಿಡಿದಿರುವ ವಚನ ಮತ್ತು ಸಂವಿಧಾನವನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ಸಂವಿಧಾನದ ಪರ ಇರುವವರಿಗೆ ಮತ ನೀಡಬೇಕಾಗಿದೆ. ಈ ಜಾಥಾದಲ್ಲಿ ಸ್ಥಳೀಯ ಸಂಘ–ಸಂಸ್ಥೆಗಳು ಮತ್ತು ಸ್ಥಳೀಯ ನಾಯಕರನ್ನು ಒಳಗೊಂಡು ಸಮಾವೇಶ ನಡೆಸುವ ಮೂಲಕ ಮತದಾರರಲ್ಲಿ ಜಾಗೃತಿ ಮೂಡಿಸುತ್ತೇವೆ. ಲಿಂಗ ಸಮಾನತೆ, ವಿಶ್ವಮಾನವ ದೃಷ್ಟಿಯನ್ನು ಪ್ರಣಾಳಿಕೆ ಒಳಗೊಂಡಿದೆ. ಇದನ್ನು ಜನರಿಗೆ ತಲುಪಿಸಲಾಗುವುದು' ಎಂದು ಹೇಳಿದರು.

ಬರಹಗಾರ ಬಾಪು ಹೆದ್ದೂರ ಶೆಟ್ಟಿ, 'ಸಂವಿಧಾನದ ಮೂಲ ಧ್ಯೇಯಕ್ಕೆ ಆಧರಿಸಿದ ಸಮಾಜ ಕಟ್ಟಬೇಕಾದರೆ ಆದರ್ಶಗಳಿಗೆ ವಿರುದ್ಧವಾಗಿರುವ ತೊಡಕುಗಳನ್ನು ನಿವಾರಿಸಬೇಕು. ಹಿಂದೂ ಅಥವಾ ಸನಾತನ ಧರ್ಮವು ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರತೆಯ ಆದರ್ಶಗಳನ್ನು ನನಸಾಗಿಸುವಲ್ಲಿ ದೊಡ್ಡ ತೊಡಕಾಗಿದೆ. ಸನಾತನ ಧರ್ಮವು ಸ್ವಾತಂತ್ರ್ಯ ಮೊಟಕುಗೊಳಿಸುವುದರ ಜತೆಗೆ ಅಸಮಾನತೆಯನ್ನೂ ಪೋಷಿಸುತ್ತದೆ. ಸಂವಿಧಾನದ ಪೀಠಿಕೆಯಲ್ಲಿನ ಆದರ್ಶಗಳನ್ನು ನನಸಾಗಿಸಲು ಜಾಗೃತಿ ಜಾಥಾ ಮಾಡಲಾಗುತ್ತಿದೆ' ಎಂದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಗೌರವ ಸಲಹೆಗಾರ ಗೊ.ರು. ಚನ್ನಬಸಪ್ಪ, 'ಧರ್ಮದಲ್ಲಿ ರಾಜಕಾರಣವನ್ನು ಸೇರಿಸಲಾಗುತ್ತಿದೆ. ಸಂವಿಧಾನದ ಜತೆಗೆ ಚೆಲ್ಲಾಟವಾಡುವುದು ದುರಂತ. ಸಂವಿಧಾನದ ಆಶಯ ಈಡೇರಿಸಬೇಕಾದ ರಾಜಕೀಯ ಪಕ್ಷಗಳು ಅದರ ತಿದ್ದುಪಡಿಗೆ ವಿಚಾರ ಮಾಡುತ್ತಿರುವುದು ವ್ಯಂಗ್ಯ' ಎಂದು ಬೇಸರ ವ್ಯಕ್ತಪಡಿಸಿದರು.

ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, 'ದೇಶದಲ್ಲಿ ಸಂವಿಧಾನದ ಜತೆಗೆ ಬಸವಾದಿ ಶರಣರ ತತ್ವಗಳ ಮೇಲೆ ದಾಳಿ ಮಾಡಲಾಗುತ್ತಿದೆ. ಸಂವಿಧಾನ ಅಪಾಯದಲ್ಲಿದೆ. ಸಂವಿಧಾನ ಬದಲಾಯಿಸುತ್ತೇವೆ ಎನ್ನುವುದನ್ನು ಖಂಡಿಸುತ್ತೇವೆ' ಎಂದರು.



ಸಿ.ಕೆ. ಜಗನ್, ಮಾವಳ್ಳಿ ಶಂಕರ್, ಗೊ.ರು. ಚನ್ನಬಸಪ್ಪ ಮತ್ತು ಬಾಪು ಹೆದ್ದೂರ ಶೆಟ್ಟಿ ಅವರು 'ವಚನ ಸಂವಿಧಾನ ಪ್ರಣಾಳಿಕೆ'ಯನ್ನು ಬಿಡುಗಡೆ ಮಾಡಿದರು —ಪ್ರಜಾವಾಣಿ ಚಿತ್ರ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಮನುಷ್ಯನ ಮೊದಲ ಆದ್ಯ ಕರ್ತವ್ಯವೇ ಮನುಷ್ಯತ್ವವನ್ನು ರಕ್ಷಿಸುವುದು.

-ಕುವೆಂಪು

ಪರೀಕ್ಷೆ: ಸರ್ಕಾರ–ರುಪ್ಸಾ ತಿಕ್ಕಾಟ ವಿದ್ಯಾರ್ಥಿಗಳ ಭವಿಷ್ಯಕ್ಕೆ ಕಂಟಕ

ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲೆ-ಕಾಲೇಜುಗಳ 5, 8, 9 ಹಾಗೂ 11ನೇ ತರಗತಿಗಳಿಗೆ ರಾಜ್ಯಮಟ್ಟದ ಬೋರ್ಡ್ ಪರೀಕ್ಷೆ ನಡೆಸುವ ವಿಚಾರವಾಗಿ ನಡೆದಿರುವ ಬೆಳವಣಿಗೆಗಳು ಅತ್ಯಂತ ದುರದೃಷ್ಟಕರ. ಈ ವಿಷಯದಲ್ಲಿ, ಕೇಂದ್ರಬಿಂದುವಾದ ವಿದ್ಯಾರ್ಥಿಗಳ ಹಿತವನ್ನೇ ಸಂಪೂರ್ಣವಾಗಿ ಕಡೆಗಣಿಸಲಾಗಿದ್ದು, ಅವರ ಭವಿಷ್ಯದೊಂದಿಗೆ ಚೆಲ್ಲಾಟ ಆಡಲಾಗುತ್ತಿದೆ. ಬೋರ್ಡ್ ಪರೀಕ್ಷೆ ನಡೆಸಿಯೇ ಸಿದ್ಧ ಎಂದು ಮೊಂಡಾಟಕ್ಕೆ ಬಿದ್ದ ರಾಜ್ಯ ಸರ್ಕಾರಕ್ಕಾಗಲೀ, ಈ ನಿರ್ಧಾರವನ್ನು ಪ್ರಶ್ನಿಸಿ ಕೋರ್ಟ್ ಮೆಟ್ಟಿಲೇರಿದ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಸಂಘಕ್ಕಾಗಲೀ (ರುಪ್ಸಾ) ವಿದ್ಯಾರ್ಥಿಗಳ ಬಗ್ಗೆ ಕಾಳಜಿಯೇ ಇದ್ದಂತಿಲ್ಲ. ಇಲ್ಲದಿದ್ದರೆ ಅವು ಹೀಗೆ ಪರಸ್ಪರ ತೊಡೆ ತಟ್ಟಿ ಪರೀಕ್ಷೆಯನ್ನೇ ದಾಳವಾಗಿ ಬಳಸಿಕೊಳ್ಳುತ್ತಿರಲಿಲ್ಲ. ಭಿನ್ನ ಕೋರ್ಟ್ ಪೀಠಗಳಿಂದ ಬಂದ ಭಿನ್ನ ಆದೇಶಗಳು ಕೂಡ ಬೋರ್ಡ್ ಪರೀಕ್ಷೆಗೆ ಸಂಬಂಧಿಸಿದ ಗೊಂದಲ ತಿಳಿಗೊಳಿಸುವ ಬದಲು ಮತ್ತಷ್ಟು ಗೋಜಲುಗೊಳಿಸಿದವು. ಮಂಗಳವಾರ ಪರೀಕ್ಷೆ ಬರೆದು ಹೋದ ಮಕ್ಕಳಿಗೆ ಬುಧವಾರದಿಂದ ಪರೀಕ್ಷೆ ಇರುವುದಿಲ್ಲ ಎಂದು ಹೇಳಿದರೆ ಅವರ ಮೇಲಾಗುವ ಪರಿಣಾಮ ಎಂತಹದ್ದು ಎಂಬುದನ್ನು ಶಿಕ್ಷಣ ಕ್ಷೇತ್ರದ ಪ್ರಮುಖರು ಯೋಚಿಸದಿರುವುದು ಆಶ್ಚರ್ಯ. ಸರ್ಕಾರ ಮತ್ತು ರುಪ್ಸಾ ನಡುವಿನ ತಿಕ್ಕಾಟದ ಬಿಸಿಯನ್ನು ಶಾಲಾ ಮಕ್ಕಳು ಹಾಗೂ ಶಿಕ್ಷಕರು ಅನುಭವಿಸಿದ್ದಾರೆ. ಬೋರ್ಡ್ ಪರೀಕ್ಷೆ ಇದೆ ಎಂದು ಮಕ್ಕಳು ಸಿದ್ಧತೆ ಮಾಡಿಕೊಂಡಿದ್ದರು. ಈಗ ಅರ್ಧಂಬರ್ಧ ಪರೀಕ್ಷೆ ಮುಗಿದಿದೆ. ಮಿಕ್ಕ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಮುಂದೆ ನಡೆಯುತ್ತವೆಯೋ ಇಲ್ಲವೋ, ನಡೆಯುವುದಾದರೆ ಯಾವಾಗ ಎಂಬುದರ ಬಗ್ಗೆ ಸ್ಪಷ್ಟತೆಯೂ ಇಲ್ಲ. ಮಕ್ಕಳ ಮಾನಸಿಕ ಸ್ಥಿತಿಯ ಮೇಲೆ ಈ ಬೆಳವಣಿಗೆಗಳು ಎಂತಹ ಪರಿಣಾಮ ಬೀರಬಲ್ಲವು ಎಂಬುದನ್ನು ಗೊಂದಲಕ್ಕೆ ಕಾರಣರಾದ ವರೆಲ್ಲ ಒಮ್ಮೆ ಯೋಚಿಸಬೇಕಿತ್ತು. ಬೋರ್ಡ್ ಪರೀಕ್ಷೆ ಸಂಬಂಧ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹೊರಡಿಸಿದ್ದ ಆದೇಶವನ್ನು ರಾಜ್ಯ ಹೈಕೋರ್ಟ್‌ನ ಏಕಸದಸ್ಯ ಪೀಠ ರದ್ದುಗೊಳಿಸಿತ್ತು. ಈ ಆದೇಶಕ್ಕೆ ವಿಭಾಗೀಯ ನ್ಯಾಯಪೀಠ ಕಳೆದ ವಾರ ಮಧ್ಯಂತರ ತಡೆ ನೀಡಿತ್ತು. ಇತ್ತ, ನಿಗದಿಯಂತೆ ಸರ್ಕಾರ ಪರೀಕ್ಷೆ ಆರಂಭಿಸಿದರೆ, ಅತ್ತ ರುಪ್ಸಾ, ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ವಿಭಾಗೀಯ ನ್ಯಾಯಪೀಠದ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ.



ಬೋರ್ಡ್ ಪರೀಕ್ಷೆಗೆ ಸಂಬಂಧಿಸಿದ ಕಾನೂನು ತಿಕ್ಕಾಟ ಮತ್ತು ಬೆಳವಣಿಗೆಗಳು ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ಆತಂಕ ಮೂಡಿಸಿವೆ. ಈ ಅತಂಕ ನಿವಾರಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು

ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸುವ ಸಂವಿಧಾನದ ಆಶಯವನ್ನು ಜಾರಿಗೊಳಿಸಲು ಶಿಕ್ಷಣ ಹಕ್ಕು ಕಾಯ್ದೆಯನ್ನು 2010ರಲ್ಲಿ ಜಾರಿಗೊಳಿಸಿತು. ಈ ಕಾಯ್ದೆಯ ಒಂದು ಮಹತ್ವದ ಅಂಶವೆಂದರೆ, ಶಾಲೆಗೆ ಪ್ರವೇಶ ಪಡೆದ ಯಾವುದೇ ಮಗುವನ್ನು ಎಲಿಮೆಂಟರಿ ಶಿಕ್ಷಣ ಮುಗಿಯುವವರೆಗೆ ಯಾವುದೇ ತರಗತಿಯಲ್ಲಿ ನಪಾಸು ಮಾಡುವಂತಿಲ್ಲ ಅಥವಾ ಪ್ರಾಥಮಿಕ ಶಿಕ್ಷಣವು ಪೂರ್ಣಗೊಳ್ಳುವವರೆಗೆ ಮಗುವನ್ನು ಶಾಲೆಯಿಂದ ಹೊರಹಾಕುವಂತಿಲ್ಲ. ಶಾಲೆಗೆ ಸೇರಿದ ಪ್ರತಿ ಮಗುವೂ ಕೊನೇಪಕ್ಷ ಎಂಟು ವರ್ಷ ಗುಣಮಟ್ಟದ ಶಾಲಾ ಶಿಕ್ಷಣ ಪಡೆಯಬೇಕು ಎಂಬುದು ಈ ಕಾಯ್ದೆಯ ಸದಾಶಯ. ಹೀಗಾಗಿಯೇ, ಬೋರ್ಡ್ ಪರೀಕ್ಷೆ ನಡೆಸುವ ಸರ್ಕಾರದ ಕ್ರಮವು ಶಿಕ್ಷಣ ಹಕ್ಕು ಕಾಯ್ದೆಯ ಸೆಕ್ಷನ್ 30ರ ಸ್ಪಷ್ಟ ಉಲ್ಲಂಘನೆ ಎಂದು ಹೈಕೋರ್ಟ್‌ನ ಏಕಸದಸ್ಯ ಪೀಠ ವ್ಯಾಖ್ಯಾನಿಸಿತ್ತು. ಪರೀಕ್ಷಾ ವ್ಯವಸ್ಥೆ ಹಾಗೂ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಪರಿಣಾಮ ಬೀರುವ ಈ ಪರೀಕ್ಷೆಯನ್ನು ನಡೆಸಬಾರದು ಎಂದೂ ಸೂಚಿಸಿತ್ತು. 'ನಿರ್ದಿಷ್ಟ ಅಂಕಗಳನ್ನು ಪಡೆಯದ ಮಕ್ಕಳನ್ನು 'ಫೇಲ್' ಎಂದು ಘೋಷಿಸಿ, ಶೈಕ್ಷಣಿಕ ವ್ಯವಸ್ಥೆಯಿಂದ ಅವರನ್ನು ಹೊರದೂಡಲು ಬೋರ್ಡ್ ಪರೀಕ್ಷೆಗಳನ್ನು ಆಯುಧವನ್ನಾಗಿ ಬಳಸಲಾಗುತ್ತದೆ; ಪರೀಕ್ಷೆ ನಡೆಸುವುದು ಸುಲಭದ ಕೆಲಸ. ಕಲಿಸುವುದು, ಕಲಿಕೆಗೆ ಅಗತ್ಯ ಭೂಮಿಕೆ ಸಿದ್ಧಪಡಿಸುವುದು ಮತ್ತು ಕನಿಷ್ಠ ಮೂಲ ಸೌಕರ್ಯಗಳನ್ನು ಒದಗಿಸುವುದು ಅತ್ಯಂತ ಕಷ್ಟದ ಕೆಲಸ' ಎಂದು ಶಿಕ್ಷಣತಜ್ಞರು ವಿಶ್ಲೇಷಿಸುತ್ತಾರೆ. 'ವಾಸ್ತವದಲ್ಲಿ ಇದು ಪರೀಕ್ಷೆ ಅಲ್ಲ, ಸಂಕಲನಾತ್ಮಕ ಮೌಲ್ಯಮಾಪನ. ಇದರಲ್ಲಿ ವಿದ್ಯಾರ್ಥಿಗಳು ಉತ್ತೀರ್ಣರಾಗುವ ಅಗತ್ಯವಿಲ್ಲ. ಇದೊಂದು ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವ ಕ್ರಮ' ಎಂಬುದು ರಾಜ್ಯ ಸರ್ಕಾರದ ವಾದ. 9 ಹಾಗೂ 11ನೇ ತರಗತಿಗಳು ಶಿಕ್ಷಣ ಹಕ್ಕು ಕಾಯ್ದೆಯ ವ್ಯಾಪ್ತಿಗೆ ಬರುವುದಿಲ್ಲ ಎಂಬ ಸಂಗತಿಯನ್ನೂ ಕೋರ್ಟ್ ಗಮನಕ್ಕೆ ಸರ್ಕಾರ ತಂದಿದೆ. ಈ ಮಧ್ಯೆ ಕೋರ್ಟ್ ಆದೇಶಗಳು ಬರುವ ಮೊದಲೇ 11ನೇ ತರಗತಿಯ ಪರೀಕ್ಷೆಗಳು ಮುಗಿದುಹೋಗಿವೆ.

ವಿದ್ಯಾರ್ಥಿಗಳು ತೇರ್ಗಡೆಯಾಗಬೇಕಿಲ್ಲ ಎಂದರೆ ಪರೀಕ್ಷೆಗಳನ್ನು ಯಾಕೆ ನಡೆಸಬೇಕು? ಶಾಲೆಗಳು ಸರಿಯಾಗಿ ಕೆಲಸ ಮಾಡುತ್ತಿವೆಯೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಲು ಪರೀಕ್ಷೆಯನ್ನೇ ಅಸ್ತ್ರವಾಗಿ ಬಳಸಬೇಕೇ ಎಂಬ ಪ್ರಶ್ನೆಗಳೂ ಉದ್ಭವಿಸುತ್ತವೆ. ಸರ್ಕಾರ ಹಾಗೂ ರುಪ್ಸಾ ನಡುವಿನ ಈ ಕಾನೂನು ತಿಕ್ಕಾಟ ಮತ್ತು ಅದಕ್ಕೆ ಸಂಬಂಧಿಸಿದಂತೆ ನಡೆದಿರುವ ಬೆಳವಣಿಗೆಗಳು ಶಿಕ್ಷಣ ವ್ಯವಸ್ಥೆಯ ಸುಧಾರಣೆಗೆ ಯಾವ ರೀತಿಯಲ್ಲೂ ನೆರವಿಗೆ ಬರುವಂಥವಲ್ಲ. ಬದಲಿಗೆ, ವ್ಯವಸ್ಥೆಯನ್ನು ಇನ್ನಷ್ಟು ಗೋಜಲುಗೊಳಿಸುವಂತಹವು. ಬೋರ್ಡ್ ಪರೀಕ್ಷೆಗಳ ಸಂಬಂಧ ವಿದ್ಯಾರ್ಥಿಗಳಲ್ಲಿ ಭಯವಿದೆ ಎಂಬುದನ್ನು ಸುಪ್ರೀಂ ಕೋರ್ಟ್ ಗುರುತಿಸಿದ್ದು, ಅಂತಹ ಭಯವನ್ನು ಹೋಗಲಾಡಿಸುವ ಕೆಲಸವನ್ನು ಸರ್ಕಾರ ಮೊದಲು ಮಾಡಬೇಕು. ಪರೀಕ್ಷಾ ಪದ್ಧತಿಯ ಬದಲಾವಣೆಗೆ ಸಂಬಂಧಿಸಿದಂತೆ ಶಿಕ್ಷಣ ತಜ್ಞರೊಂದಿಗೆ ವಿಸ್ತೃತವಾಗಿ ಚರ್ಚೆ ನಡೆಸಬೇಕು. ಶಾಲಾ ಆಡಳಿತ ಮಂಡಳಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಯಾವುದೇ ಗೊಂದಲಕ್ಕೆ ಆಸ್ಪದ ಇಲ್ಲದಂತೆ ಎಲ್ಲರೂ ಕುಳಿತು ನಿರ್ಣಯ ಕೈಗೊಳ್ಳಬೇಕು ಮತ್ತು ಆ ನಿರ್ಣಯದಲ್ಲಿ ವಿದ್ಯಾರ್ಥಿಗಳ ಹಿತವೇ ಮುಖ್ಯವಾಗಿರಬೇಕು.

ದಿನದ ಟ್ವೀಟ್

ಎಸ್‌ಬಿಐಗೆ ದಶಕ ಬೇಕಾಗುತ್ತಿತ್ತು!



ಸರಿಸುಮಾರು 20 ಸಾವಿರದಷ್ಟು ಚುನಾವಣಾ ಬಾಂಡ್‌ಗಳ ವಿಚಾರವಾಗಿ ಮಾಹಿತಿ ನೀಡಲು ಎಸ್‌ಬಿಐ ಮೂರು ತಿಂಗಳ ಕಾಲಾವಕಾಶ ಕೋರಿತ್ತು. ವಾರ್ಷಿಕ ಜಿಎಸ್‌ಟಿಗೆ ಸಂಬಂಧಿಸಿದ ವಿವರ ಸಲ್ಲಿಸಲು ಎಸ್‌ಬಿಐ ಸಿಬ್ಬಂದಿಗೆ ಯಾರಾದರೂ ಕೋರಿದ್ದರೆ ಏನಾಗುತ್ತಿತ್ತು? ಅವರು ಒಂದು ದಶಕದ ಕಾಲಾವಕಾಶ ಕೇಳುತ್ತಿದ್ದರು!

ಚಿರಾಗ್ ಚೌಹಾಣ್, ಚಾರ್ಟರ್ಡ್ ಅಕೌಂಟೆಂಟ್

ಕಿಡಿನುಡಿ



ಮುಸ್ಲಿಮರು ಮತ್ತು ಶ್ರೀಲಂಕಾದ ತಮಿಳರನ್ನು ಯಾಕೆ ನಾವು ಇದರಿಂದ ಹೊರಗೆ ಇಡುತ್ತಿದ್ದೇವೆ? ಅವರು, ಮುಸ್ಲಿಮರು ಮತ್ತು ಶ್ರೀಲಂಕಾ ತಮಿಳರ ವಿರುದ್ಧ ಎಂಬುದನ್ನು ಇದು ತೋರಿಸುತ್ತದೆ.

(ಪೌರತ್ವ ತಿದ್ದುಪಡಿ ಕಾಯ್ದೆ ಜಾರಿ ಕುರಿತು ಪ್ರತಿಕ್ರಿಯೆ)

ದೊರೈ ಮುರುಗನ್, ತಮಿಳುನಾಡು ಸಚಿವ

25 ವರ್ಷಗಳ ಹಿಂದೆ

ಭಾನುವಾರ, 14-3-1999

- **ಹುಬ್ಬಳ್ಳಿಗೆ ಪ್ರತ್ಯೇಕ ರೈಲ್ವೆ ವಲಯ, ಬೆಂಗಳೂರಿನಿಂದ ವರ್ಗಾವಣೆ ಬೇಡ: ಕೇಂದ್ರಕ್ಕೆ ಎಚ್‌ಡಿಡಿ ಎಚ್ಚರಿಕೆ**

ನವದೆಹಲಿ, ಮಾರ್ಚ್ 13– ನೈರುತ್ಯ ರೈಲ್ವೆ ವಲಯವನ್ನು ಬೆಂಗಳೂರಿನಿಂದ ಸ್ಥಳಾಂತರಿಸಿದರೆ ಕರ್ನಾಟಕದಲ್ಲಿ ಕಾನೂನು–ಸುವ್ಯವಸ್ಥೆ ಸಮಸ್ಯೆ ಉಂಟಾಗುವುದಾಗಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಇಂದು ಲೋಕಸಭೆಯಲ್ಲಿ ಎಚ್ಚರಿಕೆ ನೀಡಿದರು.

ಬೆಂಗಳೂರಿನಲ್ಲಿ ಈಗಿರುವ ರೈಲ್ವೆ ವಲಯವನ್ನು ಉಳಿಸಿಕೊಂಡು, ಹುಬ್ಬಳ್ಳಿಗೇ ಪ್ರತ್ಯೇಕವಾಗಿ ಮತ್ತೊಂದು ವಲಯವನ್ನು ಮಂಜೂರು ಮಾಡಿ ಎಂದು ಬಲವಾಗಿ ವಾದಿಸಿದರು.

- **ಪೇಟೆಂಟ್ ಮಸೂದೆಗೆ ಸಂಸತ್ ಅಸ್ತು**

ನವದೆಹಲಿ, ಮಾರ್ಚ್ 13 (ಯುಎನ್‌ಐ) – ಕಾಂಗ್ರೆಸ್ಸೇತರ ವಿರೋಧ ಪಕ್ಷಗಳ ಪ್ರತಿಭಟನೆ ಹಾಗೂ ಸಭಾತ್ಯಾಗದ ನಡುವೆ ವಿವಾದಾತ್ಮಕ ಪೇಟೆಂಟ್ (ತಿದ್ದುಪಡಿ) ಮಸೂದೆಗೆ ರಾಜ್ಯಸಭೆಯಲ್ಲಿ ಇಂದು ಒಪ್ಪಿಗೆ ಸಿಗುವ ಮೂಲಕ ಸಂಸತ್ ಅನುಮೋದನೆ ನೀಡಿದಂತಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 14-3-1974

- **ಅಕ್ಕಿ ಅಂತರಜಿಲ್ಲಾ ಸಾಗಣೆ ನಿರ್ಬಂಧ ರದ್ದಿಗೆ ವಿರೋಧ ಪಕ್ಷದ ಆಗ್ರಹ**

ಬೆಂಗಳೂರು, ಮಾರ್ಚ್ 13– ಕೇಂದ್ರ ಸರ್ಕಾರ ಅಕ್ಕಿ ಮತ್ತು ಭತ್ತವನ್ನು ಬಿಟ್ಟು ಉಳಿದ ಧಾನ್ಯಗಳ ಅಂತರರಾಜ್ಯ ಸಾಗಾಣಿಕೆ ನಿರ್ಬಂಧ ತೆಗೆದ ಮೇಲೆ ರಾಗಿ ಮತ್ತಿತರ ಧಾನ್ಯಗಳ ಬೆಲೆ ಇಳಿಮುಖವಾಗಿದೆ ಎಂದು ವಿಧಾನಪರಿಷತ್ತಿನಲ್ಲಿ ಇಂದು ವಿರೋಧ ಪಕ್ಷದ ಸದಸ್ಯರು ವಾದಿಸಿ ಅದೇ ರೀತಿ ಅಕ್ಕಿಯ ವಿಚಾರದಲ್ಲಿ ಅಂತರಜಿಲ್ಲಾ ಸಾಗಾಣಿಕೆ ನಿರ್ಬಂಧ ತೆಗೆಯಬೇಕೆಂದು ಒತ್ತಾಯ ಮಾಡಿದರು.

ಆಯವ್ಯಯ ಚರ್ಚೆಯಲ್ಲಿ ಭಾಗವಹಿಸಿದ್ದ ವಿ.ಎಸ್. ಕೃಷ್ಣಯ್ಯರ್ ಅವರು ಒರಿಸ್ಸಾದಿಂದ ಭಾರಿ ಪ್ರಮಾಣದಲ್ಲಿ ರಾಗಿ ಬಂದು ಬೆಲೆ ತಗ್ಗುವ ಸೂಚನೆ ಇದೆ ಎಂದು ಹೇಳಿದರು.

- **ಮುಖ್ಯಮಂತ್ರಿ ಅರಸು ವಿರುದ್ಧ ಆರೋಪ: ಕೇಂದ್ರದ ಪರಿಶೀಲನೆ**

ನವದೆಹಲಿ, ಮಾರ್ಚ್ 13– ಕರ್ನಾಟಕದ ಮುಖ್ಯಮಂತ್ರಿ ದೇವರಾಜ ಅರಸು ಅವರ ವಿರುದ್ಧ ದುರ್ನಡತೆ, ಸ್ವಜನಪಕ್ಷಪಾತ, ಆಡಳಿತ ದುರುಪಯೋಗ, ದುರಾಡಳಿತದ ಆರೋಪಗಳನ್ನು ಮಾಡಿ ಶಾಸಕರು ಸಲ್ಲಿಸಿರುವ ಮನವಿಗಳು ಸರ್ಕಾರದ ಪರಿಶೀಲನೆಯಲ್ಲಿವೆ ಎಂದು ಗೃಹಖಾತೆ ರಾಜ್ಯ ಸಚಿವ ರಾಮನಿವಾಸ ಮಿರ್ಧಾ ಅವರು ಲೋಕಸಭೆಗೆ ತಿಳಿಸಿದರು.

ವಿಜ್ಞಾನದ ಪ್ರೆಶರ್ ಕುಕ್ಕರ್‌ನಲ್ಲಿ ಕೊರೊನಾ ಪೂರ್ತಿ ಕರಗಿತೇ?

ಈ ಹೆಜ್ಜೆಗುರುತು ಅಚ್ಚ, ದಟ್ಟ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ನಿದ್ರಿತ ಜ್ವಾಲಾಮುಖಿ ತಾನು ಸಿಡಿಯುವ ಮುನ್ನ ನೆಲವನ್ನು ನಡುಗಿಸುತ್ತದೆ; ಆಳದಲ್ಲೆಲ್ಲೋ ಗುಡುಗಿನ ಸದ್ದನ್ನು ಹೊಮ್ಮಿಸುತ್ತದೆ. ತುಸುವೇ ಹೊಗೆಯನ್ನು ಫೂತ್ಕರಿಸುತ್ತದೆ. ನಾಲ್ಕು ವರ್ಷಗಳ ಹಿಂದೆ 2020ರಲ್ಲಿ ಇದೇ ವಾರ ಇಂಥದ್ದೇ ಗುಡುಗು, ಕಂಪನ ಆರಂಭವಾಗಿತ್ತು. ಕೋವಿಡ್ ಮಾರಿಯ ರಂಗಪ್ರವೇಶದ ಕ್ಷಣ ಅದಾಗಿತ್ತು. ಚೀನಾ, ಕೊರಿಯಾ, ತೈವಾನ್, ಅಮೆರಿಕ, ಯುರೋಪ್ ದೇಶಗಳಲ್ಲಿ ಅದರ ಸದ್ದು ಕೇಳಬರುತ್ತಿತ್ತು. ಆ ಎಲ್ಲ ದೇಶಗಳಿಂದ ದಿನವೂ ವಿಮಾನದಲ್ಲಿ ಬೆಂಗಳೂರಿಗೆ ಬರುತ್ತಿದ್ದ ಸಾಫ್ಟ್‌ವೇರ್ ತಜ್ಞರ ಮೂಲಕ ಮಹಾಮಾರಿ ಇಲ್ಲೇ ಮೊದಲಿಗೆ ತನ್ನ ಕುಣಿತವನ್ನು ಆರಂಭಿಸಿತ್ತು.

ನಂತರದ ಕರಾಳ ಘಟನೆಗಳನ್ನು ನೆನಪಿಸಿಕೊಳ್ಳಲು ಯಾರೂ ಇಷ್ಟಪಡುವುದಿಲ್ಲ. ನಾವೆಲ್ಲ ಮುಖವಾಡಗಳನ್ನು ಬಿಸಾಕಿ, ಮರೆವಿನ ಮುಸುಕು ಹೊದೆದು ಎಂದಿನಂತಾಗಿದ್ದೇವೆ. ಆದರೂ ಮಗ್ಗುಲು ಬದಲಿಸಿದಾಗ ಅದರ ಚೂಪು ಚೂರುಗಳು ಆಗಾಗ ಚುಚ್ಚುತ್ತವೆ. ಮನುಕುಲದ ಎಲ್ಲ ಮಹೋನ್ನತ ಸಾಧನೆಗಳೂ ವೈಫಲ್ಯಗಳೂ ಆ ಚೂರುಗಳಲ್ಲಿ ಪ್ರತಿಫಲಿಸುತ್ತವೆ.

ಮಾರ್ಚ್ 8ರಂದು ಮೊದಲ ಕೋವಿಡ್ ಪ್ರಕರಣ ಕರ್ನಾಟಕದಲ್ಲಿ ದಾಖಲಾಯಿತು. ಡೆಲ್, ಮೈಂಡ್‌ಟ್ರೀ, ಟಿಐ, ಗೂಗಲ್ ಕಂಪನಿಗಳ ಸಿಬ್ಬಂದಿ ಆಸ್ಪತ್ರೆಗೆ ದಾಖಲಾದರು. ಎರಡು ದಿನಗಳ ನಂತರ, 1897ರ ಮಹಾಮಾರಿ ಕಾಯಿಲೆಯ ಅಧಿನಿಯಮಗಳನ್ನು ಕರ್ನಾಟಕ ಜಾರಿಗೆ ತಂದಿತು. ನಮ್ಮದು ಅಂಥ ಕ್ರಮ ಕೈಗೊಂಡ ಮೊದಲ ರಾಜ್ಯವೆನಿಸಿತು.

'ಇದು ಮಹಾಮಾರಿ ಎಂದು ವಿಶ್ವ ಆರೋಗ್ಯ ಸಂಸ್ಥೆ ಮಾರ್ಚ್ 11ರಂದು ಘೋಷಿಸಿತು. ಕಾಕತಾಳೀಯ ಎಂಬಂತೆ, ದಿಲ್ಲಿಯಲ್ಲಿ ತಬ್ಲಿಘಿ ಜಮಾತ್‌ನ ಅಂತರರಾಷ್ಟ್ರೀಯ ಸಮಾವೇಶ ನಡೆದು ಕೆಲವರು ತಂತಮ್ಮ ಊರಿಗೆ ಹೊರಡತೊಡಗಿದ್ದರು. ಕಾಯಿಲೆಯನ್ನು ದೇಶದಾದ್ಯಂತ ಹಬ್ಬಿಸಲೆಂದೇ ನಡೆದ ಪಿತೂರಿ ಇದು ಎಂದು (ಯಾರೋ ಕ್ಲೂ ಕೊಟ್ಟಂತೆ) ಏಕಾಏಕಿ ಗೋದಿ ಮಾಧ್ಯಮಗಳಲ್ಲಿ ಹುಯಿಲೆದ್ದಿತು. ಅವರನ್ನು ಕಂಡಲ್ಲಿ ಗುಂಡಿಕ್ಕಿ ಎಂದು ರಾಜಕಾರಣಿಯೊಬ್ಬ ಅಬ್ಬರಿಸಿದ್ದೂ ಆಯಿತು. ಆ ವಿಕಾರಗಳನ್ನೆಲ್ಲ ಬದಿಗಿಡೋಣ. ವಿಜ್ಞಾನಿಗಳು ಕಲಿತ ಪಾಠ ಏನು ಅದನ್ನಷ್ಟೇ ಮೊದಲು ನೋಡೋಣ:

ಹಿಂದೆ 1918-20ರಲ್ಲಿ ಸಿಡಿದೆದ್ದ ಇನ್‌ಫ್ಲುಯೆಂಝಾ (ಫ್ಲೂ) ಜಗತ್ತಿನಾದ್ಯಂತ ಅಂದಾಜು ಎರಡು ಕೋಟಿ ಜನರನ್ನು ಬಲಿ ತೆಗೆದುಕೊಂಡಿತ್ತು. ಅದೇ ಮತ್ತೊಮ್ಮೆ ದಾಳಿ ಮಾಡೀತೆಂದು ವಿಜ್ಞಾನಿಗಳು ಹೇಳುತ್ತಲಿದ್ದರು. ಆದರೆ ಫ್ಲೂ ವೈರಸ್ ಬದಲು ಕೊರೊನಾ ವಕ್ಕರಿಸಿ ವೈದ್ಯರಂಗವನ್ನು ತಬ್ಬಿಬ್ಬುಗೊಳಿಸಿತು. (ಇವೆರಡರ ನಡುವೆ ನಾಲ್ಕಾರು ಪ್ರಮುಖ ವ್ಯತ್ಯಾಸಗಳಿವೆ, ಅವು ಸದ್ಯಕ್ಕೆ ಬೇಡ). ನಾವು ನಿರೀಕ್ಷಿಸಿದ್ದೇ ಒಂದು, ಆಗಿದ್ದೇ ಇನ್ನೊಂದು ಎಂಬಂತಾಯಿತು.

ಕೋವಿಡ್ ಅಧ್ಯಾಯ ಮುಗಿದಿದೆ ಎಂದು ಭಾವಿಸಿದ್ದರೆ ಅದು ತಪ್ಪು. ಕೋವಿಡ್ ಕಾಯಿಲೆಯನ್ನು ಗೆದ್ದು ಬಂದ ಅನೇಕರು ಈಗಲೂ ಅದರ ಸಂಕಟಗಳನ್ನು ಅನುಭವಿಸುತ್ತಿದ್ದಾರೆ. ಅದಕ್ಕೆ ದೀರ್ಘ ಕೋವಿಡ್ ಎನ್ನುತ್ತಾರೆ. ನಿರಂತರ ಸುಸ್ತು, ವಿವರಣೆಗೆ ಸಿಗದ ಅಸೌಖ್ಯ, ವ್ಯಾಯಾಮ ಮಾಡಲಾಗದ ಸ್ಥಿತಿ, ಹಿಂದೆಂದೋ ವಾಸಿಯಾಗಿದ್ದ ಆಸ್ತಮಾ ಈಗ ಉಲ್ಬಣ- ಹೀಗೆ ವೈದ್ಯರಿಗೂ ಅರ್ಥವಾಗದ ಲಕ್ಷಣಗಳು ಹೆಚ್ಚುತ್ತಿವೆ. ಹೃದ್ರೋಗ, ಲಕ್ವ ಪ್ರಕರಣಗಳೂ ಹೆಚ್ಚುತ್ತಿವೆ. ಅಮೆರಿಕದಲ್ಲಿ 115 ಕೋಟಿ ಡಾಲರ್ ವೆಚ್ಚದಲ್ಲಿ ಸುದೀರ್ಘ ಸಮೀಕ್ಷೆ ನಡೆಸಿ ಅಲ್ಲಿನ ಶೇಕಡಾ 7ರಷ್ಟು ಜನರಿಗೆ ಈ ಲಕ್ಷಣಗಳಿವೆ ಎಂದು ಹೇಳಲಾಗಿದೆ. ನಮ್ಮಲ್ಲಿ ಅದು ಜಾಸ್ತಿಯೇ ಇದ್ದೀತು ಎಂದು ಮುಂಬೈಯ ಹಿಂದುಜಾ ಆಸ್ಪತ್ರೆಯ ತಜ್ಞ ಡಾ. ಲಾನ್ಸೆಲಾಟ್ ಪಿಂಟೊ ಹೇಳುತ್ತಾರೆ. ಅಂಥ ರೋಗಿಗಳಿಗೆ ವಿಟಮಿನ್ ಮಾತ್ರೆಗಳನ್ನು ಬಿಟ್ಟರೆ ಬೇರೇನನ್ನೂ ಶಿಫಾರಸು ಮಾಡಲಾಗದ ಹತಾಶ ಸ್ಥಿತಿ ನಮ್ಮದು ಎಂತಲೂ ಅವರು ಹೇಳುತ್ತಾರೆ.

ಕೆಲವರಿಗೆ (ಶೇಕಡಾ 20ರಷ್ಟು ಜನರಿಗೆ) ಕೋವಿಡ್‌ನ ಯಾವ ಲಕ್ಷಣಗಳೂ ಇರಲಿಲ್ಲ. ಅದಕ್ಕೆ ಅವರ ತಳಿಗುಣದಲ್ಲಿರುವ ಎಚ್‌ಎಲ್‌ಎ ಎಂಬ ಪ್ರೋಟೀನಿನ ವಿಶಿಷ್ಟ ರೂಪವೇ ಕಾರಣ ಎಂದು ನೇಚರ್ ಪತ್ರಿಕೆಯಲ್ಲಿ 35 ವಿಜ್ಞಾನಿಗಳ ಜಂಟಿ ಸಂಶೋಧನಾ ಪ್ರಬಂಧದಲ್ಲಿ ಹೇಳಲಾಗಿದೆ. ಅವರು 29,947 ಜನರ ಮೂಳೆ ಮಜ್ಜೆಯ ರಕ್ತದ ಸ್ಯಾಂಪಲ್‌ಗಳನ್ನು ಪರೀಕ್ಷಿಸಿ ಈ ನಿರ್ಣಯಕ್ಕೆ ಬಂದಿದ್ದಾರೆ. ಆದರೆ ಕಾಯಿಲೆಗೆ ತುತ್ತಾಗದವರು ಕೊರೊನಾ ವೈರಾಣುವನ್ನು ಸಲೀಸಾಗಿ ಒಬ್ಬರಿಂದ ಪಡೆದು ಇನ್ನೊಬ್ಬರಿಗೆ ದಾಟಿಸುತ್ತ ಹೋಗಿದ್ದಾರೆ.

ಎಲ್ಲ ದೇಶಗಳಲ್ಲಿ ಎಳೆಯರಲ್ಲಿ ಮಧುಮೇಹ (ಟೈಪ್1 ಡಯಾಬಿಟೀಸ್) ಹೆಚ್ಚಾಗಿದೆ. ಪ್ರತಿಷ್ಠಿತ ಜಾಮಾ (JAMA, ಅಮೆರಿಕದ ವೈದ್ಯಸಂಘದ ಪತ್ರಿಕೆ) ನಡೆಸಿದ ಜಾಗತಿಕ ಸಮೀಕ್ಷೆಯ ಪ್ರಕಾರ 2021-22ರಲ್ಲಿ ಸಕ್ಕರೆ ಕಾಯಿಲೆಯುಳ್ಳ ಮಕ್ಕಳ ಸಂಖ್ಯೆ ಶೇ 14ರಷ್ಟು ಹೆಚ್ಚಾಗಿತ್ತು; ನಂತರ ಶೇ 27ರಷ್ಟು ಹೆಚ್ಚಾಗಿದೆ. ಇದಕ್ಕೆ ಕೋವಿಡ್ ಕಾರಣವೊ ಅಥವಾ ಲಾಕ್‌ಡೌನ್ ಕಾರಣವೊ ಗೊತ್ತಾಗಿಲ್ಲ.

ಬ್ರಿಟಿಷ್ ವೈದ್ಯಕೀಯ ಸಂಘದ (ಬಿಎಮ್‌ಜೆ) ಸಮೀಕ್ಷೆಯ ಪ್ರಕಾರ ಶಾಖಾಹಾರಿಗಳು ಮತ್ತು (ಹಾಲು ಜೇನನ್ನೂ ಮುಟ್ಟದ) ವೀಗನ್‌ಗಳಲ್ಲಿ ಕೋವಿಡ್ ಕಾಯಿಲೆಯ ಸಂಭವನೀಯತೆ ಶೇ 37ರಷ್ಟು ಕಡಿಮೆ ಇತ್ತು. ಏಕೆಂದರೆ ಸಸ್ಯಾಹಾರದಲ್ಲಿ ನಮ್ಮ ರೋಗ ನಿರೋಧಕ ವ್ಯವಸ್ಥೆಗೆ ಹೆಚ್ಚಿನ ಬಲ ಕೊಡಬಲ್ಲ ಆಂಟಿಆಕ್ಸಿಡಂಟ್, ಫೈಟೊಸ್ಟೆರಾಯಿಡ್ ಮತ್ತು ಪಾಲಿಫಿನಾಲ್‌ಗಳು ಹೆಚ್ಚಿನ ಪ್ರಮಾಣದಲ್ಲಿ ಇರುತ್ತವೆ.



ಜಗತ್ತಿನ ಎಲ್ಲ ದೇವರುಗಳನ್ನು ದಿಗ್ಬಂಧನದಲ್ಲಿಟ್ಟು ಸಂಶೋಧನ ಲ್ಯಾಬ್‌ಗಳು ಎಲ್ಲೆಲ್ಲೂ ತೆರೆದುಕೊಂಡವು. ವೈರಾಣುವನ್ನು ಹಿಮ್ಮೆಟ್ಟಿಸಬಲ್ಲ ಲಸಿಕೆ ತಯಾರಿಸಲು ಹಿಂದೆಲ್ಲ ಐದಾರು ವರ್ಷಗಳೇ ಬೇಕಾಗಿದ್ದವು. ಒಂದೇ ವರ್ಷದಲ್ಲಿ ಹೊಸ ಲಸಿಕೆ ಬಂದು, ಅದರ ಅಡ್ಡ ಪರಿಣಾಮಗಳ ತ್ವರಿತ ಅಧ್ಯಯನವೂ ನಡೆದು, ಸಾಲುಸಾಲು ಸರ್ಕಾರಗಳಿಂದ ಅದಕ್ಕೆ ಮಾನ್ಯತೆಯೂ ಸಿಕ್ಕು, ವಿಮಾನಗಳ ಮೂಲಕ (ರೋಗ ಹರಡಿದಷ್ಟೇ ತ್ವರಿತವಾಗಿ) ಚುಚ್ಚುಮದ್ದಿನ ವಿತರಣೆಯೂ ನಡೆಯಿತು. ಹಿಂದಿನ ಎಲ್ಲ ದಾಖಲೆಗಳನ್ನೂ ಮೀರಿಸಿ ಒಂದೇ ವರ್ಷದಲ್ಲಿ 15 ಲಕ್ಷಕ್ಕೂ ಹೆಚ್ಚು ಸಂಶೋಧನ ಪ್ರಬಂಧಗಳು ವೈಜ್ಞಾನಿಕ ಪತ್ರಿಕೆಗಳಲ್ಲಿ ಪ್ರಕಟವಾದವು. 'ವಿಜ್ಞಾನದ ಪ್ರೆಶರ್ ಕುಕ್ಕರ್‌ನಲ್ಲಿ ಹಿಂದೆಂದೂ ಕಂಡಿರದಷ್ಟು ಒತ್ತಡ ಏರ್ಪಟ್ಟಿತು' ಎಂದು ಬಿಬಿಸಿಯ 'ಸೈನ್ಸ್ ಫೋಕಸ್' ಪತ್ರಿಕೆ ಈಚಿನ ಸಮೀಕ್ಷೆಯಲ್ಲಿ ಹೇಳಿದೆ.

ಲ್ಯಾಬ್‌ಗಳಲ್ಲಿ ವೈರಾಣುವಿನ ಮುಳ್ಳುಮುಖದ ಪರೀಕ್ಷೆ ನಡೆಯುತ್ತಿದ್ದಾಗ ಹೊರಗಿನ ಸಮಾಜದಲ್ಲಿ ಅವೈಜ್ಞಾನಿಕ ಆಚರಣೆಗಳ ಬಹುಮುಖೀ ಕುಣಿತ ನಡೆಯುತ್ತಿತ್ತು. ಗಂಟೆ, ಜಾಗಟೆ, ಆರತಿಗಳ ಭರಾಟೆಯ ಮಧ್ಯದಲ್ಲೇ ಔಷಧಗಳ ಕಾಳಸಂತೆ, ನಕಲಿ ಸಸ್ಯೌಷಧಗಳ ಮಹಾಪ್ರಚಾರ ನಡೆದವು. ಭಯದ ಪಿಡುಗನ್ನು ಎಲ್ಲೆಡೆ ಹಬ್ಬಿಸುವಲ್ಲಿ ದೃಶ್ಯಮಾಧ್ಯಮಗಳು ಅಹೋರಾತ್ರಿ ಡೋಲು ಬಜಾಯಿಸುತ್ತಿದ್ದಾಗ ಮಹಾಮಾರಿಯ ಕುಣಿತದ ಜೊತೆಗೇ ಮನುಷ್ಯನ ಎಲ್ಲ ವಿಕಾರಗಳ ರೋಚಕ ಕುಣಿತ ನಡೆದವು.

ಅಂತೂ 'ಹೇಗಾದರೂ ಈ ಪಿಡುಗು ಮುಗಿದು ಮಾಮೂಲಿನ ದಿನಗಳು ಮತ್ತೆ ಬರಲಪ್ಪಾ' ಎಂದು ಎಲ್ಲರೂ ಹಾರೈಸುತ್ತಿದ್ದಾಗ ಲಸಿಕೆ ಬಂತು. ನಮ್ಮ ಮಾಮೂಲಿನ ದಿನಗಳೇ ಮಹಾಮಾರಿಗೆ ಕಾರಣವಾಗಿದ್ದು ಎಂದು ಪುಲಿಟ್ಸರ್ ಪ್ರಶಸ್ತಿ ವಿಜೇತ ಪತ್ರಕರ್ತ ಎಡ್ ಯಂಗ್ ಹೇಳಿದ್ದೂ ದಾಖಲಾಯಿತು. ಅವಿರತ ಸುತ್ತಾಟ, ನಿಸರ್ಗದ ನಿರಂತರ ನಾಶ, ಎಗ್ಗಿಲ್ಲದ ಭೋಗಲಾಲಸೆ- ಇವೆಲ್ಲ ನಮ್ಮ ಮಾಮೂಲಿ ದಿನಗಳು ತಾನೆ?

ಮಾನವ ಸಮಾಜದ ಎಲ್ಲ ಅಸಮಾನತೆಗಳನ್ನೂ ಕೊರೊನಾ ಹಿಗ್ಗಿಸಿ ಬಿಚ್ಚಿಟ್ಟಿತು ಎಂದು ಮಿಲಿಂಡಾ ಗೇಟ್ಸ್ ಹೇಳಿದರು. ಮೊದಲಿನಿಂದಲೂ ಅಸಮಾನತೆ ಜಾಸ್ತಿ ಇದ್ದ ನಮ್ಮ ಸಮಾಜದಲ್ಲಂತೂ ನಾನಾ ಬಗೆಯ ಕಂದರಗಳ ಆಳ ಅಗಲ ಹೆಚ್ಚಾಯಿತು. ಹೊಸ 40 ಧನಿಕರು ಜಾಗತಿಕ ಶತಕೋಟ್ಯಧೀಶರ ಪಟ್ಟಿಗೆ ಸೇರ್ಪಡೆಯಾದರು. ಗೌತಮ್ ಅದಾನಿಯವರು 20 ಸ್ಥಾನಗಳಷ್ಟು ಮೇಲಕ್ಕೇರಿದರು. ಬಡವರು ಇನ್ನಷ್ಟು ತಳಕ್ಕಿಳಿದರು. ಸಣ್ಣ ಉದ್ಯಮಗಳು ನೆಲ ಕಚ್ಚಿದವು. ಡಿಜಿಟಲ್ ಡಿವೈಡ್ ಎಂಬ ಹೊಸ ಕಂದರ ತೆರೆದುಕೊಂಡಿತು. ನೆಟ್‌ವರ್ಕ್ ಅಥವಾ ಮೊಬೈಲ್ ಫೋನ್ ಇಲ್ಲದವರು ಹಿಂದೆಯೇ ಉಳಿದರು.

'ಕಂಟಕ ಕಳೆದು ಕೊನೆಗೂ ಒಳ್ಳೆಯ ದಿನ ಬರಲೇಬೇಕು. ಬಂದಿಲ್ಲವೆಂದರೆ ಕಂಟಕ ಕಳೆದಿಲ್ಲ' ಎಂದು ಹೇಳಿದ ಹಾಡುಗಾರ ಜಾನ್ ಲೆನ್ನನ್‌ನ ಮಾತು ಈಗ ನೆನಪಾಗುತ್ತದೆ. ಹೊಸ ಅರ್ಥ ಹೊಳೆಯುತ್ತದೆ.

ಚುರುಮುರಿ



ಅಭ್ಯರ್ಥಿಯೇ ಚೇಂಜ್!

• ಗುರು ಪಿ.ಎಸ್.

'ಚೇಂಜ್ ಮಾಡ್ತೀನಿ, ಎಲ್ಲ ಬದಲಿಸಿಬಿಡ್ತೀನಿ...'

'ಏನೇನೋ ಬಡಬಡಿಸ್ತಿದೀರಲ್ರೀ, ಎದ್ದೇಳ್ರೀ ಮೇಲೆ' ನೀರು ಎರಚಿ ನನ್ನನ್ನು ಎದ್ದೇಳಿಸಿದಳು ಹೆಂಡತಿ.

'ಇಷ್ಟೊತ್ತು ನಾನು ಕಂಡಿದ್ದು ಕನಸಾ?' ಬೇಸರದಲ್ಲಿ ಕೇಳಿದೆ.

'ನಾಲ್ಕೂವರೆ ವರ್ಷಗಳಿಂದ ಮಲಗೇ ಬಿಟ್ಟಿದ್ದೀರೇನೋ ಎನ್ನುವಂತಿದ್ದವರು ಏನು ಈಗೀಗ ತುಂಬಾ ಆ್ಯಕ್ಟೀವ್ ಆಗಿಬಿಟ್ಟಿದ್ದೀರಿ' ವ್ಯಂಗ್ಯವಾಗಿ ಕೇಳಿದಳು ಹೆಂಡತಿ.

'ನೋಡು, ಯಾವಾಗಲೂ ಎಚ್ಚರದಿಂದಿದ್ದರೆ ಯಾರ ಗಮನವನ್ನೂ ಸೆಳೆಯೋದಿಕ್ಕಾಗಲ್ಲ. ಸಮಯ ಬಂದಾಗ ಎದ್ದೇಳಬೇಕು, ಎದ್ದು ಸದ್ದು ಮಾಡಬೇಕು'.

'ಅದ್ ಸರಿ, ಅದೇನೋ ಬದಲಿಸಿಬಿಡ್ತೀನಿ ಅಂತ ಬಡಬಡಿಸ್ತಿದ್ರಲ್ಲ, ಏನದು?'

'ದೇಶದ ಸಂವಿಧಾನವನ್ನ ಬದಲಿಸ್ತೀನಿ'.

'ಮೊದಲು ಮನೆಯಲ್ಲಿ ಟೀವಿಯ ರಿಮೋಟ್ ತೆಗೆದುಕೊಂಡು ಚಾನೆಲ್ ಬದಲಿಸೋಕಾಗುತ್ತೋ ನೋಡಿ'.

'ಕನಸು ಕಾಣೋದಕ್ಕೆ ಕಾಸು ಕೊಡಬೇಕಾ? '

'ನೀವು ಹೀಗೇ ಕನಸು ಕಾಣ್ತಾ ಇರಿ. ನಾನೇ ಎಲೆಕ್ಷನ್‌ಗೆ ನಿಲ್ಲೋಕೆ ರೆಡಿಯಾಗ್ತಿದೀನಿ.. ಗೆದ್ದು ಮಂತ್ರಿನೂ ಆಗ್ತೀನಿ' ಗತ್ತಿನಲ್ಲಿ ಹೇಳಿದಳು ಪತ್ನಿ.

'ನೀನು ಎಲೆಕ್ಷನ್‌ಗೆ ನಿಲ್ತೀಯಾ' ಹೊಟ್ಟೆಯಲ್ಲಿ ಸಂಕಟವಾದರೂ ತೋರಗೊಡದೆ ಕೇಳಿದೆ.

'ನಿಂತರೆ ತಪ್ಪೇನು?' ಪ್ರಶ್ನೆ ಎಸೆದಳು ಹೆಂಡತಿ.

'ರಾಣಿ ಹಾಗೆ ಇದ್ದವಳು ನೀನು. ನಿನಗ್ಯಾಕೆ ಎಲೆಕ್ಷನ್ ಸಹವಾಸ?'

'ನಾನು ಚುನಾವಣೆಗೆ ನಿಲ್ಲೋಕೆ ಮುಂಚೆಯೇ ನಿಮಗೆ ಹೆದರಿಕೆ ಪ್ರಾರಂಭವಾದಂತಿದೆ' ನಕ್ಕಳು ಪತ್ನಿ.

'ಹಾಗಲ್ಲ, ರಾಣಿ ರಾಣಿಯ ಹಾಗೆಯೇ ಇರಬೇಕು, ಸೇವಕಿ ಆಗೋದೇಕೆ? ಸುಖದ ಸುಪ್ಪತ್ತಿಗೆಯಲ್ಲಿರೋಳು ನೀನು, ಎಮ್ಮೆಲ್ಲೆ, ಎಂಪಿಗಳ ರೀತಿ ಬೀದಿಯಲ್ಲಿ ಕೆಲಸ ಮಾಡೋಕಾಗುತ್ತಾ?'

'ಪ್ರಜಾಪ್ರಭುತ್ವ ರೀ ಇದು. ರಾಜ–ರಾಣಿಯರ ಪ್ರಶ್ನೆ ಬರಲ್ಲ. ಇಲ್ಲಿ ಪ್ರಜೆಗಳೇ ಪ್ರಭುಗಳು. ನಾನೂ ಪ್ರಜೆ ಆಗಿರೋದರಿಂದ ಪ್ರಭುವೂ ಆಗಬಹುದಲ್ಲ' ಪಾಠ ಮಾಡುತ್ತಾ ಟಿ.ವಿ. ಆನ್ ಮಾಡಿದಳು ಪತ್ನಿ.

ಬ್ರೇಕಿಂಗ್ ನ್ಯೂಸ್ ಬರ್ತಾ ಇತ್ತು. 'ಬದಲಿಸ್ತೀನಿ ಎಂದ ಕ್ಷೇತ್ರದ ಸಂಸದನನ್ನೇ ಪಕ್ಷ ಬದಲಿಸಲಿದೆಯಂತೆ!'

ಸಂಗತ

ಪ್ರತಿ ನಾಳೆಯೂ ಒಂದು ಸ್ಲೇಟು!

ಮಕ್ಕಳ ಕೈಯಲ್ಲಿ ಇರಬೇಕಾದುದು ಸ್ಮಾರ್ಟ್ ಫೋನಲ್ಲ, ಸ್ಮಾರ್ಟ್ ಸ್ಲೇಟ್

• ಬಿ.ಎಸ್.ಭಗವಾನ್

ಇತ್ತೀಚೆಗೆ ತಳ್ಳುಗಾಡಿಯ ಸೊಪ್ಪಿನ ವ್ಯಾಪಾರಿಯ ನಾಜೂಕು ಕಂಡು ಬೆರಗಾದೆ. ಒಂದು ಸಾಧಾರಣ ಸ್ಲೇಟಿನ ಮೇಲೆ ಆತ ವಿವಿಧ ಸೊಪ್ಪುಗಳ ಧಾರಣೆಯನ್ನು ಅಂದವಾಗಿ ಸೀಮೆಸುಣ್ಣದಲ್ಲಿ ನಮೂದಿಸಿ ಒಂದು ಅಂಚಿಗಿರಿಸಿದ್ದ. ಧ್ವನಿವರ್ಧಕದ ಅಬ್ಬರವಿಲ್ಲದೆ ಆತ ಮೆರೆದ ಆ ಚೊಕ್ಕ ಸರಳ ಸೂಚನೆಯೇ ಸೊಪ್ಪುಸದೆ ಕೊಳ್ಳಲು ಗ್ರಾಹಕರನ್ನು ಸೆಳೆಯುತ್ತಿತ್ತು. ನಾಳೆ ಮತ್ತಷ್ಟು ತರಕಾರಿಗಳು, ಮತ್ತೊಂದು ಬರಹ.

50-60ರ ದಶಕದಲ್ಲಿ ನಾವು ಶಾಲಾ ವಿದ್ಯಾರ್ಥಿಗಳಾಗಿದ್ದಾಗ ಪಡುತ್ತಿದ್ದ ಸಡಗರ ಕಣ್ಣಿಗೆ ಕಟ್ಟಿದಂತಿದೆ. ಪುಸ್ತಕವಿರಲಿ, ಇಲ್ಲದಿರಲಿ, ಇರಲೇಬೇಕು ಒಂದು ಸ್ಲೇಟು, ಅಷ್ಟು ಬಳಪಗಳು. ಗುರುಗಳು ಬಳಪ ತರದವರ ಅಸಹಾಯಕತೆಯನ್ನು ಗಮನಿಸಿ ತುಂಡು ಸೀಮೆಸುಣ್ಣವನ್ನು ದಯಪಾಲಿಸುತ್ತಿದ್ದರು. ಬರೆಯುವುದಕ್ಕಿಂತ ಬಳಪ ಸೇವಿಸುವುದರಲ್ಲೇ ಕೆಲವರ ಆಸಕ್ತಿ ಇತ್ತೆನ್ನಿ! ಸಹಪಾಠಿಗಳಲ್ಲಿ ಕೆಲವರಲ್ಲಾದರೂ ಆಲದೆಲೆಯ ಸಂರಕ್ಷಣೆಯಲ್ಲಿ ಇರುತ್ತಿದ್ದ ತುಣುಕು ಒದ್ದೆ ಬಟ್ಟೆ. ಗೋಗರೆದರೆ ಮಾತ್ರ ಸ್ಲೇಟು ಅಳಿಸಲು ಅದು ಲಭಿಸುತ್ತಿತ್ತು. ಸ್ಲೇಟೆಂಬ ಮಿನಿ ಕಪ್ಪುಹಲಗೆಯ ಮೇಲ್ಭಾಗದಲ್ಲಿ ಅಳವಡಿಸಿದ್ದ ಎಣಿಕೆಯ ಮಣಿಕಟ್ಟು, ಲೆಕ್ಕಾಚಾರವನ್ನು ಸರಾಗಗೊಳಿಸುತ್ತಿತ್ತು.

ನಮ್ಮ ಶಿಕ್ಷಣ ಪದ್ಧತಿಯು ಆಧುನಿಕ ತಂತ್ರಜ್ಞಾನ ಮತ್ತು ವಿಧಾನಗಳನ್ನು ಅಳವಡಿಸಿಕೊಳ್ಳುತ್ತಾ ಸಾಗುವುದು ಸರಿಯೆ. ಆದರೆ ಪರಂಪರಾಗತ ಕಲಿಕಾ ಪರಿಕರಗಳನ್ನು ಮೂಲೆಗುಂಪಾಗಿಸದೆ ಅವನ್ನು ಪೂರಕ ರೂಪಗಳಲ್ಲಾದರೂ ಬಳಸಬೇಕು. ಬಳಪವು ಜೇಡಿಪದರಕಲ್ಲಿಂದ ತಯಾರಾಗುವ ಮೃದು ವಸ್ತು. ಸ್ಲೇಟಿನಲ್ಲಿ ಬರೆದುದನ್ನು ಅಳಿಸಿ ಮತ್ತೆ ಬರೆಯಬಹುದು. ಹಿಡಿಯಲು ಹಗುರ ಮತ್ತು ದೀರ್ಘ ಬಾಳಿಕೆ. ಹಾಳೆಯ ಮೇಲೆ ಗೀಚುವುದು ತಪ್ಪುತ್ತದೆ. ಹಾಳೆಯ ಉಳಿತಾಯವೂ ಆದೀತು. ಸ್ಲೇಟಿನ ಮೇಲೆ ಬರೆಯುವುದರಿಂದ ಕೈಬರಹ ಉತ್ತಮವಾಗುತ್ತದೆ. ಜೊತೆಗೆ ಕೈನ ಸ್ನಾಯುಗಳಿಗೂ ಒಳ್ಳೆಯ ವ್ಯಾಯಾಮವಾಗುವುದು.

'ಪ್ರಯೋಗ ಮತ್ತು ದೋಷ' (ಟ್ರಯಲ್ ಆ್ಯಂಡ್ ಎರರ್) ವಿಧಾನಕ್ಕೆ ಹಾಗೂ ಕರಡು ತಯಾರಿಸಿ ತಿದ್ದಲು, ಸ್ಫುಟವಾಗಿ ಬರೆಯಲು ಸ್ಲೇಟು ಹೇಳಿ ಮಾಡಿಸಿದ ಸಲಕರಣೆ. ಸ್ಲೇಟು, ಬಳಪ ಹಿಡಿದರೆ ಅವು 'ಎಲ್ಲವೂ ನಿನ್ನ ಕೈನಲ್ಲಿ ಇವೆ' ಎನ್ನುತ್ತವೆ! ಮನುಷ್ಯನ ನಾಗರಿಕತೆಗೆ ನಾಂದಿ ಹಾಡಿದ್ದೇ ಸ್ಲೇಟು. ಅವನ ಮನಸ್ಸಿಗೆ ಅದು ಉಪಮೆಯಾಗಿದೆ.

ಚಿತ್ರ ರಚನೆಗೆ ಸ್ಲೇಟು ಕ್ಯಾನ್ವಾಸಾಗುತ್ತದೆ. ಹಿರಿಯರ ಮಾರ್ಗದರ್ಶನದಲ್ಲಿ ಮಕ್ಕಳು ಅಕ್ಷರಾಭ್ಯಾಸ ಪ್ರಾರಂಭಿಸುವುದು, ಸರಳ ಹಾಗೂ ವಕ್ರ ರೇಖೆಗಳನ್ನು ರಚಿಸುವುದೇ ಒಂದು ರೋಚಕ ಅನುಭವ. ರೂಪಾಂತರಗೊಂಡ ನುಣುಪಾದ ಶಿಲೆಯಾದ ಸ್ಲೇಟು ರಂಧ್ರರಹಿತ ಮತ್ತು ನೀರು, ಬೆಂಕಿ ಹಾಗೂ ವಿದ್ಯುತ್ ಪ್ರತಿರೋಧಕ. ಸ್ವಾಭಾವಿಕ ಸ್ಲೇಟನ್ನು ಯಾವುದೇ ರಾಸಾಯನಿಕ ಉತ್ಸರ್ಜನಗಳಿಲ್ಲದೆ ಮರುಬಳಕೆ ಮಾಡಬಹುದು.

1960ರ ದಶಕದಿಂದ ಪಿಂಗಾಣಿ ಗಾಜಿನ ಲೇಪದ ಹಸಿರು ಬಣ್ಣದ ಸುಧಾರಿತ ಸ್ಲೇಟ್ ಸಹ ಬಳಕೆಗೆ ಬಂದಿತು. ಅದು ಮತ್ತಷ್ಟು ಹಗುರ, ಹೆಚ್ಚು ತಾಳಿಕೆ ಮಾತ್ರವಲ್ಲ ಸಾಗಣೆಯೂ ಸುಲಭ. 'ಇ ಸ್ಲೇಟ್', 'ಮ್ಯಾಜಿಕ್ ಸ್ಲೇಟ್'ನಂತಹ ಆಧುನಿಕತೆಗೂ ಮಕ್ಕಳು ತೆರೆದುಕೊಳ್ಳಬೇಕು. ಸ್ಲೇಟ್ ಮೇಲೆ ಸ್ಟೈಲಸ್ (ಚೂಪಾದ ಸಲಕರಣೆ) ಬಳಸಿ ಅಂಧರು ಬರೆಯಬಹುದು ಮತ್ತು ಯಾರ ಸಹಾಯವೂ ಇಲ್ಲದೆ ಓದಬಹುದು.

ಸ್ಲೇಟು ಒಂದು ತೆರೆದುಕೊಳ್ಳುವ ಕಾವ್ಯ. ಖಾಲಿ ಸ್ಲೇಟಿನಲ್ಲಿ ಏನೆಲ್ಲ ಸೃಷ್ಟಿಸಬಹುದು. ಒಮ್ಮೆ ಯಶಸ್ಸು, ಇನ್ನೊಮ್ಮೆ ವೈಫಲ್ಯ. ನಿನ್ನೆ ಹೇಗೂ ಇರಲಿ, ಆದರೆ ಪ್ರತಿ ನಾಳೆಯೂ ಒಂದು ಸ್ವಚ್ಛ ಸ್ಲೇಟು, ಹೊಸ ಸಾಧ್ಯತೆಗಳು.



ಲ್ಯಾಪ್‌ಟಾಪ್ ಮತ್ತು ಪೆನ್, ಪೇಪರ್ ಬಳಕೆ ಪರಿಸರವನ್ನು ಭಿನ್ನ ಭಿನ್ನವಾಗಿ ಸೊರಗಿಸುತ್ತದೆ. ಲ್ಯಾಪ್‌ಟಾಪ್ ಚಾಲನೆಗೆ ವಿದ್ಯುತ್ ಬೇಕು. ಅಲ್ಲದೆ ಇತರ ವಿದ್ಯುನ್ಮಾನ ಉಪಕರಣಗಳಂತೆ ಅದರ ಉತ್ಪಾದನೆ ಹಾಗೂ ಉಪಯೋಗದ ನಂತರ ವಿಲೇವಾರಿಯಿಂದ ಪರಿಸರ ಮಾಲಿನ್ಯ. ಪ್ರಾಥಮಿಕ ಶಾಲೆಯ ಒಬ್ಬ ವಿದ್ಯಾರ್ಥಿ ವರ್ಷಕ್ಕೆ ಬರೆಯಲು ಬಳಸುವುದು ಸರಾಸರಿ 1,200 ಹಾಳೆಗಳು. ಅದಕ್ಕಾಗಿ ಒಂದು ವೃಕ್ಷದ ಒಂದಷ್ಟು ಭಾಗವನ್ನು ಕಡಿಯಬೇಕಾಗುತ್ತದೆ. ಹಾಗಾಗಿ, ಸ್ಲೇಟು, ಬಳಪ ಉಪಯೋಗಿಸಿದರೆ ಅಷ್ಟರ ಮಟ್ಟಿಗೆ ಕಾಡನ್ನು ಉಳಿಸಬಹುದು. ರದ್ದಿ ಕಾಗದ ಸೃಷ್ಟಿಸುವ ಸವಾಲೇನು ಕಡಿಮೆಯೇ? ಸುಟ್ಟರೆ ಹೊಗೆ, ಪುನರ್‌ಬಳಕೆಯ ಪ್ರಕ್ರಿಯೆ ಅಗ್ಗವೇನೂ ಅಲ್ಲವಲ್ಲ.

ಮಗುವಿನ ಸಮಗ್ರ ಬೆಳವಣಿಗೆಗೆ ಮುದ್ರಿತ ಜ್ಞಾನವೊಂದೇ ಸಾಲದು. ಮಗು ಸ್ವತಃ ಗ್ರಹಿಸಿ, ಗ್ರಹಿಸಿದ್ದನ್ನು ಬರೆಯಬೇಕು. ಬರೆದಿದ್ದರಲ್ಲಿ ತಪ್ಪುಗಳಿದ್ದರೆ ತಿದ್ದಿ ಒಪ್ಪಾಗಿಸಬೇಕು. ಸ್ಲೇಟಲ್ಲದೆ ಮತ್ತ್ಯಾವ ಸಲಕರಣೆಯಲ್ಲಿ ಇದು ಸಾಧ್ಯ? ಮಕ್ಕಳ ಕೈಯಲ್ಲಿ ಇರಬೇಕಾದದ್ದು ಸ್ಮಾರ್ಟ್ ಫೋನಲ್ಲ, ಅಷ್ಟೇ ಕಿರಿದಾದರೂ ಸರಿ, ಒಂದು ಸ್ಲೇಟು.

ರೇಖಾ ಪಾಟೀಲ್ ಅವರ ಮಕ್ಕಳ ಕವಿತೆಯೊಂದು ಸ್ಲೇಟು-ಬಳಪದ ವೈಭವವನ್ನು ಮನಮುಟ್ಟಿಸುತ್ತದೆ:

'ಸ್ಲೇಟು ಬಳಪದ ಗಮ್ಮತ್ತು,
ಈಗೀನ ಮಕ್ಕಳಿಗೇನು ಗೊತ್ತು?
ನೋಟ್ಸು, ಪ್ಯಾಡು, ಫೋನು
ಕೈಯಲ್ಲಿ ಮೂರೂ ಹೊತ್ತು...
ಹೋಗುತಿದೆ ಎಲ್ಲವೂ ಮರೆತು'.

ವಾಚಕರ ವಾಣಿ

ಬೋರ್ಡ್ ಪರೀಕ್ಷೆ: ಸಲ್ಲದ ಗೊಂದಲ

ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಶಾಲೆಗಳ 5, 8 ಹಾಗೂ 9ನೇ ತರಗತಿಗಳಿಗೆ ಬೋರ್ಡ್ ಪರೀಕ್ಷೆ ನಡೆಯುವುದಕ್ಕೆ ಅನುವು ಮಾಡಿಕೊಟ್ಟಿದ್ದ ಹೈಕೋರ್ಟ್ ವಿಭಾಗೀಯ ಪೀಠದ ಮಧ್ಯಂತರ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಶಿಕ್ಷಣ ಇಲಾಖೆಯು ಇದೀಗ ಬೋರ್ಡ್ ಪರೀಕ್ಷೆಗಳನ್ನು ಮುಂದೂಡಿರುವುದು ಗೊಂದಲಕ್ಕೆ ಕಾರಣವಾಗಿದೆ. ಈ ಬೆಳವಣಿಗೆಯಿಂದ ಶಿಕ್ಷಣ ಇಲಾಖೆಗೆ ಮತ್ತೊಮ್ಮೆ ಹಿನ್ನಡೆಯಾಗಿದ್ದು ಮಾತ್ರವಲ್ಲ, ಲಕ್ಷಾಂತರ ವಿದ್ಯಾರ್ಥಿಗಳು, ಪಾಲಕರಲ್ಲಿ ಆತಂಕ ಮನೆಮಾಡಿದೆ.

ಬೋರ್ಡ್ ಪರೀಕ್ಷೆಗೆ ಸಂಬಂಧಿಸಿದ ಅನಿಶ್ಚಿತ ಸ್ಥಿತಿಯಿಂದ ಮಕ್ಕಳು ರೋಸಿಹೋಗಿದ್ದಾರೆ. ಇಲಾಖೆಯು ಮಕ್ಕಳ ಮೇಲೆ ಇಂತಹ ಪ್ರಯೋಗ ಮಾಡುವುದನ್ನು ಬಿಟ್ಟು, ಸರಿಯಾದ ಕ್ರಿಯಾ ಯೋಜನೆ ರೂಪಿಸಿ ಅದರಂತೆ ನಡೆದುಕೊಳ್ಳಬೇಕು. ಈಗಾಗಲೇ ಮುದ್ರಿತವಾದ ಪ್ರಶ್ನೆಪತ್ರಿಕೆಯ ವೆಚ್ಚದ ಹೊರೆ ಒಂದೆಡೆಯಾದರೆ, ಶಾಲೆಗಳಿಗೆ ಮುಂದೇನು ಎಂಬುದೇ ದೊಡ್ಡ ಪ್ರಶ್ನೆಯಾಗಿದೆ. ಇಂತಹ ಸಮಸ್ಯೆಗಳಿಗೆ ಇಲಾಖೆ ಸೂಕ್ತ ಪರಿಹಾರ ಕಂಡುಕೊಳ್ಳಬೇಕು.

ಸುರೇಂದ್ರ ಪೈ, ಭಟ್ಕಳ

ಮರೆಯಲಿ ಪ್ರಬುದ್ಧತೆ

ಬರದ ಬರಸಿಡಿಲಿನ ಪರಿಹಾರಕ್ಕಿಲ್ಲ
ಯಾವ ಜನಪ್ರತಿನಿಧಿಗೂ ಬದ್ಧತೆ,
ಚುನಾವಣೆ ಗೆಲ್ಲಲೇಬೇಕೆಂದು
ನಡೆದಿದೆ ಮತ್ತೆ ಭರದ ಸಿದ್ಧತೆ,
ಇನ್ನಾದರೂ ಮರೆಯಲಿ ಮತದಾರ
ತನ್ನ ಆಯ್ಕೆಯಲ್ಲಿ ಪ್ರಬುದ್ಧತೆ.

ಮಹಾಂತೇಶ್ ಬಿ. ನಿಟ್ಟೂರು
ದಾವಣಗೆರೆ

'ಆ ತಾಯಿ'ಯ ಋಣ ತೀರಿಸಬೇಡವೇ?

ಸರ್ಕಾರದ 'ನಮ್ಮ ಶಾಲೆ ನಮ್ಮ ಜವಾಬ್ದಾರಿ' ಯೋಜನೆ ಕುರಿತ ಮಲ್ಲಿಕಾರ್ಜುನ ಹೆಗ್ಗಳಗಿ ಅವರ ಲೇಖನವು (ಸಂಗತ, ಮಾರ್ಚ್ 12) ಪ್ರೇರಣೆ ನೀಡುವಂತಿದೆ. ಈ ದಿನಗಳಲ್ಲಿ ಕನ್ನಡ ಶಾಲೆಗಳು ಮುಚ್ಚುತ್ತಿವೆ ಎಂಬ ವಿಷಯ ತಿಳಿದ ಪ್ರಜ್ಞಾವಂತ ಹಳೆ ವಿದ್ಯಾರ್ಥಿಗಳು ತಾವು ಕಲಿತ ಕನ್ನಡ ಶಾಲೆಗೆ ಭೇಟಿ ಕೊಟ್ಟು, ಯಾವ ರೀತಿಯಲ್ಲಿ ತಾವು ಸಹಾಯಹಸ್ತ ಚಾಚಬಹುದು ಎಂದು ಯೋಚಿಸಬೇಕು. ಅದರಂತೆ ತಮ್ಮ ಸಂಕಲ್ಪವನ್ನು ಅನುಷ್ಠಾನಕ್ಕೆ ತಂದರೆ ತಮ್ಮ 'ಆ ತಾಯಿಯ ಋಣ'ವನ್ನೂ ಸ್ವಲ್ಪ ಮಟ್ಟಿಗೆ ತೀರಿಸಿದಂತೆ ಆಗುವುದಿಲ್ಲವೇ?

ತನ್ನ ಶಾಲೆಯು ಅನ್ಯರತ್ತ ದೈನ್ಯದಿಂದ ನೋಡಬೇಕೇಕೆ, ತನ್ನ ಅಸ್ತಿತ್ವಕ್ಕಾಗಿ ನೋಯಬೇಕೇಕೆ ಎಂಬ ಕಳಕಳಿಯು ಹಳೆ ವಿದ್ಯಾರ್ಥಿಗಳನ್ನು ಕಾಡಬೇಕು. ಅವರು ತಮ್ಮ ಪಾಲಿನ ಈ ಜವಾಬ್ದಾರಿಯನ್ನು ನಿರ್ವಹಿಸಿದರೆ ನಮ್ಮ ಪ್ರಾಥಮಿಕ ಕನ್ನಡ ಶಾಲೆಗಳು ಸದ್ಯದಲ್ಲಿ ತಮಗೆ ಬಂದಿರುವ ಕುತ್ತಿನಿಂದ ಪಾರಾಗಬಹುದು.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

ಪ್ರಾಣಿ– ಪಕ್ಷಿಗಳ ಬವಣೆ ಅರಿಯೋಣ

ಬೇಸಿಗೆ ಬಂತೆಂದರೆ ನಗರ, ಪಟ್ಟಣ, ಹಳ್ಳಿ ಎಂಬ ಭೇದವಿಲ್ಲದೆ ಎಲ್ಲೆಡೆಯೂ ನೀರಿಗಾಗಿ ಪರಿತಪಿಸುವಂತಹ ಸ್ಥಿತಿ ಎದುರಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಪ್ರಾಣಿ– ಪಕ್ಷಿಗಳು ಹೇಗೆ ಬದುಕುತ್ತವೆ, ಹೇಗೆ ನೀರು ಕುಡಿಯುತ್ತವೆ ಎಂದು ಯೋಚಿಸುವುದನ್ನೇ ನಾವು ಮರೆತುಬಿಡುತ್ತೇವೆ. ಸುಡು ಬೇಸಿಗೆಯಲ್ಲಿ ಆಹಾರದ ಜತೆ ನೀರು ಹುಡುಕುವುದಕ್ಕೂ ಪರದಾಡುವ ಸ್ಥಿತಿ ಆ ಮೂಕ ಜೀವಿಗಳದು. ಇಂತಹ ದುಃಸ್ಥಿತಿಯನ್ನು ತಪ್ಪಿಸಬೇಕೆಂದರೆ ನಾವು ಮರಗಳ ಕೆಳಗೆ, ಮನೆಯ ಅಂಗಳದಲ್ಲಿ ಅಥವಾ ಮನೆಯ ಟೆರೇಸ್ ಮೇಲೆ ಬಟ್ಟಲುಗಳನ್ನು ಇಟ್ಟು, ನೀರು, ಸ್ವಲ್ಪ ಅಕ್ಕಿಕಾಳು ಅಥವಾ ಯಾವುದಾದರೂ ಒಂದು ಬಗೆಯ ಕಾಳನ್ನು ಪಕ್ಷಿಗಳಿಗಾಗಿ ತೆಗೆದಿಡೋಣ. ಪ್ರಾಣಿ– ಪಕ್ಷಿಗಳ ಜೀವ ಉಳಿಸಿ ಮಾನವೀಯತೆ ಮೆರೆಯೋಣ.

ಸಾವಿತ್ರಿ ಆರ್., ಹೊಸಪೇಟೆ

ಇಂದಿರಾ ಕ್ಯಾಂಟೀನ್: ಗುಣಮಟ್ಟ ಕಾಪಾಡಿ

ಕರ್ನಾಟಕ ಸರ್ಕಾರವು ಇಂದಿರಾ ಕ್ಯಾಂಟೀನ್‌ಗಳ ಸಂಖ್ಯೆಯನ್ನು ಹೆಚ್ಚಿಸುವುದಾಗಿ ಹೇಳಿಕೆ ನೀಡಿದೆ. ಹೆಚ್ಚುವರಿ ಇಂದಿರಾ ಕ್ಯಾಂಟೀನ್‌ಗಳ ಅಗತ್ಯವೂ ಇದೆ. ಈ ಕ್ಯಾಂಟೀನ್‌ಗಳು ಪ್ರಾರಂಭದಲ್ಲಿ ಬಹಳಷ್ಟು ಪ್ರಚಾರ ಪಡೆದು, ಜನರನ್ನು ಸೆಳೆದದ್ದು ನಿಜ. ಕಾಲಕ್ರಮೇಣ ಅಲ್ಲಿನ ಆಹಾರದ ಗುಣಮಟ್ಟ, ಸ್ವಚ್ಛತೆ ಉತ್ತಮವಾಗಿಲ್ಲದ ಕಾರಣ, ಕ್ಯಾಂಟೀನ್ ಕಡೆ ಹೋಗುವ ಜನರ ಸಂಖ್ಯೆ ಕುಸಿದಿದೆ.

ಇಂದಿರಾ ಕ್ಯಾಂಟೀನ್‌ಗಳಲ್ಲಿ ಮುದ್ದೆಯನ್ನೂ ನೀಡುವುದಾಗಿ ಸರ್ಕಾರವು ಈ ವರ್ಷದ ಜನವರಿಯಲ್ಲಿ ಹೇಳಿಕೆ ನೀಡಿತ್ತು. ಫೆಬ್ರುವರಿ ಕಳೆದು ಮಾರ್ಚ್ ಬಂದಿದ್ದರೂ ಮುದ್ದೆ ನೀಡುವ ಯೋಜನೆ ಜಾರಿಯಾಗಿಲ್ಲ. ಬಹುತೇಕ ಸ್ಥಳಗಳಲ್ಲಿ ಇಂದಿರಾ ಕ್ಯಾಂಟೀನ್‌ಗಳು ಇರುವ ಸ್ಥಳ ಆಕರ್ಷಣೀಯವಾಗಿದ್ದು ಊಟ, ಉಪಾಹಾರದ ಸಮಯ ಮುಗಿದ ನಂತರ ಆ ಜಾಗವನ್ನು ವ್ಯವಸ್ಥಿತವಾಗಿ ಬಳಕೆ ಮಾಡಬಹುದಾಗಿದೆ. ಇದ್ಯಾವುದರ ಬಗ್ಗೆಯೂ ಯೋಚಿಸದೆ, ಮುಖ್ಯವಾಗಿ ಆಹಾರದ ಪ್ರಮಾಣ ಮತ್ತು ಗುಣಮಟ್ಟವನ್ನು ಉತ್ತಮಪಡಿಸದೇ ಕ್ಯಾಂಟೀನ್‌ಗಳ ಸಂಖ್ಯೆಯನ್ನು ಹೆಚ್ಚಿಸಲು ಮುಂದಾಗುವುದರಲ್ಲಿ ಅರ್ಥವಿಲ್ಲ.

ಈ.ಬಸವರಾಜು, ಬೆಂಗಳೂರು

ಅದೇ ಚಾಳಿ... ಚೀನಾ ಇನ್ನಾದರೂ ತೊರೆಯಲಿ

ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಅರುಣಾಚಲ ಪ್ರದೇಶಕ್ಕೆ ಭೇಟಿ ನೀಡಿ, ಅತಿ ಎತ್ತರದಲ್ಲಿ ನಿರ್ಮಿಸಿರುವ ಸೆಲಾ ಸುರಂಗವನ್ನು ರಾಷ್ಟ್ರಕ್ಕೆ ಸಮರ್ಪಿಸಿದ್ದನ್ನು ಆಕ್ಷೇಪಿಸಿರುವ ಚೀನಾದ ವರ್ತನೆ ಖಂಡನಾರ್ಹ. ಹೊಳೆಯ ನೀರಿಗೆ ದೊಣ್ಣೆ ನಾಯಕನ ಅಪ್ಪಣೆ ಬೇಕೇ ಅನ್ನುವ ಹಾಗೆ ನಮ್ಮ ದೇಶದ ಒಂದು ರಾಜ್ಯವಾಗಿರುವ ಅರುಣಾಚಲ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ನಾವು ಸರ್ವಸ್ವತಂತ್ರರು. ಅರುಣಾಚಲ ಪ್ರದೇಶದ ವಿಚಾರದಲ್ಲಿ ಪದೇ ಪದೇ ಕ್ಯಾತೆ ತೆಗೆಯುವ ಚಾಳಿಯನ್ನು ಚೀನಾ ಇನ್ನಾದರೂ ಬಿಡಬೇಕು.

ಕೆ.ವಿ.ವಾಸು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಎನ್‌ಡಿಎ-'ಇಂಡಿಯಾ' ಮೈತ್ರಿ ಕಸರತ್ತು

ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಎರಡು ಪ್ರಮುಖ ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ಕೆಲವು ರಾಜ್ಯಗಳಲ್ಲಿ ಸ್ವತಂತ್ರವಾಗಿ ಕಣಕ್ಕೆ ಇಳಿಯುತ್ತಿವೆ. ಹಲವು ರಾಜ್ಯಗಳಲ್ಲಿ ಬಿಜೆಪಿ ಎನ್‌ಡಿಎ ಮೈತ್ರಿಕೂಟದ ಇತರ ಪಕ್ಷಗಳೊಂದಿಗೆ ಸೀಟು ಹಂಚಿಕೊಂಡಿದೆ. ಕಾಂಗ್ರೆಸ್ ಸಹ 'ಇಂಡಿಯಾ' ಮೈತ್ರಿಕೂಟದ ಮಿತ್ರ ಪಕ್ಷಗಳೊಂದಿಗೆ ಸೀಟು ಹಂಚಿಕೊಂಡಿದೆ. ಇನ್ನೇನು ಚುನಾವಣೆ ಘೋಷಣೆಯಾಗಿಬಿಡುತ್ತದೆ ಎಂಬಂತಿರುವ ಸ್ಥಿತಿಯಲ್ಲೂ, ಎರಡೂ ಮೈತ್ರಿಕೂಟಗಳು ಕೆಲವು ರಾಜ್ಯಗಳಲ್ಲಿ ಸೀಟು ಹಂಚಿಕೆಯನ್ನು ಅಂತಿಮಗೊಳಿಸಿಲ್ಲ. ಬೇರೆ ಬೇರೆ ರಾಜ್ಯಗಳಲ್ಲಿ ಈ ಮೈತ್ರಿಕೂಟಗಳ ಸ್ಥಿತಿಗತಿ ಹೇಗಿದೆ ಎಂಬುದರ ವಿವರ ಇಲ್ಲಿದೆ



ಲಡಾಖ್: ಇಲ್ಲಿನ ಒಂದೇ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಕಣಕ್ಕೆ ಇಳಿಯುವ ಸಾಧ್ಯತೆಗಳೇ ಅತ್ಯಧಿಕವಾಗಿದೆ

ಜಮ್ಮು-ಕಾಶ್ಮೀರ: 'ಇಂಡಿಯಾ' ಮೈತ್ರಿಕೂಟದ ಎನ್‌ಸಿ, ಪಿಡಿಪಿ ಮತ್ತು ಕಾಂಗ್ರೆಸ್ ಮಧ್ಯೆ ಸೀಟು ಹಂಚಿಕೆ ಸಂಬಂಧ ಒಮ್ಮತ ಮೂಡಿಲ್ಲ. ಎನ್‌ಸಿ ಮತ್ತು ಪಿಡಿಪಿ ಬಹಿರಂಗವಾಗಿ ವಾಗ್ದಾಳಿ ನಡೆಸುತ್ತಿವೆ. ಈ ಮೈತ್ರಿಕೂಟದ ಸೀಟು ಹಂಚಿಕೆ ಘೋಷಣೆಯಾದ ನಂತರ, ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದಾಗಿ ಪರಿಶೀಲಿಸುವುದಾಗಿ ಬಿಜೆಪಿ ಹೇಳಿದೆ

ಪಂಜಾಬ್: ಹರಿಯಾಣದಲ್ಲಿ ಸೀಟು ಹಂಚಿಕೊಂಡಿರುವ ಎಎಪಿ ಮತ್ತು ಕಾಂಗ್ರೆಸ್, ಇಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಿವೆ. ಬಿಜೆಪಿ ಎಲ್ಲಾ ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಯಲು ಸಿದ್ಧತೆ ನಡೆಸಿದ್ದು, ಶಿರೋಮಣಿ ಅಕಾಲಿ ದಳದೊಂದಿಗೆ ಕೆಲವು ಸೀಟುಗಳನ್ನು ಹಂಚಿಕೊಳ್ಳುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ

ಹರಿಯಾಣ: ಚುನಾವಣೆಯ ಹೊಸ್ತಿಲಲ್ಲಿ ಎನ್‌ಡಿಎ ಮೈತ್ರಿಕೂಟ ಮುರಿದುಬಿದ್ದಿದೆ. ಎಲ್ಲಾ ಹತ್ತು ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಯುವುದಾಗಿ ಬಿಜೆಪಿ ಮತ್ತು ಜೆಜೆಪಿ ಘೋಷಿಸಿವೆ. ಇನ್ನೊಂದೆಡೆ 'ಇಂಡಿಯಾ' ಮೈತ್ರಿಕೂಟದ ಕಾಂಗ್ರೆಸ್ ಒಂಬತ್ತು ಕ್ಷೇತ್ರಗಳಲ್ಲಿ ಮತ್ತು ಎಎಪಿ ಒಂದು ಕ್ಷೇತ್ರದಲ್ಲಿ ಕಣಕ್ಕೆ ಇಳಿಯಲಿವೆ

ರಾಜಸ್ಥಾನ: ರಾಜಸ್ಥಾನದಲ್ಲಿ ಎನ್‌ಡಿಎ ಮೈತ್ರಿಕೂಟವಾಗಲೀ, 'ಇಂಡಿಯಾ' ಮೈತ್ರಿಕೂಟವಾಗಲೀ ಇಲ್ಲ. ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಎಲ್ಲಾ ಕ್ಷೇತ್ರಗಳಲ್ಲೂ ಕಣಕ್ಕೆ ಇಳಿಯಲಿವೆ. ಈ ಎರಡು ಪಕ್ಷಗಳನ್ನು ಹೊರತುಪಡಿಸಿ ಭಾರತೀಯ ಆದಿವಾಸಿ ಪಕ್ಷವು ಕೆಲವು ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಯಲಿದೆ. ಈಚೆಗಷ್ಟೇ ನಡೆದಿದ್ದ ವಿಧಾನಸಭಾ ಚುನಾವಣೆಯಲ್ಲಿ ಆದಿವಾಸಿ ಪಕ್ಷವು ಗಣನೀಯ ಪ್ರಮಾಣದಲ್ಲಿ ಮತಗಳನ್ನು ಪಡೆದಿತ್ತು. ಹಲವು ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳ ಸೋಲಿಗೆ ಕಾರಣವಾಗಿತ್ತು. ಆ ಪಕ್ಷದೊಂದಿಗೆ ಬಿಜೆಪಿ ಅಥವಾ ಕಾಂಗ್ರೆಸ್ ಹೊಂದಾಣಿಕೆ ಮಾಡಿಕೊಳ್ಳುವ ಸಾಧ್ಯತೆಯನ್ನು ಕೊನೆಯ ಕ್ಷಣದವರೆಗೂ ತಳ್ಳಿಹಾಕುವಂತಿಲ್ಲ

ಗುಜರಾತ್: ಗುಜರಾತ್‌ನಲ್ಲಿ ಬಿಜೆಪಿಯಾಗಲೀ ಕಾಂಗ್ರೆಸ್ ಆಗಲೀ ಬೇರೆ ಯಾವುದೇ ಪಕ್ಷಗಳ ಜತೆಗೆ ಮೈತ್ರಿ ಮಾಡಿಕೊಂಡಿಲ್ಲ. ಅಲ್ಲಿ ಬೇರೆ ಪಕ್ಷಗಳ ಇರುವಿಕೆಯೂ ಇಲ್ಲ. ಹೀಗಾಗಿ ಎರಡೂ ಪಕ್ಷಗಳು ಎಲ್ಲಾ ಕ್ಷೇತ್ರಗಳಲ್ಲೂ ಸೆಣಸಲಿವೆ

ಮಹಾರಾಷ್ಟ್ರ: ಎನ್‌ಡಿಎ ಮೈತ್ರಿಕೂಟದ ಮೂರೂ ಪಕ್ಷಗಳು ಸೀಟು ಹಂಚಿಕೆಯನ್ನು ಪೂರ್ಣಗೊಳಿಸಿವೆ. ಬಿಜೆಪಿ 31, ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ 4 ಮತ್ತು ಶಿವಸೇನಾ 13 ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಯಲಿವೆ. ಆದರೆ ಇನ್ನೊಂದೆಡೆ ಮಹಾ ವಿಕಾಸ ಆಘಾಡಿಯಲ್ಲಿ (ಎಂವಿಎ) ಸೀಟು ಹಂಚಿಕೆಯ ಹಗ್ಗಜಗ್ಗಾಟ ಮುಂದುವರಿದಿದೆ. ಸೀಟು ಹಂಚಿಕೆ ಸಂಬಂಧ ಕಾಂಗ್ರೆಸ್, ಶಿವಸೇನಾ (ಉದ್ಧವ್ ಬಣ) ಮತ್ತು ಶರದ್ ಪವಾರ್ ಅವರ ಎನ್‌ಸಿಪಿ ಮಧ್ಯೆ ಇನ್ನೂ ಒಮ್ಮತ ಮೂಡಿಲ್ಲ. ಇವಲ್ಲದೇ ಇನ್ನೂ ಸಣ್ಣ ಪ್ರಾದೇಶಿಕ ಪಕ್ಷಗಳನ್ನು ಒಳಗೊಳ್ಳುವ ಸಂಬಂಧ ಮಾತುಕತೆ ನಡೆಯುತ್ತಿದೆ. ಇದೇ 17ಕ್ಕೆ ಈ ಸಂಬಂಧ ಸಭೆ ಆಯೋಜಿಸಲಾಗಿದೆ

ಗೋವಾ: ಗೋವಾದಲ್ಲಿ ಎನ್‌ಡಿಎ ಮತ್ತು 'ಇಂಡಿಯಾ' ಮೈತ್ರಿಕೂಟಗಳು ಇನ್ನೂ ಸೀಟು ಹಂಚಿಕೆ ಮಾಡಿಕೊಂಡಿಲ್ಲ. ಅಲ್ಲಿನ ಎರಡು ಪ್ರಮುಖ ಪ್ರಾದೇಶಿಕ ಪಕ್ಷಗಳಾದ ಜಿಎಂಪಿ ಮತ್ತು ಜಿಎಫ್‌ಪಿಗಳಿಗೆ ಬಿಜೆಪಿ ಮತ್ತು ಕಾಂಗ್ರೆಸ್ ಸೀಟು ಬಿಟ್ಟುಕೊಡುತ್ತವೆಯೇ ಅಥವಾ ಈ ನಾಲ್ಕೂ ಪಕ್ಷಗಳು ಕಣಕ್ಕೆ ಇಳಿಯಲಿವೆಯೇ ಎಂಬುದನ್ನು ಕಾದು ನೋಡಬೇಕಿದೆ

ಕರ್ನಾಟಕ: ರಾಜ್ಯದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ಮೈತ್ರಿ ಮಾಡಿಕೊಂಡಿವೆ. ಒಟ್ಟು 28 ಲೋಕಸಭಾ ಕ್ಷೇತ್ರಗಳ ಪೈಕಿ ಬಿಜೆಪಿಯು 20 ಸ್ಥಾನಗಳಿಗೆ ತನ್ನ ಅಭ್ಯರ್ಥಿಯನ್ನು ಘೋಷಿಸಿದೆ. ಕಾಂಗ್ರೆಸ್ ಯಾರೊಂದಿಗೂ ಮೈತ್ರಿ ಮಾಡಿಕೊಂಡಿಲ್ಲ



ಕೇರಳ: ದೇಶದ ಬೇರೆ ರಾಜ್ಯಗಳಲ್ಲಿ 'ಇಂಡಿಯಾ' ಮೈತ್ರಿಕೂಟದಲ್ಲಿರುವ ಎಡಪಕ್ಷಗಳು, ಕೇರಳದಲ್ಲಿ ಮಾತ್ರ ಸ್ವತಂತ್ರವಾಗಿ ಕಣಕ್ಕೆ ಇಳಿಯಲು ನಿರ್ಧರಿಸಿವೆ. ಎಡಪಕ್ಷಗಳ ಎಲ್‌ಡಿಎಫ್ ಮೈತ್ರಿಕೂಟವು ಸೀಟು ಹಂಚಿಕೆಯನ್ನು ಅಂತಿಮಗೊಳಿಸಿದೆ. ಸಿಪಿಎಂ 15, ಸಿಪಿಐ 5 ಮತ್ತು ಕೆಸಿಎಂ 1 ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಯಲಿವೆ. ಇನ್ನೊಂದೆಡೆ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟವೂ ಸೀಟು ಹಂಚಿಕೆಯನ್ನು ಅಂತಿಮಗೊಳಿಸಿದೆ. ಕಾಂಗ್ರೆಸ್ 16 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದ್ದರೆ, ಐಎಂಯುಎಲ್ 2 ಮತ್ತು ಆರ್‌ಎಸ್‌ಪಿ ಒಂದು ಕ್ಷೇತ್ರದಲ್ಲಿ ಸ್ಪರ್ಧಿಸಲಿವೆ. ರಾಷ್ಟ್ರಮಟ್ಟದಲ್ಲಿ 'ಇಂಡಿಯಾ' ಮೈತ್ರಿಕೂಟದಲ್ಲಿ ಇರುವ ಕಾಂಗ್ರೆಸ್ ಮತ್ತು ಎಡಪಕ್ಷಗಳು, ಕೇರಳದಲ್ಲಿ ಮಾತ್ರ ಪರಸ್ಪರರ ವಿರುದ್ಧ ಸೆಣಸಲಿವೆ. ಬಿಜೆಪಿ ಪ್ರತ್ಯೇಕವಾಗಿಯೇ ಕಣಕ್ಕೆ ಇಳಿಯಲಿದೆ

ದೆಹಲಿ: ಬಿಜೆಪಿ ಇಲ್ಲಿನ ಎಲ್ಲಾ ಏಳು ಕ್ಷೇತ್ರಗಳಲ್ಲೂ ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಿದೆ. 'ಇಂಡಿಯಾ' ಮೈತ್ರಿಕೂಟದ ಎಎಪಿ 4ರಲ್ಲಿ ಮತ್ತು ಕಾಂಗ್ರೆಸ್ 3 ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಯುವ ಸಾಧ್ಯತೆ ಇದೆ. ಆದರೆ ಈ ಸೀಟು ಹಂಚಿಕೆ ಇನ್ನೂ ಅಂತಿಮವಾಗಿಲ್ಲ

ಹಿಮಾಚಲ ಪ್ರದೇಶ: ಬಿಜೆಪಿ ಮತ್ತು ಕಾಂಗ್ರೆಸ್ ಹಿಮಾಚಲ ಪ್ರದೇಶದ ಎರಡು ಪ್ರಮುಖ ಪಕ್ಷಗಳು. ಇವುಗಳ ಸುತ್ತವೇ ರಾಜಕೀಯ ಲೆಕ್ಕಾಚಾರಗಳು ಹೆಣೆದುಕೊಂಡಿವೆ. 'ಇಂಡಿಯಾ' ಮೈತ್ರಿಕೂಟದಲ್ಲಿರುವ ಎಎಪಿ ಹಾಗೂ ಸಿಪಿಎಂ ಕೂಡ ಸಣ್ಣ ಪ್ರಮಾಣ ಅಸ್ತಿತ್ವ ಹೊಂದಿವೆ. ಆದರೆ, ಇಲ್ಲಿ ಎನ್‌ಡಿಎ ಅಥವಾ 'ಇಂಡಿಯಾ' ನಡುವಿನ ಸೆಣಸಾಟ ಎನ್ನುವುದಕ್ಕಿಂತ ಬಿಜೆಪಿ ಹಾಗೂ ಕಾಂಗ್ರೆಸ್ ನಡುವಿನ ಸೆಣಸಾಟ ಎನ್ನುವುದು ಹೆಚ್ಚು ಸೂಕ್ತ

ಉತ್ತರಾಖಂಡ: ರಾಜ್ಯದಲ್ಲಿ ಬಿಜೆಪಿಯದ್ದೇ ಮೇಲುಗೈ. ರಾಜ್ಯದ ಎಲ್ಲ ಐದು ಲೋಕಸಭಾ ಸ್ಥಾನಗಳನ್ನು 2014 ಹಾಗೂ 2019ರಲ್ಲಿ ಬಿಜೆಪಿಯೇ ಗೆದ್ದುಗೊಂಡಿದೆ. ಕಾಂಗ್ರೆಸ್ ಕೂಡ ಸ್ಪರ್ಧೆಯಲ್ಲಿ ಇದೆ. ಬಿಎಸ್‌ಪಿ, ಸಿಪಿಎಂ, ಸಿಪಿಐ, ಎನ್‌ಸಿಪಿ ಹಾಗೂ ಸಮಾಜವಾದಿ ಪಕ್ಷ (ಎಸ್‌ಪಿ) ಕೂಡ ಸಣ್ಣ ಪ್ರಮಾಣದಲ್ಲಿ ನೆಲೆ ಇರಿಸಿಕೊಂಡಿವೆ. ಸಿಪಿಎಂ, ಎಸ್‌ಪಿ, ಎನ್‌ಸಿಪಿ 'ಇಂಡಿಯಾ'ದ ಭಾಗಗಳು. ಬಿಜೆಪಿ ಹಾಗೂ ಕಾಂಗ್ರೆಸ್ ಈವರೆಗೆ ಮೂರು ಸ್ಥಾನಗಳಿಗೆ ತಮ್ಮ ಅಭ್ಯರ್ಥಿಗಳನ್ನು ಘೋಷಿಸಿವೆ. ಹರಿದ್ವಾರ ಕ್ಷೇತ್ರದ ಕುರಿತು ಕಾಂಗ್ರೆಸ್ ಹಾಗೂ ಎಸ್‌ಪಿ ನಡುವೆ ಮಾತುಕತೆ ನಡೆಯುತ್ತಿದೆ

ಉತ್ತರ ಪ್ರದೇಶ: ಬಿಜೆಪಿಯ ಭದ್ರಕೋಟೆಗಳಲ್ಲಿ ಉತ್ತರ ಪ್ರದೇಶವೂ ಒಂದು. 80 ಕ್ಷೇತ್ರಗಳಲ್ಲಿ 62 ಕ್ಷೇತ್ರಗಳನ್ನು ಬಿಜೆಪಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಗೆದ್ದುಕೊಂಡಿತ್ತು. ಕಳೆದ ವಾರವಷ್ಟೇ ರಾಷ್ಟ್ರೀಯ ಲೋಕ ದಳವು (ಆರ್‌ಎಲ್‌ಡಿ) ಎನ್‌ಡಿಎ ಸೇರಿಕೊಂಡಿದೆ. ಅಪ್ನಾ ದಳ, ಸುಖದೇವ್ ಭಾರತೀಯ ಪಕ್ಷಗಳೂ ಈ ಮೈತ್ರಿಕೂಟದಲ್ಲಿವೆ. ಇಲ್ಲಿಯವರೆಗೆ ಬಿಜೆಪಿಯು 51 ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳನ್ನು ಘೋಷಿಸಿದೆ, ಆರ್‌ಎಲ್‌ಡಿ ಪಕ್ಷವು ಎರಡು ಸ್ಥಾನಗಳಿಗೆ ಅಭ್ಯರ್ಥಿ ಘೋಷಿಸಿದೆ. ರಾಜ್ಯದಲ್ಲಿ 'ಇಂಡಿಯಾ'ದ ಭಾಗವಾಗಿರುವ ಸಮಾಜವಾದಿ ಪಕ್ಷ ಹಾಗೂ ಕಾಂಗ್ರೆಸ್, ಸ್ಥಾನ ಹಂಚಿಕೆ ಮಾತುಕತೆಯನ್ನು ಮುಗಿಸಿಕೊಂಡಿವೆ. ಎಸ್‌ಪಿ ಪಕ್ಷವು 17 ಕ್ಷೇತ್ರಗಳನ್ನು ಕಾಂಗ್ರೆಸ್‌ಗೆ ಬಿಟ್ಟುಕೊಟ್ಟಿದ್ದು, ಉಳಿದ 63 ಕ್ಷೇತ್ರಗಳಲ್ಲಿ ತಾನು ಸ್ಪರ್ಧಿಸುತ್ತಿದೆ. ಬಿಎಸ್‌ಪಿ ಯಾರೊಂದಿಗೂ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಘೋಷಿಸಿದೆ

ಮಧ್ಯಪ್ರದೇಶ: ಬಿಜೆಪಿಯಾಗಲೀ ಕಾಂಗ್ರೆಸ್ ಆಗಲೀ ಬೇರೆ ಯಾವುದೇ ಪಕ್ಷಗಳ ಜತೆಗೆ ಮೈತ್ರಿ ಮಾಡಿಕೊಂಡಿಲ್ಲ

ಈಶಾನ್ಯ ರಾಜ್ಯಗಳು: ಈ ರಾಜ್ಯಗಳಲ್ಲಿ ಬಿಜೆಪಿಯ ಪ್ರಾಬಲ್ಯ ಅಧಿಕವಾಗಿಯೇ ಇದೆ. ಇಲ್ಲಿನ ಸರಿಸುಮಾರು ಎಲ್ಲ ಪ್ರಾದೇಶಿಕ ಪಕ್ಷಗಳೂ ಎನ್‌ಡಿಎಯ ಭಾಗವಾಗಿವೆ. ಅರುಣಾಚಲ ಪ್ರದೇಶ ಹಾಗೂ ಅಸ್ಸಾಂನಲ್ಲಿ ಬಿಜೆಪಿಯೇ ಪ್ರಮುಖ ಪಕ್ಷವಾಗಿದೆ. ಮಣಿಪುರದಲ್ಲಿಯೂ ಬಿಜೆಪಿ ಪ್ರಬಲವಾಗಿಯೇ ಇದೆ. ಮಿಜೋರಾಂ, ಸಿಕ್ಕಿಂ, ನಾಗಾಲ್ಯಾಂಡ್‌ಗಳಲ್ಲಿ ಅಲ್ಲಿನ ಪ್ರಾದೇಶಿಕ ಪಕ್ಷಗಳೇ ಅಧಿಕಾರದಲ್ಲಿವೆ. ಅಲ್ಲೆಲ್ಲಾ (ಮಿಜೋರಾಂ ಹೊರತುಪಡಿಸಿ) ಅವುಗಳು ಎನ್‌ಡಿಎಯ ಭಾಗಗಳಾಗಿವೆ. ಈಶಾನ್ಯ ರಾಜ್ಯಗಳಿಂದ ಒಟ್ಟು 25 ಲೋಕಸಭಾ ಕ್ಷೇತ್ರಗಳಿವೆ. ಇವುಗಳಲ್ಲಿ 22 ಕ್ಷೇತ್ರಗಳನ್ನು ಗೆಲ್ಲುವ ವಿಶ್ವಾಸವನ್ನು ಬಿಜೆಪಿ ವ್ಯಕ್ತಪಡಿಸಿದೆ. ಈಶಾನ್ಯ ರಾಜ್ಯಗಳಲ್ಲಿ ಕಾಂಗ್ರೆಸ್ ಯಾವ ಪಕ್ಷಗಳ ಜೊತೆ ಮೈತ್ರಿ ಮಾಡಿಕೊಳ್ಳಲಿದೆ ಎಂಬ ಮಾಹಿತಿ ಲಭ್ಯವಾಗಿಲ್ಲ. ಹೆಚ್ಚು ಕಡಿಮೆ ಇಲ್ಲೆಲ್ಲಾ ಕಾಂಗ್ರೆಸ್ ಏಕಾಂಗಿಯಾಗಿಯೇ ಸ್ಪರ್ಧಿಸಲಿದೆ

ಪಶ್ಚಿಮ ಬಂಗಾಳ 'ಇಂಡಿಯಾ' ಮೈತ್ರಿಕೂಟವು ಹೆಚ್ಚು ಮುಜುಗರಕ್ಕೆ ಒಳಗಾಗಿದ್ದು ಟಿಎಂಸಿ ಕಾರಣಕ್ಕಾಗಿಯೇ. ಸೀಟು ಹಂಚಿಕೆ ವಿಚಾರವಾಗಿ ಕಾಂಗ್ರೆಸ್ ಹಾಗೂ ಟಿಎಂಸಿ ನಡುವೆ ಮಾತುಕತೆಗಳು ಮುರಿದು ಬಿದ್ದಿವೆ. ಎಲ್ಲಾ 42 ಲೋಕಸಭಾ ಕ್ಷೇತ್ರಗಳಿಗೆ ಟಿಎಂಸಿ ಅಭ್ಯರ್ಥಿಗಳನ್ನು ಘೋಷಿಸಿದೆ. ಸಿಪಿಐ ಕೂಡ ಏಕಾಂಗಿಯಾಗಿ ಸ್ಪರ್ಧಿಸಲಿದೆ. ಕಾಂಗ್ರೆಸ್ ಈಗ ಸಿಪಿಎಂ ಜೊತೆಯಲ್ಲಿ ಸೀಟು ಸಂಚಿಕೆ ಸಂಬಂಧ ಮಾತುಕತೆ ನಡೆಸುತ್ತಿದೆ. ಬಿಜೆಪಿ ಸ್ವತಂತ್ರವಾಗಿ ಕಣಕ್ಕೆ ಇಳಿಯಲಿದ್ದು, ಈಗಾಗಲೇ 20 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದೆ

ಬಿಹಾರ: 'ಇಂಡಿಯಾ' ಮೈತ್ರಿಕೂಟವನ್ನು ರೂಪುಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಈಗ ಮತ್ತೊಮ್ಮೆ ಎನ್‌ಡಿಎಯನ್ನು ಸೇರಿಕೊಂಡಿದ್ದಾರೆ. ಕಾಂಗ್ರೆಸ್ ಹಾಗೂ ಆರ್‌ಜೆಡಿ ಮೈತ್ರಿಕೂಟದಲ್ಲಿ ಉಳಿದುಕೊಂಡಿವೆ. ಎರಡು ಪಕ್ಷಗಳ ಮಧ್ಯೆ ಸ್ಥಾನ ಹಂಚಿಕೆ ಈವರೆಗೂ ಘೋಷಣೆಯಾಗಿಲ್ಲ. ಎಲ್‌ಜೆಪಿಯು ಎನ್‌ಡಿಎ ತೆಕ್ಕೆಗೆ ಜಾರಿದೆ. 5ರಿಂದ 6 ಕ್ಷೇತ್ರಗಳನ್ನು ಎಲ್‌ಜೆಪಿಗೆ ಕೊಡುವ ಮಾತುಕತೆ ನಡೆದಿದೆ ಎನ್ನಲಾಗಿದೆ. ಜೆಡಿಯು ಜೊತೆ ಬಿಜೆಪಿಯ ಮಾತುಕತೆ ಮುಕ್ತಾಯಗೊಂಡಿಲ್ಲ. 16ಕ್ಕಿಂತ ಕಡಿಮೆ ಕ್ಷೇತ್ರಗಳನ್ನು ಜೆಡಿಯು ಒಪ್ಪಿಕೊಳ್ಳುವುದಿಲ್ಲ ಎನ್ನಲಾಗಿದೆ. ಬಿಜೆಪಿಯು 17 ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಸಂಭವವಿದೆ

ಜಾರ್ಖಂಡ್: 'ಇಂಡಿಯಾ'ದ ಭಾಗವಾಗಿರುವ ಟಿಎಂಸಿ ಹಾಗೂ ಸಿಪಿಐ ಸ್ವತಂತ್ರವಾಗಿ ಸ್ಪರ್ಧಿಸುವ ನಿರ್ಧಾರ ಪ್ರಕಟಿಸಿವೆ. ಈವರೆಗೂ ಸ್ಥಾನ ಹಂಚಿಕೆ ಪೂರ್ಣಗೊಳ್ಳದ ಕಾರಣ ಈ ನಿರ್ಧಾರ ತೆಗೆದುಕೊಂಡಿವೆ. ಆಡಳಿತಾರೂಢ ಜೆಎಂಎಂ ಮತ್ತು ಕಾಂಗ್ರೆಸ್ ಸೀಟು ಹಂಚಿಕೆ ಅಂತಿಮಗೊಂಡಿಲ್ಲ. ಎನ್‌ಡಿಎಯ ಜೆಡಿಯು, ಎಲ್‌ಜೆಪಿ ಚುನಾವಣೆಯಲ್ಲಿ ಸ್ಪರ್ಧಿಸಿದರೂ ಅವುಗಳು ಗೆಲ್ಲುವ ಸಾಧ್ಯತೆ ಕಡಿಮೆಯೇ ಇದೆ. 14 ಲೋಕಸಭಾ ಕ್ಷೇತ್ರಗಳಲ್ಲಿ 11 ಕ್ಷೇತ್ರಗಳಲ್ಲಿ ಬಿಜೆಪಿ ತನ್ನ ಅಭ್ಯರ್ಥಿಗಳನ್ನು ಘೋಷಿಸಿದೆ

ಒಡಿಶಾ: ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರ ಬಿಜೆಡಿ ಪಕ್ಷವು ಎನ್‌ಡಿಎ ಅನ್ನು ಸೇರಿಕೊಳ್ಳುವ ಕುರಿತು ಚರ್ಚೆ ನಡೆಯುತ್ತಿದೆ. ಇದೇ ಕಾರಣಕ್ಕಾಗಿ ಕಾಂಗ್ರೆಸ್ ಪಕ್ಷವು ಕಾದು ನೋಡುವ ತಂತ್ರವನ್ನು ಅನುಸರಿಸುತ್ತಿದೆ. ರಾಜ್ಯದ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಕಾಂಗ್ರೆಸ್ ಇನ್ನಷ್ಟೇ ಬಿಡುಗಡೆ ಮಾಡಬೇಕಿದೆ

ಛತ್ತೀಸಗಢ: ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಹಾಗಿದ್ದರೂ ಬಿಜೆಪಿ ಅಳೆದು ತೂಗಿ ತನ್ನ ಅಭ್ಯರ್ಥಿಗಳನ್ನು ಆರಿಸುತ್ತಿದೆ. 11 ಲೋಕಸಭಾ ಕ್ಷೇತ್ರಗಳ ಪೈಕಿ ಕಾಂಗ್ರೆಸ್ 6 ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳನ್ನು ಘೋಷಿಸಿದೆ. ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆಯೇ ರಾಜ್ಯದಲ್ಲಿ ಸ್ಪರ್ಧೆ ಇದೆ

ತೆಲಂಗಾಣ: ಬಿಆರ್‌ಎಸ್ ಮತ್ತು ಬಿಜೆಪಿ ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಯಲಿವೆ. ಕಾಂಗ್ರೆಸ್ ಮತ್ತು ಎಡಪಕ್ಷಗಳ ಸೀಟು ಹಂಚಿಕೆ ಇನ್ನೂ ಅಂತಿಮವಾಗಿಲ್ಲ

ಆಂಧ್ರ ಪ್ರದೇಶ: ಟಿಡಿಪಿ, ಬಿಜೆಪಿ ಮತ್ತು ಜೆಎಸ್‌ಪಿ ಸೀಟುಗಳನ್ನು ಹಂಚಿಕೊಂಡಿವೆ. ಇನ್ನೊಂದೆಡೆ ಕಾಂಗ್ರೆಸ್ ಮತ್ತು ವೈಎಸ್‌ಆರ್ ಕಾಂಗ್ರೆಸ್ ಎಲ್ಲಾ ಕ್ಷೇತ್ರಗಳಲ್ಲೂ ಸ್ಪರ್ಧೆಗೆ ಇಳಿಯಲಿವೆ

ತಮಿಳುನಾಡು: 'ಇಂಡಿಯಾ' ಮೈತ್ರಿಕೂಟದ ಡಿಎಂಕೆ (21), ಎಡಪಕ್ಷಗಳು (9) ಮತ್ತು ಕಾಂಗ್ರೆಸ್ (9) ಪರಸ್ಪರ ಹೊಂದಾಣಿಕೆಯಲ್ಲಿ ಕಣಕ್ಕೆ ಇಳಿಯಲಿವೆ. ಕಮಲ ಹಾಸನ್ ಅವರ ಎಂಎನ್‌ಎಂ ಡಿಎಂಕೆಗೆ ಬೆಂಬಲ ಘೋಷಿಸಿದೆ. ಎನ್‌ಡಿಎ ಮೈತ್ರಿಕೂಟದಿಂದ ಹೊರಬಂದಿರುವ ಎಐಎಡಿಎಂಕೆ ಇತರ ಸಣ್ಣ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದು, ಸೀಟುಗಳನ್ನು ಹಂಚಿಕೊಳ್ಳಲಿದೆ. ಬಿಜೆಪಿ ಸ್ವತಂತ್ರವಾಗಿ ಕಣಕ್ಕೆ ಇಳಿಯುವ ಸಾಧ್ಯತೆಗಳಿವೆ

ಆಧಾರ: ಪಿಟಿಐ

ಸಿನಿ ಬಿಟ್ಸ್



ಪುನೀತ್ ರಾಜ್‌ಕುಮಾರ್

ಮುಂದಿನ ಮಾರ್ಚ್ 17ರಂದು ಸ್ಯಾಂಡಲ್‌ವುಡ್‌ನ 'ಪವರ್ ಸ್ಟಾರ್' ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಜನ್ಮದಿನ. ಈ ಹೊಸ್ತಿಲಲ್ಲೇ ಮಾರ್ಚ್ 15ರಂದು ಪುನೀತ್ ನಟನೆಯ ಹಿಟ್ ಸಿನಿಮಾ 'ಜಾಕಿ' ಮತ್ತೆ ತೆರೆಗೆ ಬರಲಿದೆ.

ಸೂರಿ ನಿರ್ದೇಶನದ 'ಜಾಕಿ' ಸಿನಿಮಾವನ್ನು ಕೆಆರ್‌ಜಿ ಸ್ಟುಡಿಯೋಸ್ ಈ ಸಿನಿಮಾವನ್ನು ಮರು ಬಿಡುಗಡೆ ಮಾಡುತ್ತಿದ್ದು, ಪಿಆರ್‌ಕೆ ಪ್ರೊಡಕ್ಷನ್ಸ್ ಪ್ರೆಸೆಂಟ್ ಮಾಡುತ್ತಿದೆ. ರಾಜ್ಯದ 50ಕ್ಕೂ ಅಧಿಕ ಏಕಪರದೆ ಚಿತ್ರಮಂದಿರಗಳಲ್ಲಿ ಹಾಗೂ ಮಲ್ಟಿಪ್ಲೆಕ್ಸ್‌ಗಳಲ್ಲಿ ಚಿತ್ರ ಪ್ರದರ್ಶನ ಕಾಣಲಿದೆ. ಥಿಯೇಟರ್‌ಗಳ ಪಟ್ಟಿಯನ್ನು ಕೆಆರ್‌ಜಿ ತನ್ನ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದೆ. ಬೆಂಗಳೂರಿನ ನರ್ತಕಿ ಚಿತ್ರಮಂದಿರದಲ್ಲಿ ದಿನಕ್ಕೆ ನಾಲ್ಕು ಪ್ರದರ್ಶನವಿದ್ದು, ಹಲವು ಚಿತ್ರಮಂದಿರಗಳಲ್ಲಿ ಟಿಕೆಟ್ ಪೂರ್ಣ ಬಿಕರಿಯಾಗಿದೆ. ಪ್ರತಿ ವರ್ಷ ಪುನೀತ್ ಅವರ ಜನ್ಮದಿನದಂದು ಅವರ ನಟನೆಯ ಒಂದು ಸಿನಿಮಾ ಬಿಡುಗಡೆ ಮಾಡುವ ಯೋಜನೆ ಹಾಕಿಕೊಂಡಿದೆ ಕೆಆರ್‌ಜಿ.

ಪುನೀತ್ ಅಗಲಿದ ದಿನದಿಂದಲೂ(2021ರ ಅ.29) ಒಂದಲ್ಲ ಒಂದು ರೀತಿಯಲ್ಲಿ ಅಭಿಮಾನಿಗಳು ತಮ್ಮ ನೆಚ್ಚಿನ ನಟನನ್ನು ಸಂಭ್ರಮಿಸುತ್ತಲೇ ಬಂದಿದ್ದಾರೆ. 2022ರ ಮಾರ್ಚ್ 17ರಂದು 'ಪುನೀತ್' ನಟನೆಯ ಕೊನೆಯ ಕಮರ್ಷಿಯಲ್ ಸಿನಿಮಾ 'ಜೇಮ್ಸ್' ಬಿಡುಗಡೆಗೊಂಡಿತ್ತು. ಇದನ್ನೊಂದು ಹಬ್ಬವಾಗಿ ಅಭಿಮಾನಿಗಳು ಆಚರಿಸಿದ್ದರು. ಬಳಿಕ ಎಸ್. ನಾಗೇಂದ್ರ ಪ್ರಸಾದ್ ನಿರ್ದೇಶನದ 'ಲಕ್ಕಿಮ್ಯಾನ್' 2022ರ ಸೆ.9ರಂದು ತೆರೆಕಂಡಿತ್ತು. ಇದರಲ್ಲಿ ಪುನೀತ್ ಪ್ರೇಕ್ಷಕರೆದುರು ದೇವರಾಗಿ ಪ್ರತ್ಯಕ್ಷವಾಗಿದ್ದರು. 2022ರ ಅಕ್ಟೋಬರ್ 28ರಂದು ಪಿಆರ್‌ಕೆ ಪ್ರೊಡಕ್ಷನ್ಸ್‌ನಡಿ, 'ವೈಲ್ಡ್ ಕರ್ನಾಟಕ' ಖ್ಯಾತಿಯ ಅಮೋಘವರ್ಷ ಅವರ ಜೊತೆಗೂಡಿ ಪುನೀತ್ ರಾಜ್‌ಕುಮಾರ್ ತಯಾರಿಸಿದ್ದ ಡಾಕ್ಯುಫಿಲಂ 'ಗಂಧದಗುಡಿ' ಬಿಡುಗಡೆಯಾಗಿತ್ತು. ಇದೇ ಡಾಕ್ಯುಫಿಲಂ 2023ರ ಮಾರ್ಚ್ 17ರಂದು ಒಟಿಟಿಯಲ್ಲಿ ಬಿಡುಗಡೆಯಾಗಿತ್ತು. ಇದೀಗ ಪುನೀತ್ ಅವರ ಸಿನಿಮಾಗಳ ಮರುಬಿಡುಗಡೆ ಅಭಿಮಾನಿಗಳಿಗೆ ಖುಷಿ ತಂದಿದೆ.

ಇದು ನಿರ್ದೇಶಕಿಯ 'ರಾಕ್ಷಸತಂತ್ರ'



ರಕ್ಷಾ ಮಲ್ಲಿಕ್

ಕನ್ನಡ ಚಿತ್ರರಂಗದಲ್ಲಿ ಮಹಿಳಾ ನಿರ್ದೇಶಕಿಯರ ಸಂಖ್ಯೆ ತುಂಬಾ ವಿರಳ. ಅದರಲ್ಲಿಯೂ ಹಾರರ್ ಸಿನಿಮಾಗಳನ್ನು ನಿರ್ದೇಶಿಸಿದ ನಿರ್ದೇಶಕಿಯರು ಬಹಳ ಕಡಿಮೆ. ಮೇಘಾ ಅಕ್ಷರಾ 'ರಾಕ್ಷಸತಂತ್ರ' ಎಂಬ ಹಾರರ್ ಸಿನಿಮಾ ಮೂಲಕ ಸ್ಯಾಂಡಲ್‌ವುಡ್ ಪ್ರವೇಶಿಸಿದ್ದಾರೆ.

'ಐದು ಜನ ಸ್ನೇಹಿತರು ವಿಡಿಯೊ ಕಾನ್ಫರೆನ್ಸ್ ಕಾಲ್ ಮಾಡಿಕೊಂಡಿರುವಾಗ ಅಚಾನಕ್ಕಾಗಿ ಒಂದು ವಿಚಿತ್ರವನ್ನು ನೋಡುತ್ತಾರೆ. ಅದರಿಂದ ಮುಂದೆ ಏನೇನಾಗುತ್ತದೆ ಎಂಬುದೇ ಕಥೆ. ಕ್ಷಣಕ್ಷಣಕ್ಕೂ ಕುತೂಹಲ ಕೆರಳಿಸುವ ಘಟನಾವಳಿಗಳೊಂದಿಗೆ ಚಿತ್ರಕಥೆ ಹೆಣೆಯಲಾಗಿದೆ. ಈ ಚಿತ್ರದಲ್ಲಿ ನಾಯಕ, ನಾಯಕಿ ಅಂತೇನಿಲ್ಲ. ರಾತ್ರಿ ಆರಂಭವಾಗಿ ಬೆಳಗಿನ ಜಾವದ ವೇಳೆಗೆ ಮುಗಿಯುವ ಕಥೆಯಿದು' ಎನ್ನುತ್ತಾರೆ ಮೇಘಾ.

ಈಗಾಗಲೇ ಚಿತ್ರೀಕರಣ ಮುಗಿದಿದ್ದು ಚಿತ್ರ ತೆರೆಗೆ ಬರಲು ಸಿದ್ಧವಿದೆ. ಬಹುತೇಕ ಹೊಸಬರೇ ತಾರಾಗಣದಲ್ಲಿದ್ದಾರೆ. ದಿನೇಶ್ ಬಾಬು ಛಾಯಾಚಿತ್ರಗ್ರಹಣ, ಯಶವಂತ್ ಸಂಗೀತ, ಸತೀಶ್ ಚಂದ್ರಯ್ಯ ಸಂಕಲನ ಈ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಮಾರ್ಚ್ 14, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಪಂಚಮಿ ಗಂ. 23-27 ನಕ್ಷತ್ರ: ಭರಣಿ ಗಂ. 16-56 ಯೋಗ: ವೈಧೃತಿ ಗಂ. 22-00 ಕರಣ: ಬವ ಗಂ. 12-21, ಕುಂಭ ಮಾಸದ 30 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 3.
ರಾಹುಕಾಲ: ಮಧ್ಯಾಹ್ನ 01-30-03-00
ಸೂರ್ಯೋದಯ : 06-42 ಸೂರ್ಯಾಸ್ತ : 06-37
ಮುಸ್ಲಿಂ ದಿನಾಂಕ : 03 ರಂಜಾನ್
ಅದೃಷ್ಟ ಸಂಖ್ಯೆ : 2, 5

ಮೇಷ : ಈ ದಿನ ಗ್ರಹಗಳು ಪೂರಕವಾಗಿವೆ. ನಿಮ್ಮಿಚ್ಛೆಯಂತೆ ಚಟುವಟಿಕೆಗಳು ನಡೆಯುವುದು . ನಿಮ್ಮ ಅಭಿರುಚಿಗೆ ತಕ್ಕ ವ್ಯಕ್ತಿಗಳೊಂದಿಗೆ ವ್ಯವಹರಿಸುವುದು ಹೆಚ್ಚು ಸೂಕ್ತವಾಗಿರುತ್ತದೆ.

ವೃಷಭ: ಭೋಗ ವಸ್ತುವಿನ ಖರೀದಿಯ ಅವಕಾಶವು ನಿಮ್ಮದಾಗಲಿದೆ. ದುಂದುವೆಚ್ಚ ಮಾಡುವ ಸಂದರ್ಭದಲ್ಲಿ ಹೆಚ್ಚಿನ ಆಲೋಚನೆ ಮಾಡಬೇಕಾದೀತು. ಆಲಸ್ಯಮಯ ಸಮಯವನ್ನು ಅನುಭವಿಸುವಿರಿ.

ಮಿಥುನ: ಷೇರು ವ್ಯವಹಾರಗಳು ಇಂದು ಕೂಡಿ ಬರುವುವು. ಪರಿಶ್ರಮದ ಜೊತೆ ಅಧಿಕ ಸಮಯವನ್ನು ವೃತ್ತಿಯ ಕೆಲಸಕ್ಕೆ ಮೀಸಲಿಡುವುದರಿಂದ ಅಧಿಕ ಲಾಭ. ಕುಟುಂಬದವರೊಡನೆ ಮನರಂಜನೆಗಾಗಿ ಅಲ್ಪಕಾಲ ಮೀಸಲಿಡಲು ಪ್ರಯತ್ನಿಸಿ.

ಕರ್ಕಾಟಕ: ಪ್ರಭಾವಿ ವ್ಯಕ್ತಿಗಳ ಹಸ್ತಕ್ಷೇಪದಂತಹ ಸಮಸ್ಯೆಗಳು ಎದುರಾಗಬಹುದು, ಕಾಳಜಿವಹಿಸಿ. ಸಂಸಾರದ ವಿಚಾರದಲ್ಲಿ ಮನಸ್ತಾಪ ಬರದಂತೆ ಜಾಗ್ರತೆವಹಿಸಿ. ದುರ್ಗಾ ಸ್ತೋತ್ರ ಪಠಿಸಿದರೆ ಯಶಸ್ಸು ದೊರೆಯುವುದು.

ಸಿಂಹ: ಬಹಳ ಕಾಲದಿಂದ ಅಪೇಕ್ಷಿಸಿದ್ದ ವಸ್ತುವೊಂದು ಅಲ್ಪ ಶ್ರಮದಿಂದ ಈ ದಿನ ನಿಮಗೆ ದೊರಕಲಿದೆ. ನಿಮ್ಮೆಲ್ಲಾ ವ್ಯವಹಾರಗಳು ಬಹಿರಂಗವಾಗಿದ್ದರೆ ಒಳ್ಳೆಯದು. ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ಪರಿಶ್ರಮ ವಹಿಸಬೇಕಾಗುವುದು.

ಕನ್ಯಾ: ಯುವ ಕಲಾವಿದರಿಗೆ ಹೆಚ್ಚು ಪ್ರೋತ್ಸಾಹ ಲಭಿಸುವುದು. ಎಂದಿನಂತೆ ಮನಸ್ಸು ಹೆಚ್ಚು ಉಲ್ಲಾಸದಿಂದ ಕೂಡಿರುವುದರಿಂದ ಕಾರ್ಯಗಳು ಸರಾಗವಾಗಿ ನಡೆಯುವುದು. ಆರೋಗ್ಯದಲ್ಲಿ ಚೇತರಿಕೆ ಕಾಣಲಿದೆ.

ತುಲಾ: ಆಟೋಮೊಬೈಲ್ ಎಂಜಿನಿಯರ್‌ಗಳಿಗೆ ವಿಶೇಷ ಲಾಭ ಪ್ರಾಪ್ತಿ. ಕೆಲಸದಲ್ಲಿ ಅಪ್ರಾಮಾಣಿಕತೆ ಹಾಗು ದುಡುಕಿನ ನಿರ್ಧಾರ ತೆಗೆದುಕೊಂಡಲ್ಲಿ ಪಶ್ಚಾತಾಪ ಪಡಬೇಕಾದ ಸಂದರ್ಭ ಅನಿವಾರ್ಯ ಒದಗಿಬರುತ್ತದೆ.

ವೃಶ್ಚಿಕ: ಹಣ ಹೂಡಿಕೆಯ ವಿಷಯದಲ್ಲಿ ಇತರರ ಸಲಹೆಗಳಿಗೆ ಗಮನಕೊಡು-ವುದಕ್ಕಿಂತ ಅನಿಸಿಕೆಯಂತೆ ನಡೆಯುವುದು ಉತ್ತಮ. ದೇಹದಲ್ಲಿ ಅಧಿಕವಾದ ಉಷ್ಣಾಂಶದಿಂದ ಅನಾರೋಗ್ಯ ಉಂಟಾಗುವ ಸಂಭವವಿದೆ.

ಧನು: ಮಂಗಳ ಕಾರ್ಯಗಳ ಶುಭ ಸೂಚನೆಗಳು ಕಂಡುಬರುತ್ತವೆ. ಹಂತ ಹಂತವಾಗಿ ನಿಮ್ಮ ಆರ್ಥಿಕ ಸ್ಥಿತಿಯು ಗಟ್ಟಿಯಾಗುತ್ತಲೇ ಹೋಗಲಿದೆ. ದಿನದಿಂದ ದಿನಕ್ಕೆ ತಂದೆ-ತಾಯಿಯವರ ಆರೋಗ್ಯ ಸ್ಥಿತಿ ಉತ್ತಮವಾಗಿರುತ್ತದೆ.

ಮಕರ: ಸಗಟು ವ್ಯಾಪಾರಿಗಳಿಗೆ ಹೇರಳ ಲಾಭ ಇರಲಿದೆ. ಆರ್ಥಿಕವಾಗಿ ಸೌಕರ್ಯ ಪಡೆದುಕೊಳ್ಳುವಿರಿ. ಪ್ರಗತಿಯ ಲಕ್ಷಣಗಳು ನಿಚ್ಚಳವಾಗಿ ತೋರಿ ಬರುವುದು. ಕೋರ್ಟ್-ಕಚೇರಿಯಲ್ಲಿ ಸಮಯ ವ್ಯರ್ಥವಾಗಲಿದೆ.

ಕುಂಭ: ವಿದ್ಯಾಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ಶ್ರಮದ ಅಗತ್ಯವಿದೆ. ದಲ್ಲಾಳಿತನದ ವ್ಯವಹಾರದಲ್ಲಿ ಎಚ್ಚರವಹಿಸುವುದು ಸೂಕ್ತ. ವಿಷ್ಣು ಸಹಸ್ರನಾಮ ಪಾರಾಯಣ ಅಥವಾ ನಾರಾಯಣನ ನಾಮ ಸ್ಮರಣೆ ಮಾಡಿದಲ್ಲಿ ಒಳ್ಳೆಯದಾಗುವುದು.

ಮೀನ: ಅಧಿಕ ಖರ್ಚು ವೆಚ್ಚಗಳಿಂದ ಮುಕ್ತಿಹೊಂದಲು ದುಸ್ಸಹವಾಸ, ದುರಭ್ಯಾಸದಿಂದ ಹೊರಬರುವ ಯೋಚನೆ ಮಾಡಿರಿ. ಕೃಷಿ ಭೂಮಿಗೆ ಸಂಬಂಧಿಸಿದಂತೆ ರಿಯಲ್ ಎಸ್ಟೇಟ್ ಏಜೆಂಟರ್‌ಗೆ ಲಾಭ ದೊರೆಯುತ್ತದೆ.

ನುಡಿ ಬೆಳಗು

ಆಪತ್ತಿಗಾಗುವವರೇ ಗೆಳೆಯರು



ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಯುವಕನೊಬ್ಬನ ವಿವಾಹ ನಿಶ್ಚಯವಾಗಿತ್ತು. ಅದೇ ವೇಳೆಗೆ ಒಂದು ಬಹಳ ಮುಖ್ಯವಾದ ಕೆಲಸಕ್ಕಾಗಿ ಆತ ದೂರದೂರಿಗೆ ಹೋಗಬೇಕಾಯಿತು. ಅದಕ್ಕಾಗಿ ಆತ ತನ್ನ ತಂದೆಗೆ 'ಅಪ್ಪಾ, ಮದುವೆಯನ್ನೇನು ಮುಂದೂಡುವ ಹಾಗಿಲ್ಲ. ನಾನು ಹದಿನೈದು ದಿನ ಒಬ್ಬರಿಗೆ ಒಂದು ಫೋನ್ ಕರೆಯನ್ನೂ ಮಾಡಲಾಗದು. ಹಾಗಾಗಿ ನನ್ನ ಈ ಐವತ್ತು ಸ್ನೇಹಿತರ ಪಟ್ಟಿ ಇಲ್ಲಿದೆ, ಪ್ರತಿಯೊಬ್ಬರಿಗೂ ನೀವೇ ಕರೆ ಮಾಡಿ ನನ್ನ ಪರವಾಗಿ ಖುದ್ದಾಗಿ ಆಹ್ವಾನಿಸಬೇಕು' ಎನ್ನುತ್ತಾನೆ. ತಂದೆ ಒಪ್ಪುತ್ತಾರೆ.

ಮದುವೆಯ ದಿನ ಬೆಳಿಗ್ಗೆ ಯುವಕ ಮನೆ ತಲುಪುತ್ತಾನೆ. ಮನೆಯ ತುಂಬ ಸ್ನೇಹಿತರನ್ನು ನಿರೀಕ್ಷಿಸಿದ ಯುವಕನಿಗೆ ಆಘಾತ. ಐವತ್ತು ಗೆಳೆಯರ ಪಟ್ಟಿಯಲ್ಲಿ ಐವರು ಮಾತ್ರ ಕಾಣುತ್ತಾರೆ. ಕೋಪದಿಂದ ತಂದೆಯ ಬಳಿ ಬಂದವನೇ 'ಅಪ್ಪಾ ನನ್ನ ಸ್ನೇಹಿತರನ್ನು ಕರೆಯಲೇಬೇಕೆಂದು ಹೇಳಿದ್ದೆನಲ್ಲ' ಎನ್ನುತ್ತಾನೆ . ಅದಕ್ಕೆ ತಂದೆ 'ಕರೆದಿದ್ದೇನಲ್ಲ' ಎನ್ನುತ್ತಾರೆ. ಆಗ ಯುವಕ 'ಐವತ್ತು ಮಂದಿಯಲ್ಲಿ ಐದೇ ಮಂದಿ ಬಂದಿದ್ದಾರಲ್ಲ' ಎಂದು ಹೇಳಿದಾಗ ತಂದೆ, 'ಮಗೂ ನಾನು ಪ್ರತಿಯೊಬ್ಬರಿಗೂ ನಿನ್ನ ಪರವಾಗಿ ಕರೆ ಮಾಡಿದ್ದೇನೆ, ನೀನು ಒಂದು ದೊಡ್ಡ ಸಮಸ್ಯೆಯಲ್ಲಿ ಇದ್ದೀಯೆಂದೂ ಅದು ಪರಿಹಾರವಾಗಬೇಕೆಂದರೆ ಗೆಳೆಯರೆಲ್ಲರ ಸಹಕಾರ ಬೇಕೆಂದೂ, ಇಂತಹ ದಿನ ಇಂತಹ ಜಾಗಕ್ಕೆ ಬರಬೇಕೆಂದೂ ಮನವಿ ಮಾಡಿಕೊಂಡೆ. ಹಾಗಾಗಿ ಚಿಂತಿಸಬೇಡ, ನಿನ್ನ ನಿಜವಾದ ಗೆಳೆಯರೆಲ್ಲ ಇಲ್ಲಿದ್ದಾರೆ' ಎಂದರು.

ನಿಜ, ಬಹಳಷ್ಟು ಸಂದರ್ಭದಲ್ಲಿ ನಾವು ಯಾರು ನಮ್ಮವರೆಂದು ತಿಳಿದುಕೊಂಡಿರುತ್ತೇವೆಯೋ ಅವರು ಪರಕೀಯರೇ ಆಗಿರುತ್ತಾರೆ. ಇದು ಬದುಕಿನ ವ್ಯಂಗ್ಯಗಳಲ್ಲೊಂದು. ಭರವಸೆ, ನಂಬಿಕೆಗಳ ಅಡಿಪಾಯ ಹೊಂದಿರುವ ಸ್ನೇಹ ಎನ್ನುವುದು ಜಗತ್ತಿನ ಅತೀ ಮುಖ್ಯ ಸಂಬಂಧಗಳಲ್ಲೊಂದು. ರಕ್ತ ನೀರಿಗಿಂತ ಗಟ್ಟಿಯಾದರೂ ಕೆಲವು ಸ್ನೇಹ ಸಂಬಂಧಗಳು ರಕ್ತ ಸಂಬಂಧವನ್ನೂ ನಾಚಿಸುವಂತಿರುತ್ತವೆ. ಎಲ್ಲ ಭಾಷೆಯ ಸಾಹಿತ್ಯ ಕೃತಿಗಳಲ್ಲೂ ಎಲ್ಲ ದೇಶಗಳ ಇತಿಹಾಸದಲ್ಲಿಯೂ ಅತ್ಯುತ್ತಮ ಸ್ನೇಹಿತರು ಆಗಿ ಹೋಗಿದ್ದಾರೆ. ಅಂತೆಯೇ ಕರಡಿ ಬಂದಾಗ ಸ್ನೇಹಿತನನ್ನು ಬಿಟ್ಟು ಮರ ಹತ್ತಿದವನ ಕಥೆಯನ್ನು ಕೂಡ ಓದಿದ್ದೇವೆ.

ಸಂತಸದ ಸಂದರ್ಭದಲ್ಲೋ ಅಥವಾ ಲಾಭ ಪಡೆಯುವಾಗಲೋ ಜತೆಗಿದ್ದು ಕಷ್ಟದ ಗಳಿಗೆಯಲ್ಲಿ ಅಪರಿಚಿತರಾಗುವವರು ಹಾಗೂ ಅವಶ್ಯಕತೆಯಿದ್ದಾಗ ಮಾತ್ರ ನೆನಪು ಮಾಡಿಕೊಳ್ಳುವವರು ನಕಲಿ ಸ್ನೇಹಿತರು. ಗೆಳೆಯರ ತುರ್ತುಪರಿಸ್ಥಿತಿಯಲ್ಲಿ ಬೆನ್ನು ತಿರುಗಿಸಿ ಓಡದೇ, ವೈಯಕ್ತಿಕ ಸಮಸ್ಯೆಯನ್ನು ಲೆಕ್ಕಿಸದೇ ಸಹಾಯಕ್ಕೆ ಬರುವವರು ನಿಜವಾದ ಗೆಳೆಯರು. ಅವರು ಗೆಳೆಯರ ಸಂಕಟ, ನೋವನ್ನು ತಮ್ಮದು ಎಂದುಕೊಳ್ಳುತ್ತಾರೆ. ಇಂಥ ಗೆಳೆಯರೆಂದರೆ ಸಂಕಟದ ಸಂದರ್ಭದಲ್ಲಿ ಆತುಕೊಳ್ಳಲೊಂದು ಭರವಸೆಯ ಹೆಗಲಿದ್ದಂತೆ. ನೈಜ ಗೆಳೆಯರನ್ನು ಪಡೆದವರೇ ಅದೃಷ್ಟವಂತರು.

ಪದಬಂಧ 5620


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೆಳಮುಖವಾಗಿ ಹೋಗುವುದು (4)
3.ಮೂಲಿಕೆಗಳನ್ನು ಬಟ್ಟಿಯಿಳಿಸಿ ತೆಗೆದ ರಸ (3)
5.ನಿಂತು ನಿಂತು ಬರುವ ಅಸ್ಪಷ್ಟ ಮಾತು (3)
7.ಹಲ್ಲುಗಳಿಗೆ ಆಧಾರವಾಗಿರುವ ಮಾಂಸಖಂಡ (3)
8.ಎಲ್ಲರೂ ಒಟ್ಟಾಗಿ ಹಾಡುವಿಕೆ (5)
11.ಗದ್ದಲ ಇಲ್ಲೇ ಕೇಳುತ್ತಿದೆ (3)
12.ಜೋಳದ ರೊಟ್ಟಿ ಇಲ್ಲಿದೆ (3)
15.ಪ್ರತ್ಯಕ್ಷದ ವಿರುದ್ಧ ಪದ (3)
16.ಅಕ್ಕಪಕ್ಕ ಎಂದು ಹೀಗೆನ್ನಿ (4)

ಮೇಲಿಂದ ಕೆಳಕ್ಕೆ

1.ಎಣ್ಣೆ ಮಜ್ಜನಕ್ಕೇನೂ ಭಂಗವಿಲ್ಲ ಬಿಡಿ! (3)
2.ಕಸದ ಗುಡ್ಡೆ ಇಲ್ಲಿದೆ (2)
3.ಕೈಯಲ್ಲಿ ಹಿಡಿದಿರುವ ಕಚ್ಚಾಪ್ರತಿ (3)
4.ಘೋರವಾದ ದಂಡನೆಯನ್ನು ಹೀಗೂ ಹೇಳುವರು (4)
6.ಆ ದಿವಸ ತಂದಿರುವ ಕಾಳುಕಡಿ (3)
7.ಇದು ಕೆಲಸಕ್ಕೆ ಬಾರದ ಮಾತು (5)
9.ಮುಸಲ್ಮಾನರ ದೊರೆ (3)
10.ಅತಿಯಾದ ದುಃಖ (4)
11.ಬೆಳಕಿನ ಕಿಂಡಿಯಿದು (3)
13.ರೀತಿಯೊಡನೆ ಬಂದಿರುವ ಸಂಪ್ರದಾಯ (3)
14.ಕೂರ್ಮವಿಲ್ಲಿ ತಲೆಕೆಳಗಾಗಿದೆ (2)



5619ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ನವಯೌವನ 3.ಕಳಸ
5.ಕರನ 7.ಕಾಯಾರೋಗ
8.ತಪ್ಪುಕಲ್ಪನೆ 11.ಹಗುರ
12.ಣರಶ 14.ಲುಬ್ಧಕ
15.ಪಾಕಪ್ರವೀಣ

ಮೇಲಿಂದ ಕೆಳಕ್ಕೆ:
1.ನಸರಾಣಿ 2.ವರಾರ
4.ಸಭಾಂಗಣ 6.ನವೀಕರಣ
7.ಕಾಮನೆ 8.ತವರ
9.ತಹಸೀಲು 10.ಹಗರಣ
13.ರಸಿಕ

ಸುಡೊಕು 6005

		7		6			1	2
	8		5		2	3		
6		2		4		7		8
	7				9			
5		9		1			3	7
	6		7					4
2		3	8		4	6		
		6		2				9
8	1		6		7	4		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ

6004 ಸುಡೊಕು

8	7	9	4	6	1	2	5	3
2	4	3	9	8	5	7	6	1
6	5	1	2	7	3	4	8	9
7	9	2	1	5	8	3	4	6
4	3	8	7	9	6	1	2	5
5	1	6	3	4	2	9	7	8
3	2	5	6	1	4	8	9	7
1	6	7	8	2	9	5	3	4
9	8	4	5	3	7	6	1	2

ಅಪಹರಣ: ಮೂವರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸರ ಸೋಗಿನಲ್ಲಿ ಬಂದು ವ್ಯಾಪಾರಿಯೊಬ್ಬರನ್ನು ಅಪಹರಿಸಲು ಯತ್ನಿಸಿದ ಮೂವರು ಆರೋಪಿಗಳನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮುಜಮಿಲ್ ಅಲಿಯಾಸ್ ಮುಜ್ಜು, ಸೈಯದ್ ಶಿಫಾಸ್ ಹಾಗೂ ಯೂಸುಫ್ ಬಂಧಿತ ಆರೋಪಿಗಳು.

'ಬಾಗಲೂರಿನ ಮೆಟ್ಟಗಾನಹಳ್ಳಿ ಡಂಪಿಂಗ್ ಯಾರ್ಡ್‌ನಲ್ಲಿ ರೌಡಿಶೀಟರ್ ಮುಜಾಮಿಲ್, ಹಫ್ತಾ ವಸೂಲಿಗೆ ಮುಂದಾಗಿದ್ದ. ತನ್ನ ಸಹಚರರಿಗೆ ಹಫ್ತಾ ಕೊಡಲು ನಿರಾಕರಿಸಿದ್ದ ಗುಜರಿ ವ್ಯಾಪಾರಿಯನ್ನು ಅಪಹರಿಸಲು ಸಂಚು ರೂಪಿಸಿದ್ದ. ಮಧ್ಯರಾತ್ರಿ ಕಾರಿನಲ್ಲಿ ಬಂದಿದ್ದ ಆರೋಪಿಗಳು, ಪೊಲೀಸರ ಸೋಗಿನಲ್ಲಿ ಕಾರಿಗೆ ಗುಜರಿ ವ್ಯಾಪಾರಿಯನ್ನು ಹತ್ತಿಸಿಕೊಂಡಿದ್ದರು. ಕಾರು ಸ್ವಲ್ಪ ದೂರಕ್ಕೆ ಚಲಿಸಿದ ಮೇಲೆ ಗುಜರಿ ವ್ಯಾಪಾರಿಗೆ ಅನುಮಾನ ಮೂಡಿತ್ತು. ಕಾರಿನಿಂದ ಇಳಿದು ತಪ್ಪಿಸಿಕೊಳ್ಳಲು ಮುಂದಾಗಿದ್ದರು. ಆರೋಪಿಗಳು, ವ್ಯಾಪಾರಿಯನ್ನು ಅಟ್ಟಿಸಿಕೊಂಡು ಹೋದರು. ಅದೇ ರಸ್ತೆಯಲ್ಲಿ ಗಸ್ತಿನಲ್ಲಿದ್ದ ಅಸಲಿ ಪೊಲೀಸರು, ವ್ಯಾಪಾರಿಯನ್ನು ರಕ್ಷಿಸಿ ಮೂವರನ್ನು ಬಂಧಿಸಿದ್ದರು' ಎಂದು ಮೂಲಗಳು ಹೇಳಿವೆ.

ಲಂಚ: ಇಬ್ಬರಿಗೆ 3 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಲಂಚ ಪಡೆದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಇಬ್ಬರು ಅಪರಾಧಿಗಳಿಗೆ ಇಲ್ಲಿನ 23ನೇ ಹೆಚ್ಚುವರಿ ಸಿಟಿ ಸಿವಿಲ್ ಹಾಗೂ ಸೆಷನ್ಸ್ ನ್ಯಾಯಾಲಯ ಶಿಕ್ಷೆ ಹಾಗೂ ದಂಡ ವಿಧಿಸಿ ಆದೇಶಿಸಿದೆ.

ಮನೆಗೆ ಹೊಸ ವಿದ್ಯುತ್ ಸಂಪರ್ಕ ಕಲ್ಪಿಸುವ ನಕ್ಷೆಗೆ ಅನುಮೋದನೆ ನೀಡಲು ಲಂಚ ಪಡೆದಿದ್ದ ಆರೋಪ ಸಾಬೀತಾಗಿದ್ದು ದಕ್ಷಿಣ ವಿಭಾಗದ ಉಪಮುಖ್ಯ ಎಲೆಕ್ಟ್ರಿಕಲ್ ಇನ್‌ಸ್ಪೆಕ್ಟರ್ ಕೆ.ವಿ.ಸದಾನಂದಗೆ 3 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ₹1.50 ಲಕ್ಷ ದಂಡ ವಿಧಿಸಿ, ನ್ಯಾಯಾಧೀಶರಾದ ಕೆ.ಎಂ.ರಾಧಾಕೃಷ್ಣ ಅವರು ಬುಧವಾರ ಆದೇಶ ಹೊರಡಿಸಿದ್ದಾರೆ.

'ವಿನಾಯಕನಗರದಲ್ಲಿ ನಿರ್ಮಿಸಿದ್ದ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ನಕ್ಷೆಗೆ ಅನುಮೋದನೆಗಾಗಿ ಆರ್. ಬಿ.ದಯಾನಂದ್ ಎಂಬುವರಿಂದ ₹25 ಸಾವಿರ ಲಂಚಕ್ಕಾಗಿ ಇನ್‌ಸ್ಪೆಕ್ಟರ್ ಬೇಡಿಕೆ ಇಟ್ಟಿದ್ದರು. ಅವರು ಎಸಿಬಿಗೆ ದೂರು ನೀಡಿದ್ದರು. 2016ರ ನವೆಂಬರ್ 30ರಂದು ಎಸಿಬಿ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಅಪರಾಧಿಯನ್ನು ಬಂಧಿಸಿದ್ದರು. ತನಿಖೆ ನಡೆಸಿದ ಅಧಿಕಾರಿಗಳು ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು.

ದಂಡ, ಶಿಕ್ಷೆ: ಖಾತಾ ಬದಲಾವಣೆ ಮಾಡಿಕೊಡುವುದಕ್ಕಾಗಿ ₹6 ಸಾವಿರ ಲಂಚ ಪಡೆದಿರುವ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಸೊಣ್ಣಪ್ಪನಹಳ್ಳಿಯ ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರ್ (ಗುತ್ತಿಗೆ ಆಧಾರಿತ ನೇಮಕ) ಎಚ್. ಮೂರ್ತಿಗೆ ಇದೇ ನ್ಯಾಯಾಲಯ 3 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ₹1 ಲಕ್ಷ ದಂಡ ವಿಧಿಸಿ ಆದೇಶ ನೀಡಿದೆ. ದಂಡ ಪಾವತಿಸಲು ವಿಫಲವಾದಲ್ಲಿ, ಮತ್ತೆ ಎರಡು ತಿಂಗಳು ಜೈಲು ಶಿಕ್ಷೆ ವಿಧಿಸುವಂತೆ ಆದೇಶದಲ್ಲಿ ತಿಳಿಸಲಾಗಿದೆ.

2017ರ ನ.24ರಂದು ಎಚ್. ಮೂರ್ತಿ, ದೂರುದಾರರಿಂದ ಜಮೀನಿನ ಖಾತಾ ವರ್ಗಾವಣೆ ಮಾಡಿಕೊಡಲು ಲಂಚ ಪಡೆಯುತ್ತಿದ್ದ ವೇಳೆ ಎಸಿಬಿ ಪೊಲೀಸರು ಬಂಧಿಸಿದ್ದರು.

ಕಿಡ್ನಿ ಮಾರಾಟ: ₹6 ಲಕ್ಷ ವಂಚಿಸಿದ ಸೈಬರ್ ಕಳ್ಳರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣದ ಸಮಸ್ಯೆಯಿಂದ ಬಳಲುತ್ತಿದ್ದ ವ್ಯಕ್ತಿಯೊಬ್ಬರು ತನ್ನ ಕಿಡ್ನಿ ಮಾರಾಟ ಮಾಡಲು ಹೋಗಿ ಸೈಬರ್ ಕಳ್ಳರ ಬಲೆಗೆ ಬಿದ್ದು, ₹6 ಲಕ್ಷ ಕಳೆದುಕೊಂಡಿದ್ದಾರೆ.

ಶ್ರೀನಿವಾಸ್ ಹಣ ಕಳೆದುಕೊಂಡ ವ್ಯಕ್ತಿ. ಶ್ರೀನಿವಾಸ್ ಅವರು ಲೆಕ್ಕಪರಿಶೋಧಕರಾಗಿ ಕೆಲಸ ಮಾಡುತ್ತಿದ್ದು, ಸೆನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಶ್ರೀನಿವಾಸ್ ಅವರು ಬ್ಯಾಂಕ್ ಸೇರಿದಂತೆ ಕೆಲವರ ಬಳಿ ಸಾಲ ಪಡೆದುಕೊಂಡಿದ್ದರು. ಆರ್ಥಿಕ ಮುಗ್ಗಟ್ಟು ಎದುರಾದ ಕಾರಣಕ್ಕೆ ಕಿಡ್ನಿ ಮಾರಾಟಕ್ಕೆ ಮುಂದಾಗಿದ್ದರು ಎನ್ನಲಾಗಿದೆ.

'ವೆಬ್‌ಸೈಟ್‌ವೊಂದರಲ್ಲಿ ಯಾರಿಗಾದರೂ ತುರ್ತು ಕಿಡ್ನಿ ಬೇಕಾದರೆ ಸಂಪರ್ಕಿಸಿ' ಎಂದು ಶ್ರೀನಿವಾಸ್ ತಮ್ಮ ಮೊಬೈಲ್ ನಂಬರ್ ನಮೂದಿಸಿದ್ದರು. ಇದೇ ವೇಳೆ ಅದರಲ್ಲಿದ್ದ ಲಿಂಕ್‌ವೊಂದನ್ನು ಕ್ಲಿಕ್ ಮಾಡಿದಾಗ ಕಿಡ್ನಿ ಕೊಟ್ಟರೆ ದೊಡ್ಡ ಮೊತ್ತದ ಹಣ ಕೊಡುವುದಾಗಿ ಜಾಹೀರಾತು ಹಾಕಿರುವುದನ್ನು ಗಮನಿಸಿದ್ದರು. ಕೂಡಲೇ ಆ ಮೊಬೈಲ್ ನಂಬರ್ ಪಡೆದು, ವಾಟ್ಸ್‌ಆ್ಯಪ್ ಕರೆ ಮಾಡಿ ಮಾತನಾಡಿದ್ದರು. ಕರೆ ಸ್ವೀಕರಿಸಿದ ವ್ಯಕ್ತಿ, ಈ ಪ್ರಕ್ರಿಯೆಗೆ ಹಣ ನೀಡಬೇಕಾಗುತ್ತದೆ ಎಂದು ನಂಬಿಸಿದ್ದ. ಶ್ರೀನಿವಾಸ್ ಮತ್ತೆ ಸಾಲ ಮಾಡಿಕೊಂಡು ಆತ ಹೇಳಿದಂತೆಯೇ ಹಂತಹಂತವಾಗಿ ₹6 ಲಕ್ಷವನ್ನು ಆನ್‌ಲೈನ್ ಮೂಲಕ ಸಂದಾಯ ಮಾಡಿದ್ದರು. ಅದಾದ ಮೇಲೆ ಸೈಬರ್ ವಂಚಕರು ಮೊಬೈಲ್ ಸ್ವಿಚ್ಡ್ ಆಫ್ ಮಾಡಿಕೊಂಡಿದ್ದರು ಎಂದು ಮೂಲಗಳು ಹೇಳಿವೆ.

ಅಪಘಾತ: ಸೆಕ್ಯೂರಿಟಿ ಗಾರ್ಡ್ ಸಾವು

ಬೆಂಗಳೂರು: ಯಲಹಂಕದ ನಾಗೇನಹಳ್ಳಿಯಲ್ಲಿ ಬಲೆರೊ ಹಾಗೂ ಬೈಕ್ ನಡುವೆ ಮಂಗಳವಾರ ರಾತ್ರಿ ಸಂಭವಿಸಿದ ಅಪಘಾತದಲ್ಲಿ ಸೆಕ್ಯೂರಿಟಿ ಗಾರ್ಡ್ ಮೃತಪಟ್ಟಿದ್ದಾರೆ.

ಖಾಸಗಿ ಕಂಪನಿಯಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿದ್ದ ಜಯದೇವ್(25) ಮೃತಪಟ್ಟವರು. 'ರಾತ್ರಿ ಕೆಲಸ ಮುಗಿಸಿಕೊಂಡು ಮನೆಗೆ ತೆರಳುತ್ತಿದ್ದರು. ಮಾರ್ಗ ಮಧ್ಯದ ಪೆಟ್ರೋಲ್ ಬಂಕ್‌ವೊಂದರಲ್ಲಿ ಬೈಕ್‌ಗೆ ಪೆಟ್ರೋಲ್ ತುಂಬಿಸಿಕೊಂಡು ತೆರಳುತ್ತಿದ್ದರು. ಆ ಸಂದರ್ಭದಲ್ಲಿ ಅಪಘಾತ ಸಂಭವಿಸಿದೆ. ನೆಲಕ್ಕೆ ಉರುಳಿ ಬಿದ್ದ ಜಯದೇವ್ ಅವರ ತಲೆಗೆ ಗಂಭೀರವಾದ ಗಾಯಗಳಾಗಿದ್ದವು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯದಲ್ಲಿ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು. ಯಲಹಂಕ ಸಂಚಾರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಲೈಂಗಿಕ ದೌರ್ಜನ್ಯ: ಪಿಎಸ್‌ಐ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ಭದ್ರತಾಪಡೆಯ (ಕೆಎಸ್‌ಐಎಸ್‌ಎಫ್) ಮಹಿಳಾ ಪಿಎಸ್‌ಐ ಜೊತೆಗಿನ ವೈಯಕ್ತಿಕ ದೃಶ್ಯಗಳನ್ನು ಸೆರೆಹಿಡಿದು ಲೈಂಗಿಕ ದೌರ್ಜನ್ಯ ಹಾಗೂ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಪಿಎಸ್‌ಐ ಒಬ್ಬರನ್ನು ಚಂದ್ರಾಲೇಔಟ್ ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಕೆಎಸ್‌ಐಎಸ್‌ಎಫ್‌ನ ಎನ್. ಬಿ.ಸಂಜಯ್ ಕುಮಾರ್ (34) ಬಂಧಿತ ಪಿಎಸ್‌ಐ. ಇವರ ಜೊತೆಗೆ ಕೆಲಸ ಮಾಡುತ್ತಿದ್ದ ಮಹಿಳಾ ಪಿಎಸ್‌ಐ ನೀಡಿದ ದೂರು ಆಧರಿಸಿ, ಆರೋಪಿಯನ್ನು ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ತರಬೇತಿ ವೇಳೆ ಇಬ್ಬರು ಪರಸ್ಪರ ಪರಿಚಯವಾಗಿದ್ದರು. ಸಂಜಯ್ ಪ್ರೇಮ ನಿವೇದನೆ ಮಾಡಿದ್ದ. ಇದನ್ನು ದೂರುದಾರರಾದ ಮಹಿಳಾ ಪಿಎಸ್‌ಐ ತಿರಸ್ಕರಿಸಿದ್ದರು.

'ನಾನು ಯುಪಿಎಸ್‌ಸಿ ಪರೀಕ್ಷೆ ಬರೆಯಬೇಕೆಂದು ನಿರ್ಧರಿಸಿದ್ದೇನೆ ಎಂದು ಹೇಳಿ, ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವಂತೆಯೂ ಕೋರಿದ್ದರು. ಇದನ್ನೇ ನೆಪಮಾಡಿಕೊಂಡು ನನಗೆ ಹತ್ತಿರವಾಗಿ ತೊಂದರೆ ಕೊಡುತ್ತಿದ್ದರು. ಅಲ್ಲದೇ ಆಗಾಗ್ಗೆ ಹಣ ತೆಗೆದುಕೊಂಡು ವಾಪಸ್ ಕೊಡುತ್ತಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'2020ರಲ್ಲಿ ನನ್ನಿಂದ ₹5.50 ಲಕ್ಷ ತೆಗೆದುಕೊಂಡಿದ್ದರು. ಓದುವ ನೆಪದಲ್ಲಿ ಹತ್ತಿರವಾಗಿ ಅವರೊಂದಿಗೆ ನಾನು ಜೊತೆಗಿರುವ ಸಮಯದ ಛಾಯಾಚಿತ್ರಗಳನ್ನು ನನಗೆ ತಿಳಿಯದೆ ತೆಗೆದುಕೊಂಡಿದ್ದರು. ಅವುಗಳನ್ನು ಇಟ್ಟುಕೊಂಡು ಬ್ಲ್ಯಾಕ್ ಮೇಲ್ ಮಾಡಿ ನನಗೆ ಲೈಂಗಿಕ ಕಿರುಕುಳ ಕೊಡುತ್ತಿದ್ದರು. ಅಲ್ಲದೇ ಮದುವೆ ಆಗುವಂತೆ ಬಲವಂತ ಮಾಡಿ ಕೈಕೊಯ್ದುಕೊಳ್ಳುವುದನ್ನು ಮಾಡುತ್ತಿದ್ದರು. ಮಾರ್ಚ್ 11ರಂದು ಸಂಜಯ್ ನನ್ನ ಮನೆಗೆ ನುಗ್ಗಿ ಹಲ್ಲೆಗೆ ಯತ್ನಿಸಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಡೆಕಥ್ಲಾನ್ ಶಾಪ್‌ನಲ್ಲಿ ಸಣ್ಣ ಪ್ರಮಾಣದ ಸ್ಫೋಟ

ಬೆಂಗಳೂರು: ಚಿಕ್ಕಜಾಲ ಪೊಲೀಸ್ ಠಾಣಾ ವ್ಯಾಪ್ತಿಯ ಡೆಕಥ್ಲಾನ್ ಶಾಪ್‌ನಲ್ಲಿ ಸಣ್ಣ ಪ್ರಮಾಣದ ಸ್ಫೋಟ ಸಂಭವಿಸಿ ಕೆಲಕಾಲ ಆತಂಕ ಸೃಷ್ಟಿಯಾಗಿತ್ತು. ಸ್ಫೋಟದ ಶಬ್ದದಿಂದ ಬೆದರಿದ ಸಿಬ್ಬಂದಿ ಹಾಗೂ ಗ್ರಾಹಕರು ಶಾಪ್ ಒಳಗಿಂದ ಹೊರಕ್ಕೆ ಓಡಿಬಂದಿದ್ದರು. ಸ್ಥಳಕ್ಕೆ ಬಂದ ಚಿಕ್ಕಜಾಲ ಪೊಲೀಸರು ಪರಿಶೀಲನೆ ನಡೆಸಿದರು.

'ಶಾಪ್‌ನಲ್ಲಿದ್ದ ಏರ್‌ಲೈನ್ ಯಂತ್ರದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು ಸಣ್ಣ ಪ್ರಮಾಣದ ಸ್ಫೋಟವಾಗಿತ್ತು. ಇದರಿಂದ ಗ್ರಾಹಕರು ಹಾಗೂ ಸಿಬ್ಬಂದಿ ಗಾಬರಿಯಾಗಿ ಹೊರಕ್ಕೆ ಓಡಿ ಬಂದಿದ್ದರು. ಯಾರಿಗೂ ಅಪಾಯವಾಗಿಲ್ಲ' ಎಂದು ಪೊಲೀಸರು ಹೇಳಿದರು.

ಒಂದು ದಿನ ಡಿಸಿಪಿಯಾದ 10ರ ಪೋರ!

ಪ್ರಜಾವಾಣಿ ವಾರ್ತೆ



ಮಲ್ಲಿಕಾರ್ಜುನ್‌ಗೆ ಹಸ್ತಲಾಘವ ನೀಡಿದ ಉತ್ತರ ವಿಭಾಗದ ಡಿಸಿಪಿ ಸೈದುಲು ಅಡಾವತ್

ಬೆಂಗಳೂರು: ಪೊಲೀಸ್ ಸಮವಸ್ತ್ರ, ಸೊಂಟದಲ್ಲಿ ಪಿಸ್ತೂಲ್, ಕೈಯಲ್ಲಿ ಲಾಠಿ... - ಹೀಗೆ ಡಿಸಿಪಿ ಕಚೇರಿಗೆ ವಿಶೇಷ ಅತಿಥಿಯೊಬ್ಬರ ಆಗಮನವಾಯಿತು. ಸ್ಥಳದಲ್ಲಿದ್ದ ಪೊಲೀಸ್ ಸಿಬ್ಬಂದಿ, ಹೊಸ ಅಧಿಕಾರಿ ಬಂದಿರಬಹುದು ಎಂದು ಭಾವಿಸಿ, ಸ್ವಾಗತ ಕೋರಿದರು. ಇದು ಉತ್ತರ ವಿಭಾಗದ ಡಿಸಿಪಿ ಕಚೇರಿಯಲ್ಲಿ ಬುಧವಾರ ಮಧ್ಯಾಹ್ನ ಕಂಡುಬಂದ ದೃಶ್ಯಾವಳಿಗಳು.

ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದ 10 ವರ್ಷದ ಬಾಲಕ ಮಲ್ಲಿಕಾರ್ಜುನ್, ಪೊಲೀಸ್ ಅಧಿಕಾರಿ ಆಗುವ ಕನಸು ಕಂಡಿದ್ದ. ಒಂದು ದಿನದ ಮಟ್ಟಿಗೆ ಪೊಲೀಸ್ ಅಧಿಕಾರಿ ಮಾಡುವ ಮೂಲಕ ಆತ ಕಂಡ ಕನಸನ್ನು ಉತ್ತರ ವಿಭಾಗ ಡಿಸಿಪಿ ಸೈದುಲು ಅಡಾವತ್ ನನಸು ಮಾಡಿದರು.

ಕಿದ್ವಾಯಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಲ್ಲಿಕಾರ್ಜುನ್, ಪೊಲೀಸ್ ಆಗಬೇಕೆಂಬ ಆಸೆಯನ್ನು ಪೋಷಕರಲ್ಲಿ ಹೇಳಿಕೊಂಡಿದ್ದ. ಬಾಲಕನ ಆಸೆಯನ್ನು ಪೋಷಕರು ಆಸ್ಪತ್ರೆಯ ಆಡಳಿತ ಮಂಡಳಿಗೆ ತಿಳಿಸಿದ್ದರು.

'ಬೆಂಗಳೂರು ಪರಿಹಾರ ಸಂಸ್ಥೆ' ಸಹಯೋಗದಲ್ಲಿ ಮಲ್ಲಿಕಾರ್ಜುನ್‌ಗೆ ಪೊಲೀಸ್ ಸಮವಸ್ತ್ರ ತೊಡಿಸಿ ಕಚೇರಿಗೆ ಜೀಪ್‌ನಲ್ಲಿ ಬರುವ ವ್ಯವಸ್ಥೆ ಮಾಡಲಾಯಿತು. ಡಿಸಿಪಿ ಕುಳಿತುಕೊಳ್ಳುವ ಕುರ್ಚಿಯಲ್ಲಿ ಆತನನ್ನು ಕೂರಿಸಲಾಯಿತು. ನಂತರ ಬಾಲಕನಿಗೆ ಹೂಗುಚ್ಛ ನೀಡಿ ಪೊಲೀಸ್ ಸಿಬ್ಬಂದಿ ಸ್ವಾಗತಿಸಿದರು. ಪೊಲೀಸ್ ಬ್ಯಾಟನ್ ಮೂಲಕ ಗೌರವ ಸೂಚಿಸಲಾಯಿತು.

'ದೊಡ್ಡವನಾದ ಮೇಲೆ ಡಿಸಿಪಿ ಆಗುತ್ತೇನೆ' ಎಂದು ಮಲ್ಲಿಕಾರ್ಜುನ್ ತಮ್ಮ ಮನದ ಇಂಗಿತ ವ್ಯಕ್ತಪಡಿಸಿದ.

ನಂತರ, ಕಚೇರಿಯಲ್ಲಿದ್ದ ಶಸ್ತ್ರಾಸ್ತ್ರಗಳನ್ನು ಸ್ಪರ್ಶಿಸಿ ಅವುಗಳ ಬಗ್ಗೆ ಮಾಹಿತಿ ಪಡೆದುಕೊಂಡ. ಆರೋಪಿಗಳನ್ನು ಇರಿಸುವ ಸೆಲ್‌ಗೂ ಹೋಗಿ ವೀಕ್ಷಿಸಿದ.



ಪ್ರತಿಭಟನೆ

ಸಂವಿಧಾನ ಬದಲಾಯಿಸುವುದಾಗಿ ಹೇಳಿಕೆ ನೀಡಿರುವ ಬಿಜೆಪಿ ಸಂಸದ ಅನಂತಕುಮಾರ್ ಹೆಗಡೆ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಯುವ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಚ್.ಎಸ್. ಮಂಜುನಾಥ ಗೌಡ ನೇತೃತ್ವದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ಕಾಂಗ್ರೆಸ್ ಭವನದ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು.

ನಕಲಿ ಟಿಕೆಟ್ ಬಳಸಿ ವಿಮಾನ ನಿಲ್ದಾಣ ಪ್ರವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಟಿಕೆಟ್ ಬಳಸಿ ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರವೇಶಿಸಿದ ಆರೋಪಿಯನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜಾರ್ಖಂಡ್‌ನ ಪ್ರಖರ್ ಶ್ರೀವಾಸ್ತವ (24) ಬಂಧಿತ ಆರೋಪಿ: 'ಆರೋಪಿಯ ಸ್ನೇಹಿತೆ ಬೆಂಗಳೂರಿಗೆ ಬಂದಿದ್ದರು. ಆಕೆಯನ್ನು ವಿಮಾನದ ಮೂಲಕ ದೆಹಲಿಗೆ ವಾಪಸ್ ಕಳುಹಿಸಲು ಆರೋಪಿ ವಿಮಾನ ನಿಲ್ದಾಣಕ್ಕೆ ಬಂದಿದ್ದ. ಭದ್ರತಾ ಸಿಬ್ಬಂದಿಗೆ ನಕಲಿ ಟಿಕೆಟ್ ಅನ್ನು ತೋರಿಸಿ, ವಿಮಾನ ನಿಲ್ದಾಣ ಪ್ರವೇಶಿಸಿದ್ದ. ಸ್ನೇಹಿತೆಯನ್ನು ಬೀಳ್ಕೊಟ್ಟು ವಾಪಸ್ ಬರುತ್ತಿದ್ದ ವೇಳೆ ಅನುಮಾನಗೊಂಡ ಗೇಟ್ ನಂ.9ರ ಭದ್ರತಾ ಸಿಬ್ಬಂದಿ, ಟಿಕೆಟ್ ಪರಿಶೀಲಿಸಿದ್ದಾರೆ. ಆಗ ನಕಲಿ ಟಿಕೆಟ್ ಎಂಬುದು ಗೊತ್ತಾಗಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದರು.

'ಆರೋಪಿಯೇ ನಕಲಿ ಟಿಕೆಟ್ ತಯಾರಿಸಿಕೊಂಡು ಬಂದಿದ್ದ. ವಿಮಾನ ನಿಲ್ದಾಣದ ಒಳಕ್ಕೆ ಅತಿಕ್ರಮಣ ಪ್ರವೇಶ, ನಕಲಿ ಟಿಕೆಟ್ ಮತ್ತು ವಂಚನೆ ಪ್ರಕರಣದ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು. ಕಳೆದ ವರ್ಷ ಸಹ ಇದೇ ರೀತಿಯಲ್ಲಿ ವ್ಯಕ್ತಿಯೊಬ್ಬ ನಕಲಿ ಟಿಕೆಟ್ ಬಳಸಿ ವಿಮಾನ ನಿಲ್ದಾಣ ಪ್ರವೇಶಿಸಿದ್ದ.

ಬೇರೊಬ್ಬರ ಪಾಸ್‌ಪೋರ್ಟ್ ಬಳಕೆ: ಬೇರೊಬ್ಬರ ಹೆಸರಿನಲ್ಲಿದ್ದ ಪಾಸ್‌ಪೋರ್ಟ್ ಬಳಸಿ ವಿಮಾನದಲ್ಲಿ ಪ್ರಯಾಣಿಸಲು ಬಂದಿದ್ದ ಆರೋಪಿಯನ್ನೂ ಪೊಲೀಸರು ಬಂಧಿಸಿದ್ದಾರೆ.

ಶ್ರೇಯಸ್ ರಮಾನಂದ್ ಬಂಧಿತ ಆರೋಪಿ: 'ಆರೋಪಿ, ಬೆಂಗಳೂರು ವಿಮಾನ ನಿಲ್ದಾಣದಿಂದ ದೆಹಲಿಗೆ ತೆರಳಿ ಅಲ್ಲಿಂದ ಅಲ್ಮೇಟಿಗೆ ಪ್ರಯಾಣಿಸಲು ಬಂದಿದ್ದ. ಇಂಡಿಗೊ ಏರ್‌ಲೈನ್ಸ್ ಸಿಬ್ಬಂದಿ ಪರಿಶೀಲನೆ ವೇಳೆ ಪಾಸ್‌ಪೋರ್ಟ್‌ನಲ್ಲಿದ್ದ ಭಾವಚಿತ್ರಕ್ಕೂ ಆರೋಪಿಯ ಮುಖಕ್ಕೂ ಹೋಲಿಕೆ ಕಾಣಿಸುತ್ತಿರಲಿಲ್ಲ. ಏರ್‌ಲೈನ್ಸ್ ಸಿಬ್ಬಂದಿ ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಲಾಯಿತು. ರಮಾನಂದ್ ಮತ್ತಿಗೋಡು ಸತ್ಯನಾರಾಯಣ ಎಂಬುವರ ಪಾಸ್‌ಪೋರ್ಟ್ ಅನ್ನು ಆರೋಪಿ ಬಳಸಿ ಕೊಂಡು ವಿಮಾನದಲ್ಲಿ ಪ್ರಯಾಣಿಸಲು ಮುಂದಾಗಿದ್ದ. ಆರೋಪಿಯನ್ನು ಬಂಧಿಸಿ ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ರಮಾಗೆ 'ಕಸಾಪ ದತ್ತಿ ಪ್ರಶಸ್ತಿ'



ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಡಾ. ಎಚ್. ವಿಶ್ವನಾಥ್ ಮತ್ತು ಎಂ.ಎಸ್. ಇಂದಿರಾ ದತ್ತಿ ಪ್ರಶಸ್ತಿ'ಗೆ ಲೇಖಕಿ ರಮಾ ಫಣಿ ಭಟ್ ಗೋಪಿ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ₹ 10 ಸಾವಿರ ನಗದು ಒಳಗೊಂಡಿದೆ. ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಅಂಥ ಬರಹಗಾರರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಎಚ್.ವಿಶ್ವನಾಥ್ ಅವರು ಈ ಪುರಸ್ಕಾರವನ್ನು ಪರಿಷತ್ತಿನಲ್ಲಿ ಸ್ಥಾಪಿಸಿದ್ದಾರೆ. ರಮಾ ಫಣಿ ಭಟ್ ಗೋಪಿ ಅವರ ಬರಹಗಳು ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. 'ಭಾವಲೋಕ' ಮತ್ತು 'ಆಕಾಶ ಬುಟ್ಟಿ' ಅವರ ಪ್ರಕಟಿತ ಕವನ ಸಂಕಲನಗಳಾಗಿವೆ.

ಕಾರ್ಯನಿರ್ವಹಣಾ ಅನುಮತಿ ಪತ್ರ, ಲ್ಯಾಪ್‌ಟಾಪ್ ವಿತರಿಸಿದ ಸಚಿವ ಕೃಷ್ಣ ಬೈರೇಗೌಡ

ತ್ವರಿತ ಸರ್ವೆ ಕಾರ್ಯಕ್ಕೆ 'ರೋವರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ವೆ ಕಾರ್ಯಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಪ್ರತಿ ತಾಲ್ಲೂಕಿಗೂ ತಲಾ ಮೂರು ರೋವರ್ ಯಂತ್ರಗಳನ್ನು ನೀಡಲಾಗುತ್ತಿದ್ದು, ಈಗಾಗಲೇ ಟೆಂಡರ್ ಕರೆಯಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ವಿಧಾನಸೌಧದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹೊಸದಾಗಿ ಆಯ್ಕೆಯಾದ ಒಂದು ಸಾವಿರ ಪರವಾನಗಿ ಭೂಮಾಪಕರಿಗೆ ಕಾರ್ಯ ನಿರ್ವಹಣಾ ಅನುಮತಿ ಪತ್ರ ಹಾಗೂ ಗ್ರಾಮ ಆಡಳಿತಾಧಿಕಾರಿಗಳಿಗೆ ಲ್ಯಾಪ್‌ಟಾಪ್ ವಿತರಿಸಿ ಅವರು ಮಾತನಾಡಿದರು.



ಕೃಷ್ಣ ಬೈರೇಗೌಡ

ಉಪಗ್ರಹದ ಸಹಾಯದಿಂದ ಭೂ ದತ್ತಾಂಶ ಬಳಸಿಕೊಂಡು ಅಳತೆ ಮಾಡಬೇಕಿರುವ ನಿರ್ದಿಷ್ಟ ಸರ್ವೆ ನಂಬರ್‌ನ ನಕಾಶೆಯನ್ನು ಖಚಿತವಾಗಿ ನಿಗದಿಪಡಿಸುವಲ್ಲಿ ಡಿಜಿಟಲ್ ರೋವರ್‌ಗಳು ಸಹಾಯ ಮಾಡುತ್ತವೆ. ಕೆಲಸದ ವೇಗ ಮೂರರಿಂದ ಐದು ಪಟ್ಟು ಹೆಚ್ಚಾಗುತ್ತದೆ. ಒಬ್ಬ ಭೂಮಾಪಕ ಒಂದೇ ದಿನಕ್ಕೆ ಐದಕ್ಕೂ ಹೆಚ್ಚು ಸರ್ವೆ ಕಾರ್ಯ ನಡೆಸಬಹುದು ಎಂದರು.

ಮುಖ್ಯಾಂಶಗಳು

- ಮುಂದಿನ 2 ತಿಂಗಳಲ್ಲಿ ಎಲ್ಲಾ ಆಕಾರ್ ಬಂದ್‌ಗಳ ಡಿಜಿಟಲೀಕರಣ
- ಒಂದೇ ದಿನಕ್ಕೆ ಐದಕ್ಕೂ ಹೆಚ್ಚು ಸರ್ವೆ ಕಾರ್ಯ ಸಾಧ್ಯ
- ಸರ್ವೆ ಇಲಾಖೆಯಲ್ಲಿ ಖಾಲಿ ಇರುವ 541 ಹುದ್ದೆಗಳ ನೇರ ನೇಮಕಾತಿಗೆ ಕ್ರಮ

ಕೆಲ ಸರ್ವೇ ನಂಬರ್‌ಗಳಲ್ಲಿ ಕಂದಾಯ, ಅರಣ್ಯ ಇಲಾಖೆ ಹಾಗೂ ರೈತರ ಹೆಸರು ಇರುತ್ತವೆ. ಜಂಟಿ ಸರ್ವೆ ನಡೆಸಿ ಎಲ್ಲರಿಗೂ ನೂತನ ಹಿಸ್ಸಾ ಸಂಖ್ಯೆ ನೀಡಬೇಕಿದೆ. ಅದಕ್ಕಾಗಿ ಸರ್ವೆ ಕಾರ್ಯ ಚುರುಕುಗೊಳ್ಳಬೇಕಿದೆ. ಮುಂದಿನ ಎರಡು ತಿಂಗಳಲ್ಲಿ ಎಲ್ಲಾ ಆಕಾರ್ ಬಂದ್‌ಗಳನ್ನೂ ಡಿಜಿಟಲೀಕರಣಗೊಳಿಸಲಾಗುವುದು. ಪಹಣಿ ಕಾಲಂ 3-9 ವಿಸ್ತೀರ್ಣ ಹೊಂದಾಣಿಕೆ ಬಗೆಹರಿಸಿ, ಹೊಸ ಸರ್ವೆ ಸಂಖ್ಯೆ ನೀಡಲಾಗುವುದು ಎಂದು ಹೇಳಿದರು.

ಈಗಾಗಲೇ 364 ಸರ್ಕಾರಿ ಭೂಮಾಪಕರು ಹಾಗೂ 27 ಸಹಾಯಕ ಭೂಮಾಪಕ ಅಧಿಕಾರಿಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿದೆ. ಸರ್ವೆ ಇಲಾಖೆಯಲ್ಲಿ ಖಾಲಿ ಇರುವ ಎಲ್ಲ 541 ಹುದ್ದೆಗಳ ನೇರ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಎಲ್ಲ ಪ್ರಕ್ರಿಯೆ ಪೂರ್ಣಗೊಂಡರೆ ಸರ್ವೆ ಇಲಾಖೆಗೆ ಹೆಚ್ಚುವರಿ 2,500 ನೌಕರರು ದೊರೆಯುತ್ತಾರೆ ಎಂದು ಹೇಳಿದರು.

ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಿಗರು ಸಹ ಇ-ಆಫೀಸ್ ಬಳಕೆ ಮಾಡಬೇಕು. ಜನರಿಗೆ ಕಾಗದರಹಿತ ಪಾರದರ್ಶಕ ಸೇವೆ ನೀಡಬೇಕು ಎಂದು ಸೂಚಿಸಿದರು. ಶಾಸಕ ರಿಜ್ವಾನ್ ಅರ್ಷದ್, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಆಯುಕ್ತ ಸುನಿಲ್ ಕುಮಾರ್, ಸರ್ವೆ ಇಲಾಖೆಯ ಆಯುಕ್ತ ಮಂಜುನಾಥ್ ಉಪಸ್ಥಿತರಿದ್ದರು.

ಸ್ಮರಣ ಸಂಚಿಕೆಗೆ ಲೇಖನಗಳ ಆಹ್ವಾನ

ಬೆಂಗಳೂರು: ಭಾರತೀಯ ಕರ್ನಾಟಕದ ಸಂಘದ ವಾರ್ಷಿಕ ಸ್ಮರಣ ಸಂಚಿಕೆಗಾಗಿ ಸ್ವರಚಿತ ಕಥೆ, ಕವನ, ವೈಚಾರಿಕ ಲೇಖನಗಳನ್ನು ಆಹ್ವಾನಿಸಲಾಗಿದೆ. ಮಾರ್ಚ್ 25ರ ಒಳಗಾಗಿ, ಎಂ. ಚಿಕ್ಕಪ್ಪಯ್ಯ, ಅಧ್ಯಕ್ಷ, ಭಾರತೀಯ ಕರ್ನಾಟಕ ಸಂಘ, 115, 1ನೇ ಮಹಡಿ, 6ನೇ ಅಡ್ಡರಸ್ತೆ, 10ನೇ ಮುಖ್ಯರಸ್ತೆ, ಇಂದಿರಾನಗರ, 2ನೇ ಹಂತ, ಬೆಂಗಳೂರು-38 ಈ ವಿಳಾಸಕ್ಕೆ ಕಳುಹಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊಬೈಲ್: 98861 53021ಗೆ ಸಂಪರ್ಕಿಸಬಹುದು.



ಪ್ರತಿಭಟನೆ ಸಿಎಎ ಅಧಿಸೂಚನೆ ವಿರೋಧಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಸಿಪಿಐಎಂಎಲ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು - ಪ್ರಜಾವಾಣಿ ಚಿತ್ರ

ಇಂದಿನಿಂದ 17ರವರೆಗೆ ಟಿಐಎಫ್‌ಎ ಚಿತ್ರೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ವಿ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳಿಗಾಗಿ ಆಯೋಜಿಸುವ ಪ್ರತಿಷ್ಠಿತ ಟೀನ್ ಇಂಡೀ ಫಿಲ್ಮ್ ಅವಾರ್ಡ್ಸ್‌ನ (ಟಿಐಎಫ್‌ಎ) ಮೂರನೇ ಆವೃತ್ತಿ ಮಾರ್ಚ್ 14 ರಿಂದ 17ರವರೆಗೆ ಜಯನಗರದ ಆರ್‌ವಿ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯಲಿದೆ.

ಈ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ 30 ದೇಶಗಳ 300 ಸಿನಿಮಾಗಳು ಪ್ರದರ್ಶನಗೊಳ್ಳಲಿವೆ. 13 ರಿಂದ 19 ವರ್ಷದೊಳಗಿನ ವಿದ್ಯಾರ್ಥಿಗಳೇ ನಿರ್ಮಿಸಿ, ನಿರ್ದೇಶಿಸಿದ ಚಿತ್ರಗಳು ಇಲ್ಲಿ ಪ್ರದರ್ಶನಗೊಳ್ಳುವುದು ವಿಶೇಷ. ಆಸ್ಟ್ರೇಲಿಯಾ ಈ ಬಾರಿಯ ಚಿತ್ರೋತ್ಸವದ ಫೋಕಸ್ ದೇಶವಾಗಿರಲಿದೆ.

ಸೋಮವಾರದಂದು ನಡೆದ ಟಿಎಫ್‌ಎ ಉದ್ಘಾಟನಾ ಪೂರ್ವ ಕಾರ್ಯಕ್ರಮದಲ್ಲಿ ಮಾತನಾಡಿದ ಸಿನಿಮಾ ಪರಿಣತ ಎನ್. ವಿದ್ಯಾಶಂಕರ್, 'ಸಮಕಾಲೀನ ಪ್ರಪಂಚವನ್ನು ಬೇರೆ ಯಾವುದೇ ಮಾಧ್ಯಮಕ್ಕಿಂತ ಸಿನಿಮಾದ ಮೂಲಕ ಉತ್ತಮವಾಗಿ ಪ್ರತಿನಿಧಿಸಬಹುದಾಗಿದೆ. ಇತರ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಿ ಚಲನಚಿತ್ರ ಶಾಲೆಗಳ ಕೊರತೆಯಿದೆ. ಆರ್.ವಿ ವಿಶ್ವವಿದ್ಯಾಲಯದ ಚಲನಚಿತ್ರೋತ್ಸವದಂತಹ ಉಪಕ್ರಮಗಳು ಹೆಚ್ಚು ಪ್ರಭಾವಶಾಲಿಯಾಗಿವೆ' ಎಂದರು.

'ಟಿಐಎಫ್‌ಎ 2024' ಚಿತ್ರೋತ್ಸವಕ್ಕೆ ಆಸ್ಟ್ರೇಲಿಯಾದಿಂದ 14 ಅತ್ಯುತ್ತಮ ಚಲನಚಿತ್ರಗಳು ಆಯ್ಕೆಗೊಂಡಿವೆ. ಪ್ರತಿಭಾನ್ವಿತ ನಿರ್ದೇಶಕಿ ನೈನಾ ಸೇನ್ ನಿರ್ದೇಶಿಸಿದ ಚಿತ್ರ 'ದಿ ಸಾಂಗ್ ಕೀಪರ್ಸ್' ಚಿತ್ರೋತ್ಸವದ ಉದ್ಘಾಟನಾ ಚಿತ್ರವಾಗಿರಲಿದೆ ಎಂದು ವಿವಿ ತಿಳಿಸಿದೆ.

ಮಾಸ್ಟರ್ ಕ್ಲಾಸ್, ಚಲನಚಿತ್ರ ಸಂಬಂಧಿ ಚರ್ಚೆಗಳು ಮತ್ತು ಇತರ ಚಟುವಟಿಕೆಗಳಲ್ಲಿ 25 ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಲಿದ್ದಾರೆ. ಸಾರ್ವಜನಿಕರಿಗೆ ₹250 ಪ್ರವೇಶ ಶುಲ್ಕವಿರುತ್ತದೆ. ಮಾರ್ಚ್ 14ರಂದು ಬೆಳಿಗ್ಗೆ 10ರಿಂದ 1 ಗಂಟೆವರೆಗೆ ಚಿತ್ರೋತ್ಸವದ ಸ್ಥಳದಲ್ಲಿಯೇ ನೋಂದಣಿಗೆ ಅವಕಾಶವಿದೆ. ಹೆಚ್ಚಿನ ಮಾಹಿತಿಗೆ https://bit.ly/49qAmfu ಜಾಲತಾಣಕ್ಕೆ ಭೇಟಿ ನೀಡಬಹುದು.

'ಆಂಗ್ಲ ಮಾಧ್ಯಮ ಶಾಲೆ ಪ್ರಾರಂಭದ ಪ್ರಸ್ತಾಪ ಕೈಬಿಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂದಿನ ಶೈಕ್ಷಣಿಕ ವರ್ಷದಿಂದ ಪಂಚಾಯತಿ ಮಟ್ಟದಲ್ಲಿ ಪೂರ್ವ ಪ್ರಾಥಮಿಕದಿಂದಲೇ ಆಂಗ್ಲ ಮಾಧ್ಯಮ ಹಾಗೂ ದ್ವಿಭಾಷಾ ಮಾಧ್ಯಮ ಶಾಲೆಗಳನ್ನು ತೆರೆಯುವ ಪ್ರಸ್ತಾಪವನ್ನು ಕೈಬಿಡಬೇಕು' ಎಂದು ಶಿಕ್ಷಣ ತಜ್ಞ ನಿರಂಜನಾರಾಧ್ಯ ವಿ.ಪಿ. ಅವರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.



ನಿರಂಜನಾರಾಧ್ಯ ವಿ.ಪಿ.

ಈ ಬಗ್ಗೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. 'ಮಕ್ಕಳ ಪ್ರಾರಂಭಿಕ ಕಲಿಕೆ ಮತ್ತು ಕಲಿಕೆಯ ಭಾಷೆ ನಿರ್ಣಾಯಕ ಪಾತ್ರ ವಹಿಸುತ್ತದೆ. ಬಹುಮುಖ್ಯವಾಗಿ ಕಲಿಕೆಯ ಭಾಷೆಯು ಮಾತೃಭಾಷೆಯಾಗಿರಬೇಕು. ಮಗುವಿಗೆ ಗೊತ್ತಿರದ ಭಾಷೆಯಲ್ಲಿ ಕಲಿಕೆ ಪ್ರಾರಂಭವಾದರೆ ಮಗುವಿನ ಪೂರ್ಣ ಬೌದ್ಧಿಕ ಬೆಳವಣಿಗೆ ಸಾಧ್ಯವಾಗದೆ ಆಸಕ್ತಿ ಕುಂದಿ, ಮಗು ಕೇವಲ ಕಂಠಪಾಠಕ್ಕೆ ಜೋತು ಬೀಳುತ್ತದೆ. ಹೀಗಾಗಿ, ಮುಂದಿನ ಶೈಕ್ಷಣಿಕ ವರ್ಷದಿಂದ ಪೂರ್ವ ಪ್ರಾಥಮಿಕದಿಂದಲೇ ಮೂರು ಸಾವಿರ ಆಂಗ್ಲ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸುವ ತೀರ್ಮಾನವನ್ನು ಹಿಂದಕ್ಕೆ ಪಡೆಯಬೇಕು' ಎಂದು ಆಗ್ರಹಿಸಿದ್ದಾರೆ.

'ಸಾವಿರ ಶಾಲೆಗಳಲ್ಲಿ ಉಭಯ ಮಾಧ್ಯಮ (ಆಂಗ್ಲ ಮತ್ತು ಕನ್ನಡ) ಪ್ರಾರಂಭಿಸುವ ತೀರ್ಮಾನವನ್ನೂ ಕೈಬಿಡಬೇಕು. ಪೂರ್ವ ಪ್ರಾಥಮಿಕದಿಂದಲೇ ಪಂಚಾಯಿತಿಗೊಂದು ಸಾರ್ವಜನಿಕ ಶಾಲೆ ಪ್ರಾರಂಭಿಸುವ ಬದಲು, 2017ರ ಸರ್ಕಾರಿ ಶಾಲೆಗಳ ಸಬಲೀಕರಣ ವರದಿಯ ತೀರ್ಮಾನದಂತೆ ಪೂರ್ವ ಪ್ರಾಥಮಿಕದಿಂದ 4ನೇ ತರಗತಿವರೆಗೆ ಬುನಾದಿ ಪ್ರಾಥಮಿಕ ಶಿಕ್ಷಣವನ್ನು ಆಯಾ ಹಳ್ಳಿ, ಹಟ್ಟಿ, ಹಾಡಿಗಳಲ್ಲಿ ಉಳಿಸಿಕೊಳ್ಳಬೇಕು. 5 ರಿಂದ 12ನೇ ತರಗತಿವರೆಗೆ ಗ್ರಾಮ ಪಂಚಾಯತಿ ಮತ್ತು ನಗರದ ವಾರ್ಡ್ ಹಂತದಲ್ಲಿ ಕೇಂದ್ರೀಯ ಶಾಲೆಯ ಮಾದರಿಯಲ್ಲಿ ಸುಸಜ್ಜಿತ ರಾಜೀವ್ ಗಾಂಧಿ ಸಾರ್ವಜನಿಕ ನವೋದಯ ಶಾಲೆಗಳನ್ನು ಪ್ರಾರಂಭಿಸಲು ಮುಂದಿನ ನಾಲ್ಕು ವರ್ಷಗಳಿಗೆ ಕ್ರಿಯಾ ಯೋಜನೆ ತಯಾರಿಸಬೇಕು' ಎಂದು ಒತ್ತಾಯಿಸಿದ್ದಾರೆ. '2015ರಲ್ಲಿ ಎರಡೂ ಸದನಗಳಲ್ಲಿ ಮಂಡನೆಯಾಗಿ, ರಾಷ್ಟ್ರಪತಿಯವರ ಒಪ್ಪಿಗೆಗಾಗಿ ನನೆಗುದಿಗೆ ಬಿದ್ದಿರುವ ಕನ್ನಡ ಮಾಧ್ಯಮ ಮಸೂದೆಗೆ ಒಪ್ಪಿಗೆ ಪಡೆಯಲು ಶೀಘ್ರ ಕ್ರಮವಹಿಸಬೇಕು. ಅಗತ್ಯವಿದ್ದಲ್ಲಿ ಒಬ್ಬ ಅಧಿಕಾರಿಯನ್ನು ನಿಯೋಜಿಸಬೇಕು' ಎಂದು ಆಗ್ರಹಿಸಿದ್ದಾರೆ.

ಬೋರ್ಡ್ ಪರೀಕ್ಷೆ ಹಿಂದೆ ಮಾಫಿಯಾ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ 5, 8, 9 ಮತ್ತು 11ನೇ ತರಗತಿಗಳಿಗೆ ಪರೀಕ್ಷೆ ನಿಗದಿ ಮಾಡಿದ್ದರ ಹಿಂದೆ ಪ್ರಶ್ನೆಪತ್ರಿಕೆ ಮಾಫಿಯಾ ಕೆಲಸ ಮಾಡಿದೆ ಎಂದು ಕರ್ನಾಟಕ ಖಾಸಗಿ ಶಾಲಾ ಕಾಲೇಜು ಪೋಷಕ ಸಂಘಟನೆಗಳ ಸಮನ್ವಯ ಸಮಿತಿ ಆರೋಪಿಸಿದೆ.

ಪರೀಕ್ಷೆ ಕುರಿತು ಅಭಿಪ್ರಾಯ ವ್ಯಕ್ತಪಡಿಸಿರುವ ಸುಪ್ರೀಂಕೋರ್ಟ್, ಇದು ಶಿಕ್ಷಣ ಹಕ್ಕು ಕಾಯ್ದೆ ಉಲ್ಲಂಘನೆ ಎಂದು ಹೇಳಿದೆ. ಸಂವಿಧಾನಬದ್ಧ ಮೂಲಭೂತ ಹಕ್ಕು ಮತ್ತು ಶಿಕ್ಷಣ ಕಾಯ್ದೆಯ ಅರಿವಿಲ್ಲದ ಅಧಿಕಾರಿಗಳು ಹಣದ ಆಸೆಗಾಗಿ ಪ್ರಶ್ನೆಪತ್ರಿಕೆ ಮುದ್ರಣ ಮಾಫಿಯಾ ಜತೆ ಕೈಜೋಡಿಸಿ, ಎಲ್ಲಾ ಗೊಂದಲಕ್ಕೆ ಕಾರಣರಾಗಿದ್ದಾರೆ. ಪರೀಕ್ಷಾ ಮಂಡಳಿಯ ಹಿರಿಯ ಅಧಿಕಾರಿಗಳು ಈ ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಶಂಕೆ ಇದೆ. ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಹುನ್ನಾರ ನಡೆದಿದೆ ಸಮಿತಿ ಅಧ್ಯಕ್ಷ ಬಿ.ಎನ್.ಯೋಗಾನಂದ ದೂರಿದ್ದಾರೆ.

ಅಧಿಕಾರಿಗಳ ಕಾನೂನು ಬಾಹಿರ ನಿರ್ಧಾರಗಳಿಂದಾಗಿ ಲಕ್ಷಾಂತರ ಮಕ್ಕಳು ಮತ್ತು ಪೋಷಕರು ಸಂಕಷ್ಟ ಅನುಭವಿಸಿದ್ದಾರೆ. ಒತ್ತಡಕ್ಕೆ ಸಿಲುಕಿದ್ದಾರೆ. ಅದಕ್ಕೆ ಕಾರಣರಾದ ಅಧಿಕಾರಿಗಳನ್ನು ಅಮಾನತು ಮಾಡಬೇಕು. ಪ್ರಶ್ನೆಪತ್ರಿಕೆಗಳಿಗೆ ಮಾಡಿದ ವೆಚ್ಚವನ್ನು ಅಧಿಕಾರಿಗಳ ವೇತನದಿಂದ ವಸೂಲಿ ಮಾಡಬೇಕು. ಸಮಗ್ರ ವಿಚಾರಣೆಗೆ ಆದೇಶಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ಪದ್ಮಶ್ರೀ ಶಿಕ್ಷಣ ಸಂಸ್ಥೆ ನ್ಯಾಕ್ ಎ++ ಮಾನ್ಯತೆ

ಬೆಂಗಳೂರು: ಕೆಂಗೇರಿ ಸಮೀಪದ ಕೊಮ್ಮಘಟ್ಟದಲ್ಲಿರುವ ಪದ್ಮಶ್ರೀ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಆ್ಯಂಡ್ ಸೈನ್ಸಸ್ ಶಿಕ್ಷಣ ಸಂಸ್ಥೆಗೆ ನ್ಯಾಕ್ ಎ++ ಮಾನ್ಯತೆ ದೊರೆತಿದೆ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಟಿ.ಕೆ. ನಾರಾಯಣಪ್ಪ ತಿಳಿಸಿದ್ದಾರೆ.

ನ್ಯಾಕ್ ಶ್ರೇಯಾಂಕದಲ್ಲಿ ಸಂಸ್ಥೆಗೆ ಅತ್ಯುತ್ತಮ ಮಟ್ಟದ 3.58 ಸಿಜಿಪಿಎ ಲಭಿಸಿದೆ. ಜೊತೆಗೆ ಯುಜಿಸಿಯಿಂದ ಸಂಸ್ಥೆಗೆ ಮುಂದಿನ ಹತ್ತು ವರ್ಷಗಳ ಅವಧಿಗೆ ಸ್ವಾಯತ್ತ ಸ್ಥಾನಮಾನದ ಮಾನ್ಯತೆ ಸಿಕ್ಕಿದೆ ಎಂದು ಮಾಹಿತಿ ನೀಡಿದ್ದಾರೆ.

16ಕ್ಕೆ ನವೋತ್ಥಾನ ಉದ್ಘಾಟನೆ: ಈ ಸಂಭ್ರಮಾಚರಣೆ ಹಾಗೂ ಸ್ವಾಯತ್ತ ಸ್ಥಾನಮಾನದ ಉದ್ಘಾಟನಾ ಸಮಾರಂಭ 'ನವೋತ್ಥಾನ'ವನ್ನು ಮಾರ್ಚ್ 16ರಂದು ಕೊಮ್ಮಘಟ್ಟದ ಕಾಲೇಜು ಕ್ಯಾಂಪಸ್‌ನಲ್ಲಿ ಆಯೋಜಿಸಲಾಗಿದೆ.

ಬಾವಿ ತೋಡಿದ ಗೌರಿ ನಾಯ್ಕಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಕಾಂಗಿಯಾಗಿ 70 ಅಡಿ ಆಳದ ಬಾವಿ ತೋಡಿ ತೋಟ ಉಳಿಸಿದ್ದ ಹಾಗೂ ಬಾವಿ ತೋಡಿ ಅಂಗನವಾಡಿಗೂ ನೀರಿನ ವ್ಯವಸ್ಥೆ ಮಾಡಿದ್ದ ಶಿರಸಿಯ ಗೌರಿ ನಾಯ್ಕ ಅವರನ್ನು ಕೆಎಸ್‌ಆರ್‌ಟಿಸಿ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆಯಲ್ಲಿ ಸನ್ಮಾನಿಸಲಾಯಿತು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, 'ಗೌರಿ ನಾಯ್ಕ ಅವರ ಸಮಾಜಮುಖಿ ಸೇವೆ ಮಾದರಿಯಾದುದು. ಅವರು ಬಾವಿ ತೋಡಿ ಅಂಗನವಾಡಿಗೆ ನೀರು ಒದಗಿಸಿದ್ದರು. ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಆ ಬಾವಿಗೆ ಕಟ್ಟೆ ಕಟ್ಟಲು ನಿಗಮದಿಂದ ₹1 ಲಕ್ಷವನ್ನು ಅಲ್ಲಿನ ಜಿಲ್ಲಾಧಿಕಾರಿಗೆ ನೀಡಲಾಗುವುದು' ಎಂದು ತಿಳಿಸಿದರು.

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ವಿ. ಅನ್ಬುಕುಮಾರ್ ಮಾತನಾಡಿ, 'ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳಾ ನೌಕರರಿಗೆ ಲೈಂಗಿಕ ಕಿರುಕುಳ ತಪ್ಪಿಸಲು ಮಹಿಳಾ ನೌಕರರ ಆಂತರಿಕ ದೂರು ಸಮಿತಿಯನ್ನು ರಚಿಸಲಾಗಿದೆ' ಎಂದರು.

ನಿಗಮದ 17 ವಿಭಾಗಗಳಲ್ಲಿ ಉತ್ತಮ ಕಾರ್ಯ ಸಾಧನೆ ತೋರಿದ ನಿರ್ವಾಹಕಿಯರು, ತಾಂತ್ರಿಕ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿಯನ್ನು ಗೌರವಿಸಲಾಯಿತು.



ಏಕಾಂಗಿಯಾಗಿ 70 ಅಡಿ ಆಳದ ಬಾವಿ ತೋಡಿ ತೋಟ ಉಳಿಸಿದ್ದ, ಬಾವಿ ತೋಡಿ ಅಂಗನವಾಡಿಗೂ ನೀರಿನ ವ್ಯವಸ್ಥೆ ಮಾಡಿದ್ದ ಶಿರಸಿಯ ಗೌರಿ ನಾಯ್ಕ ಅವರನ್ನು ನಗರದಲ್ಲಿ ಕೆಎಸ್‌ಆರ್‌ಟಿಸಿ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆಯಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸನ್ಮಾನಿಸಿದರು. ಕೆಎಸ್‌ಆರ್‌ಟಿಸಿ ನಿರ್ದೇಶಕಿ ನಂದಿನಿದೇವಿ ಕೆ., ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಉಪಸ್ಥಿತರಿದ್ದರು.

ಕೆಎಸ್‌ಆರ್‌ಟಿಸಿಗೆ ಆರು ಪ್ರಶಸ್ತಿ

ಕೆಎಸ್‌ಆರ್‌ಟಿಸಿಗೆ ಐದು ರಾಷ್ಟ್ರೀಯ ಮತ್ತು ಒಂದು ಅಂತರರಾಷ್ಟ್ರೀಯ ಪ್ರಶಸ್ತಿಗಳು ಬಂದಿವೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ತಿಳಿಸಿದ್ದಾರೆ. ಬಸ್ ಬ್ರ್ಯಾಂಡ್ ನಿರ್ವಹಣೆಗಾಗಿ 'ದಕ್ಷಿಣ ಆಫ್ರಿಕಾ ನಾಯಕತ್ವ ಪ್ರಶಸ್ತಿ', ಮಾನವ ಸಂಪನ್ಮೂಲ ಉಪ ಕ್ರಮಕ್ಕಾಗಿ 'ಪಂಜಾಬ್ ನಾಯಕತ್ವ ಪ್ರಶಸ್ತಿ', ಅತ್ಯುತ್ತಮ ಗ್ರಾಹಕ ಸೇವಾ ಉಪಕ್ರಮಕ್ಕಾಗಿ 'ಸ್ಟಾರ್ ಆಫ್ ಎಕ್ಸಲೆನ್ಸ್' ಪ್ರಶಸ್ತಿ, ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಸತತ ವಿನೂತನ ಉಪಕ್ರಮಗಳಿಗಾಗಿ 'ರಾಷ್ಟ್ರೀಯ ಅತ್ಯುತ್ತಮ ಉದ್ಯೋಗ ಬ್ರ್ಯಾಂಡ್ ಪ್ರಶಸ್ತಿ', ಮಾನವ ಸಂಪನ್ಮೂಲ ಉಪಕ್ರಮ ಸಾಧನೆಗಾಗಿ 'ಗೌವರ್ನೆನ್ಸ್ ನೌ' 10ನೇ ಸಾರ್ವಜನಿಕ ಉದ್ದಿಮೆ ಪ್ರಶಸ್ತಿ ಹಾಗೂ ಅತ್ಯುತ್ತಮ ವಿನೂತನ ವಾಹನ ಸಮೂಹ ನಿರ್ವಹಣೆಗಾಗಿ 'ಈಶಾನ್ಯ ಭಾರತ ನಾಯಕತ್ವ ಪ್ರಶಸ್ತಿ'ಗೆ ಕೆಎಸ್‌ಆರ್‌ಟಿಸಿ ಆಯ್ಕೆಯಾಗಿದೆ ಎಂದು ತಿಳಿಸಿದ್ದಾರೆ.

ವಿಜಯ್ ಶಿವತಾರೆ ಪಕ್ಷೇತರ ಅಭ್ಯರ್ಥಿ

ಮುಂಬೈ (ಪಿಟಿಐ): ಲೋಕಸಭೆಗೆ ಬಾರಾಮತಿ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಶಿವಸೇನಾ ಮಾಜಿ ಶಾಸಕ ವಿಜಯ್ ಶಿವತಾರೆ ಬುಧವಾರ ತಿಳಿಸಿದರು.

ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅಹಂಕಾರದ ವ್ಯಕ್ತಿ ಎಂದು ಅವರು ವಾಗ್ದಾಳಿ ನಡೆಸಿದರು.

ಮೂರು ಬಾರಿ ಸಂಸದೆಯಾಗಿರುವ ಸುಪ್ರಿಯಾ ಸುಳೆ ಅವರು ಸದ್ಯ ಕ್ಷೇತ್ರ ಪ್ರತಿನಿಧಿಸುತ್ತಿದ್ದಾರೆ. ಕ್ಷೇತ್ರವು ಪವಾರ್ ಕುಟುಂಬದ ಭದ್ರಕೋಟೆಯಾಗಿದೆ. ಎನ್‌ಸಿಪಿಯಿಂದ (ಶರದ್‌ಚಂದ್ರ ಪವಾರ್ ಬಣ) ಸುಪ್ರಿಯಾ ಸುಳೆ ಕ್ಷೇತ್ರದ ಅಭ್ಯರ್ಥಿ ಎಂದು ಪಕ್ಷದ ಮುಖ್ಯಸ್ಥ ಶರದ್ ಪವಾರ್ ತಿಳಿಸಿದ್ದಾರೆ. ಎನ್‌ಸಿಪಿ ಮತ್ತೊಂದು ಬಣದಿಂದ ಅಜಿತ್ ಪವಾರ್ ಪತ್ನಿ ಸುನೇತ್ರ ಕಣಕ್ಕಿಳಿಯಲಿದ್ದಾರೆ ಎಂಬ ಅಂದಾಜಿದೆ.

ಬಾರ್ಪೇಟಾ ಲೋಕಸಭಾ ಕ್ಷೇತ್ರದಲ್ಲಿ ಅಭ್ಯರ್ಥಿ ಕಣಕ್ಕಿಳಿಸಿದ ಸಿಪಿಎಂ

ಅಸ್ಸಾಂ 'ಇಂಡಿಯಾ'ಗೆ ಆಘಾತ

ಪ್ರಜಾ ಮತ ಜನತಂತ್ರದ ಹಬ್ಬ
ಲೋಕಸಭಾ ಚುನಾವಣೆ - 2024

ಗುವಾಹಟಿ (ಪಿಟಿಐ): ಕಾಂಗ್ರೆಸ್ ಅಭ್ಯರ್ಥಿ ಕಣದಲ್ಲಿರುವ ಬಾರ್ಪೇಟಾ ಲೋಕಸಭಾ ಕ್ಷೇತ್ರಕ್ಕೆ ಸಿಪಿಎಂ ತನ್ನ ಶಾಸಕ ಮನೋರಂಜನ್ ತಾಲೂಕ್‌ದಾರ್ ಅವರನ್ನು ಅಭ್ಯರ್ಥಿಯಾಗಿ ಬುಧವಾರ ಘೋಷಿಸಿದೆ. ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷದ ಮೈತ್ರಿಕೂಟ 'ಇಂಡಿಯಾ'ಗೆ ಅಸ್ಸಾಂನಲ್ಲಿ ಆಘಾತ ನೀಡಿದೆ.

ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಿಪಿಎಂ ಅಸ್ಸಾಂ ರಾಜ್ಯ ಕಾರ್ಯದರ್ಶಿ ಸುಪ್ರಕಾಶ್ ತಾಲೂಕ್‌ದಾರ್, 'ಪಕ್ಷದ ಹಿರಿಯ ನಾಯಕ ಮತ್ತು ಶಾಸಕ ಮನೋರಂಜನ್ ತಾಲೂಕ್‌ದಾರ್ ಅವರನ್ನು ಬಾರ್ಪೇಟಾ ಕ್ಷೇತ್ರದಿಂದ ಕಣಕ್ಕಿಳಿಸಲು ನಿರ್ಧರಿಸಿದೆ' ಎಂದು ತಿಳಿಸಿದರು.

'ಜನರ ಹಿತದೃಷ್ಟಿಯಿಂದ ಬಾರ್ಪೇಟಾದಿಂದ ತನ್ನ ಅಭ್ಯರ್ಥಿಯನ್ನು ಹಿಂಪಡೆಯುವಂತೆ ಕಾಂಗ್ರೆಸ್‌ಗೆ ಮನವಿ ಮಾಡುತ್ತೇವೆ. ಬಿಜೆಪಿಯ ವಿರುದ್ಧ ಪ್ರಬಲ ಅಭ್ಯರ್ಥಿಗೆ ಮತ ನೀಡಿ, ಗೆಲ್ಲಿಸುವಂತೆ ನಾವು ಎಲ್ಲರಿಗೂ ಮನವಿ ಮಾಡುತ್ತೇವೆ' ಎಂದು ಅವರು ಹೇಳಿದರು.

ಭಾಷಾ ಮತ್ತು ಧಾರ್ಮಿಕವಾಗಿ ಸೂಕ್ಷ್ಮ ಕ್ಷೇತ್ರವೆನಿಸಿರುವ ಬಾರ್ಪೇಟಾ ಕ್ಷೇತ್ರವನ್ನು ಪ್ರಸ್ತುತ ಕಾಂಗ್ರೆಸ್ ಸಂಸದ ಅಬ್ದುಲ್ ಖಲೀಕ್ ಪ್ರತಿನಿಧಿಸುತ್ತಿದ್ದಾರೆ. ಆದರೆ, ಈ ಬಾರಿ ಅವರಿಗೆ ಟಿಕೆಟ್ ನಿರಾಕರಿಸಲಾಗಿದೆ. ದೀಪ್ ಬಯಾನ್ ಅವರು ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ. ಬಯಾನ್ ಅವರು ಅಸ್ಸಾಂ ಪ್ರದೇಶ ಕಾಂಗ್ರೆಸ್ ಸೇವಾದಳದ ಅಧ್ಯಕ್ಷರು ಮತ್ತು ಎಪಿಸಿಸಿಯ ಹಿರಿಯ ವಕ್ತಾರರಾಗಿದ್ದಾರೆ. ಶಾಸಕ ಮನೋರಂಜನ್ ತಾಲೂಕ್‌ದಾರ್ ಅವರು ಸೋರ್ಭೋಗ್ ವಿಧಾನಸಭಾ ಕ್ಷೇತ್ರ ಪ್ರತಿನಿಧಿಸುತ್ತಿದ್ದು, ಇದು ಬಾರ್ಪೇಟಾ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿದೆ.

14 ಲೋಕಸಭಾ ಸ್ಥಾನಗಳ ಪೈಕಿ 12 ಸ್ಥಾನಗಳಿಗೆ ಕಾಂಗ್ರೆಸ್ ಅಭ್ಯರ್ಥಿಗಳನ್ನು ಘೋಷಿಸಿದೆ. ಮೈತ್ರಿಕೂಟದ ಪಾಲುದಾರ ಅಸ್ಸಾಂ ರಾಷ್ಟ್ರೀಯ ಪರಿಷತ್‌ಗೆ (ಎಜೆಪಿ) ದಿಬ್ರುಗಢ ಸ್ಥಾನವನ್ನು ನೀಡಿದೆ. ಆದರೆ, ಲಖಿಂಪುರ ಕ್ಷೇತ್ರದ ಬಗ್ಗೆ ಇನ್ನೂ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ.

ಅಸ್ಸಾಂ ಸಂಯುಕ್ತ ವಿರೋಧಿ ವೇದಿಕೆಯ (ಯುಒಎಫ್‌ಎ) ಭಾಗವಾಗಿರುವ ಸಿಪಿಎಂ, 'ಇಂಡಿಯಾ'ದಲ್ಲಿರುವ 16 ಪಕ್ಷಗಳ ಪೈಕಿ ಅದೂ ಒಂದೆನಿಸಿದೆ.

ಯುಒಎಫ್‌ಎ ಮತ್ತೊಂದು ಸದಸ್ಯ ಪಕ್ಷ ಆಮ್ ಆದ್ಮಿ ಪಕ್ಷ ಈಗಾಗಲೇ ಅಸ್ಸಾಂನಲ್ಲಿ ಮೂರು ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದೆ. ಸಿಪಿಐ ಕೂಡ ರಾಜ್ಯದ ಕೆಲವು ಸ್ಥಾನಗಳಲ್ಲಿ ಸ್ಪರ್ಧಿಸುವ ಬಗ್ಗೆ ಯೋಚಿಸುತ್ತಿರುವುದಾಗಿ ಹೇಳಿದೆ.

3 ಕ್ಷೇತ್ರಗಳಲ್ಲಿ ಜೆಡಿಎಸ್ ಸ್ಪರ್ಧೆ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಹಾಸನ: 'ರಾಜ್ಯದ ಹಾಸನ, ಮಂಡ್ಯ, ಕೋಲಾರ ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಲಿದ್ದೇವೆ. ಇನ್ನೂ 2–3 ಕ್ಷೇತ್ರ ಕೇಳಿದ್ದರೆ ಕೊಡುತ್ತಿದ್ದರು' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಮಾ.21 ರಂದು ಶಸ್ತ್ರಚಿಕಿತ್ಸೆಗೆ ಒಳಗಾಗುತ್ತಿದ್ದೇನೆ. ನಾನು ಈ ಬಾರಿ ಚುನಾವಣೆಗೆ ನಿಲ್ಲುವುದಿಲ್ಲ. ಒಂದೇ ಕುಟುಂಬದ ಅನೇಕರು ರಾಜಕೀಯದಲ್ಲಿದ್ದಾರೆ. ಆದರೆ ದೇವೇಗೌಡರ ಕುಟುಂಬದ ಬಗ್ಗೆ ಮಾತ್ರ ಚರ್ಚೆಯಾಗುತ್ತಿದೆ' ಎಂದರು.

'ಡಾ.ಸಿ.ಎನ್. ಮಂಜುನಾಥ್ ಅವರನ್ನು ಅಭ್ಯರ್ಥಿ ಮಾಡಲು ತೀರ್ಮಾನಿಸಿರಲಿಲ್ಲ. 17 ವರ್ಷ ಅವರ ಸೇವೆ ನೋಡಿ, ಅವರೇ ಅಭ್ಯರ್ಥಿಯಾಗಬೇಕು ಎಂದು ಮಾಧ್ಯಮದವರೇ ಶುರು ಮಾಡಿದರು. ಬಿಜೆಪಿ ಹೈಕಮಾಂಡ್ ಕೂಡ ನಿಮ್ಮ ಭಾವನವರನ್ನು ಒಪ್ಪಿಸಬೇಕು ಎಂದು ಮನವಿ ಮಾಡಿತು. ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಮಂಜುನಾಥ್ ಸ್ಪರ್ಧಿಸುತ್ತಾರೆ' ಎಂದರು.

'ಕನಕಪುರದಿಂದ ಹಾಸನಕ್ಕೆ ಬಂದು ಜೆಡಿಎಸ್ ಸೋಲಿಸುತ್ತೇವೆ ಎನ್ನುತ್ತಾರೆ. ಹಾಸನದಲ್ಲಿ ಕೂಗಿದರೆ, ಹೊಳೆನರಸೀಪುರಕ್ಕೆ ಕೇಳಬೇಕು ಎಂದೂ ಹೇಳುತ್ತಾರೆ. ರಾಜಕೀಯದಲ್ಲಿ ಸೋಲು, ಗೆಲುವು ಸಹಜ. ಈಗ ಇಲ್ಲಿನ ಕೂಗು ಕನಕಪುರದವರೆಗೂ ಕೇಳಬೇಕು' ಎನ್ನುವ ಮೂಲಕ, ಡಿ.ಕೆ. ಶಿವಕುಮಾರ್ ಮತ್ತು ಡಿ.ಕೆ.ಸುರೇಶ್ ಸಹೋದರರನ್ನು ಅವರು ಪರೋಕ್ಷವಾಗಿ ಕುಟುಕಿದರು.

'ಸಂಸದ ಪ್ರಜ್ವಲ್ ರೇವಣ್ಣ ಅವರೇ ಹಾಸನ ಅಭ್ಯರ್ಥಿ. ಮಂಡ್ಯದಲ್ಲಿ ನನ್ನ ಮಗನಿಗೆ ಆದಂತೆ, ಹಾಸನದಲ್ಲಿ ನನ್ನ ಸಹೋದರನ ಮಗನಿಗೆ ಆಗಬಾರದು. ಪ್ರಜ್ವಲ್ ರೇವಣ್ಣನ ಮಗ ಅಲ್ಲ, ನನ್ನ ಮಗ. ದಯವಿಟ್ಟು ಅವನನ್ನು ಉಳಿಸಿಕೊಳ್ಳಿ' ಎಂದು ಮನವಿ ಮಾಡಿದರು.

'ಎಚ್‌ಡಿಕೆ, ಯೋಗೇಶ್ವರ್‌ಗೆ ತಾಕತ್ತು ಇಲ್ಲವೇ?'

ರಾಮನಗರ: 'ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಮೈತ್ರಿಕೂಟದ ಅಭ್ಯರ್ಥಿಯಾಗಿ ಪಾಪ ಅಮಾಯಕರಾದ ಡಾ. ಸಿ.ಎನ್. ಮಂಜುನಾಥ್ ಅವರನ್ನು ಕಣಕ್ಕೆ ಇಳಿಸಿ, ಹರಕೆಯ ಕುರಿ ಮಾಡುತ್ತಿದ್ದಾರೆ. ಎರಡು ಬಾರಿ ಮುಖ್ಯಮಂತ್ರಿಯಾಗಿದ್ದ ಎಚ್.ಡಿ. ಕುಮಾರಸ್ವಾಮಿ, ಸಿ.ಪಿ. ಯೋಗೇಶ್ವರ್ ಇರಲಿಲ್ಲವೇ? ಬಿಜೆಪಿ ಮತ್ತು ಜೆಡಿಎಸ್‌ನಲ್ಲಿರುವ ಯಾರಿಗೂ ಡಿ.ಕೆ. ಸುರೇಶ್ ವಿರುದ್ಧ ಸ್ಪರ್ಧಿಸಲು ತಾಕತ್ತು ಮತ್ತು ಗಂಡಸುತನ ಇಲ್ಲವೇ' ಎಂದು ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಪ್ರಶ್ನಿಸಿದ್ದಾರೆ.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜಕಾರಣಕ್ಕೆ ಡಾ.ಮಂಜುನಾಥ್ ಹೊಸಬರು. ಕುಮಾರಸ್ವಾಮಿ, ಯೋಗೇಶ್ವರ್, ಹಿಂದಿನ ಉಸ್ತುವಾರಿ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು ಸ್ಪರ್ಧಿಸಬಹುದಿತ್ತಲ್ಲ. ಯಾರೂ ರಾಜಕಾರಣಿ ಸಿಗಲಿಲ್ಲವೇ? ವೈದ್ಯರಾಗಿ ಜನಸೇವೆ ಮಾಡಿಕೊಂಡಿದ್ದ ಡಾ. ಮಂಜುನಾಥ್ ಅವರನ್ನು ಕರೆ ತಂದಿದ್ದಾರೆ' ಎಂದು ತರಾಟೆಗೆ ತೆಗೆದುಕೊಂಡರು. 'ತಮ್ಮದೇ ಸ್ವಂತ ಪಕ್ಷ ಇರುವಾಗ ಅದನ್ನು ಬಿಟ್ಟು ಗೌಡರು ತಮ್ಮ ಮನೆಯ ಅಳಿಯನನ್ನು ಬಿಜೆಪಿ ಚಿಹ್ನೆಯಡಿ ಚುನಾವಣೆ ಕಣಕ್ಕೆ ಇಳಿಸಿದ್ದಾರೆ. ಜೆಡಿಎಸ್ ಹೆಸರಿನಲ್ಲಿ ರಾಜಕಾರಣ ಮಾಡುವ ಶಕ್ತಿ ಅವರಿಗಿಲ್ಲ ಎಂದು ಇದರರ್ಥವೇ?' ಎಂದು ಕುಟುಕಿದರು.

'ಜೆಡಿಎಸ್ ಪಕ್ಷದ ಜಾತ್ಯತೀತ ತತ್ವ, ಸಿದ್ಧಾಂತ ಗಾಳಿಗೆ ತೂರಿರುವ ಕುಮಾರಸ್ವಾಮಿ ಅವರು ಕೇಸರಿ ಶಾಲು ಹಾಕಿಕೊಂಡು ಬಿಜೆಪಿ ವಕ್ತಾರರಂತೆ ವರ್ತಿಸುತ್ತಿದ್ದಾರೆ. ಇದು ಜೆಡಿಎಸ್ ಅಸ್ತಿತ್ವ ಕಳೆದುಕೊಂಡಿರುವುದಕ್ಕೆ ಸಾಕ್ಷಿ. ಇದರಿಂದ ಬೇಸತ್ತಿರುವ ಜೆಡಿಎಸ್ ಶಾಸಕರು ಕಾಂಗ್ರೆಸ್ ಸೇರಲು ಮುಂದಾಗಿದ್ದಾರೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಹೊಸಮುಖಗಳಿಗೆ ಹೊಣೆ

ಒಂದನೇ ಪುಟದಿಂದ

ಬೀದರ್ ಕ್ಷೇತ್ರದಲ್ಲಿ ಸ್ಥಳೀಯ ನಾಯಕರ ವಿರೋಧದ ನಡುವೆಯೂ ಕೇಂದ್ರ ರಾಸಾಯನಿಕ, ರಸಗೊಬ್ಬರ ಮತ್ತು ನವೀಕರಿಸಬಹುದಾದ ಇಂಧನ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಅವರ ಮೇಲೆ ವರಿಷ್ಠರು ಮತ್ತೊಮ್ಮೆ ಭರವಸೆ ಇಟ್ಟಿದ್ದಾರೆ. ಖೂಬಾ ಅವರಿಗೆ ಯಾವುದೇ ಕಾರಣಕ್ಕೂ ಟಿಕೆಟ್ ಕೊಡಬಾರದು ಎಂದು ಸ್ವಪಕ್ಷೀಯ ಶಾಸಕರಾದ ಪ್ರಭು ಚವ್ಹಾಣ್, ಶರಣು ಸಲಗರ, ಮಾಜಿ ಶಾಸಕ ಸುಭಾಷ ಕಲ್ಲೂರ ಪಟ್ಟು ಹಿಡಿದಿದ್ದರು. ಪ್ರಭು ಚವ್ಹಾಣ್ ಅವರು ಪಕ್ಷದ ಸಮಾರಂಭದಲ್ಲೇ ಬಹಿರಂಗವಾಗಿ ವಿರೋಧ ವ್ಯಕ್ತಪಡಿಸಿದ್ದರು.

ಕುಟುಂಬ ರಾಜಕಾರಣಕ್ಕೆ ಮಣೆ: ಶಿವಮೊಗ್ಗ ಕ್ಷೇತ್ರದಲ್ಲಿ ಮೂರು ಸಲ ಗೆದ್ದಿರುವ ಬಿ.ವೈ.ರಾಘವೇಂದ್ರ ಅವರು ಕೇಂದ್ರ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ. ರಾಘವೇಂದ್ರ ಸಹೋದರ ಬಿ.ವೈ. ವಿಜಯೇಂದ್ರ ಶಿಕಾರಿಪುರದ ಶಾಸಕ ಹಾಗೂ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ. ಚಿಕ್ಕೋಡಿಯಲ್ಲಿ ಹಾಲಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಅವರನ್ನು ಮತ್ತೆ ಕಣಕ್ಕೆ ಇಳಿಸಲಾಗಿದೆ. ಅವರ ಪತ್ನಿ ಶಶಿಕಲಾ ಜೊಲ್ಲೆ ಅವರು ನಿಪ್ಪಾಣಿಯ ಶಾಸಕಿ. ದಾವಣಗೆರೆಯಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ ಬದಲು ಅವರ ಪತ್ನಿ ಗಾಯತ್ರಿ ಸಿದ್ದೇಶ್ವರ ಅವರನ್ನು ಹುರಿಯಾಳುವನ್ನಾಗಿ ಆಯ್ಕೆ ಮಾಡಲಾಗಿದೆ. ಕುಟುಂಬ ರಾಜಕಾರಣದ ವಿರುದ್ಧ ನಿರಂತರ ವಾಗ್ದಾಳಿ ನಡೆಸುವ ಬಿಜೆಪಿ ವರಿಷ್ಠರು ಇಲ್ಲಿ ಕುಟುಂಬ ರಾಜಕಾರಣಕ್ಕೆ ಮಣೆ ಹಾಕಿದ್ದಾರೆ.

ದಾವಣಗೆರೆಯಲ್ಲಿ ತೋಟಗಾರಿಕಾ ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಅವರ ಪತ್ನಿ ಪ್ರಭಾ ಮಲ್ಲಿಕಾರ್ಜುನ ಅವರು 'ಕೈ' ಅಭ್ಯರ್ಥಿಯಾಗುವ ಸಾಧ್ಯತೆ ಇದೆ. ಹೀಗಾಗಿ, ಬಿಜೆಪಿಯಿಂದ ಗಾಯತ್ರಿ ಅವರಿಗೆ ಅವಕಾಶ ನೀಡಲಾಗಿದೆ. ಸಿದ್ದೇಶ್ವರ ಕುಟುಂಬಕ್ಕೆ ಟಿಕೆಟ್ ನೀಡುವುದಕ್ಕೆ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಸೇರಿ ಹಲವು ಮುಖಂಡರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಅವರ 'ಬಂಡಾಯ'ದ ಬೆದರಿಕೆಗೆ ವರಿಷ್ಠರು ಕಿಮ್ಮತ್ತು ನೀಡಿಲ್ಲ.

ಕೊಪ್ಪಳ ಕ್ಷೇತ್ರದಿಂದ ಸತತ ಎರಡು ಬಾರಿ ಬಿಜೆಪಿಯಿಂದ ಸಂಸದರಾಗಿದ್ದ ಸಂಗಣ್ಣ ಕರಡಿ ಅವರಿಗೆ ಈ ಬಾರಿ ಟಿಕೆಟ್ ಲಭಿಸಿಲ್ಲ. ಅವರ ಬದಲು ವೃತ್ತಿಯಲ್ಲಿ ವೈದ್ಯರಾಗಿರುವ ಬಸವರಾಜ ಕ್ಯಾವಟರ್ ಅವರಿಗೆ ಟಿಕೆಟ್ ನೀಡಲಾಗಿದೆ.

2018ರ ವಿಧಾನಸಭಾ ಚುನಾವಣೆಯಲ್ಲಿ ಕರಡಿ ಸಂಗಣ್ಣ ಅವರ ಪುತ್ರ ಅಮರೇಶ ಕರಡಿ ಅವರಿಗೆ ಕೊಪ್ಪಳದಲ್ಲಿ ಟಿಕೆಟ್ ನೀಡಲಾಗಿತ್ತು. 2023ರ ವಿಧಾನಸಭಾ ಚುನಾವಣೆಯಲ್ಲಿ ಕುಟುಂಬ ಸದಸ್ಯರಿಗೆ ಟಿಕೆಟ್ ನೀಡಬೇಕು ಎಂದು ಕರಡಿ ಪಟ್ಟು ಹಿಡಿದಿದ್ದರು. ಅವರು ಜೆಡಿಎಸ್‌ಗೆ ಸೇರಲಿದ್ದಾರೆ ಎಂಬ ಸುದ್ದಿಗಳು ಹರಡಿದ್ದರು. ಅವರ ಒತ್ತಡಕ್ಕೆ ಮಣಿದು ಸೊಸೆ ಮಂಜುಳಾ ಕರಡಿ ಅವರನ್ನು ಹುರಿಯಾಳುವನ್ನಾಗಿ ಮಾಡಲಾಗಿತ್ತು. ಅವರನ್ನು ಗೆಲ್ಲಿಸಿಕೊಂಡು ಬರುವಲ್ಲಿ ಕರಡಿ ವಿಫಲರಾಗಿದ್ದರು.

ಬಳ್ಳಾರಿ(ಎಸ್‌ಟಿ ಮೀಸಲು) ಕ್ಷೇತ್ರದಿಂದ ನಿರೀಕ್ಷೆಯಂತೆ ಮಾಜಿ ಸಚಿವ ಬಿ. ಶ್ರೀರಾಮುಲು ಅವರಿಗೆ ಟಿಕೆಟ್ ನೀಡಲಾಗಿದೆ. 2014ರಲ್ಲಿ ಒಮ್ಮೆ ಲೋಕಸಭೆ ಪ್ರವೇಶಿಸಿದ್ದ ಶ್ರೀರಾಮುಲು ಈ ಬಾರಿ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಬಿ.ನಾಗೇಂದ್ರ ವಿರುದ್ಧ ಅವರು ಸೋತಿದ್ದರು.

ಹಿರಿತನಕ್ಕೆ ಮನ್ನಣೆ: ದಲಿತ ಸಮುದಾಯದ ಪ್ರಭಾವಿ ನಾಯಕ ರಮೇಶ ಜಿಗಜಿಣಗಿ ಅವರನ್ನು ವಿಜಯಪುರ ಕ್ಷೇತ್ರದಿಂದ ಮತ್ತೆ ಕಣಕ್ಕೆ ಇಳಿಸಲಾಗಿದೆ. 1998ರಲ್ಲಿ ಚಿಕ್ಕೋಡಿ ಲೋಕಸಭಾ ಕ್ಷೇತ್ರದಲ್ಲಿ ಗೆದ್ದಿದ್ದ ಅವರು ಬಳಿಕ ವಿಜಯಪುರ ಕ್ಷೇತ್ರಕ್ಕೆ ಸ್ಥಳಾಂತರಗೊಂಡಿದ್ದರು. ಬಳಿಕ ಅವರು ಸೋತಿದ್ದೇ ಇಲ್ಲ. ಅದೇ ರೀತಿ, ಬಾಗಲಕೋಟೆ ಕ್ಷೇತ್ರದಲ್ಲಿ 2004ರಿಂದ ಗೆಲ್ಲುತ್ತಾ ಬಂದಿರುವ ಸಂಸದ ಪಿ.ಸಿ. ಗದ್ದಿಗೌಡರ ಅವರ ಮೇಲೆ ವರಿಷ್ಠರು ಮತ್ತೆ ವಿಶ್ವಾಸ ಇರಿಸಿದ್ದಾರೆ.

2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಉನ್ನತ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕಲಬುರಗಿ ಕ್ಷೇತ್ರದಲ್ಲಿ ಬಿಜೆಪಿಯ ಡಾ. ಉಮೇಶ ಜಾಧವ ಸೋಲಿಸಿದ್ದರು. ಈ ಮೂಲಕ ರಾಷ್ಟ್ರದ ಗಮನ ಸೆಳೆದಿದ್ದರು. ನಿರೀಕ್ಷೆಯಂತೆ ಮತ್ತೆ ಅವರಿಗೆ ಟಿಕೆಟ್ ಸಿಕ್ಕಿದೆ.

ಪ್ರತಾಪ ಬದಲು ಯದುವೀರ್‌ಗೆ 'ಅದೃಷ್ಟ'

2014ರಲ್ಲಿ 'ಅಚ್ಚರಿಯ ಅಭ್ಯರ್ಥಿ'ಯಾಗಿ ರಾಜಕಾರಣಕ್ಕೆ ಬಂದು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಸತತ ಎರಡು ಬಾರಿಗೆ ಸಂಸದರಾಗಿದ್ದ ಪ್ರತಾಪ ಸಿಂಹ ಅವರಿಗೆ 'ನಿರೀಕ್ಷೆ'ಯಂತೆಯೇ ಟಿಕೆಟ್ ನಿರಾಕರಿಸಲಾಗಿದೆ. ಅವರ ಬದಲು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಹುರಿಯಾಳುವನ್ನಾಗಿ ಮಾಡಲಾಗಿದೆ. ಯದುವೀರ್ ಅವರಿಗೆ ರಾಜಕೀಯ ಕ್ಷೇತ್ರ ಹೊಸದು. 32 ವರ್ಷ ವಯಸ್ಸಿನ ಅವರು ಇದೇ ಮೊದಲ ಬಾರಿಗೆ ಚುನಾವಣೆ ಎದುರಿಸುತ್ತಿದ್ದಾರೆ.

ಸಂಸತ್ತಿನಲ್ಲಿ ಭದ್ರತಾ ಲೋಪ ಪ್ರಕರಣದ ಆರೋಪಿ ಮೈಸೂರಿನ ಡಿ.ಮನೋರಂಜನ್ ಅವರಿಗೆ ಪಾಸ್‌ಗೆ ಶಿಫಾರಸು ಮಾಡಿದ್ದ ಪ್ರಕರಣ ದೇಶದಾದ್ಯಂತ ದೊಡ್ಡ ಸುದ್ದಿಯಾಗಿತ್ತು. ಕೇಂದ್ರ ಸರ್ಕಾರ ಮತ್ತು ಪಕ್ಷಕ್ಕೆ ಮುಜುಗರವನ್ನೂ ಉಂಟು ಮಾಡಿತ್ತು. ಹಾಲಿ ಸಂಸದರ ಕಾರ್ಯವೈಖರಿ ಬಗ್ಗೆ ಸ್ಥಳೀಯ ನಾಯಕರಲ್ಲೇ ತೀವ್ರ ವಿರೋಧ ಇತ್ತು. ಮೈಸೂರು, ಕೊಡಗಿನಲ್ಲಿರುವ ಪಕ್ಷದ ನಾಯಕರೊಂದಿಗೆ ಸಮನ್ವಯ ಸಾಧಿಸುವಲ್ಲಿ ವಿಫಲವಾಗಿದ್ದರು.

2023ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ವಿ.ಸೋಮಣ್ಣ ಅವರು ಸ್ಪರ್ಧಿಸಿದ್ದ ವರುಣ ಕ್ಷೇತ್ರ ಹೊರತುಪಡಿಸಿದರೆ ಇತರ ಕ್ಷೇತ್ರಗಳಲ್ಲಿ ಪ್ರಚಾರಕ್ಕೆ ಅಷ್ಟೇನೂ ಒತ್ತು ನೀಡಿರಲಿಲ್ಲ. ಇದು, ಪರಾಜಿತ ಅಭ್ಯರ್ಥಿಗಳ ಅಸಮಾಧಾನಕ್ಕೆ ಕಾರಣವಾಗಿತ್ತು. ಪಕ್ಷದ ನಾಯಕರ ವಿರುದ್ಧ ನೀಡಿದ ಕೆಲವೊಂದು ಲಘು ಹೇಳಿಕೆಗಳು ಕೂಡ ಅವರಿಗೆ ಮುಳುವಾಯಿತು. ಟಿಕೆಟ್ ಕೈತಪ್ಪುವ ಸೂಚನೆ ಲಭಿಸುತ್ತಿದ್ದಂತೆ ಪ್ರತಾಪ್‌ಸಿಂಹ ಅವರು ಯದುವೀರ್ ವಿರುದ್ಧ ವ್ಯಂಗ್ಯದ ಮಾತುಗಳನ್ನು ಆಡಿದ್ದರು. ಬಹಿರಂಗ ಹೇಳಿಕೆಗಳನ್ನು ನೀಡದಂತೆ ರಾಷ್ಟ್ರೀಯ ನಾಯಕರು ಎಚ್ಚರಿಕೆ ನೀಡಿದ್ದರು. ಬಳಿಕ ಅವರು ತಣ್ಣಗಾಗಿದ್ದರು.

ಡಿ.ಕೆ. ಸುರೇಶ್ ವಿರುದ್ಧ ಸಿ.ಎನ್.ಮಂಜುನಾಥ್

ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಡಿ.ಕೆ. ಸುರೇಶ್ ಅವರನ್ನು ಕಟ್ಟಿ ಹಾಕುವ ಉದ್ದೇಶದಿಂದ ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥ್ ಅವರನ್ನು ಕಣಕ್ಕೆ ಇಳಿಸಲಾಗಿದೆ.

ಮೂರು ಬಾರಿಯ ಸಂಸದರಾಗಿರುವ ಸುರೇಶ್ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಹೋದರ. ಕಳೆದ ಚುನಾವಣೆಯಲ್ಲಿ ಗ್ರಾಮಾಂತರದಲ್ಲಷ್ಟೇ ಕಾಂಗ್ರೆಸ್ ಗೆದ್ದಿತ್ತು. ಈ ಸಲ ಅವರನ್ನು ಶತಾಯಗತಾಯವಾಗಿ ಸೋಲಿಸಲೇಬೇಕು ಎಂದು ಪಣ ತೊಟ್ಟಿರುವ ಬಿಜೆಪಿ ವರಿಷ್ಠರು, ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರ ಅಳಿಯ ಮಂಜುನಾಥ್ ಅವರಿಗೆ ಮಣೆ ಹಾಕಿದ್ದಾರೆ. ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆಯ ನಿವೃತ್ತ ನಿರ್ದೇಶಕರಾದ ಡಾ. ಮಂಜುನಾಥ್, ಇದರೊಂದಿಗೆ ರಾಜಕೀಯ ಇನ್ನಿಂಗ್ಸ್ ಆರಂಭಿಸಿದ್ದಾರೆ. ಅವರು ಬಿಜೆಪಿಗೆ ಇನ್ನಷ್ಟೇ ಸೇರಬೇಕಿದೆ.

'2023ರ ವಿಧಾನಸಭಾ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಕ್ಷೇತ್ರದಲ್ಲಿ ಬಿಜೆಪಿ–ಜೆಡಿಎಸ್ ಪಕ್ಷಗಳು ಕಾಂಗ್ರೆಸ್‌ಗಿಂತ 1.5 ಲಕ್ಷ ಹೆಚ್ಚು ಮತಗಳನ್ನು ಪಡೆದಿದ್ದವು. ಪ್ರಬಲ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದರೆ ಸುರೇಶ್ ಅವರನ್ನು ಕಟ್ಟಿ ಹಾಕಬಹುದು' ಎಂಬುದು ಬಿಜೆಪಿ ವರಿಷ್ಠರ ಲೆಕ್ಕಾಚಾರ. ಜೆಡಿಎಸ್‌ನಿಂದ ಸ್ಪರ್ಧಿಸಲು ಮಂಜುನಾಥ್ ಒಪ್ಪಿರಲಿಲ್ಲ.

ರಾಜ್ಯಕ್ಕಿಲ್ಲ ಕೇಂದ್ರ ಸಚಿವರು

ಬೆಂಗಳೂರು ಕೇಂದ್ರ ಅಥವಾ ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ವಿದೇಶಾಂಗ ಸಚಿವ ಜೈಶಂಕರ್ ಅಥವಾ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸ್ಪರ್ಧಿಸಲಿದ್ದಾರೆ ಎಂದು ಸುದ್ದಿಗಳು ಹಬ್ಬಿದ್ದವು. ಈ ವದಂತಿಗೆ ತೆರೆ ಬಿದ್ದಿದೆ. ಬೆಂಗಳೂರು ಕೇಂದ್ರದಿಂದ ಹಾಲಿ ಸಂಸದ ಪಿ.ಸಿ.ಮೋಹನ್ ಹಾಗೂ ಬೆಂಗಳೂರು ದಕ್ಷಿಣದಿಂದ ತೇಜಸ್ವಿ ಸೂರ್ಯ ಅವರ ಹೆಸರನ್ನು ಅಖೈರುಗೊಳಿಸಲಾಗಿದೆ. ಕೇಂದ್ರ ಸಚಿವರು ರಾಜ್ಯದಿಂದ ಕಣಕ್ಕಿಳಿದರೆ ಕಾಂಗ್ರೆಸ್ ನಾಯಕರು ಅದನ್ನೇ ಪ್ರಮುಖ ಅಸ್ತ್ರವನ್ನಾಗಿ ಮಾಡಿಕೊಳ್ಳಬಹುದು ಎಂಬ ಆತಂಕ ಈ ತೀರ್ಮಾನಕ್ಕೆ ಕಾರಣ ಎನ್ನಲಾಗಿದೆ.

ಸೋಮಣ್ಣ ಮೇಲೆ ವರಿಷ್ಠರ ವಿಶ್ವಾಸ

ಲಿಂಗಾಯತ ಸಮುದಾಯದ ಪ್ರಭಾವಿ ನಾಯಕರೂ ಆಗಿರುವ ಮಾಜಿ ಸಚಿವ ವಿ.ಸೋಮಣ್ಣ ಅವರನ್ನು ತುಮಕೂರು ಕ್ಷೇತ್ರದ ಅಭ್ಯರ್ಥಿಯನ್ನಾಗಿ ಮಾಡಲಾಗಿದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಚಾಮರಾಜನಗರ ಹಾಗೂ ವರುಣಾ ಕ್ಷೇತ್ರದಿಂದ ಸೋಮಣ್ಣ ಅವರನ್ನು ಕಣಕ್ಕಿಳಿಸಲಾಗಿತ್ತು. ವರಿಷ್ಠರ ಸೂಚನೆಯ ಮೇರೆಗೆ ವರುಣಾದಲ್ಲಿ ಸಿದ್ದರಾಮಯ್ಯ ವಿರುದ್ಧ ಸೋಮಣ್ಣ ಸ್ಪರ್ಧಿಸಿದ್ದರು. ಆದರೆ, ಎರಡೂ ಕ್ಷೇತ್ರದಲ್ಲಿ ಸೋತಿದ್ದರು. ಸ್ವಪಕ್ಷೀಯರ ಷಡ್ಯಂತ್ರದಿಂದ ಚುನಾವಣೆಯಲ್ಲಿ ಸೋತೆ ಎಂದು ವರಿಷ್ಠರ ಬಳಿ ನೋವು ತೋಡಿಕೊಂಡರು. ಮುಂದಿನ ದಿನಗಳಲ್ಲಿ ಸ್ಥಾನಮಾನ ನೀಡಲಾಗುವುದು ಎಂದು ವರಿಷ್ಠರು ಭರವಸೆ ನೀಡಿದ್ದರು. ಅತೃಪ್ತ ಸೋಮಣ್ಣ ಅವರನ್ನು ಪಕ್ಷಕ್ಕೆ ಸೆಳೆಯಲು ಕಾಂಗ್ರೆಸ್ ನಾಯಕರು ಪ್ರಯತ್ನ ನಡೆಸಿದ್ದರು.

'ಮೂವರು ಬಿಜೆಪಿ ಸಂಸದರು ಸಂಪರ್ಕದಲ್ಲಿ'

ಕಲಬುರಗಿ: 'ಕಾಂಗ್ರೆಸ್ ಸೇರ್ಪಡೆಯಾಗಲು ಮೂವರು ಬಿಜೆಪಿ ಸಂಸದರು ಬಯಸಿದ್ದು, ನಮ್ಮೊಂದಿಗೆ ಸಂಪರ್ಕದಲ್ಲಿದ್ದಾರೆ' ಎಂದು ಉಪಮುಖ್ಯಮಂತ್ರಿಯೂ ಆಗಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

'ಸದ್ಯಕ್ಕೆ ಅವರ ಹೆಸರನ್ನು ಬಹಿರಂಗಪಡಿಸಲಾಗದು. ಇನ್ನೂ ಹಲವು ಮುಖಂಡರು ಪಕ್ಷಕ್ಕೆ ಸೇರ್ಪಡೆಯಾಗಲಿದ್ದಾರೆ' ಎಂದು ತಿಳಿಸಿದರು. ಬಿಜೆಪಿಯ ಡಿ.ವಿ.ಸದಾನಂದಗೌಡ ಅವರು ಬೆಂಗಳೂರಿನ ಕ್ಷೇತ್ರವೊಂದರಿಂದ ಕಾಂಗ್ರೆಸ್ ಟಿಕೆಟ್ ಮೂಲಕ ಸ್ಪರ್ಧಿಸುವ ಸಾಧ್ಯತೆಗಳ ಕುರಿತು ಪ್ರತಿಕ್ರಿಯಿಸಲು ನಿರಾಕರಿಸಿದರು.

ಜಯದೇವ ಆಸ್ಪತ್ರೆಯ ನಿವೃತ್ತ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರು ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಸ್ಪರ್ಧಿಸುವ ಕುರಿತು ಪ್ರತಿಕ್ರಿಯಿಸಿದ ಅವರು, 'ಎಚ್.ಡಿ.ದೇವೇಗೌಡ, ಕುಮಾರಸ್ವಾಮಿ ಹಾಗೂ ಅವರ ಮನೆಯವರು, ಅವರ ಮಗನ ಸ್ಪರ್ಧೆಯನ್ನೂ ನೋಡಿದ್ದೇವೆ. ಡಿ.ಕೆ. ಸುರೇಶ್ ಬರೀ ಸಂಸದ ಅಲ್ಲ. ಪಂಚಾಯಿತಿ ಸದಸ್ಯರಾಗಿಯೂ ಕೆಲಸ ಮಾಡಿದ್ದಾರೆ. ಜನರೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಂಡಿದ್ದಾರೆ. ಅವರಿಗೆ ಚುನಾವಣೆ ಎದುರಿಸುವುದು ಗೊತ್ತಿದೆ' ಎಂದು ಹೇಳಿದರು.

ಜಮ್ಮು–ಕಾಶ್ಮೀರ: ಚುನಾವಣಾ ಆಯೋಗದತ್ತ ಎಲ್ಲರ ಚಿತ್ತ

ಪ್ರಜಾವಾಣಿ ವಾರ್ತೆ



ಶ್ರೀನಗರ: ಚುನಾವಣಾ ಆಯೋಗದ ಅಧಿಕಾರಿಗಳು ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿ, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಜೊತೆಗೆ ಎರಡು ದಿನಗಳ ಕಾಲ ಚರ್ಚೆ ನಡೆಸಿ ತೆರಳಿದ್ದು, ಇದೀಗ ಎಲ್ಲರ ಚಿತ್ತ ಆಯೋಗದತ್ತ ಹರಿದಿದೆ.

ಅಧಿಕಾರಿಗಳ ಜೊತೆಗಿನ ಚರ್ಚೆಯ ವೇಳೆ ಬಹುತೇಕ ರಾಜಕೀಯ ಪಕ್ಷಗಳ ನಾಯಕರು, ಲೋಕಸಭೆ ಮತ್ತು ವಿಧಾನ ಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸುವಂತೆ ಒತ್ತಾಯಿಸಿದ್ದರು ಎಂದು ಮೂಲಗಳು ಹೇಳಿವೆ.

ಮುಂಬರುವ ಸಾರ್ವತ್ರಿಕ ಚುನಾವಣೆಯ ಕುರಿತು ಚರ್ಚಿಸಲು ಮುಖ್ಯ ಚುನಾವಣಾಧಿಕಾರಿ ರಾಜೀವ್ ಕುಮಾರ್ ಮತ್ತು ಇತರ ಅಧಿಕಾರಿಗಳು ಜಮ್ಮು ಮತ್ತು ಕಾಶ್ಮೀರಕ್ಕೆ ಸೋಮವಾರ ತಲುಪಿದ್ದರು.

ನ್ಯಾಶನಲ್ ಕಾನ್ಫರೆನ್ಸ್, ಪಿಡಿಪಿ, ಬಿಜೆಪಿ , ಕಾಂಗ್ರೆಸ್, ಸಿಪಿಎಂ ಮತ್ತು ಎಎಪಿ ಪ್ರತಿನಿಧಿಗಳ ಜೊತೆಗೆ ಅವರು ಚರ್ಚೆ ನಡೆಸಿದ್ದರು.

ನಿತಿನ್ ಗಡ್ಕರಿ, ಮನೋಹರ್ ಲಾಲ್ ಖಟ್ಟರ್‌ಗೆ ಕಮಲ ಟಿಕೆಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಗೆ ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಬಿಜೆಪಿ ಬುಧವಾರ ಪ್ರಕಟಿಸಿದೆ. ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ, ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್, ಕೇಂದ್ರ ವಾರ್ತಾ ಸಚಿವ ಅನುರಾಗ್ ಠಾಕೂರ್ ಹಾಗೂ ಹರಿಯಾಣದ ಮಾಜಿ ಮುಖ್ಯಮಂತ್ರಿ ಮನೋಹರ್ ಲಾಲ್ ಕಟ್ಟರ್ ಅವರಿಗೆ ಟಿಕೆಟ್ ನೀಡಲಾಗಿದೆ.

ಇಬ್ಬರು ಮಾಜಿ ಮುಖ್ಯಮಂತ್ರಿಗಳು, ರೈಲ್ವೆ ಖಾತೆಯ ರಾಜ್ಯ ಸಚಿವ ದರ್ಶನ್ ಜರ್ದೋಶ್ ಸೇರಿದಂತೆ 30 ಸಂಸದರಿಗೆ ಮತ್ತೆ ಸ್ಪರ್ಧಿಸಲು ಅವಕಾಶ ನಿರಾಕರಿಸಲಾಗಿದೆ. ಮಾಜಿ ಮುಖ್ಯಮಂತ್ರಿಗಳಾದ ಖಟ್ಟರ್, ಬಸವರಾಜ ಬೊಮ್ಮಾಯಿ ಹಾಗೂ ತ್ರಿವೇಂದ್ರ ಸಿಂಗ್ ರಾವತ್ ಅವರ ರಾಷ್ಟ್ರ ರಾಜಕಾರಣಕ್ಕೆ ಪ್ರವೇಶಿಸಲು ವೇದಿಕೆ ಸನ್ನದ್ಧವಾಗಿದೆ. ರಾಜ್ಯಸಭಾ ಸದಸ್ಯರಾಗಿರುವ ಪೀಯೂಷ್ ಅವರು ಮುಂಬೈ ಉತ್ತರದಿಂದ ಕಣಕ್ಕಿಳಿಯಲಿದ್ದಾರೆ. ಪಕ್ಷದ ಮುಖ್ಯ ವಕ್ತಾರರೂ ಆಗಿರುವ ರಾಜ್ಯಸಭಾ ಸದಸ್ಯ ಅನಿಲ್ ಬಲೂನಿ ಅವರು ಉತ್ತರಾಖಂಡದ ಗರ್ವಾಲ್‌ನಿಂದ ಸ್ಪರ್ಧೆ ಮಾಡಲಿದ್ದಾರೆ.

ಪೂರ್ವ ದೆಹಲಿ ಕ್ಷೇತ್ರದಿಂದ ಮಾಜಿ ಮೇಯರ್ ಹರ್ಷ್ ಮಲ್ಹೋತ್ರಾ ಹಾಗೂ ವಾಯವ್ಯ ಕ್ಷೇತ್ರದಿಂದ ಯೋಗೇಂದ್ರ ಚಂದೋಲಿಯಾ ಅವರನ್ನು ಹುರಿಯಾಳುಗಳನ್ನಾಗಿ ಮಾಡಲಾಗಿದೆ.

ಹಾಲಿ ಸಂಸದ ಹನ್ಸ್ ರಾಜ್ ಹನ್ಸ್ ಅವರಿಗೆ ಅವಕಾಶ ನಿರಾಕರಿಸಲಾಗಿದೆ. ಕ್ರಿಕೆಟಿಗ ಗೌತಮ್ ಗಂಭೀರ್ ಅವರು ಚುನಾವಣಾ ರಾಜಕಾರಣಕ್ಕೆ ಇತ್ತೀಚೆಗೆ ರಾಜಕೀಯ ನಿವೃತ್ತಿ ಘೋಷಿಸಿದ್ದರು. ಈ ಮೂಲಕ, ದೆಹಲಿಯಲ್ಲಿ ಏಳು ಸಂಸದರ ಪೈಕಿ ಆರು ಮಂದಿಗೆ ಟಿಕೆಟ್ ನಿರಾಕರಿಸಲಾಗಿದೆ.

ಉಡುಪಿ-ಚಿಕ್ಕಮಗಳೂರಿಗೆ ಕೋಟ ಉತ್ತರಕ್ಕೆ ಶೋಭಾ ಕರಂದ್ಲಾಜೆ

ಉಡುಪಿ– ಚಿಕ್ಕಮಗಳೂರು ಕ್ಷೇತ್ರದಲ್ಲಿ ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. 'ಗೋ ಬ್ಯಾಕ್ ಶೋಭಾ' ಅಭಿಯಾನದ ತಾಪದ ಹಿನ್ನೆಲೆಯಲ್ಲಿ ಕ್ಷೇತ್ರದ ಹಾಲಿ ಸಂಸದೆಯೂ ಆಗಿರುವ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಬೆಂಗಳೂರು ಉತ್ತರ ಕ್ಷೇತ್ರಕ್ಕೆ ಸ್ಥಳಾಂತರಿಸಲಾಗಿದೆ.

ಉಡುಪಿ– ಚಿಕ್ಕಮಗಳೂರಿಗೆ ಪಕ್ಷದ ನಿಕಟಪೂರ್ವ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರು ಪ್ರಬಲ ಆಕಾಂಕ್ಷಿಯಾಗಿದ್ದರು. ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಅವರೂ ಲಾಬಿ ನಡೆಸಿದ್ದರು. ಇಬ್ಬರಿಗೂ ನಿರಾಸೆಯಾಗಿದೆ. ಶೋಭಾ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅಭಿಯಾನ ನಡೆದಿತ್ತು. ಆಡಳಿತ ವಿರೋಧಿ ಅಲೆ ಎದುರಿಸುತ್ತಿರುವ ಶೋಭಾ ಅವರಿಗೆ ಟಿಕೆಟ್ ನೀಡಬಾರದು ಎಂದು ಒತ್ತಾಯಿಸಿ ಕಾರ್ಯಕರ್ತರು ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಿದ್ದರು. ಈ ಅಭಿಯಾನವನ್ನು ಪಕ್ಷದ ಕೆಲವು ನಾಯಕರೇ ಮಾಡಿಸುತ್ತಿದ್ದಾರೆ ಎಂದು ಶೋಭಾ ಆಕ್ರೋಶ ವ್ಯಕ್ತಪಡಿಸಿದ್ದರು.

ಈ ಕ್ಷೇತ್ರದಲ್ಲಿ ಕರಂದ್ಲಾಜೆ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಿದರೆ ಗೆಲುವು ಕಷ್ಟ ಎಂದು ಪಕ್ಷದ ಆಂತರಿಕ ಸಮೀಕ್ಷೆಯಲ್ಲಿ ಅಭಿಪ್ರಾಯ ವ್ಯಕ್ತವಾಗಿತ್ತು. ಕಾರ್ಯಕರ್ತರೊಂದಿಗೆ ಬೆರೆಯುವ ತಳಮಟ್ಟದ ನಾಯಕರೊಬ್ಬರಿಗೆ ಅವಕಾಶ ನೀಡಬೇಕು ಎಂದು ರಾಜ್ಯದ ಕೆಲವು ನಾಯಕರು ಸಲಹೆ ನೀಡಿದ್ದರು. ಕರಂದ್ಲಾಜೆ ಅವರನ್ನು ಕಣಕ್ಕೆ ಇಳಿಸಲೇಬೇಕು ಎಂದು ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಪಟ್ಟು ಹಿಡಿದಿದ್ದರು. ಸುರಕ್ಷಿತ ಕ್ಷೇತ್ರವಾದ ಬೆಂಗಳೂರು ಉತ್ತರದಿಂದ ಅವರನ್ನು ಕಣಕ್ಕೆ ಇಳಿಸಲು ತೀರ್ಮಾನಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಉಡುಪಿ– ಚಿಕ್ಕಮಗಳೂರಿನಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಮಾಜಿ ಸಚಿವ ಕೆ.ಜಯಪ್ರಕಾಶ್ ಹೆಗ್ಡೆ ಕಣಕ್ಕಿಳಿಯಲಿದ್ದಾರೆ. ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿ ಹೆಗ್ಡೆ ವಿರುದ್ಧ ಕೋಟ ಅವರು ಎರಡು ಸಲ ಸೋತಿದ್ದರು.

ಕೋಟ ಅಭ್ಯರ್ಥಿ ಹಿಂದಿನ ಲೆಕ್ಕಾಚಾರ

ಕೋಟ ಶ್ರೀನಿವಾಸ ಪೂಜಾರಿ ಅವರನ್ನು ಅಭ್ಯರ್ಥಿಯನ್ನಾಗಿ ಮಾಡುವುದರ ಹಿಂದೆ ಬಿ.ಎಸ್.ಯಡಿಯೂರಪ್ಪ ಒತ್ತಡ ಕೆಲಸ ಮಾಡಿದೆ.

ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಬಿಎಸ್‌ವೈ ಪುತ್ರ ಬಿ.ವೈ. ರಾಘವೇಂದ್ರ ಹಾಲಿ ಸಂಸದರು. ಕಾಂಗ್ರೆಸ್ ಪಕ್ಷವು ಗೀತಾ ಶಿವರಾಜಕುಮಾರ್ ಅವರಿಗೆ ಮಣೆ ಹಾಕಿದೆ. ಕ್ಷೇತ್ರದ ನಾಲ್ಕು ತಾಲ್ಲೂಕುಗಳಲ್ಲಿ ಈಡಿಗ ಸಮುದಾಯದವರು ಗಣನೀಯ ಸಂಖ್ಯೆಯಲ್ಲಿದ್ದಾರೆ. ಗೀತಾ ಶಿವರಾಜ ಕುಮಾರ್ ಹಾಗೂ ಸಚಿವ ಮಧು ಬಂಗಾರಪ್ಪ ಅವರು ಈಡಿಗ ಮತಗಳ ಕ್ರೋಡೀಕರಣ ಮಾಡುವ ಕೆಲಸದಲ್ಲಿ ನಿರತರಾಗಿದ್ದಾರೆ. ಈಡಿಗ ಮತಗಳು ಗಣನೀಯ ಸಂಖ್ಯೆಯಲ್ಲಿ ಕಾಂಗ್ರೆಸ್ ಪಾಲಾದರೆ ರಾಘವೇಂದ್ರ ಅವರಿಗೆ ಸಮಸ್ಯೆ ಉಂಟಾಗಬಹುದು ಎಂಬುದನ್ನು ಅರಿತ ಯಡಿಯೂರಪ್ಪ ಅವರು ಉಡುಪಿ– ಚಿಕ್ಕಮಗಳೂರಿಗೆ ಕೋಟ ಹೆಸರನ್ನು ಮುನ್ನೆಲೆಗೆ ತಂದರು. ಪಕ್ಕದ ಕ್ಷೇತ್ರದಲ್ಲಿ ಈಡಿಗ ಸಮುದಾಯದ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೆ ಶಿವಮೊಗ್ಗದಲ್ಲಿ ತಮ್ಮ ಪುತ್ರನಿಗೆ ಅನುಕೂಲವಾಗಲಿದೆ ಎಂಬುದು ಬಿಎಸ್‌ವೈ ಲೆಕ್ಕಾಚಾರ.

ಕೋಟ ಅವರು ಈಡಿಗ ಸಮುದಾಯದ ಪ್ರಭಾವಿ ಮುಖಂಡ. ರಾಷ್ಟ್ರ ರಾಜಕಾರಣಕ್ಕೆ ಬರಲು ಅವರು ಆರಂಭದಲ್ಲಿ ಹಿಂದೇಟು ಹಾಕಿದ್ದರು. ರಾಜ್ಯ ಹಾಗೂ ರಾಷ್ಟ್ರ ನಾಯಕರ ಒತ್ತಡಕ್ಕೆ ಮಣಿದು ಅಭ್ಯರ್ಥಿಯಾಗಲು ಒಪ್ಪಿದರು ಎಂದು ಮೂಲಗಳು ಹೇಳಿವೆ.

ಅಳಿಯಂದಿರ ಜಗಳದಲ್ಲಿ ಬಾಲರಾಜ್‌ಗೆ ಲಾಭ

ಚಾಮರಾಜನಗರದ ಹಾಲಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರು ರಾಜಕೀಯ ನಿವೃತ್ತಿಯಾಗುವುದಾಗಿ ಘೋಷಣೆ ಮಾಡಿದ ಹಿನ್ನೆಲೆಯಲ್ಲಿ ಅವರ ಅಳಿಯರಾದ ಡಾ.ಎನ್.ಎಸ್.ಮೋಹನ್ ಹಾಗೂ ಡಾ. ಹರ್ಷವರ್ಧನ್ ಟಿಕೆಟ್‌ಗಾಗಿ ಲಾಬಿ ನಡೆಸಿದ್ದರು. ಅಳಿಯಂದಿರ ಜಗಳದಲ್ಲಿ ಕೊಳ್ಳೇಗಾಲದ ಮಾಜಿ ಶಾಸಕ ಎಸ್.ಬಾಲರಾಜ್ ಅವರಿಗೆ ಲಾಭವಾಗಿದೆ.

ಮಾಜಿ ಶಾಸಕ ಎಸ್.ಬಾಲರಾಜ್ ಈ ಹಿಂದೆ ಕಾಂಗ್ರೆಸ್‌ನಲ್ಲಿದ್ದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೊಳ್ಳೇಗಾಲ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ಕೈತಪ್ಪಿದ್ದರಿಂದ ಬಿಜೆಪಿಗೆ ಸೇರ್ಪಡೆಗೊಂಡಿದ್ದರು. ಯಡಿಯೂರಪ್ಪ ಅವರೊಂದಿಗೆ ಉತ್ತಮ ಒಡನಾಟ ಹೊಂದಿರುವ ಅವರು, ಲೋಕಸಭಾ ಟಿಕೆಟ್ ನೀಡಬೇಕು ಎಂಬ ಷರತ್ತಿನೊಂದಿಗೆ ಬಿಜೆಪಿಗೆ ಸೇರಿದ್ದರು.

'ಪಕ್ಷದ ಅಪೇಕ್ಷೆಯಂತೆ ಸೌಮ್ಯಾ ರೆಡ್ಡಿ ಕಣಕ್ಕೆ'

ಬೆಂಗಳೂರು: ಪಕ್ಷದ ನಾಯಕರು, ಕಾರ್ಯಕರ್ತರ ಅಪೇಕ್ಷೆಯಂತೆ ಸೌಮ್ಯಾ ರೆಡ್ಡಿ ಅವರನ್ನು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಕಣಕ್ಕೆ ಇಳಿಸಲಾಗುತ್ತಿದೆ. ಈ ಕುರಿತು ಹೈಕಮಾಂಡ್ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ವಿಧಾನಸೌಧದಲ್ಲಿ ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ವಿಧಾನಸಭಾ ಚುನಾವಣೆಯಲ್ಲಿ ಮತ ಎಣಿಕೆ ಕೇಂದ್ರದ ಅಧಿಕಾರಿಗಳ ದೋಷಪೂರಿತ ನಿಲುವಿನಿಂದಾಗಿ ಸೌಮ್ಯಾ ರೆಡ್ಡಿ ಸೋಲು ಕಂಡಿದ್ದರು. ಫಲಿತಾಂಶ ಪ್ರಶ್ನಿಸಿ, ಈಗಾಗಲೇ ಕೋರ್ಟ್ ಮೆಟ್ಟಿಲೇರಲಾಗಿದೆ. ಶೀಘ್ರ ತೀರ್ಪು ಹೊರಬರಲಿದ್ದು, ಸೌಮ್ಯಾ ಮತ್ತೆ ಶಾಸಕಿಯಾಗುವ ಭರವಸೆ ಇದೆ. ಆದರೆ, ಪಕ್ಷದ ಎಲ್ಲ ನಾಯಕರ ಸಲಹೆಯಂತೆ ಲೋಕಸಭಾ ಚುನಾವಣೆಗೆ ಸ್ಪರ್ಧಿಸುತ್ತಿದ್ದಾರೆ ಎಂದರು.

ಅಸ್ಸಾಂನಲ್ಲಿ 1, ಗುಜರಾತ್‌ನಲ್ಲಿ 2 ಯೋಜನೆ ಕಾಮಗಾರಿಗಳಿಗೆ ಚಾಲನೆ

ಸೆಮಿಕಂಡಕ್ಟರ್ ಯೋಜನೆಗೆ ಶಂಕುಸ್ಥಾಪನೆ

ಗುವಾಹಟಿ/ಧೋಲೆರಾ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ₹1.25 ಲಕ್ಷ ಕೋಟಿ ವೆಚ್ಚದ ಮೂರು ಸೆಮಿಕಂಡಕ್ಟರ್ ಉತ್ಪಾದನಾ ಘಟಕಗಳಿಗೆ ಬುಧವಾರ ವರ್ಚುವಲ್ ಮೂಲಕ ಶಂಕುಸ್ಥಾಪನೆ ನೆರವೇರಿಸಿದರು.

ಪ್ರಧಾನಿ ಮೋದಿ ಶಂಕುಸ್ಥಾಪನೆ ನೆರವೇರಿಸಿದ ಯೋಜನೆಗಳ ಪೈಕಿ ಟಾಟಾ ಸಮೂಹವು ₹ 91,000 ಕೋಟಿ ವೆಚ್ಚದಲ್ಲಿ ನಿರ್ಮಿಸುತ್ತಿರುವ ಗುಜರಾತ್‌ನ ಧೋಲೆರಾ ಘಟಕ, ₹27,000 ಕೋಟಿ ವೆಚ್ಚದಲ್ಲಿ ಅಸ್ಸಾಂನ ಮೋರಿಗಾಂವ್‌ನಲ್ಲಿ ನಿರ್ಮಾಣವಾಗುತ್ತಿರುವ ಘಟಕ ಮತ್ತು ಮುರುಗಪ್ಪ ಸಮೂಹದ ₹7,600 ಕೋಟಿ ವೆಚ್ಚದ ಗುಜರಾತ್‌ನ ಸಾನಂದ್ ಘಟಕಗಳು ಸೇರಿವೆ.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, 'ಕೇವಲ ಬೆರಳೆಣಿಕೆಯ ದೇಶಗಳು ಸೆಮಿಕಂಡಕ್ಟರ್‌ಗಳನ್ನು ಉತ್ಪಾದಿಸುತ್ತಿವೆ. ಕೊರೊನಾ ಸಾಂಕ್ರಾಮಿಕದ ನಂತರ ದೇಶವು ವಿಶ್ವಾಸಾರ್ಹ ಸೆಮಿಕಂಡಕ್ಟರ್ ಪೂರೈಕೆಯ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕಾದ ಅಗತ್ಯವಿದೆ' ಎಂದರು.



ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ನವದೆಹಲಿಯಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ಅಸ್ಸಾಂ ಮತ್ತು ಗುಜರಾತ್‌ನಲ್ಲಿ ಮೂರು ಸೆಮಿಕಂಡಕ್ಟರ್ ಯೋಜನೆಗಳಿಗೆ ಚಾಲನೆ ನೀಡಿದರು. —ಪಿಟಿಐ ಚಿತ್ರ

'ಮೇಡ್ ಇನ್ ಇಂಡಿಯಾ' ಸೆಮಿಕಂಡಕ್ಟರ್ ಚಿಪ್‌ಗಳು ದೇಶವನ್ನು ಸ್ವಾವಲಂಬನೆ ಮತ್ತು ಆಧುನಿಕತೆಯೆಡೆಗೆ ಕೊಂಡೊಯ್ಯಲಿವೆ. ಇದು ಚಾರಿತ್ರಿಕ ದಿನವಾಗಿದ್ದು, ಭವ್ಯ ಭವಿಷ್ಯದೆಡೆಗೆ ನಾವು ದೃಢ ಹೆಜ್ಜೆ ಇಡುತ್ತಿದ್ದೇವೆ' ಎಂದು ಪ್ರಧಾನಿ ಮೋದಿ ಹೇಳಿದರು.

ಭಾರತವು ಸೆಮಿಕಂಡಕ್ಟರ್ ಉತ್ಪನ್ನಗಳ ತಯಾರಿಕೆಯಲ್ಲಿ ಜಾಗತಿಕ ಶಕ್ತಿಯಾಗಿ ಹೊರಹೊಮ್ಮುವ ದಿನ ದೂರವಿಲ್ಲ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಸಂವಹನ ಮತ್ತು ಐಟಿ ಸಚಿವ ಅಶ್ವಿನಿ ವೈಷ್ಣವ್ ಪ್ರಕಾರ, ಟಾಟಾ ಎಲೆಕ್ಟ್ರಾನಿಕ್ಸ್‌ನ ಸೆಮಿಕಂಡಕ್ಟರ್ ಘಟಕವು ಡಿಸೆಂಬರ್ 2026ರ ಹೊತ್ತಿಗೆ ಕಾರ್ಯಾರಂಭ ಮಾಡಲಿದೆ. ಸಾನಂದ್‌ನಲ್ಲಿ ನಿರ್ಮಾಣ ಹಂತದಲ್ಲಿರುವ ಮೈಕ್ರಾನ್ ಘಟಕವು 2024ರ ಡಿಸೆಂಬರ್ ಹೊತ್ತಿಗೆ ಉತ್ಪಾದನೆ ಆರಂಭಿಸಲಿದೆ.

ಅಸ್ಸಾಂನ ಮೋರಿಗಾಂವ್ ಜಿಲ್ಲೆಯ ಸೆಮಿಕಂಡಕ್ಟರ್ ಘಟಕವು 2025 ಮಧ್ಯ-ಭಾಗದಲ್ಲಿ ಕಾರ್ಯಾರಂಭ ಮಾಡಲಿದೆ ಎಂದು ಅಂದಾಜಿಸಲಾಗಿದೆ.

ಯೋಜನೆ ಆರಂಭಗೊಂಡ ಜಾಗೀರೋಡ್ ಎಂಬ ಸ್ಥಳದಲ್ಲಿ ಹಾಜರಿದ್ದ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ, 'ರಾಜ್ಯದಲ್ಲಿ ಮೊದಲ ಬಾರಿಗೆ ₹27000 ಕೋಟಿಯಷ್ಟು ಬೃಹತ್ ಮೊತ್ತವನ್ನು ಹೂಡಿಕೆ ಮಾಡಲಾಗಿದೆ. ಅಸ್ಸಾಂ ಮತ್ತು ಈಶಾನ್ಯ ರಾಜ್ಯಗಳ ಪಾಲಿಗೆ ಇದು ಮೈಲಿಗಲ್ಲಿನ ದಿನವಾಗಿದೆ' ಎಂದರು.

ರಕ್ಷಣಾ ವಲಯ ಸೇರಿದಂತೆ ಆಟೋಮೊಬೈಲ್ ಮತ್ತು ಟೆಲಿ ಕಮ್ಯುನಿಕೇಷನ್ ವಲಯಗಳಿಗೆ ಈ ಘಟಕಗಳು ಸೆಮಿಕಂಡಕ್ಟರ್ ಚಿಪ್‌ಗಳನ್ನು ಉತ್ಪಾದಿಸಲಿವೆ.

ಈ ಘಟಕಗಳು ವಿಯೆಟ್ನಾಂನಂಥ ದೇಶಗಳ ಮೇಲಿನ ಭಾರತದ ಅವಲಂಬನೆಯನ್ನು ತಪ್ಪಿಸುತ್ತದೆ ಎನ್ನಲಾಗಿದೆ.

15ರಿಂದ ಆರ್‌ಎಸ್‌ಎಸ್ ಸಮಾವೇಶ



ನಾಗ್ಪುರದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಆಂಬೇಕರ್ ಮಾತನಾಡಿದರು. ಪಶ್ಚಿಮ ಪ್ರಾಂತ ಸಂಘ ಚಾಲಕ ಜಯಂತಿ ಭಾಯ್ ಭದೇಸಿಯಾ ಇದ್ದರು —ಪಿಟಿಐ ಚಿತ್ರ

ನಾಗ್ಪುರ (ಪಿಟಿಐ): ನಾಗ್ಪುರದ 'ಸ್ಮೃತಿ ಭವನ'ದಲ್ಲಿ ಇದೇ 15ರಿಂದ 17ರವರೆಗೆ ಮೂರು ದಿನಗಳ ಕಾಲ ಆರ್‌ಎಸ್‌ಎಸ್ ನಾಯಕತ್ವದ ಬಹುಮುಖ್ಯವಾದ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಪ್ರಚಾರ ಪ್ರಮುಖ ಸುನೀಲ್ ಅಂಬೇಕರ್ ಬುಧವಾರ ತಿಳಿಸಿದ್ದಾರೆ.

ಈ ಸಮಾವೇಶದಲ್ಲಿ ರಾಮಮಂದಿರ ಕುರಿತು ಗೊತ್ತುವಳಿ ಅಂಗೀಕಾರ ಹಾಗೂ ದೇಶದ ಹಲವು ವಿಚಾರಗಳ ಕುರಿತು ಚರ್ಚಿಸಲಾಗುವುದು. ಆರ್‌ಎಸ್‌ಎಸ್ ಜೊತೆಗೆ ನಂಟು ಹೊಂದಿರುವ ಸಂಘಟನೆಗಳ 1,529 ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಂಬೇಕರ್, 'ನಾಗ್ಪುರದಲ್ಲಿ ಆರು ವರ್ಷಗಳ ಬಳಿಕ ಈ ಸಮಾವೇಶವನ್ನು ಹಮ್ಮಿಕೊಳ್ಳಲಾಗುತ್ತಿದೆ. 2025ರ ವೇಳೆಗೆ ಆರ್‌ಎಸ್‌ಎಸ್ ಸಂಘಟನೆಗೆ 100 ವರ್ಷ ಪೂರ್ಣವಾಗಲಿದೆ. ಆ ಸಂದರ್ಭದಲ್ಲಿ ದೇಶದಾದ್ಯಂತ 68 ಸಾವಿರ ಇರುವ ಆರ್‌ಎಸ್‌ಎಸ್ ಸಂಘದ ಶಾಖೆಗಳ ಸಂಖ್ಯೆಯನ್ನು ಒಂದು ಲಕ್ಷಕ್ಕೆ ಏರಿಸಬೇಕು ಎನ್ನುವುದೂ ಸೇರಿದಂತೆ 2024–25ರ ಅವಧಿಯಲ್ಲಿ ಏನೆಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂಬ ಬಗ್ಗೆ ಚರ್ಚಿಸಲಾಗುವುದು' ಎಂದು ಹೇಳಿದ್ದಾರೆ.

ಸಂಘದ ಅಖಿಲ ಭಾರತೀಯ ಕಾರ್ಯಕಾರಣಿ ಮಂಡಳಿಯಿಂದ ಚುನಾವಣೆಗೆ ಸದಸ್ಯರನ್ನು ಆಯ್ಕೆ ಮಾಡುವುದು ಮತ್ತು ಪ್ರಧಾನ ಕಾರ್ಯ-ದರ್ಶಿಗಳ ಕುರಿತು ಚರ್ಚೆಯಾಗಲಿದೆ. 2023–24ರ ಅವಧಿಯಲ್ಲಿ ಸಂಘ ಮಾಡಿದ ಎಲ್ಲಾ ಕಾರ್ಯಗಳು ಮತ್ತು ಸೇವಾ ಕಾರ್ಯಗಳನ್ನು ವಿಮರ್ಶೆಗೊಳ-ಪಡಿಸಲಾಗುವುದು ಎಂದಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, 36 ಸಂಘಗಳ ಕಾರ್ಯದರ್ಶಿಗಳು ಮತ್ತು ಮುಖ್ಯಸ್ಥರು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದ್ದಾರೆ.

₹5,000 ಕೋಟಿ ವಂಚನೆ ದೆಹಲಿ ಮೂಲದ ವ್ಯಕ್ತಿ ಬಂಧನ

ನವದೆಹಲಿ (ಪಿಟಿಐ): ಸೈಬರ್ ಅಪರಾಧ ಮತ್ತು ಆನ್‌ಲೈನ್ ಗೇಮಿಂಗ್ ಮೂಲಕ ₹5,000 ಕೋಟಿ ವಂಚನೆ ಮಾಡಿದ್ದಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಮೂಲದ ವ್ಯಕ್ತಿಯೊಬ್ಬರನ್ನು ಇತ್ತೀಚೆಗೆ ಬಂಧಿಸಲಾಗಿದೆ ಎಂದು ಇ.ಡಿ ಬುಧವಾರ ತಿಳಿಸಿದೆ.

ದೆಹಲಿಯ ಗ್ರೇಟರ್ ಕೈಲಾಶ್ ಮೂಲದ ಆಶಿಶ್ ಕಕ್ಕರ್ ಬಂಧಿತ ವ್ಯಕ್ತಿ. ಮಾ.2ರಂದು ಇವರನ್ನು ವಶಕ್ಕೆ ಪಡೆಯಲಾಗಿದೆ ಎಂದು ಇ.ಡಿ ತಿಳಿಸಿದೆ. ಹಣ ಅಕ್ರಮ ವರ್ಗಾವಣೆ ತಡೆಕಾಯ್ದೆಗೆ ಸಂಬಂಧಿಸಿದ ವಿಶೇಷ ನ್ಯಾಯಾಲಯವು ಆರೋಪಿಯನ್ನು ಮಾ.12ರ ವರೆಗೆ ಇ.ಡಿ ವಶಕ್ಕೆ ನೀಡಿದೆ.

ಮುಂಬೈ ಧಾರಣೆ

ಶೇಂಗಾ

13-03-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1500)
ಒಂದು ವಾರದ ಡೆಲಿವರಿ	1525 (1495)
ಸೋಯಾ ಕಚ್ಚಾ	982 (965)
ಪಾಮ್ ವಾರದ ಡೆಲಿವರಿ	945 (930)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (895)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)


ಅಪರಂಜಿ ಚಿನ್ನ 10ಗ್ರಾಂ

₹65,150 (65,100)

ಬೆಳ್ಳಿ ಕೆ.ಜಿ ₹72,500 (72,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,335
ಇಂದಿನ ಅಂತ್ಯ	21,997
▼	338
ದಿನದ ಕನಿಷ್ಠ	21,905

ವಿನಿಮಯ ದರ

$ ಡಾಲರ್	82.84
£ ಪೌಂಡ್	105.87
€ ಯುರೊ	90.52
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹465
12 ಕ್ಕೆ	₹65
ಮೈಸೂರು	
100ಕ್ಕೆ	₹465

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1520 (1490)
ಸೋಯಾ (ರಿಫೈನ್ಡ್)	₹1000 (985)
ಸೂರ್ಯಕಾಂತಿ (ರಿಫೈನ್ಡ್)	₹980 (965)
ಪಾಮೋಲಿನ್	₹947 (932)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹275-446

ದ್ವಿತಳಿ (ಬಿ.ವಿ) ₹226-540

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹7500-11000
ಬೆಂಗಳೂರು	₹10800-11200
ತಿಪಟೂರು	₹7600-9400
ಅರಸೀಕೆರೆ	₹8700-8700

ಮೆಣಸಿನಕಾಯಿಗೆ ಎಂಎಸ್‌ಪಿ ಕೇಂದ್ರಕ್ಕೆ ಪ್ರಸ್ತಾವ: ಸಚಿವ

ಬ್ಯಾಡಗಿ ಮಾರುಕಟ್ಟೆ ವಿಸ್ತರಣೆಗೆ 40 ಎಕರೆ ಜಮೀನು ಖರೀದಿ

ಪ್ರಜಾವಾಣಿ ವಾರ್ತೆ

ಹಾವೇರಿ: 'ದರ ಕುಸಿತದಿಂದ ರೈತರಿಗೆ ಆಗುವ ನಷ್ಟ ತಪ್ಪಿಸಲು ಮೆಣಸಿನಕಾಯಿಯನ್ನು ಕನಿಷ್ಠ ಬೆಂಬಲ ಬೆಲೆಯ (ಎಂಎಸ್‌ಪಿ) ವ್ಯಾಪ್ತಿಗೆ ತರುವ ನಿಟ್ಟಿನಲ್ಲಿ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ಕೃಷಿ ಮಾರುಕಟ್ಟೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ತಿಳಿಸಿದರು.

ರೈತರ ಗಲಭೆಯಿಂದ ಹಾನಿಗೊಳಗಾದ ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಗೆ ಬುಧವಾರ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುವ ಸಾಮರ್ಥ್ಯವಿದೆ' ಎಂದರು.

'ಮೆಣಸಿನಕಾಯಿ ದಾಸ್ತಾನು ಮಾಡಲು ಜಾಗದ ಕೊರತೆ ಇದೆ. 40 ಎಕರೆ ಜಮೀನು ಕೊಡಲು ಸಿದ್ಧ ಎಂದು ವರ್ತಕರು ತಿಳಿಸಿದ್ದಾರೆ. ಜಮೀನು ಖರೀದಿಸಿ, ಮಾರುಕಟ್ಟೆ ವಿಸ್ತರಿಸಿ ವಹಿವಾಟು ನಡೆಸಲು ಅನುಕೂಲ ಕಲ್ಪಿಸುತ್ತೇವೆ' ಎಂದರು.

ಶೈತ್ಯಾಗಾರ ಮಂಜೂರು: 'ಬ್ಯಾಡಗಿ ತಾಲ್ಲೂಕಿನ ಚಿಕ್ಕಬಾಸೂರು ಉಪ ಮಾರುಕಟ್ಟೆಗೆ ಸರ್ಕಾರಿ ಶೈತ್ಯಾಗಾರ ಮಂಜೂರಾಗಿದೆ. ಮಾರುಕಟ್ಟೆಗೆ ಮೆಣಸಿನಕಾಯಿ ಹೆಚ್ಚು ಆವಕವಾದಾಗ, ಯಾವ್ಯಾವ ರಾಜ್ಯಗಳಲ್ಲಿ ಬೇಡಿಕೆಯಿದೆ ಎಂಬುದನ್ನು ಗುರುತಿಸುವ ಕೆಲಸ ನಡೆದಿದೆ. ರಫ್ತುದಾರರು ಮತ್ತು ಉತ್ಪಾದಕರ ನಡುವೆ ಅಭಿವೃದ್ಧಿ ಆಯುಕ್ತರು ಈಗಾಗಲೇ ಎರಡು ಸಭೆ ಮಾಡಿದ್ದು, ಮಾರಾಟಕ್ಕೆ ವ್ಯವಸ್ಥೆ ಮಾಡುತ್ತಾರೆ' ಎಂದು ತಿಳಿಸಿದರು.

ಆವಕ ಜಾಸ್ತಿಯಾಗಿ ದರ ಕುಸಿತ: 'ಡಬ್ಬಿ ಮತ್ತು ಕಡ್ಡಿ ಮೆಣಸಿನಕಾಯಿ ಹೊರತುಪಡಿಸಿ ಹೊಸ ತಳಿಯಾದ ಸಿಜೆಂಟಾ ಕಂಪನಿಯ ಮೆಣಸಿನಕಾಯಿ ಆವಕ ಬ್ಯಾಡಗಿ ಮಾರುಕಟ್ಟೆಗೆ ಹೆಚ್ಚಾಗಿದ್ದರಿಂದ ದರ ಕಡಿಮೆಯಾಗಿದೆ. ಬ್ಯಾಡಗಿಯ ಡಬ್ಬಿ-ಕಡ್ಡಿಗೆ ಸಿಗುವ ದರ ಇತರ ತಳಿಯ ಮೆಣಸಿನಕಾಯಿಗೆ ಸಿಗುವುದಿಲ್ಲ. ಇಲ್ಲಿನ ಮಾರುಕಟ್ಟೆ ದರ ಹಾಗೂ ಹುಬ್ಬಳ್ಳಿ ಮತ್ತು ರಾಯಚೂರು ಮಾರುಕಟ್ಟೆ ದರ ಪಟ್ಟಿ ತರಿಸಿ ಪರಿಶೀಲಿಸಲಾಗುತ್ತಿದೆ' ಎಂದರು.



ಬ್ಯಾಡಗಿ ಎಪಿಎಂಸಿ ಆವರಣದಲ್ಲಿ ನಡೆದ ಗಲಭೆಯಿಂದ ಸುಟ್ಟು ಹೋದ ವಾಹನವನ್ನು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಪರಿಶೀಲಿಸಿದರು. ಶಾಸಕ ಬಸವರಾಜ ಶಿವಣ್ಣನವರ, ಎಪಿಎಂಸಿ ಕಾರ್ಯದರ್ಶಿ ಎಚ್‌.ವೈ. ಸತೀಶ ಇದ್ದರು

ವಾರದಲ್ಲಿ 2 ದಿನ ವಹಿವಾಟು

ಹಾವೇರಿ: 'ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯಲ್ಲಿ ವಾರದಲ್ಲಿ ಒಂದು ದಿನ ವಹಿವಾಟು ನಡೆಸುವುದರಿಂದ ಒತ್ತಡ ಹೆಚ್ಚಾಗಲಿದ್ದು, ಇದು ಸಮಸ್ಯೆಗೆ ಕಾರಣವಾಗಬಹುದು. ಆದ್ದರಿಂದ ಸೋಮವಾರ ಮತ್ತು ಗುರುವಾರ ವಹಿವಾಟು ನಡೆಸಿ, ವರ್ತಕರ ಬೇಡಿಕೆಗಳನ್ನು ಈಡೇರಿಸಲು ಪ್ರಯತ್ನಿಸಲಾಗುವುದು' ಎಂದು ಸಚಿವ ಶಿವಾನಂದ ಪಾಟೀಲ ಹೇಳಿದರು.

'ಬಳ್ಳಾರಿ ಮತ್ತು ಮೈಸೂರಿನಲ್ಲಿ ವರ್ತಕರ ಸಂಘದಿಂದಲೇ ರಿಯಾಯಿತಿ ದರದಲ್ಲಿ ರೈತರಿಗೆ ಊಟದ ವ್ಯವಸ್ಥೆ ಮಾಡಲಾಗಿದೆ. ಇದೇ ಮಾದರಿಯಲ್ಲಿ ಬ್ಯಾಡಗಿ ಎಪಿಎಂಸಿಯಲ್ಲೂ ರೈತರಿಗೆ ಊಟದ ವ್ಯವಸ್ಥೆ ಮಾಡಬೇಕು' ಎಂದು ಸಲಹೆ ನೀಡಿದರು.

ಬ್ಯಾಡಗಿ ಮಾರುಕಟ್ಟೆಯಲ್ಲಿ ಪ್ರತ್ಯೇಕ ಪೊಲೀಸ್ ಠಾಣೆ ಆರಂಭಿಸಲಾಗುವುದು. ಎಪಿಎಂಸಿಗೆ ಹೆಚ್ಚುವರಿ ಸಿಬ್ಬಂದಿ ನಿಯೋಜನೆಗೆ ತಕ್ಷಣ ಕ್ರಮ ಕೈಗೊಳ್ಳಲಾಗುವುದು

ಶಿವಾನಂದ ಪಾಟೀಲ, ಕೃಷಿ ಮಾರುಕಟ್ಟೆ ಸಚಿವ

ಬ್ಯಾಡಗಿ ಮೆಣಸಿನಕಾಯಿ ಪ್ರಾಧಿಕಾರ ರಚಿಸಬೇಕು ಮತ್ತು ಬ್ಯಾಡಗಿಯ ಮುಖ್ಯರಸ್ತೆ ವಿಸ್ತರಿಸಿ, ಮೆಣಸಿನಕಾಯಿ ಸಾಗಿಸಲು ಅನುಕೂಲ ಕಲ್ಪಿಸಬೇಕು

ಸುರೇಶಗೌಡ್ರ ಪಾಟೀಲ, ಅಧ್ಯಕ್ಷ, ಬ್ಯಾಡಗಿ ಮೆಣಸಿನಕಾಯಿ ವರ್ತಕರ ಸಂಘ

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1700-2300
ಮಧ್ಯಮ	₹1000-1700
ಸಣ್ಣ	₹500-1000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹172
ಆರ್‌ಎಸ್‌ಎಸ್-5	₹164
ಗುಡ್ ಲಾಟ್	₹154

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹13800
ಎಸಿ	₹7950
ಆರ್‌ಪಿ	₹13900
ಆರ್‌ಸಿ	₹8100

ಸೆನ್ಸೆಕ್ಸ್ 906 ಅಂಶ ಇಳಿಕೆ: ಹೂಡಿಕೆದಾರರಿಗೆ ₹13.47 ಲಕ್ಷ ಕೋಟಿ ನಷ್ಟ

ಕರಡಿ ಕುಣಿತಕ್ಕೆ ಕರಗಿದ ಸಂಪತ್ತು

ಮುಂಬೈ (ಪಿಟಿಐ): ಯುಟಿಲಿಟಿ, ಇಂಧನ ಮತ್ತು ಲೋಹದ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಬುಧವಾರ ಷೇರುಪೇಟೆಯಲ್ಲಿ 'ಕರಡಿ ಕುಣಿತ' ಕಂಡುಬಂದಿತು. ಸೂಚ್ಯಂಕಗಳು ಕುಸಿತದ ಹಾದಿ ಹಿಡಿದವು. ಇದರಿಂದ ಹೂಡಿಕೆದಾರರ ಸಂಪತ್ತು ಒಂದೇ ದಿನ ₹13.47 ಲಕ್ಷ ಕೋಟಿ ಕರಗಿತು.

ವಿದೇಶಿ ಹೂಡಿಕೆದಾರರು ಷೇರುಗಳನ್ನು ಮಾರಾಟ ಮಾಡಿದ್ದು ಕೂಡ ಸೂಚ್ಯಂಕಗಳ ಕುಸಿತಕ್ಕೆ ಕಾರಣವಾಗಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 906 ಅಂಶ ಇಳಿಕೆಯಾಗಿ (ಶೇ 1.23) 72,761ಕ್ಕೆ ಸ್ಥಿರಗೊಂಡಿತು. ದಿನದ ವಹಿವಾಟಿನಲ್ಲಿ 1,152 ಅಂಶ ಕುಸಿತ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 338 ಅಂಶ ಕಡಿಮೆಯಾಗಿ (ಶೇ 1.51) 21,997ಕ್ಕೆ ಅಂತ್ಯಗೊಂಡಿತು.

ಬಿಎಸ್‌ಇ ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 5.11 ಮತ್ತು ಮಿಡ್ ಕ್ಯಾಪ್ ಸೂಚ್ಯಂಕ ಶೇ 4.20ರಷ್ಟು ಇಳಿಕೆ ಆಗಿದೆ.

ಎನ್‌ಟಿಪಿಸಿ, ಟಾಟಾ ಸ್ಟೀಲ್, ಟಾಟಾ ಮೋಟರ್ಸ್‌, ಜೆಎಸ್‌ಡಬ್ಲ್ಯು ಸ್ಟೀಲ್, ಭಾರ್ತಿ ಏರ್‌ಟೆಲ್, ಟೈಟನ್, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಹಿಂದುಸ್ತಾನ್ ಯೂನಿಲಿವರ್ ಷೇರಿನ ಮೌಲ್ಯ ಇಳಿಕೆ ಕಂಡಿವೆ.



ಐಟಿಸಿ, ಐಸಿಐಸಿಐ ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್, ನೆಸ್ಲೆ, ಬಜಾಜ್ ಫೈನಾನ್ಸ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಷೇರಿನ ಮೌಲ್ಯ ಏರಿಕೆ ಆಗಿದೆ.

ಐಟಿಸಿ ಷೇರು ಏರಿಕೆ: ಐಟಿಸಿ ಷೇರಿನ ಮೌಲ್ಯ ಶೇ 4ರಷ್ಟು ಏರಿಕೆ ಆಗಿದೆ. ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 4.49 ಮತ್ತು ಶೇ 4.33ರಷ್ಟು ಏರಿಕೆಯಾಗಿದೆ. ಷೇರಿನ ಬೆಲೆ ಕ್ರಮವಾಗಿ ₹422.40 ಮತ್ತು ₹422ಕ್ಕೆ ಮುಟ್ಟಿದೆ.


ಒಂದೇ ದಿನ ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ ₹22,890 ಕೋಟಿ ಸೇರ್ಪಡೆಯಾಗಿದ್ದು, ಒಟ್ಟು ಎಂ–ಕ್ಯಾಪ್ ₹5.27 ಲಕ್ಷ ಕೋಟಿಗೆ ತಲುಪಿದೆ.

ಚಿನ್ನ, ಬೆಳ್ಳಿ ದರ ಇಳಿಕೆ: ಜಾಗತಿಕ ಮಾರುಕಟ್ಟೆಯಲ್ಲಿನ ದುರ್ಬಲ ಪ್ರವೃತ್ತಿಯಿಂದಾಗಿ ಚಿನ್ನದ ಬೆಲೆ ಇಳಿಕೆಯಾಗಿದೆ. 10 ಗ್ರಾಂ ಚಿನ್ನದ ಬೆಲೆ ₹400 ಕಡಿಮೆಯಾಗಿ, ₹65,950ರಂತೆ ಮಾರಾಟವಾಯಿತು. ಬೆಳ್ಳಿ ಧಾರಣೆ ಕೆ.ಜಿಗೆ ₹600 ಇಳಿಕೆಯಾಗಿ ₹75,300ಕ್ಕೆ ಮುಟ್ಟಿತು.

ಅದಾನಿಗೆ ₹1.12 ಲಕ್ಷ ಕೋಟಿ ನಷ್ಟ

ನವದೆಹಲಿ (ಪಿಟಿಐ): ಷೇರುಪೇಟೆ ಸೂಚ್ಯಂಕಗಳು ಕುಸಿತ ಕಂಡಿದ್ದರಿಂದ ಅದಾನಿ ಸಮೂಹದ ಮಾರುಕಟ್ಟೆ ಮೌಲ್ಯವು ಒಂದೇ ದಿನ ₹1.12 ಲಕ್ಷ ಕೋಟಿ ಕರಗಿದೆ.

ಅದಾನಿ ಸಮೂಹದ ಹತ್ತು ಕಂಪನಿಗಳ ಷೇರಿನ ಮೌಲ್ಯವೂ ಕುಸಿತ ಕಂಡಿದೆ. ಕಳೆದ ಏಳು ದಿನಗಳ ವಹಿವಾಟಿನಲ್ಲಿ ಅದಾನಿ ಎಂಟರ್‌ಪ್ರೈಸಸ್ ಷೇರು ಕುಸಿಯುತ್ತಲೇ ಇದೆ. ಅದಾನಿ ಪವರ್ ಷೇರುಗಳು ದಿನದ ವಹಿವಾಟಿನಲ್ಲಿ ಕನಿಷ್ಠ ಮಟ್ಟದಲ್ಲಿ ದಾಖಲಾಗಿವೆ.



ಬೈಜುಸ್ ಲೆಕ್ಕ ಪರಿಶೋಧಕರ ನಿರ್ಲಕ್ಷ್ಯ ಬಹಿರಂಗ: ಐಸಿಎಐ

ಮುಂಬೈ (ಪಿಟಿಐ): ಬೈಜುಸ್ ಬಹಿರಂಗಪಡಿಸಿರುವ ಹಣಕಾಸಿನ ಮಾಹಿತಿಗಳಲ್ಲಿ ಕಂಪನಿಯ ಲೆಕ್ಕ ಪರಿಶೋಧಕರು ತೀವ್ರ ನಿರ್ಲಕ್ಷ್ಯ ಎಸಗಿರುವುದು ಕಂಡುಬಂದಿದೆ ಎಂದು ಭಾರತೀಯ ಲೆಕ್ಕ ಪರಿಶೋಧಕ ಸಂಸ್ಥೆ (ಐಸಿಎಐ) ತಿಳಿಸಿದೆ.

ಕೆಲವು ನಿರ್ದಿಷ್ಟ ಹಣಕಾಸು ವರ್ಷಗಳಿಗೆ ಸಂಬಂಧಿಸಿದಂತೆ ಬೈಜುಸ್ ನೀಡಿರುವ ಮಾಹಿತಿ ಬಗ್ಗೆ ಐಸಿಎಐ ಪರಿಶೀಲನೆ ನಡೆಸಿದ್ದು, ಲೆಕ್ಕ ಪರಿಶೋಧಕರ ನಿರ್ಲಕ್ಷ್ಯವು ಬೆಳಕಿಗೆ ಬಂದಿದೆ ಎಂದು ಐಸಿಎಐ ಅಧ್ಯಕ್ಷ ರಂಜೀತ್ ಕುಮಾರ್ ಅಗರ್ವಾಲ್ ಅವರು, ಬುಧವಾರ ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.


ಹಣಕಾಸು ವರದಿ ಪರಿಶೀಲನಾ ಮಂಡಳಿ (ಎಫ್‌ಆರ್‌ಆರ್‌ಬಿ) ಕೂಡ ಈ ಬಗ್ಗೆ ಪರಿಶೀಲನೆ ನಡೆಸುತ್ತಿದೆ. ಬೈಜುಸ್ ಲೆಕ್ಕ ಪರಿಶೋಧಕರ ವಿರುದ್ಧ ದಂಡಾರ್ಹ ಕ್ರಮಕೈಗೊಳ್ಳುವಂತೆ ಮಂಡಳಿಗೆ ಶಿಫಾರಸು ಮಾಡಲಾಗುವುದು ಎಂದು ಹೇಳಿದ್ದಾರೆ.

'ಅಲ್ಲದೆ, ಲೆಕ್ಕ ಪರಿಶೋಧಕರು ಪೇಟಿಎಂಗೆ ಹೆಚ್ಚಿನ ಪಾವತಿ ಮಾಡಿದ್ದಾರೆ. ಈ ಬಗ್ಗೆಯೂ ಪರಿಶೀಲನೆ ನಡೆಸಲು ಸ್ವಯಂಪ್ರೇರಿತವಾಗಿ ನಿರ್ಧರಿಸಲಾಗಿದೆ' ಎಂದಿದ್ದಾರೆ. 'ನಾವು ಸಲ್ಲಿಸುವ ವರದಿ ಬಗ್ಗೆ ಎಫ್‌ಆರ್‌ಆರ್‌ಬಿಯಿಂದ ವೈಯಕ್ತಿಕ ಹಾಗೂ ಗುಂಪು ಹಂತದಲ್ಲಿ ಪರಾಮರ್ಶೆ ನಡೆಯಲಿದೆ. ಆ ನಂತರ ಲೆಕ್ಕ ಪರಿಶೋಧಕರ ಪಾತ್ರದ ಬಗ್ಗೆ ನಿರ್ದಿಷ್ಟ ಕ್ರಮಕೈಗೊಳ್ಳಲಿದೆ. ಬಳಿಕ ನಾವು ನೀಡಿರುವ ವರದಿಯು ಸಾರ್ವಜನಿಕರಿಗೆ ಲಭ್ಯವಾಗಲಿದೆ' ಎಂದು ತಿಳಿಸಿದ್ದಾರೆ.

ಅಣ್ವಸ್ತ್ರ ಬಳಕೆಗೆ ರಷ್ಯಾ ಸಿದ್ಧವಿದೆ: ಮತ್ತೆ ಗುಡುಗಿದ ಪುಟಿನ್

ಮಾಸ್ಕೊ (ಪಿಟಿಐ/ಎಎಫ್‌ಪಿ): ದೇಶದ ಅಸ್ತಿತ್ವ, ಸ್ವಾತಂತ್ರ್ಯ ಮತ್ತು ಸಾರ್ವಭೌಮತೆಗೆ ಧಕ್ಕೆ ಉಂಟಾದರೆ ಅಣ್ವಸ್ತ್ರ ಬಳಸಲು ಸಿದ್ಧ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಎಚ್ಚರಿಸಿದ್ದಾರೆ.

ರಷ್ಯಾದ ಸರ್ಕಾರಿ ಸುದ್ದಿ ವಾಹಿನಿ ಬುಧವಾರ ಪ್ರಸಾರ ಮಾಡಿರುವ ಸಂದರ್ಶನದಲ್ಲಿ ಮಾತನಾಡಿರುವ ಪುಟಿನ್, ಅಣ್ವಸ್ತ್ರ ಯುದ್ಧವನ್ನು ಪ್ರಚೋದಿಸುವಂತಹ ಯಾವುದೇ ಬೆಳವಣಿಗೆಯನ್ನು ಅಮೆರಿಕ ತಪ್ಪಿಸುವ ವಿಶ್ವಾಸವಿದೆ. ಆದರೆ, ರಷ್ಯಾದ ಅಣ್ವಸ್ತ್ರ ಪಡೆಗಳು ಅಂತಹ ಸನ್ನಿವೇಶ ಎದುರಾದರೆ ಅಣ್ವಸ್ತ್ರ ಪ್ರಯೋಗಿಸಲು ಸಜ್ಜಾಗಿವೆ. ರಷ್ಯಾದ ಬಳಿ ಅತ್ಯಾಧುನಿಕ ಪರಮಾಣು ಶಸ್ತ್ರಾಸ್ತ್ರಗಳು ಇವೆ. ನಮ್ಮ ಬಳಿ ಇರುವ ಅಣ್ವಸ್ತ್ರಗಳು ಅಮೆರಿಕ ಹೊಂದಿರುವ ಅಣ್ವಸ್ತ್ರಗಳಿಗಿಂತಲೂ ಹೆಚ್ಚು ಅತ್ಯಾಧುನಿಕವಾಗಿವೆ ಎಂದು ಹೇಳಿದ್ದಾರೆ.



ವ್ಲಾಡಿಮಿರ್ ಪುಟಿನ್

ಉಕ್ರೇನ್ ಯುದ್ಧ ಭೂಮಿಯಲ್ಲಿ ಪರಮಾಣು ಶಸ್ತ್ರಾಸ್ತ್ರಗಳನ್ನು ಬಳಸುವ ಬಗ್ಗೆ ಯೋಚಿಸಿದ್ದೀರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಪುಟಿನ್, 'ಅದರ ಅಗತ್ಯವಿಲ್ಲ. ಉಕ್ರೇನ್‌ನಲ್ಲಿ ರಷ್ಯಾ ತನ್ನ ಗುರಿಗಳನ್ನು ಸಾಧಿಸುತ್ತದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಯುದ್ಧ ಕೊನೆಗಾಣಿಸಬೇಕಾದರೆ ಯಾವುದೇ ಒಪ್ಪಂದಕ್ಕೆ ಬರಲು ಪಶ್ಚಿಮದಿಂದ ದೃಢವಾದ ಖಾತರಿಗಳು ಬೇಕಾಗುತ್ತವೆ ಎಂದು ಒತ್ತಿ ಹೇಳಿದ ಅವರು, ಶಾಂತಿ ಮಾತುಕತೆಗೆ ಬಾಗಿಲು ಕೂಡ ತೆರೆದರು.

ಸಾಂಪ್ರದಾಯಿಕ ಕೆಲಸದ ಮೇಲೆ 'ಗಿಗ್' ಕರಿನೆರಳು

ನವದೆಹಲಿ (ಪಿಟಿಐ): ದೇಶದಲ್ಲಿ ಹೆಚ್ಚುತ್ತಿರುವ ಗಿಗ್ ಕೆಲಸದ ಪ್ರವೃತ್ತಿಯು ಭವಿಷ್ಯದಲ್ಲಿ ಸಾಂಪ್ರದಾಯಿಕ ಕೆಲಸ ಪದ್ಧತಿಯ ಮೇಲೆ ಕರಿನೆರಳು ಬೀರಲಿದೆ ಎಂದು ಜೀನಿಯಸ್ ಕನ್ಸಲ್ಟೆನ್ಸಿ ವರದಿ ಹೇಳಿದೆ.

ಪ್ರಸ್ತುತ ದೇಶದಲ್ಲಿ ಮಾಲೀಕರ ಕೈಕೆಳಗೆ ನಿಗದಿಯಾದ ಕೆಲಸ ಮಾಡದೆ ಸ್ವತಂತ್ರವಾಗಿ ಕೆಲಸ ಮಾಡುವಂತಹ ಪ್ರವೃತ್ತಿ ಹೆಚ್ಚುತ್ತಿದೆ. ಇದು ಸಾಂಪ್ರದಾಯಿಕ ಕೆಲಸ ಪದ್ಧತಿಯ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ತಿಳಿಸಿದೆ.

ಈ ಬಗ್ಗೆ ಜೀನಿಯಸ್ ಕನ್ಸಲ್ಟೆನ್ಸಿಯು ಬ್ಯಾಂಕಿಂಗ್, ಫೈನಾನ್ಸ್, ಶಿಕ್ಷಣ, ಎಫ್‌ಎಂಜಿ, ಹಾಸ್ಪಿಟಾಲಿಟಿ, ಮಾನವ ಸಂಪನ್ಮೂಲ, ಮಾಹಿತಿ ತಂತ್ರಜ್ಞಾನ ಹಾಗೂ ತಯಾರಿಕಾ ವಲಯದ 1,310 ಉದ್ಯೋಗಿಗಳನ್ನು ಆನ್‌ಲೈನ್‌ನಲ್ಲಿ ಸಮೀಕ್ಷೆ ನಡೆಸಿ ಈ ವರದಿ ಸಿದ್ಧಪಡಿಸಿದೆ.

ಈ ಪೈಕಿ 80ಕ್ಕೂ ಹೆಚ್ಚು ಉದ್ಯೋಗಿಗಳು ಮುಂದಿನ ದಿನಗಳಲ್ಲಿ 'ಸಾಂಪ್ರದಾಯಿಕ ಕೆಲಸ ಪದ್ಧತಿ'ಯು ನಿಧಾನಗತಿಯಲ್ಲಿ ಕಡಿಮೆಯಾಗುವ ಬಗ್ಗೆ ಅಭಿಪ್ರಾಯ ಹಂಚಿಕೊಂಡಿದ್ದಾರೆ. ಇದು ಉದ್ಯೋಗ ಕ್ಷೇತ್ರದಲ್ಲಿ ಹೊಸ ಮಾದರಿಯ ಬದಲಾವಣೆಯ ಸೂಚಕವಾಗಿದೆ ಎಂದು ವರದಿ ತಿಳಿಸಿದೆ.

ಸಾಂಪ್ರದಾಯಿಕ, ಕಾಯಂ, ಗುತ್ತಿಗೆ ಕೆಲಸದ ಪದ್ಧತಿಗೆ ಹೋಲಿಸಿದರೆ ಗಿಗ್ ಕೆಲಸವು ಆರ್ಥಿಕ ವೆಚ್ಚದ ಕಡಿತಕ್ಕೆ ಸಹಕಾರಿಯಾಗಿದೆ. ಹಲವು ಉದ್ಯಮಗಳಲ್ಲಿ ಗಿಗ್ ಮಾದರಿ ಅಳವಡಿಸಿಕೊಂಡರೆ ಅನುಕೂಲವಾಗಲಿದೆ ಎಂದು ಶೇ 79ರಷ್ಟು ಉದ್ಯೋಗಿಗಳು ಇಂಗಿತ ವ್ಯಕ್ತಪಡಿಸಿದ್ದಾರೆ.

ಎಸ್‌ಸಿಡಿಸಿಸಿ: 7ನೇ ಬಾರಿಗೆ ಅಧ್ಯಕ್ಷರಾಗಿ ರಾಜೇಂದ್ರಕುಮಾರ್

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗೆ (ಎಸ್‌ಸಿಡಿಸಿಸಿ) ಸತತ ಏಳನೇ ಅವಧಿಗೆ ಅಧ್ಯಕ್ಷರಾಗಿ ಎಂ.ಎನ್. ರಾಜೇಂದ್ರಕುಮಾರ್ ಅಧಿಕಾರ ಸ್ವೀಕರಿಸಿದರು.



ರಾಜೇಂದ್ರ ಕುಮಾರ್

ಬುಧವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜೇಂದ್ರಕುಮಾರ್ ಅವರನ್ನು ಅಭಿನಂದಿಸಿದ ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್, 'ರಾಜೇಂದ್ರಕುಮಾರ್ ಅವರು 30 ವರ್ಷಗಳಿಂದ ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಸಹಕಾರ ಕ್ಷೇತ್ರವನ್ನು ಬೆಳೆಸಿದ್ದಾರೆ. ಏಳನೇ ಬಾರಿ ಅಧ್ಯಕ್ಷರಾಗಿರುವುದು ದಾಖಲೆಯಾಗಿದೆ' ಎಂದರು.

'ಅವರು 75ನೇ ಜನ್ಮದಿನ ಆಚರಿಸುವ ವೇಳೆಗೆ ಅವರಿಗೆ ಅಧ್ಯಕ್ಷ ಸ್ಥಾನದ ಅವಕಾಶ ಮತ್ತೊಮ್ಮೆ ದೊರೆತಿದೆ. ಬ್ಯಾಂಕ್ ಅಧ್ಯಕ್ಷರಾಗಿ ಅವರು ಅಧಿಕಾರ ವಹಿಸಿಕೊಳ್ಳುವಾಗ ಇದ್ದ ₹3,500 ಕೋಟಿ ವಹಿವಾಟು ಈಗ ₹13,500 ಕೋಟಿಗೆ ತಲುಪಿದೆ' ಎಂದು ಹೇಳಿದರು.

ಅವಿರೋಧವಾಗಿ ಆಯ್ಕೆಯಾದ ರಾಜೇಂದ್ರಕುಮಾರ್ ಅವರಿಗೆ ಜಿಲ್ಲೆಯ ಸಹಕಾರಿಗಳು ಬೆಳ್ಳಿಗದೆ ನೀಡಿ ಸನ್ಮಾನಿಸಿದರು.

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)			
ಕೋಕ	18000-28500	ಹೊಸಚಾಲಿ	30599-34199
ಹೊಸತು	28500-34500	ಶಿವಮೊಗ್ಗ	
ಹಳತು	34500-43000	ಬೆಟ್ಟೆ	38100-53566
ಕಾರ್ಕಳ		ಗೊರಬಲು	18179-33609
ಹೊಸತು	25000-35000	ರಾಶಿ	26509-48399
ಹಳತು	30000-44000	ಸರಕು	461-82696
ಕುಮಟ		ಸಿದ್ದಾಪುರ	
ಬೆಟ್ಟೆ	37499-42109	ಬಿಳಿಗೋಟು	15300-27608
ಚಿಪ್ಪು	23569-28569	ಚಾಲಿ	28889-35899
ಫ್ಯಾಕ್ಟರಿ	11099-21129	ಹೊಸಚಾಲಿ	29108-34539
ಹಳೆಚಾಲಿ	33599-37099	ಕೆಂಪುಗೋಟು	29700-33189

'ದ್ವಿಪಕ್ಷೀಯ ಒಪ್ಪಂದ ಕೇವಲ ಗಡಿ ಸಮಸ್ಯೆಗೆ ಸಂಬಂಧಿಸಿದ್ದಲ್ಲ'

ಬೀಜಿಂಗ್ (ಪಿಟಿಐ): ಚೀನಾ–ಭಾರತ ದ್ವಿಪಕ್ಷೀಯ ಒಪ್ಪಂದವು ಕೇವಲ ಎರಡು ದೇಶಗಳ ನಡುವಿನ ಗಡಿ ವಿವಾದಕ್ಕೆ ಮಾತ್ರ ಸಂಬಂಧಿಸಿದ್ದಲ್ಲ ಎಂದು ಚೀನಾ ಬುಧವಾರ ಪ್ರತಿಪಾದಿಸಿದೆ.

ಎರಡು ದೇಶಗಳ ನಡುವೆ ತಪ್ಪು ತಿಳಿವಳಿಕೆ ಮತ್ತು ತಪ್ಪು ನಿರ್ಣಯಗಳನ್ನು ಹೋಗಲಾಡಿಸಲು ಪರಸ್ಪರ ವಿಶ್ವಾಸವನ್ನು ಹೆಚ್ಚಿಸಬೇಕು ಎಂದು ಚೀನಾ ಕರೆ ನೀಡಿದೆ.

2020ರ ಜೂನ್‌ನಲ್ಲಿ ಗಾಲ್ವನ್ ಕಣಿವೆಯಲ್ಲಿ ಎರಡೂ ದೇಶಗಳ ನಡುವೆ ನಾಲ್ಕು ದಶಕಗಳಲ್ಲಿಯೇ ಗಂಭೀರವಾದ ಸೇನಾ ಸಂಘರ್ಷ ನಡೆದಿತ್ತು.

ಅದರ ನಂತರ ಗಡಿಯಲ್ಲಿ ಶಾಂತಿ ನೆಲಸದ ಹೊರತು ಚೀನಾದೊಂದಿಗಿನ ಒಪ್ಪಂದಕ್ಕೆ ಅರ್ಥವಿಲ್ಲ ಎಂದು ಭಾರತ ಪ್ರತಿಪಾದಿಸಿತ್ತು.

ಯಹೂದಿ ಪಂಡಿತನ ಟೋಪಿ ತೆಗೆಸಿದ ಸೌದಿ ಅಧಿಕಾರಿಗಳು

ದುಬೈ(ಎಪಿ): ಸತ್ಯಶೋಧನಾ ಅಭಿಯಾನದ ಅಂಗವಾಗಿ ಸೌದಿ ಅರೇಬಿಯಾಕ್ಕೆ ತೆರಳಿದ್ದ ಅಮೆರಿಕದ ಧಾರ್ಮಿಕ ಸ್ವಾತಂತ್ರ್ಯ ಆಯೋಗದ ನಿಯೋಗದಲ್ಲಿದ್ದ ಯಹೂದಿ ಪಂಡಿತರೊಬ್ಬರಿಗೆ ಸಾರ್ವಜನಿಕವಾಗಿ ಟೋಪಿ (ಕಿಪ್ಪಾ) ಧರಿಸದಂತೆ ಅಧಿಕಾರಿಗಳು ಆದೇಶಿಸಿದ ಕಾರಣ ನಿಯೋಗವು ಪ್ರವಾಸವನ್ನು ಅರ್ಧದಲ್ಲೇ ಮೊಟಕುಗೊಳಿಸಿದೆ.

ಅಧಿಕಾರಿಗಳ ಈ ಕ್ರಮವು ಸೌದಿ ರಾಜ ಮೊಹಮ್ಮದ್ ಬಿನ್ ಸಲ್ಮಾನ್ ಅವರು ತಮ್ಮ ಆಡಳಿತದಲ್ಲಿ ಸಾಧಿಸಿರುವ ಪ್ರಗತಿಯನ್ನು ಸೂಚಿಸುತ್ತಿದೆಯೇ ಎಂದು ಯಹೂದಿ ಪಂಡಿತ ಅಬ್ರಹಾಂ ಕೂಪರ್ ಪ್ರಶ್ನಿಸಿದ್ದಾರೆ.

ಸೌದಿ ಅರೇಬಿಯಾದ ಪರಿಸ್ಥಿತಿ ಸಂಕೀರ್ಣವಾಗಿದೆ ಎಂದು ನಿಯೋಗದಲ್ಲಿದ್ದ ನ್ಯೂಯಾರ್ಕ್ ಸಿಟಿಯ ರೆವರೆಂಡ್ ಫ್ರೆಡೆರಿಕ್ ಡೇವಿ ಹೇಳಿದರು.

ಟೋಪಿ ತೆಗೆಯಲು ಆದೇಶಿಸಿರುವುದು ದುರದೃಷ್ಟಕರ. ತಪ್ಪುಗ್ರಹಿಕೆಯಿಂದ ಈ ರೀತಿ ಮಾಡಲಾಗಿದೆ ಎಂದು ಸೌದಿ ಅರೇಬಿಯಾದ ರಾಯಭಾರ ಕಚೇರಿಯು ಆನ್‌ಲೈನ್ ಪ್ರಕಟಣೆಯಲ್ಲಿ ಹೇಳಿದೆ.

ಸೌದಿ ಅರೇಬಿಯಾದ ಮಣ್ಣಿನ ಗೋಡೆಗಳ ಗ್ರಾಮ ದಿರಿಯಾಕ್ಕೆ ನಿಯೋಗವು ಭೇಟಿ ನೀಡಿದ್ದ ವೇಳೆ ಅಧಿಕಾರಿಗಳು ಟೋಪಿ ತೆಗೆಯುವಂತೆ ಅಬ್ರಹಾಂ ಕೂಪರ್‌ಗೆ ಸೂಚಿಸಿದ್ದರು.

'ಆಕ್ರಮಣಕ್ಕೆ ಯತ್ನಿಸಿದ 234 ದಾಳಿಕೋರರ ಹತ್ಯೆ'

ಮಾಸ್ಕೊ (ಎಪಿ): ರಷ್ಯಾದ ಗಡಿ ಪ್ರದೇಶಗಳ ಮೇಲೆ ಆಕ್ರಮಣ ನಡೆಸಲು ಯತ್ನಿಸಿದ 234 ದಾಳಿಕೋರರನ್ನು ಸೇನೆ ಮತ್ತು ಭದ್ರತಾ ಪಡೆಗಳು ಮಂಗಳವಾರ ರಾತ್ರಿ ಹತ್ಯೆ ಮಾಡಿವೆ ಎಂದು ರಷ್ಯಾ ರಕ್ಷಣಾ ಸಚಿವಾಲಯ ತಿಳಿಸಿದೆ.

ಉಕ್ರೇನ್ ಸರ್ಕಾರ ಮತ್ತು ಉಕ್ರೇನ್ ಭಯೋತ್ಪಾದಕ ಗುಂಪುಗಳು ಈ ಆಕ್ರಮಣಕ್ಕೆ ಯತ್ನಿಸಿದ್ದವು. ರಷ್ಯಾದ ಸೇನೆ ಮತ್ತು ಗಡಿ ಭದ್ರತಾ ಪಡೆಗಳು ದಾಳಿಕೋರರನ್ನು ಹತ್ತಿಕ್ಕಲು ಮತ್ತು ಗಡಿಯಾಚೆಗಿನ ದಾಳಿ ತಡೆಯಲು ಸಮರ್ಥವಾಗಿವೆ. ದಾಳಿಕೋರರ ಏಳು ಟ್ಯಾಂಕ್‌ಗಳು ಮತ್ತು ಐದು ಶಸ್ತ್ರಸಜ್ಜಿತ ವಾಹನಗಳನ್ನು ಧ್ವಂಸಗೊಳಿಸಲಾಗಿದೆ ಎಂದು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಆದರೆ, ಈ ಸಶಸ್ತ್ರ ಆಕ್ರಮಣವು ರಷ್ಯಾದ ಅಧ್ಯಕ್ಷೀಯ ಚುನಾವಣೆಗೆ ಕೆಲವೇ ದಿನಗಳ ಮೊದಲು ಗಡಿ ಪ್ರದೇಶವನ್ನು ಆತಂಕಕ್ಕೀಡು ಮಾಡಿದೆ. ಉಕ್ರೇನ್‌ಗಾಗಿ ಹೋರಾಡುತ್ತಿರುವ ರಷ್ಯಾದ ಸ್ವಯಂಸೇವಕರು ಗಡಿಯನ್ನು ದಾಟಿದ್ದಾರೆ ಎಂದು ಉಕ್ರೇನ್‌ನ ಅಧಿಕಾರಿಗಳು ಹೇಳಿದ್ದಾರೆ.

ದಿ ಫ್ರೀಡಂ ಆಫ್ ರಷ್ಯಾ ಲೀಜನ್, ದಿ ರಷ್ಯನ್ ವಾಲಂಟೀರ್ ಕೋರ್ ಮತ್ತು ದಿ ಸೈಬೀರಿಯನ್ ಬೆಟಾಲಿಯನ್, ರಷ್ಯಾದ ಗಡಿ ಪ್ರದೇಶಗಳ ದೃಶ್ಯವಿರುವ ಕೆಲವು ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಬಿಡುಗಡೆ ಮಾಡಿದ್ದು, 'ಪುಟಿನ್ ಸರ್ವಾಧಿಕಾರದಿಂದ ವಿಮೋಚಿತ ರಷ್ಯಾ ಬೇಕು' ಎಂದು ಅದರಲ್ಲಿ ಹೇಳಿವೆ. ಆದರೆ, ಈ ವಿಡಿಯೊಗಳ ನೈಜತೆ ಪರಿಶೀಲಿಸಲು ಸಾಧ್ಯವಾಗಿಲ್ಲ.

ಸಸ್ಯಜನ್ಯ ತೈಲ ಆಮದು ಶೇ 13ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಕಳೆದ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ಸಾಲಿನ ಫೆಬ್ರುವರಿಯಲ್ಲಿ ಸಸ್ಯಜನ್ಯ ತೈಲ ಆಮದು ಪ್ರಮಾಣವು ಶೇ 13ರಷ್ಟು ಇಳಿಕೆಯಾಗಿದೆ.

ಹಿಂದಿನ ವರ್ಷದ ಫೆಬ್ರುವರಿಯಲ್ಲಿ 11.14 ಲಕ್ಷ ಟನ್ ಆಮದಾಗಿತ್ತು. ಈ ಫೆಬ್ರುವರಿಯಲ್ಲಿ 9.75 ಲಕ್ಷ ಟನ್‌ಗೆ ಇಳಿಕೆಯಾಗಿದೆ ಎಂದು ಭಾರತೀಯ ಎಣ್ಣೆ ಗಿರಣಿ ಮಾಲೀಕರ ಸಂಘ (ಎಸ್‌ಇಎ) ಬುಧವಾರ ತಿಳಿಸಿದೆ.

ಒಟ್ಟಾರೆ ಆಮದಿನಲ್ಲಿ ಖಾದ್ಯ ತೈಲವು 10.98 ಲಕ್ಷ ಟನ್‌ನಿಂದ 9.67 ಲಕ್ಷ ಟನ್‌ಗೆ ಇಳಿಕೆಯಾಗಿದೆ. ಖಾದ್ಯೇತರ ತೈಲ ಆಮದು 16,006 ಟನ್‌ನಿಂದ 7 ಸಾವಿರ ಟನ್‌ಗೆ ಕುಸಿತ ಕಂಡಿದೆ.

2022–23ರ ತೈಲ ಮಾರುಕಟ್ಟೆ ವರ್ಷಕ್ಕೆ ಹೋಲಿಸಿದರೆ 2023–24ರ ಮಾರುಕಟ್ಟೆ ವರ್ಷದ ಮೊದಲ ನಾಲ್ಕು ತಿಂಗಳ (ನವೆಂಬರ್–ಫೆಬ್ರುವರಿ) ಅವಧಿಯಲ್ಲಿ ಒಟ್ಟು ಸಸ್ಯಜನ್ಯ ತೈಲ ಆಮದು ಪ್ರಮಾಣವು 58.87 ಲಕ್ಷ ಟನ್‌ನಿಂದ 46.47 ಲಕ್ಷ ಟನ್‌ಗೆ ಇಳಿದಿದೆ. ಒಟ್ಟಾರೆ ಶೇ 21ರಷ್ಟು ಕುಸಿತ ಕಂಡಿದೆ.

ಖಾದ್ಯ ತೈಲ ಆಮದು 58.44 ಲಕ್ಷ ಟನ್‌ನಿಂದ 46.15 ಲಕ್ಷ ಟನ್‌ಗೆ ಇಳಿದಿದೆ. ಖಾದ್ಯೇತರ ತೈಲ ಆಮದು 43,135 ಟನ್‌ನಿಂದ 32,412 ಟನ್‌ಗೆ ಕುಸಿದಿದೆ ಎಂದು ಎಸ್‌ಇಎ ತಿಳಿಸಿದೆ.

ನಾಗ್ಪುರದಲ್ಲಿ ನೆಲೆಸಿರುವ ಸುಮಾರು 2000 ಪಾಕಿಸ್ತಾನಿ ಹಿಂದೂಗಳಲ್ಲಿ ಸಂತಸ

ವಲಸಿಗರಲ್ಲಿ ಪೌರತ್ವ ಪಡೆಯುವ ತವಕ

ನಾಗ್ಪುರ (ಪಿಟಿಐ): ಇಲ್ಲಿ ನೆಲೆಸಿರುವ ಸುಮಾರು 2,000 ಪಾಕಿಸ್ತಾನಿ ಹಿಂದೂಗಳಲ್ಲಿ ಸಂತಸ ಮನೆ ಮಾಡಿದೆ. ಕೇಂದ್ರ ಸರ್ಕಾರ ಸಿಎಎ ಜಾರಿಗೊಳಿಸಿರುವುದೇ ಇದಕ್ಕೆ ಕಾರಣ. ಹೀಗಾಗಿ ಇವರೆಲ್ಲ ಭಾರತೀಯ ಪೌರತ್ವ ಪಡೆಯುವ ತಯಾರಿಯಲ್ಲಿ ತೊಡಗಿದ್ದಾರೆ.

ಪದೇ ಪದೇ ವೀಸಾ ವಿಸ್ತರಣೆ ಮತ್ತು ಇತರ ದಾಖಲೆಗಳನ್ನು ಪಡೆದು ಭಾರತದಲ್ಲಿ ನೆಲೆಸಿರುವ ಈ ಜನರು ಇದೀಗ, ಭಾರತೀಯ ಪೌರತ್ವಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಪ್ರಕ್ರಿಯೆಗಳ ಬಗ್ಗೆ ತಿಳಿದುಕೊಳ್ಳತೊಡಗಿದ್ದಾರೆ. ಅಲ್ಲದೆ, ಭಾರತಕ್ಕೆ ಪ್ರವೇಶಿಸಿದ ನಿರಾಶ್ರಿತರ ಕಟ್‌-ಆಫ್ ದಿನಾಂಕದಲ್ಲಿ (2014ರ ಡಿಸೆಂಬರ್ 31) ಸಡಿಲಿಕೆ ಮಾಡುವಂತೆಯೂ ಅವರು ಕೇಂದ್ರ ಸರ್ಕಾರವನ್ನು ಕೋರಿದ್ದಾರೆ.

ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಘೋಟ್ಕಿ ಪಟ್ಟಣದ ವಿನೋದ್ ರಹೇಜಾ ಅವರು 2014ರ ಡಿಸೆಂಬರ್ 31ರಂದು 'ವಿಸಿಟ್ ವೀಸಾ' ಅಡಿಯಲ್ಲಿ ವಾಘಾ-ಅಟಾರಿ ಗಡಿಯ ಮೂಲಕ ಭಾರತ ಪ್ರವೇಶಿಸಿದರು. ಅವರ ಕುಟುಂಬದ ಏಳು ಮಂದಿಯೂ ಅವರೊಂದಿಗೆ ಭಾರತಕ್ಕೆ ಬಂದರು. ಅವರು ನಾಗ್ಪುರದ ಜರಿಪಟ್ಕಾ ಪ್ರದೇಶದಲ್ಲಿ ನೆಲೆಸಿದ್ದಾರೆ. ಸಿಎಎ ಅಡಿಯಲ್ಲಿ ಭಾರತೀಯ ಪೌರತ್ವ ದೊರೆಯುವ ಅವಕಾಶ ಲಭಿಸಿರುವುದು ಸಂತಸ ತಂದಿದೆ ಎಂದು ಅವರು ಪ್ರತಿಕ್ರಿಯಿಸಿದ್ದಾರೆ. ಇದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರಿಗೆ ಧನ್ಯವಾದ ಅರ್ಪಿಸುವುದಾಗಿ ಅವರು ಹೇಳಿದರು.

ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದ ಕ್ವೆಟ್ಟಾದಿಂದ ತಮ್ಮ ಕುಟುಂಬದೊಂದಿಗೆ 2012ರಲ್ಲಿ ಭಾರತಕ್ಕೆ ಬಂದಿರುವ ಸಾಗರ್ ವಾಧ್ವಾ ಅವರೂ ಭಾರತದ ಪೌರತ್ವ ಪಡೆಯಲು ಉತ್ಸುಕರಾಗಿದ್ದಾರೆ. ಭಾರತಕ್ಕೆ ಬಂದಾಗ 9ನೇ ತರಗತಿಯ ವಿದ್ಯಾರ್ಥಿಯಾಗಿದ್ದ ಅವರಿಗೀಗ 27 ವರ್ಷ. ಪೌರತ್ವಕ್ಕಾಗಿ ಆನ್‌ಲೈನ್ ಅರ್ಜಿ ಸಲ್ಲಿಸಿರುವುದಾಗಿ ಅವರು ಪ್ರತಿಕ್ರಿಯಿಸಿದರು.

'ಸಿಎಎ ವಿರುದ್ಧ ಕಾನೂನು ಹೋರಾಟ'

ತಿರುವನಂತಪುರ (ಪಿಟಿಐ): ಸಿಎಎ ಕುರಿತು ಕಾನೂನು ಹೋರಾಟ ಕೈಗೊಳ್ಳಲು ಕೇರಳ ಸರ್ಕಾರ ನಿರ್ಧರಿಸಿದೆ. ಈ ಕುರಿತು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದಲ್ಲಿ ಬುಧವಾರ ನಡೆದ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಸಿಎಎ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ಇರುವ ಮೂಲ ದಾವೆಗೆ ಸಂಬಂಧಿಸಿದಂತೆ ಕಾನೂನು ಪ್ರಕ್ರಿಯೆಗಳನ್ನು ಪ್ರಾರಂಭಿಸುವ ಜವಾಬ್ದಾರಿಯನ್ನು ಅಡ್ವೊಕೇಟ್ ಜನರಲ್‌ಗೆ ವಹಿಸಲಾಗಿದೆ ಎಂದು ಮುಖ್ಯಮಂತ್ರಿ ಕಚೇರಿಯ ಪ್ರಕಟಣೆ ತಿಳಿಸಿದೆ. ಕೇರಳದಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಜಾರಿಗೊಳಿಸುವುದಿಲ್ಲ ಎಂದೂ ಈ ಹೇಳಿಕೆಯಲ್ಲಿ ಸರ್ಕಾರ ದೃಢಪಡಿಸಿದೆ.

ಕೇಂದ್ರದ್ದು 'ಕೊಳಕು ಮತಬ್ಯಾಂಕ್ ರಾಜಕೀಯ'– ಕೇಜ್ರಿವಾಲ್

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಗೂ ಮುನ್ನ ಸಿಎಎ ಅನುಷ್ಠಾನವು ಬಿಜೆಪಿಯ 'ಕೊಳಕು ಮತಬ್ಯಾಂಕ್ ರಾಜಕೀಯ' ಆಗಿದ್ದು, ಈ ಕಾಯ್ದೆಯನ್ನು ರದ್ದುಗೊಳಿಸಬೇಕು ಎಂಬುದು ಜನರ ಅಪೇಕ್ಷೆಯಾಗಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ತಿಳಿಸಿದರು.

'ಸಿಎಎ ಅನುಷ್ಠಾನದ ಬಳಿಕ ಪಕ್ಕದ ರಾಷ್ಟ್ರಗಳ 1.5 ಕೋಟಿ ಅಲ್ಪಸಂಖ್ಯಾತರು ಭಾರತಕ್ಕೆ ಬಂದರೂ ಅಪಾಯಕಾರಿ ಪರಿಸ್ಥಿತಿ ಉಂಟಾಗುತ್ತದೆ. ಅದು 1947ಕ್ಕಿಂತಲೂ ದೊಡ್ಡ ವಲಸೆಯಾಗಲಿದೆ. ಕಾನೂನು ಮತ್ತು ಸುವ್ಯವಸ್ಥೆ ಕಾಯ್ದುಕೊಳ್ಳುವುದು ಕಷ್ಟವಾಗುತ್ತದೆ. ಅತ್ಯಾಚಾರ ಮತ್ತು ದರೋಡೆಗಳು ಹೆಚ್ಚಾಗಬಹುದು' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಆತಂಕ ವ್ಯಕ್ತಪಡಿಸಿದರು.

ಈಶಾನ್ಯದಲ್ಲಿ ಮುಂದುವರಿದ ಪ್ರತಿಭಟನೆ



ಸಿಎಎ ವಿರೋಧಿಸಿ ಆಲ್ ಅಸ್ಸಾಂ ವಿದ್ಯಾರ್ಥಿಗಳ ಒಕ್ಕೂಟದ (ಎಎಎಸ್‌ಯು) ಸದಸ್ಯರು ಬುಧವಾರ ಅಸ್ಸಾಂನ ಸೋನಿತ್‌ಪುರದಲ್ಲಿ ಪಂಜಿನ ಮೆರವಣಿಗೆ ನಡೆಸಿದರು —ಪಿಟಿಐ ಚಿತ್ರ

ಗುವಾಹಟಿ (ಪಿಟಿಐ): ಈಶಾನ್ಯ ಭಾರತದ ಎಂಟು ರಾಜ್ಯಗಳ ಪ್ರಮುಖ ವಿದ್ಯಾರ್ಥಿ ಸಂಘವಾದ ಈಶಾನ್ಯ ವಿದ್ಯಾರ್ಥಿಗಳ ಸಂಘಟನೆ (ಎನ್‌ಇಎಸ್‌ಒ) ನೇತೃತ್ವದಲ್ಲಿ ಬುಧವಾರ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ವಿರೋಧಿಸಿ ಪ್ರತಿಭಟನೆ ನಡೆಯಿತು. ಪ್ರತಿಭಟನೆನಿರತರು ಸಿಎಎ ನಿಯಮಗಳ ಪ್ರತಿಗಳನ್ನು ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು. ಈ ಕಾಯ್ದೆಯನ್ನು ವಾಪಸ್ ಪಡೆಯುವಂತೆ ಆಗ್ರಹಿಸಿದರು.

ರಾಯಜೋರ್ ದಳ, ಬೀರ್ ಲಾಚಿತ್ ಸೇನಾ ಮತ್ತು ಕೃಷಕ್ ಮುಕ್ತಿ ಸಂಗ್ರಾಮ ಸಮಿತಿ ಸದಸ್ಯರು ಶಿವಸಾಗರದಲ್ಲಿ ಮೆರವಣಿಗೆ ಆಯೋಜಿಸಿದ್ದರು. ಈ ವೇಳೆ ಪೊಲೀಸರು ಅವರನ್ನು ತಡೆದಾಗ, ಪ್ರತಿಭಟನೆನಿರತರು ಮತ್ತು ಪೊಲೀಸರು ನಡುವೆ ಸಣ್ಣ ಪ್ರಮಾಣದಲ್ಲಿ ಘರ್ಷಣೆ ನಡೆಯಿತು. ಪ್ರತಿಭಟನೆ ನಡೆಸುತ್ತಿದ್ದ ಕೆಲ ಮುಖಂಡರನ್ನು ಪೊಲೀಸರು ಬಂಧಿಸಿದರು.

ಸತ್ಯಾಗ್ರಹಕ್ಕೆ ಕರೆ: ಸಿಎಎ ಅನುಷ್ಠಾನ ವಿರೋಧಿಸಿ ಆಲ್ ಅಸ್ಸಾಂ ವಿದ್ಯಾರ್ಥಿಗಳ ಒಕ್ಕೂಟ (ಎಎಎಸ್‌ಯು) ರಾಜ್ಯದಾದ್ಯಂತ ಸತ್ಯಾಗ್ರಹ ಆರಂಭಿಸಲು ಬುಧವಾರ ಕರೆ ನೀಡಿದೆ.

ವಿಶ್ವಾಸಮತ ಗೆದ್ದ ನಾಯಬ್ ಸೈನಿ

ಹರಿಯಾಣ: ತರಾತುರಿಯಲ್ಲಿ ಕರೆದ ಅಧಿವೇಶನ– ಕಾಂಗ್ರೆಸ್

ಚಂಡೀಗಢ (ಪಿಟಿಐ): ಹರಿಯಾಣದ ನಾಯಬ್ ಸಿಂಗ್ ಸೈನಿ ನೇತೃತ್ವದ ಸರ್ಕಾರವು ವಿಧಾನಸಭೆಯಲ್ಲಿ ವಿಶ್ವಾಸ ಮತವನ್ನು ಧ್ವನಿಮತದ ಮೂಲಕ ಬುಧವಾರ ಸಾಬೀತುಪಡಿಸಿತು.

ಇದಕ್ಕೂ ಮೊದಲು, ವಿಶ್ವಾಸಮತ ನಿರ್ಣಯದ ಕುರಿತು ವಿಧಾನಸಭೆಯಲ್ಲಿ ಎರಡು ಗಂಟೆ ಚರ್ಚೆ ನಡೆಯಿತು. ಸೈನಿ ಅವರು ವಿಶ್ವಾಸಮತ ಯಾಚಿಸಿದರು. ಬಳಿಕ, ವಿಧಾನಸಭಾ ಸ್ಪೀಕರ್ ಜ್ಞಾನ್ ಚಂದ್ ಗುಪ್ತಾ ಅವರು ವಿಶ್ವಾಸ ನಿರ್ಣಯವನ್ನು ಮತಕ್ಕೆ ಹಾಕಿದರು.

ವಿಶ್ವಾಸಮತದ ವೇಳೆ ವಿಧಾನಸಭೆಗೆ ಗೈರುಹಾಜರಾಗುವಂತೆ ಜನನಾಯಕ ಜನತಾ ಪಕ್ಷವು (ಜೆಜೆಪಿ) ತನ್ನ ಎಲ್ಲಾ 10 ಶಾಸಕರಿಗೆ ವಿಪ್ ಜಾರಿ ಮಾಡಿತ್ತು. ವಿಶ್ವಾಸಮತ ನಿರ್ಣಯ ಕುರಿತ ಚರ್ಚೆ ಆರಂಭವಾಗುತ್ತಿದ್ದಂತೆ ಜೆಜೆಪಿಯ ಶಾಸಕರು ವಿಧಾನಸಭೆಯಿಂದ ಹೊರ ನಡೆದರು. ಇಂಡಿಯನ್ ನ್ಯಾಷನಲ್ ಲೋಕದಳದ (ಐಎನ್‌ಎಲ್‌ಡಿ) ಏಕೈಕ ಶಾಸಕ ಕೂಡ ಈ ವೇಳೆ ಹಾಜರಿರಲಿಲ್ಲ.

ವಿಶ್ವಾಸಮತವನ್ನು ಮತಪತ್ರದ ಮೂಲಕ ನಡೆಸುವಂತೆ ಕಾಂಗ್ರೆಸ್ ಶಾಸಕರು ಸ್ಪೀಕರ್ ಅವರನ್ನು ಕೇಳಿಕೊಂಡರು. ಆದರೆ ಆ ರೀತಿಯ ಮತದಾನಕ್ಕೆ ಅವಕಾಶ ಇಲ್ಲ ಎಂದು ಸ್ಪೀಕರ್ ಹೇಳಿದರು.

90 ಸದಸ್ಯಬಲದ ಹರಿಯಾಣ ವಿಧಾನಸಭೆಯಲ್ಲಿ ಬಿಜೆಪಿಯು 41 ಶಾಸಕರ ಬಲ ಹೊಂದಿದೆ. ಅಲ್ಲದೇ, ಆರು ಮಂದಿ ಪಕ್ಷೇತರ ಶಾಸಕರು ಮತ್ತು ಹರಿಯಾಣ ಲೋಕಹಿತ ಪಕ್ಷದ ಏಕೈಕ ಶಾಸಕನ ಬೆಂಬಲ ಬಿಜೆಪಿಗೆ ಇದೆ. ರಾಜ್ಯದ ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್ 30 ಶಾಸಕರನ್ನು ಹೊಂದಿದೆ.



ಹರಿಯಾಣ ವಿಧಾನಸಭೆಯ ವಿಶೇಷ ಅಧಿವೇಶನದಲ್ಲಿ ಮುಖ್ಯಮಂತ್ರಿ ನಾಯಬ್ ಸಿಂಗ್ ಸೈನಿ —ಪಿಟಿಐ ಚಿತ್ರ

ಸೈನಿ ಅವರು ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಮಂಗಳವಾರ ಪ್ರಮಾಣವಚನ ಸ್ವೀಕರಿಸಿದ್ದರು. ಅದಕ್ಕೂ ಮೊದಲು, ಮನೋಹರಲಾಲ್ ಖಟ್ಟರ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಬುಧವಾರ ಅವರು ತಮ್ಮ ಶಾಸಕ ಸ್ಥಾನಕ್ಕೂ ರಾಜೀನಾಮೆ ಸಲ್ಲಿಸಿದರು.

ಕಾಂಗ್ರೆಸ್ ಅಸಮಾಧಾನ: ವಿಧಾನಸಭೆ ಅಧಿವೇಶನವನ್ನು ತರಾತುರಿಯಲ್ಲಿ ಕರೆದ ಕುರಿತು ವಿಶ್ವಾಸಮತ ನಿರ್ಣಯ ಮಂಡನೆಗೂ ಮೊದಲು ಕಾಂಗ್ರೆಸ್ ಅಸಮಾಧಾನ ವ್ಯಕ್ತಪಡಿಸಿತು. ತುರ್ತಾಗಿ ಅಧಿವೇಶನ ಕರೆಯುವ ಅಗತ್ಯವಿರಲಿಲ್ಲ ಎಂದ ಕಾಂಗ್ರೆಸ್ ನಾಯಕ ಭೂಪಿಂದರ್ ಸಿಂಗ್ ಹೂಡಾ ಅವರು, ಶಾಸಕರಿಗೆ ಅಗತ್ಯ ಸಮಯಾವಕಾಶವನ್ನೂ ನೀಡಲಾಗಿಲ್ಲ ಎಂದು ದೂರಿದರು.


> **ಖಟ್ಟರ್ ಅವಧಿಯಲ್ಲಿ ಹರಿಯಾಣದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳು ನಡೆದಿವೆ. ಅವರಿಂದ ನಾನು ಸಾಕಷ್ಟು ವಿಚಾರಗಳನ್ನು ಕಲಿತಿದ್ದೇನೆ**
> **ನಾಯಬ್ ಸಿಂಗ್ ಸೈನಿ**
> ಹರಿಯಾಣ ಮುಖ್ಯಮಂತ್ರಿ

ಶಾಸಕರೆಲ್ಲರೂ ಸದನಕ್ಕೆ ಬರುವವರೆಗಾದರೂ ಅಧಿವೇಶನವನ್ನು ಮುಂದೂಡಿ ಎಂದು ಹೂಡಾ ಮನವಿ ಮಾಡಿದರು. ಆದರೆ, ನಿಗದಿತ ಸಮಯಕ್ಕೆ ಸದನದಲ್ಲಿ ಹಾಜರಿರುವುದು ಶಾಸಕರ ಕರ್ತವ್ಯ ಎಂದು ಪ್ರತಿಕ್ರಿಯಿಸಿದ ಸ್ಪೀಕರ್, ಈಗ ಚರ್ಚೆ ಆರಂಭಿಸೋಣ. ಅಷ್ಟರಲ್ಲಿ ಶಾಸಕರು ಬರುತ್ತಾರೆ ಎಂದರು.

ಜೆಜೆಪಿಯು ತನ್ನ ಶಾಸಕರಿಗೆ ವಿಪ್ ಜಾರಿ ಮಾಡಿರುವ ಕುರಿತು ವ್ಯಂಗ್ಯವಾಡಿದ ಹೂಡಾ, 'ಜೆಜೆಪಿ ಶಾಸಕರು ಸದನದಲ್ಲಿ ಹಾಜರಿದ್ದು, ಬಿಜೆಪಿ ಸರ್ಕಾರದ ವಿರುದ್ಧ ಮತ ಚಲಾಯಿಸಬೇಕಿತ್ತು. ಆದರೆ ಅವರು ಸದನಕ್ಕೆ ಗೈರಾಗಿದ್ದಾರೆ. ಬಿಜೆಪಿ– ಜೆಜೆಪಿ ಒಳಒಪ್ಪಂದ ಮಾಡಿಕೊಂಡಿರುವುದು ಇದರಿಂದ ತಿಳಿಯುತ್ತದೆ' ಎಂದರು.

'ಜನರನ್ನು ವಂಚಿಸಬೇಡಿ. ವಿಧಾನ ಸಭೆ ವಿಸರ್ಜಿಸಿ, ಹೊಸದಾಗಿ ಚುನಾವಣೆ ನಡೆಸಿ' ಎಂದು ಆಗ್ರಹಿಸಿದರು.

'ವಿಚಾರಣೆಯ ವಿಡಿಯೊ ಚಿತ್ರೀಕರಣ ಕಡ್ಡಾಯ'



ಮುಂಬೈ(ಪಿಟಿಐ): ಎಸ್‌ಸಿ ಮತ್ತು ಎಸ್‌ಟಿಗಳ ವಿರುದ್ಧದ ದೌರ್ಜನ್ಯ ತಡೆ ಕಾಯ್ದೆಗೆ ಸಂಬಂಧಿಸಿದ ಪ್ರಕರಣಗಳ ಕುರಿತು ನಡೆಯುವ ನ್ಯಾಯಾಂಗ ವಿಚಾರಣೆ ಸೇರಿದಂತೆ ಎಲ್ಲ ಕಲಾಪಗಳ ವಿಡಿಯೊ ಚಿತ್ರೀಕರಣ ಮಾಡುವುದು ಕಡ್ಡಾಯ ಎಂದು ಬಾಂಬೆ ಹೈಕೋರ್ಟ್ ಬುಧವಾರ ಆದೇಶಿಸಿದೆ.

ಈ ಕುರಿತ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯನ್ಯಾಯಮೂರ್ತಿ ಡಿ.ಕೆ.ಉಪಾಧ್ಯಾಯ ಹಾಗೂ ನ್ಯಾಯಮೂರ್ತಿ ಎಸ್.ವಿ.ಕೊತ್ವಾಲ್ ಅವರಿದ್ದ ವಿಭಾಗೀಯ ನ್ಯಾಯಪೀಠ, 'ವಿಚಾರಣೆಯ ವಿಡಿಯೊ ಚಿತ್ರೀಕರಣವನ್ನು ಕಡ್ಡಾಯಗೊಳಿಸುವ ಈ ಕಾಯ್ದೆಯ ಸೆಕ್ಷನ್ 15ಎ(10), ನ್ಯಾಯಾಲಯದಲ್ಲಿ ನಡೆಯುವ ವಿಚಾರಣೆಗಳಿಗೂ ಅನ್ವಯಿಸುತ್ತದೆ' ಎಂದು ಹೇಳಿದೆ.

'ಎಸ್‌ಸಿ,ಎಸ್‌ಟಿ ವಿರುದ್ಧದ ದೌರ್ಜನ್ಯ ತಡೆ ಕಾಯ್ದೆಯ ಸೆಕ್ಷನ್ 15ಎ(10) ಕೈಪಿಡಿಯಲ್ಲ, ಅದು ಕಡ್ಡಾಯ ಎಂಬುದನ್ನು ಸ್ಪಷ್ಟಪಡಿಸುತ್ತೇವೆ' ಎಂದು ನ್ಯಾಯಪೀಠ ಹೇಳಿದೆ.

'ಎಸ್‌ಸಿ,ಎಸ್‌ಟಿ ವಿರುದ್ಧದ ದೌರ್ಜನ್ಯ ತಡೆ ಕಾಯ್ದೆಗೆ ಸಂಬಂಧಿಸಿದ ಯಾವುದೇ ವಿಚಾರಣೆ ಇರಲಿ, ಅದರ ವಿಡಿಯೊ ಚಿತ್ರೀಕರಣ ನಡೆಸುವುದು ಅಗತ್ಯ. ಸಂತ್ರಸ್ತರು ಹಾಗೂ ಸಾಕ್ಷಿಗಳಿಗೆ ಪ್ರಕರಣ ಕುರಿತು ಮಾಹಿತಿ ಒದಗಿಸಬೇಕು. ವಿಚಾರಣೆಗೆ ಸಿದ್ಧತೆ ಮಾಡಿಕೊಳ್ಳಲು ಇದರಿಂದ ಅನುಕೂಲವಾಗಲಿದೆ' ಎಂದು ಹೇಳಿದೆ.

'ಸಂತ್ರಸ್ತರು ಹಾಗೂ ಅವರ ಅವಲಂಬಿತರಿಗೆ ಕಾನೂನು ನೆರವು ನೀಡುತ್ತಿರುವ ಸಂಘಟನೆಗಳು ಮತ್ತು ವ್ಯಕ್ತಿಗಳಿಗೂ ಪ್ರಕರಣ ಕುರಿತು ಮಾಹಿತಿ ಒದಗಿಸಬೇಕು' ಎಂದು ನ್ಯಾಯಪೀಠ ಹೇಳಿದೆ.

2019ರಲ್ಲಿ ಡಾ.ಪಾಯಲ್ ತಾಡ್ವಿ ಎಂಬವರು ಆತ್ಮಹತ್ಯೆ ಮಾಡಿಕೊಂಡಿದ್ದರು. ಡಾ.ಪಾಯಲ್ ಆತ್ಮಹತ್ಯೆ ಮಾಡಿಕೊಳ್ಳಲು ಕುಮ್ಮಕ್ಕು ನೀಡಿದ ಆರೋಪ ಎದುರಿಸುತ್ತಿರುವ ವೈದ್ಯರಾದ ಹೇಮಾ ಅಹುಜಾ, ಭಕ್ತಿ ಮೆಹರೆ ಹಾಗೂ ಅಂಕಿತಾ ಖಂಡೇಲ್‌ವಾಲಾ ಅವರು ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆ ವೇಳೆ, ವಿಭಾಗೀಯ ನ್ಯಾಯಪೀಠ ಈ ಆದೇಶ ನೀಡಿದೆ.

2019ರಲ್ಲಿ, ಈ ಪ್ರಕರಣವು ಹೈಕೋರ್ಟ್ ಮುಂದೆ ಬಂದಾಗ, ಕಾಯ್ದೆಯಲ್ಲಿ ಉಲ್ಲೇಖಿಸಲಾಗಿರುವ 'ವಿಚಾರಣೆ' ಎಂಬ ಪದವನ್ನು ಹೇಗೆ ಅರ್ಥೈಸಬೇಕು ಎಂಬ ಬಗ್ಗೆ ಸ್ಪಷ್ಟನೆ ನೀಡುವಂತೆ ಕೋರಿದ್ದ ನ್ಯಾಯಮೂರ್ತಿ ಸಾಧನಾ ಜಾಧವ್, ವಿಷಯವನ್ನು ವಿಭಾಗೀಯ ಪೀಠಕ್ಕೆ ಒಪ್ಪಿಸಿದ್ದರು.

ಅಮೆರಿಕದಲ್ಲಿ ವ್ಯಾಸಂಗ ಮಾಡಲು ವಿದ್ಯಾರ್ಥಿವೇತನ

ಬಾಣಸಿಗನ ಮಗಳಿಗೆ ಸನ್ಮಾನ

ನವದೆಹಲಿ (ಪಿಟಿಐ): ಅಮೆರಿಕದ ವಿಶ್ವವಿದ್ಯಾಲಯದಲ್ಲಿ ಕಾನೂನುಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡಲು ಬಾಣಸಿಗರೊಬ್ಬರ ಮಗಳು ವಿದ್ಯಾರ್ಥಿ ವೇತನ ಪಡೆದಿದ್ದಾಳೆ. ಅವಳ ಸಾಧನೆ ಗುರುತಿಸಿ, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ಇತರ ನ್ಯಾಯಮೂರ್ತಿಗಳು ಆಕೆಯನ್ನು ಬುಧವಾರ ಆತ್ಮೀಯವಾಗಿ ಸನ್ಮಾನಿಸಿದರು.

ಕರ್ತವ್ಯದ ಅವಧಿ ಆರಂಭವಾಗುವ ಮುನ್ನವೇ ನ್ಯಾಯಮೂರ್ತಿಗಳ ಹಜಾರದಲ್ಲಿ ಸೇರಿದ್ದ ನ್ಯಾಯಮೂರ್ತಿಗಳು ಕಾನೂನುಶಾಸ್ತ್ರ ಸಂಶೋಧಕಿ ಪ್ರಜ್ಞಾಗೆ ಎದ್ದುನಿಂತು ಗೌರವ ಸಲ್ಲಿಸಿದರು. ಈಕೆ ಸುಪ್ರೀಂ ಕೋರ್ಟ್‌ನಲ್ಲಿ ಬಾಣಸಿಗರಾಗಿರುವ ಅಜಯ್ ಕುಮಾರ್ ಸಮಾಲ್ ಅವರ ಮಗಳು. ಅಮೆರಿಕದ ಯೂನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯಾ ಅಥವಾ ಯೂನಿವರ್ಸಿಟಿ ಆಫ್ ಮಿಶಿಗನ್‌ನಲ್ಲಿ ವ್ಯಾಸಂಗ ಮಾಡಲು ಈಕೆಗೆ ವಿದ್ಯಾರ್ಥಿ ವೇತನ ದೊರಕಿದೆ.

'ಸ್ವಂತಬಲದಿಂದ ಪ್ರಜ್ಞಾ ಈ ಸಾಧನೆ ಮಾಡಿದ್ದಾಳೆ. ಮುಂದೆ ಅವಳಿಗೆ ಅಗತ್ಯವಿರುವ ಎಲ್ಲವನ್ನೂ ನಾವು ಒದಗಿಸೋಣ. ಅವಳು ದೇಶಕ್ಕೆ ವಾಪಸ್ಸಾಗಿ ಇಲ್ಲಿ ಸೇವೆ ಸಲ್ಲಿಸುವುದನ್ನು ನಾವು ಎದುರು ನೋಡುತ್ತೇವೆ'



ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ಇತರ ನ್ಯಾಯಾಧೀಶರ ಜೊತೆ ಕಾನೂನುಶಾಸ್ತ್ರ ವಿದ್ಯಾರ್ಥಿನಿ ಪ್ರಜ್ಞಾ ಮತ್ತು ಅವರ ಪೋಷಕರು —ಪಿಟಿಐ ಚಿತ್ರ

ಎಂದು ಸಿಜೆಐ ಚಂದ್ರಚೂಡ್ ಅವರು ಆಕೆಯನ್ನು ಸನ್ಮಾನಿಸುವ ವೇಳೆ ಹೇಳಿದರು. ಸುಪ್ರೀಂ ಕೋರ್ಟ್‌ನ ಎಲ್ಲಾ ನ್ಯಾಯಮೂರ್ತಿಗಳು ಸಹಿ ಹಾಕಿರುವ ಭಾರತೀಯ ಸಂವಿಧಾನಕ್ಕೆ ಸಂಬಂಧಿಸಿದ ಮೂರು ಪುಸ್ತಕಗಳನ್ನು ಆಕೆಗೆ ನೀಡಿದರು.

ಅಲ್ಲಿದ್ದ ನ್ಯಾಯಮೂರ್ತಿಗಳು ಪ್ರಜ್ಞಾಗೆ ಶುಭ ಹಾರೈಸಿದರು.

ಪ್ರಜ್ಞಾ ಪೋಷಕರಿಗೂ ಶಾಲುಗಳನ್ನು ಹೊದಿಸಿ ಚಂದ್ರಚೂಡ್ ಅವರು ಗೌರವಿಸಿದರು. ಈ ವೇಳೆ ಅವರಿಬ್ಬರ ಕಣ್ಣುಗಳಲ್ಲಿ ಹೆಮ್ಮೆಯ ಮಿಂಚು ಇತ್ತು.

ಪಿಟಿಐ ಸುದ್ದಿಸಂಸ್ಥೆ ಜೊತೆ ಮಾತನಾಡಿದ ಪ್ರಜ್ಞಾ, ಸಿಜೆಐ ಚಂದ್ರಚೂಡ್ ಅವರು ತಮಗೆ ಸ್ಫೂರ್ತಿ ಎಂದರು. 'ಕೋರ್ಟ್ ಕಲಾಪಗಳು ನೇರ ಪ್ರಸಾರ ಆಗುವ ಕಾರಣ ಚಂದ್ರಚೂಡ್ ಅವರ ಮಾತುಗಳನ್ನು ಎಲ್ಲರೂ ಕೇಳಿಸಿಕೊಳ್ಳಬಹುದಾಗಿದೆ. ಅವರು ಯುವ ವಕೀಲರನ್ನು ಉತ್ತೇಜಿಸುತ್ತಾರೆ. ಅವರ ಮಾತುಗಳು ಮುತ್ತುಗಳಿದ್ದಂತೆ' ಎಂದು ಹೇಳಿದರು.

ಕೇಂದ್ರ ಸರ್ಕಾರದ ನಿರ್ಧಾರಕ್ಕೆ ಶ್ಲಾಘನೆ

ಹೈದರಾಬಾದ್ (ಪಿಟಿಐ): ಪ್ರತಿವರ್ಷ ಸೆಪ್ಟೆಂಬರ್ 17ಅನ್ನು 'ಹೈದರಾಬಾದ್ ವಿಮೋಚನಾ ದಿನಾಚರಣೆ'ಯನ್ನಾಗಿ ಆಚರಿಸಲು ಕೇಂದ್ರ ಗೃಹ ಸಚಿವಾಲಯ ಅಧಿಸೂಚನೆಯನ್ನು ಹೊರಡಿಸಿದೆ.

ಕೇಂದ್ರ ಸಚಿವ ಮತ್ತು ತೆಲಂಗಾಣ ಬಿಜೆಪಿ ಅಧ್ಯಕ್ಷ ಜಿ. ಕಿಶನ್ ರೆಡ್ಡಿ ಮತ್ತು ಮಹಾರಾಷ್ಟ್ರದ ಮಾಜಿ ರಾಜ್ಯಪಾಲ ಸಿ. ವಿದ್ಯಾಸಾಗರ್ ರಾವ್ ಅವರು ಈ ನಿರ್ಧಾರವನ್ನು ಶ್ಲಾಘಿಸಿದ್ದಾರೆ.

ಈ ನಿರ್ಧಾರವನ್ನು ಕೈಗೊಂಡ ಪ್ರಧಾನಿ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಕಿಶನ್ ರೆಡ್ಡಿ ಮತ್ತು ವಿದ್ಯಾಸಾಗರ್ ಅವರು ಧನ್ಯವಾದ ತಿಳಿಸಿದ್ದಾರೆ.

ಪ್ರಸಾರ ಭಾರತಿ ಸುದ್ದಿ ಹಂಚಿಕೆ ಸೇವೆಗೆ ಚಾಲನೆ

ನವದೆಹಲಿ (ಪಿಟಿಐ): ಸುದ್ದಿ ಸಂಸ್ಥೆಗಳಿಗೆ ಸುದ್ದಿ, ಸ್ಪಷ್ಟವಾದ ವಿಡಿಯೊ ಹಾಗೂ ಚಿತ್ರಗಳನ್ನು ಹಂಚಿಕೊಳ್ಳುವ ಪ್ರಸಾರ ಭಾರತಿ ಪಿಬಿ– ಶಬ್ದ್ ಯೋಜನೆಗೆ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಅವರು ಬುಧವಾರ ಚಾಲನೆ ನೀಡಿದರು.

'ಸುಮಾರು 50 ವಿಭಾಗಗಳಲ್ಲಿ ಭಾರತದ ಎಲ್ಲ ಪ್ರಮುಖ ಭಾಷೆಗಳಲ್ಲಿ ಸುದ್ದಿಗಳನ್ನು ಸುದ್ದಿಸಂಸ್ಥೆಗಳಿಗೆ ಒದಗಿಸಲಾಗುವುದು. 'ಪಿಬಿ– ಶಬ್ದ್' ಮೂಲಕ ಒದಗಿಸುವ ಯಾವುದೇ ವಿಡಿಯೊಕ್ಕೆ ದೂರದರ್ಶನದ ಲಾಂಛನ ಬಳಸುವ ಅಗತ್ಯವಿಲ್ಲ' ಎಂದು ಹೇಳಿದರು.

ಜೆಎನ್‌ಯು: 'ನಕ್ಸಲೈಟ್ ಸ್ಟೋರಿ' ಬಿಡುಗಡೆ ಪೂರ್ವ ಪ್ರದರ್ಶನ

ನವದೆಹಲಿ (ಪಿಟಿಐ): ಆರ್‌ಎಸ್‌ಎಸ್‌ನ ವಿದ್ಯಾರ್ಥಿ ಘಟಕ ಎಬಿವಿಪಿ ಸಂಘಟನೆಯು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಆವರಣದಲ್ಲಿ ಬುಧವಾರ 'ಬಸ್ತರ್: ದ ನಕ್ಸಲೈಟ್ ಸ್ಟೋರಿ' ಎಂಬ ಚಿತ್ರದ ಬಿಡುಗಡೆ ಪೂರ್ವ ಪ್ರದರ್ಶನ ನಡೆಸಿತು.

ಈ ಕಾರ್ಯಕ್ರಮದಲ್ಲಿ ಚಿತ್ರ ನಿರ್ದೇಶಕ ಸುದಿಪ್ತೊ ಸೇನ್ ಹಾಗೂ ಮುಖ್ಯ ಪಾತ್ರದಲ್ಲಿ ಅಭಿನಯಿಸಿರುವ ನಟಿ ಅದಾ ಶರ್ಮಾ ಭಾಗವಹಿಸಿದರು. ಚಿತ್ರ ಪ್ರದರ್ಶನ ತಡೆಯುವ ಉದ್ದೇಶದಿಂದ ಹಲವು ಬಾರಿ ವಿದ್ಯುತ್ ಕಡಿತಗೊಳಿಸಲಾಗಿತ್ತು ಎಂದು ಎಬಿವಿಪಿ ಆರೋಪಿಸಿದೆ. ಆದರೆ, ಈ ಚಿತ್ರ ಪ್ರದರ್ಶನಕ್ಕೆ ಎಡಪಂಥೀಯ ಸಂಘಟನೆಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

ಈ ಚಿತ್ರ ಪ್ರದರ್ಶನಕ್ಕೆ ಅವಕಾಶ ನೀಡಿರಲಿಲ್ಲ. ಜೆಎನ್‌ಯುಎಸ್‌ಯು ಚುನಾವಣೆ ಪ್ರಕ್ರಿಯೆ ನಡೆಯುತ್ತಿರುವ ಈ ಹೊತ್ತಿನಲ್ಲಿ ಚಿತ್ರ ಪ್ರದರ್ಶನ ಮಾಡಿರುವುದು ಚುನಾವಣಾ ನೀತಿ ಸಂಹಿತೆಯ ಭಾಗಶಃ ಉಲ್ಲಂಘನೆ ಎಂದು ವಿಶ್ವವಿದ್ಯಾಲಯದ ಚುನಾವಣಾ ಸಮಿತಿ ಹೇಳಿದೆ.

ಈ ಸಂಬಂಧ ಪ್ರತಿಕ್ರಿಯಿಸಿದ ಚುನಾವಣಾ ಸಮಿತಿಯ ಅಧ್ಯಕ್ಷ ಶೈಲೇಂದ್ರ ಕುಮಾರ್, 'ಜೆಎನ್‌ಯುನ 'ಕನ್ವೆನ್ಷನ್ ಸೆಂಟರ್'ನಲ್ಲಿ ಬುಧವಾರ 'ಬಸ್ತರ್: ದ ನಕ್ಸಲೈಟ್ ಸ್ಟೋರಿ' ಪ್ರದರ್ಶನ ಮಾಡಿರುವುದು ಗೊತ್ತಾಗಿದೆ. ಈ ಕುರಿತು ನಮಗೆ ಯಾವುದೇ ಮಾಹಿತಿ ನೀಡಿರಲಿಲ್ಲ. ಜೊತೆಗೆ ಈ ಕಾರ್ಯಕ್ರಮ ಆಯೋಜನೆಗೆ ಅನುಮತಿಯನ್ನೂ ಪಡೆದಿರಲಿಲ್ಲ' ಎಂದು ತಿಳಿಸಿದ್ದಾರೆ.

ಜೆಎನ್‌ಯು ವಿದ್ಯಾರ್ಥಿ ಒಕ್ಕೂಟಕ್ಕೆ ಇದೇ 22ರಂದು ಚುನಾವಣೆ ನಡೆಯಲಿದ್ದು, 24ರಂದು ಫಲಿತಾಂಶ ಪ್ರಕಟವಾಗಲಿದೆ.

ನ್ಯಾಯಾಧೀಶರ ವರ್ಗಾವಣೆಗೆ 'ಸುಪ್ರೀಂ' ಕೊಲಿಜಿಯಂ ಶಿಫಾರಸು

ನವದೆಹಲಿ(ಪಿಟಿಐ): ದೆಹಲಿ ಹೈಕೋರ್ಟ್‌ನ ಇಬ್ಬರು ನ್ಯಾಯಮೂರ್ತಿಗಳನ್ನು ಕರ್ನಾಟಕ ಮತ್ತು ಮಧ್ಯಪ್ರದೇಶ ಹೈಕೋರ್ಟ್‌ಗಳಿಗೆ ವರ್ಗಾವಣೆ ಮಾಡುವಂತೆ ಸುಪ್ರೀಂ ಕೋರ್ಟ್ ಕೊಲಿಜಿಯಂ ಬುಧವಾರ ಶಿಫಾರಸು ಮಾಡಿದೆ.

ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ಅವರನ್ನು ಕರ್ನಾಟಕ ಹೈಕೋರ್ಟ್‌ಗೆ ವರ್ಗಾವಣೆ ಮಾಡುವಂತೆ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಕೊಲಿಜಿಯಂ ಶಿಫಾರಸು ಮಾಡಿದೆ.

ಬೇರೆ ಯಾವುದಾದರೂ ಹೈಕೋರ್ಟ್‌ಗೆ ವರ್ಗಾವಣೆ ಮಾಡುವಂತೆ ನ್ಯಾಯಮೂರ್ತಿ ಕಾಮೇಶ್ವರ ರಾವ್ ಅವರು ಮನವಿ ಮಾಡಿದ್ದರು. ದೆಹಲಿ ಹೈಕೋರ್ಟ್‌ನ ಮತ್ತೊಬ್ಬ ನ್ಯಾಯಮೂರ್ತಿ ಸಂಜೀವ್ ಸಚ್‌ದೇವ ಅವರನ್ನು ಮಧ್ಯಪ್ರದೇಶ ಹೈಕೋರ್ಟ್‌ಗೆ ವರ್ಗಾವಣೆ ಮಾಡುವಂತೆಯೂ ಕೊಲಿಜಿಯಂ ಶಿಫಾರಸು ಮಾಡಿದೆ.

ಸಂಕ್ಷಿಪ್ತ ಸುದ್ದಿ

ವಿದೇಶಿ ಮಂಡಳಿಗಳ ಜೊತೆ ನೇರ ವ್ಯವಹಾರ: ಬಿಸಿಸಿಐ ನಿರ್ಬಂಧ?

ನವದೆಹಲಿ (ಪಿಟಿಐ): ರಾಜ್ಯ ಕ್ರಿಕೆಟ್ ಸಂಸ್ಥೆಗಳು, ತರಬೇತಿ ಶಿಬಿರ, ಟೂರ್ನಿಗಳನ್ನು ನಡೆಸಲು ನೇರವಾಗಿ ವಿದೇಶಿ ಕ್ರಿಕೆಟ್ ಮಂಡಳಿಗಳ ಜೊತೆ ಒಪ್ಪಂದ ಮಾಡಿಕೊಳ್ಳುವುದನ್ನು ನಿರ್ಬಂಧಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮುಂದಾಗಿದೆ. ಮಂಡಳಿಯ ಮುಖಾಂತರವೇ ಈ ಒಪ್ಪಂದಗಳನ್ನು ಮಾಡಿಕೊಳ್ಳುವುದನ್ನು ಕಡ್ಡಾಯ ಮಾಡಲಾಗುವುದು.

ಈ ಸಂಬಂಧ ಮಾ.18ರಂದು ನಡೆಯುವ ಅಪೆಕ್ಸ್ ಕೌನ್ಸಿಲ್ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಿದೆ. ದೆಹಲಿ ಮತ್ತು ಪುದುಚೇರಿ ಘಟಕಗಳು, ಅಂತರ ರಾಷ್ಟ್ರೀಯ ಅನುಭವ ಪಡೆಯುವ ಉದ್ದೇಶದಿಂದ ಪ್ರವಾಸಕ್ಕೆ ಆತಿಥ್ಯ ನೀಡಲು ವಿದೇಶಿ (ಐಸಿಸಿ ಸಹ ಸದಸ್ಯ) ಮಂಡಳಿಗಳ ಜೊತೆ ಮಾತುಕತೆ ನಡೆಸಿದ್ದವು. ಇದರ ಬೆನ್ನಲ್ಲೇ ಮಂಡಳಿ ಈ ನಿರ್ಧಾರ ಕೈಗೊಳ್ಳಲಿದೆ.

ನ್ಯೂಜಿಲೆಂಡ್‌ನ ರಚಿನ್‌ಗೆ ರಿಚರ್ಡ್ ಹ್ಯಾಡ್ಲಿ ಪದಕ

ಕ್ರೈಸ್ಟ್‌ಚರ್ಚ್ (ಪಿಟಿಐ): ಭಾರತದಲ್ಲಿ ನಡೆದ ಏಕದಿನ ವಿಶ್ವಕಪ್‌ ನಲ್ಲಿ ನ್ಯೂಜಿಲೆಂಡ್ ತಂಡದ ಪರ ಮಿಂಚು ಹರಿಸಿದ್ದ ರಚಿನ್ ರವೀಂದ್ರ, ಸರ್ ರಿಚರ್ಡ್ ಹ್ಯಾಡ್ಲಿ ಪದಕ ಗೆದ್ದ ಅತಿ ಕಿರಿಯ ಆಟಗಾರನೆಂಬ ಗೌರವಕ್ಕೆ ಬುಧವಾರ ಭಾಜನರಾದರು. ನ್ಯೂಜಿಲೆಂಡ್‌ನ 'ವರ್ಷದ ಶ್ರೇಷ್ಠ ಆಟಗಾರ'ನಿಗೆ ಈ ಗೌರವ ನೀಡಲಾಗುತ್ತದೆ.



ರಚಿನ್ ರವೀಂದ್ರ

ರಿಚರ್ಡ್ ಹ್ಯಾಡ್ಲಿ ಪದಕದ ಇತಿಹಾಸದಲ್ಲೇ, ಇದನ್ನು ಗೆದ್ದ ಅತಿ ಕಿರಿಯ ಕ್ರಿಕೆಟಿಗ ಎನಿಸಿದ 24 ವರ್ಷದ ರಚಿನ್ ಈ ಸಾಲಿನಲ್ಲಿ ತಂಡದ ಪರ ಟೆಸ್ಟ್ ಮತ್ತು ಸೀಮಿತ ಓವರುಗಳ ಕ್ರಿಕೆಟ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ.

ಮುಂಬೈ ಗೆಲುವಿಗೆ ಕಾಯಿಸಿದ ವಿದರ್ಭ

ರಣಜಿ ಟ್ರೋಫಿ ಕ್ರಿಕೆಟ್ ಫೈನಲ್: ಕರುಣ್ ನಾಯರ್, ಅಕ್ಷಯ್ ಕೆಚ್ಚೆದೆಯ ಆಟ

ಮುಂಬೈ (ಪಿಟಿಐ): ಕರುಣ್ ನಾಯರ್ (74) ಮತ್ತು ನಾಯಕ ಅಕ್ಷಯ್ ವಾಡ್ಕರ್ (ಔಟಾಗದೆ 56, 91ಎಸೆತ) ಅವರ ನೇತೃತ್ವದಲ್ಲಿ ಹೋರಾಟ ಪ್ರದರ್ಶಿಸಿದ ವಿದರ್ಭ ತಂಡ, ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಮುಂಬೈ ತಂಡವು 42ನೇ ಪ್ರಶಸ್ತಿಗೆ ಕಾಯುವಂತೆ ಮಾಡಿದೆ. ವಾಂಖೆಡೆ ಕ್ರೀಡಾಂಗಣದಲ್ಲಿ ಗೆಲುವಿಗೆ 538 ರನ್‌ಗಳ ದೊಡ್ಡ ಪರ್ವತ ಏರಬೇಕಿರುವ ವಿದರ್ಭ ಬುಧವಾರ 5 ವಿಕೆಟ್‌ಗೆ 248 ರನ್‌ಗಳೊಡನೆ ನಾಲ್ಕನೇ ದಿನದಾಟ ಪೂರೈಸಿದೆ.

ಅಂತಿಮ ದಿನವಾದ ಗುರುವಾರ ವಿದರ್ಭ ಗೆಲುವಿಗೆ ಬಾಕಿ ಐದು ವಿಕೆಟ್‌ಗಳಿಂದ ಇನ್ನೂ 290 ರನ್‌ಗಳ ದೂರದ ದಾರಿ ಸಾಗಬೇಕಾಗಿದೆ.

ದೊಡ್ಡ ಗುರಿಯೆದುರು ವಿದರ್ಭ ಸುಲಭವಾಗಿ ಮಣಿಯಬಹುದೆಂಬ ಮುಂಬೈ ಲೆಕ್ಕಾಚಾರ ಹುಸಿಯಾಯಿತು. ನೆಲಕಚ್ಚಿ ಆಡಿದ ಬ್ಯಾಟರ್‌ಗಳು ಮುಂಬೈ ಬೌಲರ್‌ಗಳನ್ನು ಹತಾಶಗೊಳಿಸಿ ಹೋರಾಟವನ್ನು ಕೊನೆಯ ದಿನಕ್ಕೆ ಒಯ್ದರು.

ಕರ್ನಾಟಕದಿಂದ ಈ ವರ್ಷ ವಿದರ್ಭಕ್ಕೆ ವಲಸೆ ಹೋಗಿರುವ ನಾಯರ್ ಹೋರಾಟದ ಮುಂಚೂಣಿಯಲ್ಲಿದ್ದರು. ಮೂರೇ ಬೌಂಡರಿ ಬಾರಿಸಿದರೂ ಅವರು 287 ನಿಮಿಷ ಆಡಿ (220 ಎಸೆತ) ಮುಂಬೈ ಹಾದಿಗೆ ತಡೆಯಾದರು. ಅಜೇಯರಾಗಿರುವ ವಾಡ್ಕರ್ ಅವರೊಂದಿಗೆ ಹರ್ಷ್ ದುಬೆ (11 ಬ್ಯಾಟಿಂಗ್) ಆಟ ಮುಂದುವರಿಸುವರು.



ರಣಜಿ ಟ್ರೋಫಿ ಪಂದ್ಯದ ನಾಲ್ಕನೇ ದಿನವಾದ ಬುಧವಾರ ಅರ್ಧ ಶತಕ ಹೊಡೆದ ಕರುಣ್ ನಾಯರ್ ರಿವರ್ಸ್ ಸ್ವೀಪ್ ಮಾಡಿದರು —ಪಿಟಿಐ ಚಿತ್ರ

ಮುಂಬೈ ತಂಡ ಮೊದಲ ಎರಡು ಅವಧಿಯಲ್ಲಿ ತಲಾ ಎರಡು ವಿಕೆಟ್ ಪಡೆಯಿತು. ಆದರೆ ಅಂತಿಮ ಅವಧಿಯಲ್ಲಿ ಕರುಣ್ ಅವರ ಮಹತ್ವದ ವಿಕೆಟ್ ಪಡೆಯುವಲ್ಲಿ ಯಶಸ್ವಿ ಆಯಿತು. ಅದೂ ಹೊಸ ಚೆಂಡನ್ನು (82ನೇ ಓವರ್‌ನಲ್ಲಿ) ಪಡೆದ ಬಳಿಕ.

ಮುಂಬೈನ ವೇಗಿಗಳಾದ ಧವಳ್ ಕುಲಕರ್ಣಿ, ಶಾರ್ದೂಲ್ ಠಾಕೂರ್, ತುಷಾರ ದೇಶಪಾಂಡೆ ಅಷ್ಟೇನೂ ಪರಿಣಾಮ ಬೀರಲಿಲ್ಲ. ಆದರೆ ಸ್ಪಿನ್ನರ್‌ಗಳು ಯಶಸ್ಸು ಸಾಧಿಸಿದರು. ಎಡಗೈ ಸ್ಪಿನ್ನರ್ ಮುಷೀರ್ ಖಾನ್ ಪರಿಣಾಮಕಾರಿ ಆಗಿದ್ದು 24 ರನ್ನಿಗೆ 2 ವಿಕೆಟ್ ಪಡೆದರು. ಕರುಣ್ ಕೂಡ ಅವರ ಉತ್ತಮ ಬೌಲಿಂಗ್‌ಗೆ ನಿರ್ಗಮಿಸಿದರು. ಮಿಡ್ಲ್ ಮತ್ತು ಲೆಗ್ ಸ್ಟಂಪ್ ನೇರದಲ್ಲಿ ಪಿಚ್ ಆದ ಚೆಂಡು ತಿರುವು ಪಡೆದಾಗ ಕರುಣ್ ರಕ್ಷಣಾತ್ಮಕವಾಗಿ ಆಡಿದರು. ಆದರೆ ಬ್ಯಾಟಿನಂಚಿಗೆ ತಗುಲಿದ ಚೆಂಡು ವಿಕೆಟ್ ಕೀಪರ್ ತಮೋರೆ ಕೈಸೇರಿತು. ಆಫ್ ಸ್ಪಿನ್ನರ್ ತನುಷ್ ಕೋಟ್ಯಾನ್ 19 ಓವರುಗಳಲ್ಲಿ ಎರಡು ವಿಕೆಟ್ ಪಡೆದರು.

ಆರಂಭ ಆಟಗಾರ ಅಥರ್ವ ತೈಡೆ (32), ಸ್ಪಿನ್ನರ್ ಶಮ್ಸ್ ಮುಲಾನಿ ಬೌಲಿಂಗ್‌ನಲ್ಲಿ 'ಸ್ವೀಪ್'ಗೆ ಯತ್ನಿಸಿ ಲೆಗ್‌ಬಿಫೋರ್ ಬಲೆಗೆ ಬಿದ್ದರು. ತನುಷ್ ಮಾಡಿದ ಮರು ಓವರ್‌ನಲ್ಲಿ ಧ್ರುವ್ ಶೋರೆ (128, 50ಎಸೆತ) ಬೌಲ್ಡ್ ಆದರು. ಲಂಚ್ ನಂತರ ಅಮನ್ ಮೋಖಡೆ (32, 78 ಎಸೆತ) ನಿರ್ಗಮಿಸಿದರು.

ವಾಡ್ಕರ್ ಇನ್ನೊಂದೆಡೆ ಆಕ್ರಮಣ-ಮಿಶ್ರಿತ ಆಟವಾಡಿ ಆರು ಬೌಂಡರಿಗಳನ್ನು ಬಾರಿಸಿದರು. ಐದನೇ ವಿಕೆಟ್‌ಗೆ ನಾಯರ್ ಜೊತೆಗೆ ಅವರು 90 ರನ್ (173 ಎಸೆತ) ಸೇರಿಸಿದರು.

ಮೂರನೇ ದಿನ 95 ರನ್ ಬಾರಿಸಿದ್ದ ಶ್ರೇಯಸ್ ಅಯ್ಯರ್ ಬುಧವಾರ ಫೀಲ್ಡ್ ಮಾಡಲಿಲ್ಲ. ಆದರೆ ಬೆನ್ನುನೋವಿನಿಂದ ಚೇತರಿಸಿರುವ ಅವರು ಕೊನೆಯ ದಿನ ಫೀಲ್ಡ್ ಮಾಡಲಿದ್ದಾರೆ ಎಂದು ತಂಡದ ಮೂಲವೊಂದು ತಿಳಿಸಿದೆ.

ಸ್ಕೋರುಗಳು: ಮುಂಬೈ: 224 ಮತ್ತು 418; ವಿದರ್ಭ: 105 ಮತ್ತು 92 ಓವರುಗಳಲ್ಲಿ 5 ವಿಕೆಟ್‌ಗೆ 248 (ಅಥರ್ವ ತೈಡೆ 32, ಅಮನ್ ಮೋಖಡೆ 32, ಕರುಣ್ ನಾಯರ್ 74, ಅಕ್ಷಯ್ ವಾಡ್ಕರ್ 56; ತನುಷ್ ಕೋಟ್ಯಾನ್ 56ಕ್ಕೆ2, ಮುಷೀರ್ ಖಾನ್ 38ಕ್ಕೆ2)

ಐಪಿಎಲ್: ಇಂಗ್ಲೆಂಡ್‌ನ ಜಾನಿ ಬೆಸ್ಟೊ ಕಣಕ್ಕೆ

ನವದೆಹಲಿ (ಪಿಟಿಐ): ಇಂಗ್ಲೆಂಡ್ ಬ್ಯಾಟರ್ ಜಾನಿ ಬೆಸ್ಟೊ ಇದೇ 22ರಿಂದ ಆರಂಭವಾಗಲಿರುವ ಐಪಿಎಲ್ ಟೂರ್ನಿಯಲ್ಲಿ ಆಡಲಿದ್ದಾರೆ. ಅವರು ಪಂಜಾಬ್ ಕಿಂಗ್ಸ್ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಈಚೆಗೆ ಭಾರತದಲ್ಲಿ ಟೆಸ್ಟ್ ಸರಣಿ ಆಡಿದ್ದ ಇಂಗ್ಲೆಂಡ್ ತಂಡದಲ್ಲಿ ಅವರಿದ್ದರು. ಆ ಸರಣಿಯ ಕೊನೆಯ ಪಂದ್ಯವು ಧರ್ಮಶಾಲಾದಲ್ಲಿ ನಡೆದಾಗ ಬಿಸಿಸಿಐ ಅಧಿಕಾರಿಗಳೂ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿಯ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ್ದರು. ಐಪಿಎಲ್‌ನಲ್ಲಿ ಪಾಲ್ಗೊಳ್ಳುವ ಇಂಗ್ಲೆಂಡ್ ಆಟಗಾರರ ಅವಕಾಶಗಳು ಕುರಿತು ಚರ್ಚೆಯಾಗಿತ್ತು. ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್, ಜೋ ರೂಟ್ ಮತ್ತು ಮಾರ್ಕ್ ವುಡ್ ಅವರು ಐಪಿಎಲ್‌ನಲ್ಲಿ ಆಡುವುದಾಗಿ ಖಚಿತಪಡಿಸಿದ್ದಾರೆ.



ವಸೀಂ ನಿರ್ಗಮನ: ಪಂಜಾಬ್ ಕಿಂಗ್ಸ್ ತಂಡದ ಬ್ಯಾಟಿಂಗ್ ಕೋಚ್ ಹುದ್ದೆಯಿಂದ ವಾಸೀಂ ಜಾಫರ್ ನಿರ್ಗಮಿಸಿದ್ದಾರೆ. ತಂಡಕ್ಕೆ ಸಂಜಯ್ ಬಾಂಗರ್ ಅವರನ್ನು ಕ್ರಿಕೆಟ್ ನಿರ್ದೇಶಕರಾಗಿ ನೇಮಕ ಮಾಡಲಾಗಿದೆ. ಅವರು ಬ್ಯಾಟಿಂಗ್ ಕೋಚ್ ಆಗಿಯೂ ಕಾರ್ಯನಿರ್ವಹಿಸುವರು. ಈ ಹಿಂದೆ ಸಂಜಯ್ ಆರ್‌ಸಿಬಿ ಬ್ಯಾಟಿಂಗ್ ಕೋಚ್ ಆಗಿದ್ದರು.

ಪಂಜಾಬ್ ತಂಡವು ತನ್ನ ಇನ್ನೊಂದು ತವರಿನಂಗಳವೂ ಆಗಿರುವ ಧರ್ಮಶಾಲಾದಲ್ಲಿ ಎರಡು ಪಂದ್ಯಗಳನ್ನು ಆಡಲಿದೆ. ಉಳಿದ ಐದು ಪಂದ್ಯಗಳನ್ನು ಮೊಹಾಲಿ ಮಲ್ಲನಪುರದಲ್ಲಿ ನಿರ್ಮಾಣವಾಗಿರುವ ಹೊಸ ಕ್ರೀಡಾಂಗಣದಲ್ಲಿ ಆಡಲಿದೆ.

ಡಬ್ಲ್ಯುಪಿಎಲ್ ಅದ್ಭುತ ಅನುಭವ ನೀಡಿದೆ: ಪೆರಿ

ಬೆಂಗಳೂರು: ಸತತ ಎರಡನೇ ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಆಡುತ್ತಿದ್ದೇನೆ. 20 ರಿಂದ 30 ಸಾವಿರ ಪ್ರೇಕ್ಷಕರ ಮುಂದೆ ಆಡುವುದು ಅದ್ಭುತ ಅನುಭವ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಎಲಿಸ್ ಪೆರಿ ಹೇಳಿದರು.

ಬುಧವಾರ ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸ್ಮೃತಿ ಮಂದಾನ ಉತ್ತಮ ನಾಯಕಿ. ಅವರು ಸ್ವಲ್ಪ ಅಂತರ್ಮುಖಿಯಾದರೂ ಸ್ನೇಹಜೀವಿ. ಎಲ್ಲರೊಂದಿಗೆ ಬಾಂಧವ್ಯಗಳನ್ನು ಉತ್ತಮವಾಗಿ ನಿಭಾಯಿಸುತ್ತಾರೆ. ತಂಡದ ಇನ್ನೊಬ್ಬ ಆಟಗಾರ್ತಿ ರಿಚಾ ಹಸನ್ಮುಖಿ. ವಿಕೆಟ್‌ಕೀಪಿಂಗ್‌ನಲ್ಲಿ ಶ್ರೇಷ್ಠ ಸಾಧನೆ ಮಾಡುತ್ತಿದ್ದಾರೆ' ಎಂದರು.

ಮಂಗಳವಾರ ನಡೆದ ಪಂದ್ಯದಲ್ಲಿ ಅವರು ಆರು ವಿಕೆಟ್ ಗಳಿಸಿ, 40 ರನ್ ಕೂಡ ಹೊಡೆದು ತಂಡವನ್ನು ಗೆಲ್ಲಿಸಿದ್ದರು.

ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ • ಅನೀಶ್ ದ್ವಿಶತಕ, ಕೃತಿಕ್ ಕೃಷ್ಣ ಅರ್ಧಶತಕ • ಉತ್ತರ ಪ್ರದೇಶಕ್ಕೆ ನಿರಾಸೆ

ಕರ್ನಾಟಕದ ಮುಡಿಗೆ ಚೊಚ್ಚಲ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್. ಸ್ಮರಣ್ ನಾಯಕತ್ವದ ಕರ್ನಾಟಕ ತಂಡವು ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಗೆದ್ದುಕೊಂಡಿತು. ಇದೇ ಮೊದಲ ಬಾರಿ ರಾಜ್ಯದ 23 ವರ್ಷದೊಳಗಿನವರ ತಂಡವು ಈ ಸಾಧನೆ ಮಾಡಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಟೂರ್ನಿಯ ಫೈನಲ್ ಪಂದ್ಯವು ಬುಧವಾರ ಡ್ರಾ ಆಯಿತು. ಮೊದಲ ಇನಿಂಗ್ಸ್‌ನಲ್ಲಿ ಮುನ್ನಡೆ ಗಳಿಸಿದ್ದ ಕರ್ನಾಟಕ ತಂಡವು ಟ್ರೋಫಿಗೆ ಮುತ್ತಿಕ್ಕಿತು.

ಪಂದ್ಯದ ಕೊನೆಯ ದಿನದಾಟದಲ್ಲಿ ಕರ್ನಾಟಕವು ಅನೀಶ್ ಕೆ.ವಿ. (214; 273ಎ) ದ್ವಿಶತಕ ಮತ್ತು ಕೃತಿಕ್ ಕೃಷ್ಣ (86; 121ಎ) ಅವರ ಅಮೋಘ ಬ್ಯಾಟಿಂಗ್‌ನಿಂದಾಗಿ ಎರಡನೇ ಇನಿಂಗ್ಸ್‌ನಲ್ಲಿ 161.6 ಓವರ್‌ಗಳಲ್ಲಿ 585 ರನ್ ಗಳಿಸಿತು. ಇದರಿಂದಾಗಿ 804 ರನ್‌ಗಳ ಬೃಹತ್ ಮುನ್ನಡೆ ಸಾಧಿಸಿತು. ಈಚೆಗೆ ಕರ್ನಾಟಕ ರಣಜಿ ತಂಡದಲ್ಲಿಯೂ ಆಡಿ ಬಂದಿರುವ ಅನೀಶ್ 18 ಬೌಂಡರಿ ಮತ್ತು ಆರು ಸಿಕ್ಸರ್ ಸಿಡಿಸಿದರು.

ಮಧ್ಯಾಹ್ನ ಬ್ಯಾಟಿಂಗ್ ಆರಂಭಿಸಿದ ಉತ್ತರಪ್ರದೇಶ ತಂಡಕ್ಕೆ ಕರ್ನಾಟಕದ ಮಧ್ಯಮವೇಗಿ ಎಲ್. ಮನ್ವಂತ್ ಕುಮಾರ್ (36ಕ್ಕೆ5) ಸೋಲಿನ ಭೀತಿ ಮೂಡಿಸಿದ್ದರು. ಆದರೆ ಉತ್ತರಪ್ರದೇಶ ತಂಡವು 31 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 174 ರನ್ ಗಳಿಸಿದ್ದಾಗ ಉಭಯ ನಾಯಕರೂ ಡ್ರಾ ಮಾಡಿಕೊಳ್ಳಲು ಸಮ್ಮತಿಸಿದರು.

‘ಪಂದ್ಯದಲ್ಲಿ ಜಯಿಸಲು ಅವಕಾಶವಿತ್ತು. ಆದರೆ ಮೊದಲ ಇನಿಂಗ್ಸ್‌ನಲ್ಲಿ ಮಹತ್ವದ ಮುನ್ನಡೆ ಗಳಿಸಿದ್ದೆವು. ಎರಡನೇ ಇನಿಂಗ್ಸ್‌ನಲ್ಲಿ ಬೇಗನೆ ಡಿಕ್ಲೇರ್ ಮಾಡಿ ಗೆಲುವಿಗೆ ಪ್ರಯತ್ನಿಸಲೂ ಬಹುದಿತ್ತು. ಆದರೆ ಅವಕಾಶ ಬಿಟ್ಟುಕೊಡುವುದಕ್ಕಿಂತ ನಾವೇ ಇನಿಂಗ್ಸ್ ಮೇಲೆ ಪಾರಮ್ಯ ಸಾಧಿಸುವುದು ಸೂಕ್ತವೆಂದು ನಿರ್ಧರಿಸಿ ಬೃಹತ್ ಮುನ್ನಡೆ ಗಳಿಸುವ ತಂತ್ರ ಅನುಸರಿಸಿದೆವು’ ಎಂದು ಪಂದ್ಯದ ನಂತರ ಕರ್ನಾಟಕದ ಮುಖ್ಯ ಕೋಚ್ ಯರೇಗೌಡ ಸುದ್ದಿಗಾರರಿಗೆ ಹೇಳಿದರು.

ಮಂಗಳವಾರ ದಿನದಾಟದ ಮುಕ್ತಾಯಕ್ಕೆ ಕರ್ನಾಟಕವು 663 ರನ್‌ಗಳ ಮುನ್ನಡೆ ಸಾಧಿಸಿತ್ತು. 171 ರನ್ ಗಳಿಸಿ ಕ್ರೀಸ್‌ನಲ್ಲಿದ್ದ ಅನೀಶ್ ಅವರು ಕೊನೆಯ ದಿನದಾಟದಲ್ಲಿ ದ್ವಿಶತಕದ ಗಡಿ ಮುಟ್ಟಿದ ನಂತರ ತಂಡವು ಡಿಕ್ಲೇರ್ ಮಾಡಿಕೊಂಡು, ಉತ್ತರ ಪ್ರದೇಶವನ್ನು ಆಲೌಟ್ ಮಾಡಿ ಗೆಲ್ಲುವ ನಿರೀಕ್ಷೆ ಮೂಡಿತ್ತು. ಅನೀಶ್ ಊಟದ ವಿರಾಮಕ್ಕೆ ಇನ್ನೂ ಬಹಳಷ್ಟು ಸಮಯವಿದ್ದಾಗಲೇ ದ್ವಿಶತಕ ಸಾಧನೆ ಮಾಡಿದರು. ಆದರೆ ಡಿಕ್ಲೇರ್ ಮಾಡದ ಕರ್ನಾಟಕ ಆಲೌಟ್ ಆಗುವವರೆಗೂ ಆಡಿತು. ಉತ್ತರಪ್ರದೇಶ ತಂಡದ ಕುನಾಲ್ ತ್ಯಾಗಿ 4 ವಿಕೆಟ್ ಗಳಿಸಿದರು. ಚಹಾ ವಿರಾಮ ನಂತರ ಡ್ರಾ ಘೋಷಣೆಗೆ ಎರಡೂ ತಂಡಗಳು ಸಮ್ಮತಿಸಿದವು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ – 99.5 ಓವರ್‌ಗಳಲ್ಲಿ 358. ಉತ್ತರಪ್ರದೇಶ: 46.2 ಓವರ್‌ಗಳಲ್ಲಿ 139. ಎರಡನೇ ಇನಿಂಗ್ಸ್: ಕರ್ನಾಟಕ: 151.5 ಓವರ್‌ಗಳಲ್ಲಿ 585 (ಕೆ. ವಿ. ಅನೀಶ್ 214, ಕೃತಿಕ್ ಕೃಷ್ಣ 86, ವಿಪ್ರಾಜ್ ನಿಗಮ್ 193ಕ್ಕೆ2, ಕುನಾಲ್ ತ್ಯಾಗಿ 90ಕ್ಕೆ4) ಉತ್ತರಪ್ರದೇಶ: 31 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 174 (ಸ್ವಸ್ತಿಕ್ 67, ವಿಪ್ರಾಜ್ ನಿಗಮ್ 73, ಎಲ್. ಮನ್ವಂತ್ ಕುಮಾರ್ 36ಕ್ಕೆ5)
ಫಲಿತಾಂಶ: ಪಂದ್ಯ ಡ್ರಾ. ಮೊದಲ ಇನಿಂಗ್ಸ್ ಮುನ್ನಡೆ ಆಧಾರದಲ್ಲಿ ಕರ್ನಾಟಕ ಚಾಂಪಿಯನ್.



ಕರ್ನಾಟಕದ 23 ವರ್ಷದೊಳಗಿನವರ ಕ್ರಿಕೆಟ್ ತಂಡದ ಆಟಗಾರರು ಬುಧವಾರ ಜಯಿಸಿದ ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

3 ತಿಂಗಳಲ್ಲಿ ಎರಡು ಟ್ರೋಫಿ

ಕರ್ನಾಟಕದ ಯುವ ತಂಡಗಳು ಕಳೆದ ಮೂರು ತಿಂಗಳುಗಳ ಅವಧಿಯಲ್ಲಿ ಎರಡು ರಾಷ್ಟ್ರೀಯ ಟ್ರೋಫಿಗಳನ್ನು ಗೆದ್ದಿವೆ. 19 ವರ್ಷದೊಳಗಿನವರ ತಂಡವು ಈಚೆಗೆ ಕೂಚ್ ಬಿಹಾರ್ ಟ್ರೋಫಿ ಜಯಿಸಿತ್ತು. ಇದೀಗ 23 ವರ್ಷದೊಳಗಿನವರ ತಂಡವು ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಜಯಿಸಿದೆ.

‘ರಾಜ್ಯದ ಯುವ ಆಟಗಾರರ ಈ ಸಾಧನೆಯು ಅಮೋಘವಾದದ್ದು. ವಯೋಮಿತಿ ಟೂರ್ನಿಗಳಲ್ಲಿ ಪ್ರತಿಭಾನ್ವಿತ ಆಟಗಾರರ ದಂಡು ಇದೆ. ಇದು ಕರ್ನಾಟಕದ ಭವಿಷ್ಯದ ಕ್ರಿಕೆಟ್‌ಗೆ ಶುಭಸೂಚಕವಾಗಿದೆ’ ಎಂದು ಕರ್ನಾಟಕ ಕೋಚ್ ಯರೇಗೌಡ ಸಂತಸ ವ್ಯಕ್ತಪಡಿಸಿದರು.

‘ಪರಸ್ಪರ ಸ್ನೇಹ, ವಿಶ್ವಾಸದಿಂದ ತಂಡವಾಗಿ ಆಡಿದ್ದು ಯಶಸ್ಸಿಗೆ ಕಾರಣ’ ಎಂದು ನಾಯಕ ಆರ್. ಸ್ಮರಣ್ ಹೇಳಿದರು.

ಕೂಚ್ ಬಿಹಾರ್ ಟ್ರೋಫಿ ಜಯಿಸಿದ್ದ ತಂಡದಲ್ಲಿದ್ದ ಪ್ರಖರ್ ಚತುರ್ವೇದಿ, ಧೀರಜ್ ಗೌಡ ಅವರೂ ಆಡಿದ್ದರು.

ನೀರಾಟವಾಡಿ ಸಂಭ್ರಮ

ಕರ್ನಾಟಕದ ಆಟಗಾರರು ಟ್ರೋಫಿ ಗೆದ್ದ ನಂತರ ಪರಸ್ಪರ ಮಿನರಲ್ ವಾಟರ್ ಸುರಿದುಕೊಂಡು ವಿಜಯೋತ್ಸವ ಆಚರಿಸಿದರು. ಕುಡಿಯಲು ಇಟ್ಟಿದ್ದ ಬಾಟಲಿಗಳಿಂದ ತಲೆಯ ಮೇಲೆ ನೀರು ಸುರಿದು ಸಂಭ್ರಮಿಸಿದರು. ನಂತರ ತಮ್ಮ ಪಾಲಕರೊಂದಿಗೆ ಚಿತ್ರ ಕೂಡ ತೆಗೆಸಿಕೊಂಡರು.

ರ‍್ಯಾಂಕಿಂಗ್: ಬೂಮ್ರಾ ಹಿಂದಿಕ್ಕಿ ಅಗ್ರಸ್ಥಾನಕ್ಕೇರಿದ ಅಶ್ವಿನ್

ದುಬೈ (ಪಿಟಿಐ): ತಮ್ಮ ನೂರನೇ ಟೆಸ್ಟ್‌ನಲ್ಲಿ ಪಡೆದ 9 ವಿಕೆಟ್‌ಗಳ ನೆರವಿನಿಂದ ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್, ಬುಧವಾರ ಪ್ರಕಟವಾದ ಐಸಿಸಿ ರ‍್ಯಾಂಕಿಂಗ್‌ನ ಬೌಲರ್‌ಗಳ ಪಟ್ಟಿಯಲ್ಲಿ ಮರಳಿ ಅಗ್ರಸ್ಥಾನಕ್ಕೇರಿದ್ದಾರೆ. ನಾಯಕ ರೋಹಿತ್ ಶರ್ಮಾ ಬ್ಯಾಟರ್‌ಗಳ ಪಟ್ಟಿಯಲ್ಲಿ ಟಾಪ್ ಟೆನ್‌ಗೆ ಮರಳಿದ್ದು, ಆರನೇ ಸ್ಥಾನಕ್ಕೇರಿದ್ದಾರೆ.

ಧರ್ಮಶಾಲಾದಲ್ಲಿ ನಡೆದ ಅಂತಿಮ ಟೆಸ್ಟ್‌ನಲ್ಲಿ ಅಶ್ವಿನ್ ಉತ್ತಮ ಲಯ ಕಂಡುಕೊಂಡಿದ್ದರು. ಮೊದಲ ಇನಿಂಗ್ಸ್‌ನಲ್ಲಿ ನಾಲ್ಕು ವಿಕೆಟ್ ಕಬಳಿಸಿದ್ದ ಅವರು ಎರಡನೇ ಇನಿಂಗ್ಸ್‌ನಲ್ಲಿ ಐದು ವಿಕೆಟ್‌ಗಳ ಗೊಂಚಲು ಪಡೆದಿದ್ದು, ಭಾರತ ಟೆಸ್ಟ್ ಗೆಲುವಿನ ಅಂತರವನ್ನು 4–1ಕ್ಕೆ ಹೆಚ್ಚಿಸಿತ್ತು.

ಈ ಸಾಧನೆ ಅಶ್ವಿನ್ ಅವರಿಗೆ ಇದುವರೆಗೆ ಅಗ್ರಸ್ಥಾನದಲ್ಲಿದ್ದ ತಂಡದ ಸಹ ಆಟಗಾರ ಜಸ್‌ಪ್ರೀತ್ ಬೂಮ್ರಾ ಅವರನ್ನು ಹಿಂದೆಹಾಕಲು ನೆರವಾಗಿದೆ ಎಂದು ಐಸಿಸಿ ಪ್ರಕಟಣೆ ತಿಳಿಸಿದೆ.


ಅಶ್ವಿನ್

ಬೂಮ್ರಾ ಅವರು ಆಸ್ಟ್ರೇಲಿಯಾದ ಪೇಸ್ ಬೌಲರ್ ಜೋಶ್ ಹ್ಯಾಜಲ್‌ವುಡ್ ಜೊತೆ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ಧರ್ಮಶಾಲಾದಲ್ಲಿ ಶತಕ ಬಾರಿಸಿದ್ದ ರೋಹಿತ್ ಐದು ಸ್ಥಾನ ಬಡ್ತಿ ಪಡೆದು ಆರನೇ ಸ್ಥಾನಕ್ಕೇರಿದ್ದಾರೆ. ಅಗ್ರಸ್ಥಾನದಲ್ಲಿರುವ ಕೇನ್ ವಿಲಿಯಮ್ಸನ್‌ಗೂ ಅವರಿಗೂ 108 ಪಾಯಿಂಟ್‌ಗಳ ಅಂತರವಿದೆ.

ಯಶಸ್ವಿ ಜೈಸ್ವಾಲ್ ಎರಡು ಸ್ಥಾನ ಬಡ್ತಿ ಪಡೆದು ಎಂಟನೇ ಸ್ಥಾನದಲ್ಲಿದ್ದರೆ, ಶುಭಮನ್ ಗಿಲ್ 20ನೇ ಸ್ಥಾನದಲ್ಲಿದ್ದಾರೆ. ಇದು ಅವರ ಜೀವನಶ್ರೇಷ್ಠ ರ‍್ಯಾಂಕಿಂಗ್.

ಟೆಸ್ಟ್ ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ರವೀಂದ್ರ ಜಡೇಜಾ ಅವರ ಅಗ್ರಸ್ಥಾನಕ್ಕೆ ಚ್ಯುತಿ ಬಂದಿಲ್ಲ. ಅಶ್ವಿನ್ ಎರಡನೇ ಸ್ಥಾನದಲ್ಲಿದ್ದಾರೆ.

ಪ್ಯಾರಾ ಶೂಟಿಂಗ್: ಮನೀಶ್‌ಗೆ ಬೆಳ್ಳಿ

ನವದೆಹಲಿ (ಪಿಟಿಐ): ಭಾರತದ ಮನೀಶ್ ನರ್ವಾಲ್ ಅವರು ಇಲ್ಲಿ ನಡೆಯುತ್ತಿರುವ ಪ್ಯಾರಾ ಶೂಟಿಂಗ್ ವಿಶ್ವಕಪ್‌ನ ಪುರುಷರ 10 ಮೀಟರ್ ಏರ್ ಪಿಸ್ತೂಲ್ (ಎಸ್‌ಎಚ್‌1) ವೈಯಕ್ತಿಕ ಮತ್ತು ತಂಡ ವಿಭಾಗದ ಸ್ಪರ್ಧೆಗಳಲ್ಲಿ ಬೆಳ್ಳಿ ಪದಕ ಗೆದ್ದರು.

ಬುಧವಾರ ನಡೆದ ವೈಯಕ್ತಿಕ ವಿಭಾಗದ ಫೈನಲ್‌ನಲ್ಲಿ ನರ್ವಾಲ್ 236.7 ಅಂಕ ಗಳಿಸಿದರು.

ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್: ಲಕ್ಷ್ಯ ಮುನ್ನಡೆ, ಪ್ರಿಯಾಂಶು ನಿರ್ಗಮನ

ಲಂಡನ್ (ಪಿಟಿಐ): ಭಾರತದ ಲಕ್ಷ್ಯ ಸೇನ್, ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ಸ್ ಪುರುಷರ ಸಿಂಗಲ್ಸ್ ಪ್ರಿ ಕ್ವಾರ್ಟರ್‌ಫೈನಲ್ ತಲುಪಿದರು. ಆದರೆ, ಭಾರತದ ಇನ್ನೊಬ್ಬ ಆಟಗಾರ ಪ್ರಿಯಾಂಶು ರಾಜಾವತ್ ನಿರ್ಗಮಿಸಿದರು.


ಲಕ್ಷ್ಯ ಸೇನ್

ಬುಧವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ 22 ವರ್ಷದ ಸೇನ್ 21-14, 21-14 ರಲ್ಲಿ ಡೆನ್ಮಾರ್ಕ್‌ನ ಮ್ಯಾಗ್ನಸ್ ಜೊಹಾನ್ಸನ್ ಅವರನ್ನು ನೇರ ಗೇಮ್‌ಗಳಿಂದ ಸೋಲಿಸಿದರು. ಅವರು ಮುಂದಿನ ಸುತ್ತಿನಲ್ಲಿ ನಾಲ್ಕನೇ ಶ್ರೇಯಾಂಕದ ಆಂಡರ್ಸ್ ಆಂಟೊನ್‌ಸೆನ್ (ಡೆನ್ಮಾರ್ಕ್) ಅವರನ್ನು ಎದುರಿಸಲಿದ್ದಾರೆ.

ಇಂಡೊನೇಷ್ಯಾದ ಚಿಕೊ ಆರಾ ದ್ವಿ ವಾರ್ದೊಯೊ ಅವರು ಮೂರು ಗೇಮ್‌ಗಳನ್ನು ಕಂಡ ಮೊದಲ ಸುತ್ತಿನ ಪಂದ್ಯದಲ್ಲಿ ಪ್ರಿಯಾಂಶು ಅವರನ್ನು 21-19, 11-21, 21-9 ರಿಂದ ಹಿಮ್ಮೆಟ್ಟಿಸಿ 16ರ ಸುತ್ತಿಗೆ ಮುನ್ನಡೆದರು.

ವಿಶ್ವ ಕ್ರಮಾಂಕದಲ್ಲಿ 18ನೇ ಸ್ಥಾನದಲ್ಲಿರುವ ಲಕ್ಷ್ಯ ಸೇನ್ ಬಿಟ್ಟರೆ ಉಳಿದ ಆಟಗಾರರು ಮೊದಲ ಸುತ್ತಿನಲ್ಲೇ ನಿರ್ಗಮಿಸಿದಂತಾಗಿದೆ. ಎಚ್.ಎಸ್. ಪ್ರಣಯ್, ಕಿದಂಬಿ ಶ್ರೀಕಾಂತ್ ಅವರು ಮಂಗಳವಾರವೇ ನಿರ್ಗಮಿಸಿದ್ದರು.

ತನಿಶಾ-ಅಶ್ವಿನಿ ಮುನ್ನಡೆ: ಭಾರತದ ತನಿಶಾ ಕ್ರಾಸ್ಟೊ ಮತ್ತು ಅಶ್ವಿನಿ ಪೊನ್ನಪ್ಪ ಅವರು ನೇರ ಗೇಮ್‌ಗಳಿಂದ ಹಾಂಗ್‌ಕಾಂಗ್‌ನ ಯುಂಗ್ ಗಾ ಟಿಂಗ್- ಯುಂಗ್ ಪೈ ಲಾಮ್ ಅವರನ್ನು 21-13, 21-18ರಿಂದ ಸೋಲಿಸಿ ಮಹಿಳಾ ಡಬಲ್ಸ್ ವಿಭಾಗದ ಪ್ರಿ ಕ್ವಾರ್ಟರ್‌ಫೈನಲ್ ತಲುಪಿದರು. ಅವರು ಮುಂದಿನ ಸುತ್ತಿನಲ್ಲಿ ನಾಲ್ಕನೇ ಶ್ರೇಯಾಂಕದ ಚೀನಾದ ಜೋಡಿಯನ್ನು ಎದುರಿಸುವರು.

ಡಬ್ಲ್ಯುಪಿಎಲ್: ಫೈನಲ್‌ಗೆ ಡೆಲ್ಲಿ ಕ್ಯಾಪಿಟಲ್ಸ್

ನವದೆಹಲಿ (ಪಿಟಿಐ): ಮೆಗ್ ಲ್ಯಾನಿಂಗ್ ನಾಯಕತ್ವದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಸತತ ಎರಡನೇ ಬಾರಿ ಫೈನಲ್ ಪ್ರವೇಶಿಸಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಡೆಲ್ಲಿ ತಂಡವು ಗುಜರಾತ್ ಜೈಂಟ್ಸ್ ವಿರುದ್ಧ 7 ವಿಕೆಟ್‌ಗಳಿಂದ ಗೆದ್ದು ಪ್ರಶಸ್ತಿ ಸುತ್ತಿಗೆ ಸಾಗಿತು.

ಭಾನುವಾರ ನಡೆಯುವ ಫೈನಲ್‌ನಲ್ಲಿ ಪ್ಲೇ ಆಫ್ ಪಂದ್ಯದ ವಿಜೇತ ತಂಡವನ್ನು ಡೆಲ್ಲಿ ಎದುರಿಸಲಿದೆ. ಶುಕ್ರವಾರ ಮುಂಬೈ ಇಂಡಿಯನ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಪ್ಲೇ ಆಫ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಟಾಸ್ ಗೆದ್ದ ಜೈಂಟ್ಸ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಗುಜರಾತ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 126 ರನ್ ಗಳಿಸಿತು. ಸಾಧಾರಣ ಗುರಿ ಬೆನ್ನಟ್ಟಿದ ಡೆಲ್ಲಿ ತಂಡವು ಆರಂಭಿಕ ಬ್ಯಾಟರ್ ಶಫಾಲಿ ವರ್ಮಾ (71; 37ಎ, 4X7, 6X5) ಮತ್ತು ಜೆಮಿಮಾ ರಾಡ್ರಿಗಸ್ (ಔಟಾಗದೆ 38; 28ಎ, 4X4, 6X1) ಅವರ ಬಿರುಸಿನ ಬ್ಯಾಟಿಂಗ್‌ನಿಂದಾಗಿ ಗೆದ್ದಿತು. ಇನಿಂಗ್ಸ್‌ನಲ್ಲಿ ಇನ್ನೂ 41 ಎಸೆತಗಳು ಬಾಕಿಯಿರುವಾಗಲೇ ಮೂರು ವಿಕೆಟ್‌ಗಳಿಗೆ 129 ರನ್ ಗಳಿಸಿ ಜಯಿಸಿತು.



ಅಜೇಯ ಅರ್ಧಶತಕ ಗಳಿಸಿದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಶಫಾಲಿ ವರ್ಮಾ –ಪಿಟಿಐ ಚಿತ್ರ

ಸಾಧಾರಣ ಮೊತ್ತ: ಡೆಲ್ಲಿ ತಂಡದ ಮರಿಯ್ಹಾನೆ ಕ್ಯಾಪ್, ಶಿಖಾ ಪಾಂಡೆ ಹಾಗೂ ಮಿನು ಮಣಿ ಅವರು ತಲಾ ಎರಡು ವಿಕೆಟ್ ಗಳಿಸಿದರು. ಇದರೊಂದಿಗೆ ಗುಜರಾತ್ ತಂಡವು ದೊಡ್ಡ ಮೊತ್ತ ಗಳಿಸದಂತೆ ತಡೆಯೊಡ್ಡಿದರು. 8.4 ಓವರ್‌ಗಳಲ್ಲಿ 39 ರನ್ ಗಳಿಸಿದ್ದ ಗುಜರಾತ್ ನಾಲ್ಕು ವಿಕೆಟ್ ಕಳೆದುಕೊಂಡಿತ್ತು. ಈ ಹಂತದಲ್ಲಿ ಭಾರತಿ ಫೂಲ್‌ಮಾಲಿ (43; 36ಎ) ಮತ್ತು ಕ್ಯಾಥರಿನ್ ಬ್ರೈಸ್ (ಔಟಾಗದೆ 28, 22ಎ) ಅವರು ತಂಡವು ಅಲ್ಪಮೊತ್ತಕ್ಕೆ ಕುಸಿಯುವುದನ್ನು ತಪ್ಪಿಸಿದರು.

ಮಹಿಳಾ ಪ್ರೀಮಿಯರ್ ಲೀಗ್: ಅಂಕ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಡೆಲ್ಲಿ ಕ್ಯಾಪಿಟಲ್ಸ್	8	6	2	12
ಮುಂಬೈ ಇಂಡಿಯನ್ಸ್	8	5	3	10
ರಾಯಲ್ ಚಾಲೆಂಜರ್ಸ್ ಬೆಂಗಳೂರು	8	4	4	8
ಯುಪಿ ವಾರಿಯರ್ಸ್	8	3	5	6
ಗುಜರಾತ್ ಜೈಂಟ್ಸ್	8	2	6	4

ಸಂಕ್ಷಿಪ್ತ ಸ್ಕೋರು: ಗುಜರಾತ್ ಜೈಂಟ್ಸ್: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 126 (ಫೋಬಿ ಲಿಚ್‌ಫೀಲ್ಡ್ 21, ಭಾರತಿ ಫೂಲ್‌ಮಾಲಿ 42, ಕ್ಯಾಥರಿನ್ ಬ್ರೈಸ್ ಔಟಾಗದೆ 28, ಮೆರಿಯ್ಹಾನೆ ಕ್ಯಾಪ್ 17ಕ್ಕೆ2, ಶಿಖಾ ಪಾಂಡೆ 23ಕ್ಕೆ2, ಮಿನು ಮಣಿ 9ಕ್ಕೆ2) **ಡೆಲ್ಲಿ ಕ್ಯಾಪಿಟಲ್ಸ್:** 13.1 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 129 (ಮೆಗ್‌ಲ್ಯಾನಿಂಗ್ 18, ಶಫಾಲಿ ವರ್ಮಾ 71, ಜೆಮಿಮಾ ರಾಡ್ರಿಗಸ್ ಔಟಾಗದೆ 38, ತನುಜಾ ಕನ್ವರ್ 20ಕ್ಕೆ2)
ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 7 ವಿಕೆಟ್‌ಗಳ ಜಯ.